ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರ್‌ಸಿಬಿಗೆ ಗೆಲುವು

ಕೃನಾಲ್ ಪಾಂಡ್ಯ (73) ಮತ್ತು ವಿರಾಟ್ ಕೊಹ್ಲಿ (51) ಅವರ ಅರ್ಧಶತಕ ಮತ್ತು ಭುವನೇಶ್ವರ ಕುಮಾರ್ ಅವರ 3 ವಿಕೆಟ್ ಸಾಧನೆಯೊಂದಿಗೆ ಡೆಲ್ಲಿ ಕ್ಯಾಪಿಟಲ್ಸ್ ಎದುರು ಆರ್‌ಸಿಬಿ ಆರು ವಿಕೆಟ್‌ಗಳ ಗೆಲುವು ಸಾಧಿಸಿದೆ.

9 ಭಯೋತ್ಪಾದಕರ ಮನೆ ಧ್ವಂಸ, ಅಖಾಡಕ್ಕಿಳಿದ ಎನ್‌ಐಎಗೆ ಮತ್ತಷ್ಟು ಸಾಕ್ಷ್ಯ ಲಭ್ಯ, ಉಗ್ರ ಕಾರಸ್ಥಾನ ಬಯಲು | ಪಾಕಿಗಳ ವಾಪಸ್‌ಗೆ ಗಡುವು ಅಂತ್ಯ, 629 ಭಾರತೀಯರು ವಾಪಸ್, ಉಕ್ಕೇರಿದ ಝೀಲಂ ನದಿ, ಪಿಒಕೆ ಜಲಾವೃತ: ಜಲಸಮರಕ್ಕೆ ಬೆಚ್ಚಿಬಿದ್ದ ಪಾಕ್

ಉಗ್ರರಿಗೆ ಮರ್ಮಾಘಾತ

ಶ್ರೀನಗರ/ ದೆಹಲಿ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಯ ನಂತರ ಉಗ್ರರ ವಿರುದ್ಧದ ಕಾರ್ಯಾಚರಣೆಯನ್ನು ಮತ್ತಷ್ಟು ತೀವ್ರಗೊಳಿಸಿರುವ ಭದ್ರತಾ ಪಡೆ ಮತ್ತೆ ಮೂವರು ಉಗ್ರರ ಮನೆಗಳನ್ನು ಧ್ವಂಸಗೊಳಿಸಿದೆ. ಈ ಮೂಲಕ ಕಳೆದ ಮೂರು ದಿನಗಳಲ್ಲಿ 9 ಉಗ್ರರ ಮನೆಗಳನ್ನು ಧ್ವಂಸಗೊಳಿಸಿದಂತಾಗಿದೆ.

ಜಮ್ಮು ಮತ್ತು ಕಾಶ್ಮೀರದ ಬಂಡಿಪೋರಾ, ಪುಲ್ವಾಮಾ ಮತ್ತು ಶೋಪಿಯಾನ್ ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸಿ ಮೂವರು ಉಗ್ರರ ಮನೆಗಳನ್ನು ನೆಲಸಮ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಶೋಪಿಯಾನ್ ಜಿಲ್ಲೆಯಲ್ಲಿ ಕಳೆದ ವರ್ಷ ಭಯೋತ್ಪಾದಕ ಸಂಘಟನೆಗೆ ಸೇರಿದ್ದ ಅದ್ನಾನ್ ಶಫಿಯ ಮನೆಯನ್ನು ನೆಲಸಮಗೊಳಿಸಲಾಗಿದೆ. ಪುಲ್ವಾಮಾದಲ್ಲಿ ಸಕ್ರಿಯ ಉಗ್ರ ಅಮೀರ್ ನಜೀರ್ ಮತ್ತು ಬಂಡಿಪೋರಾದಲ್ಲಿ ಲಷ್ಕರೆ ತಯ್ಬಾದ (ಎಲ್‌ಇಟಿ) ಉಗ್ರ ಜಮೀಲ್ ಅಹ್ಮದ್ ಶೇರ್‌ಗೊಜ್ರಿ ಮನೆಗಳನ್ನು ಧ್ವಂಸಗೊಳಿಸಲಾಗಿದೆ. ಇದೇ ವೇಳೆ ಉಗ್ರ ಆದಿಲ್ ಹುಸೇನ್ ಥೋಕರ್‌ನ ತಾಯಿ ಭದ್ರತಾಪಡೆಗಳಿಗೆ ಶರಣಾಗುವಂತೆ ಪುತ್ರನಿಗೆ ಮನವಿ ಮಾಡಿದ್ದಾರೆ. ಅನಂತ್‌ನಾಗ್ ಜಿಲ್ಲೆಯಲ್ಲಿ ಈತನ ಮನೆಯನ್ನೂ ಭದ್ರತಾ ಪಡೆಗಳು ಧ್ವಂಸ ಮಾಡಿವೆ. ಕಣಿವೆ ರಾಜ್ಯದೆಲ್ಲೆಡೆ ಸ್ಥಳೀಯ ಪೊಲೀಸರು, ಜಿಲ್ಲಾ ಅಧಿಕಾರಿಗಳ ಜತೆ ಸೇರಿ ಭದ್ರತಾ ಪಡೆ ಉಗ್ರನಿಗ್ರಹ ಕಾರ್ಯಾಚರಣೆ ಆರಂಭಿಸಿದ್ದು, ಉಗ್ರ ಪಟ್ಟಿಯಲ್ಲಿರುವವರ ಆಸ್ತಿಗಳನ್ನು ಧ್ವಂಸಗೊಳಿಸಿವೆ. ಅನುಮಾನ ಬಂದವರ ಮನೆಗಳನ್ನು ಹುಡುಕಿ ಶಸ್ತ್ರಾಸ್ತ್ರ ಪತ್ತೆ ಮಾಡುತ್ತಿದ್ದಾರೆ. ಉಗ್ರರಿಗೆ ಸಹಕಾರ ನೀಡಿದ ಆರೋಪದಡಿ ನೂರಾರು ಮಂದಿ ಸಹಚರರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಪುಲ್ವಾಮಾದಲ್ಲಿ ಧ್ವಂಸಗೊಂಡ ಉಗ್ರ ಅಮೀರ್ ನಜೀರ್ ಮನೆ

ಎನ್‌ಐಎಗೆ ಸಿಕ್ತು ವಿಡಿಯೋ ಸಾಕ್ಷಿ

ಪಹಲ್ಗಾಮ್ ದಾಳಿ ಕುರಿತು ತನಿಖೆ ಶುರು ಮಾಡಿರುವ ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ರೀಲ್ಸ್ ವಿಡಿಯೋ ಗ್ರಾಫರ್‌ವೊಬ್ಬರು ಮರದ ಮೇಲಿಂದ ಕುಳಿತು ತೆಗೆದ ಇಡೀ ಕೃತ್ಯದ ಪ್ರಮುಖ ಸಾಕ್ಷಿ ಲಭ್ಯವಾಗಿದೆ. ಬೈಸರನ್‌ನಲ್ಲಿ ಪ್ರವಾಸಿಗರಿಗಾಗಿ ರೀಲ್ಸ್ ಚಿತ್ರೀಕರಿಸುತ್ತಿದ್ದ ಸ್ಥಳೀಯ ವಿಡಿಯೊಗ್ರಾಫರ್ ದಾಳಿ ವೇಳೆ ಮರ ಏರಿ ಕುಳಿತಿದ್ದರು. ಅಲ್ಲಿಂದಲೇ ಉಗ್ರರು ಪ್ರವಾಸಿಗರ ಮೇಲೆ ಗುಂಡಿನ ಮಳೆಗರೆಯುವ ದೃಶ್ಯವನ್ನು ಸೆರೆ ಹಿಡಿದಿದ್ದಾರೆ. ಇದೀಗ ಎನ್‌ಐಎಗೆ ಈ ವಿಡಿಯೋ ಗ್ರಾಫರ್ ಪ್ರಮುಖ ಸಾಕ್ಷಿಯಾಗಿದ್ದಾರೆ.

ಸದ್ಯ ಲಭ್ಯವಾಗಿರುವ ವಿಡಿಯೋ ಪ್ರಕಾರ, ಈ ಕಾರ್ಯಾಚರಣೆಯಲ್ಲಿ ನಾಲ್ವರು ಉಗ್ರರು ಭಾಗಿಯಾಗಿದ್ದಾರೆ. ಇಬ್ಬರು ಹುಲ್ಲುಗಾವಲು ಪ್ರದೇಶದ ಎರಡೂ ಬದಿ ಅವಿತುಕೊಂಡಿದ್ದರೆ, ಮತ್ತಿಬ್ಬರು ಅಲ್ಲೇ ಇದ್ದ ತಿಂಡಿ ಅಂಗಡಿ ಬಳಿ ಅವಿತಿದ್ದರು. ಮಧ್ಯಾಹ್ನ 2.30ರ ಸುಮಾರಿಗೆ ಭಯೋತ್ಪಾದಕರು ಸ್ಥಳೀಯರಲ್ಲದವರನ್ನು ಧರ್ಮದ ಬಗ್ಗೆ ಕೇಳುತ್ತಾ ಬಂದು ಕಲಿಮಾ ಪಠಿಸಲು ಸಾಧ್ಯವಾಗದವರನ್ನು ಪಾಯಿಂಟ್ ಬ್ಲಾಕ್‌ನಲ್ಲಿ ಶೂಟ್ ಮಾಡುತ್ತಾ ಬಂದರು. ಜನರು ದಿಕ್ಕಾಪಾಲಾಗಿ ಓಡುತ್ತಿದ್ದಂತೆ ಹುಲ್ಲುಗಾವಲಿನ ಜಿಪ್‌ಲೈನ್‌ನಲ್ಲಿ ಅವಿತಿದ್ದವರೂ ಗುಂಡು ಹಾರಿಸಲು ಶುರು ಮಾಡಿದ್ದರು. ಈ ಎಲ್ಲಾ ದೃಶ್ಯಗಳು ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ವರದಿಗಳು ತಿಳಿಸಿವೆ. ಇದೇ ವೇಳೆ ಘಟನೆಯನ್ನು ಕಣ್ಣಾರೆ ಕಂಡ ಪ್ರತ್ಯಕ್ಷದರ್ಶಿಗಳ ವಿಚಾರಣೆ ನಡೆಸುತ್ತಿದೆ.

ದೇಶ ತೊರೆಯುವ ಗಡುವು ಅಂತ್ಯ

ಪಹಲ್ಗಾಮ್ ದಾಳಿ ಬಳಿಕ ಸಾರ್ಕ್ ವೀಸಾ ದಡಿ ಭಾರತಕ್ಕೆ ಆಗಮಿಸಿರುವ ಪಾಕಿಸ್ತಾನದ ಪ್ರಜೆಗಳಿಗೆ ದೇಶ ಬಿಟ್ಟು ತೆರಳಲು ವಿಧಿಸಿದ್ದ ಗಡುವು ಭಾನುವಾರ ಅಂತ್ಯಗೊಂಡಿದೆ. ಅಟ್ಟಾರಿ-ವಾಘಾ ಗಡಿ ಮೂಲಕ ಕಳೆದ ಎರಡು ದಿನಗಳಲ್ಲಿ 300ಕ್ಕೂ ಹೆಚ್ಚು ಪಾಕಿಸ್ತಾನಿ ಪ್ರಜೆ ಗಳು ಭಾರತವನ್ನು ತೊರೆದಿದ್ದಾರೆ. ಇನ್ನೂ ನೂರಾರು ಮಂದಿ ಭಾರತ ತೊರೆಯುವ ನಿರೀಕ್ಷೆಯಿದೆ. 13 ರಾಜತಾಂತ್ರಿಕರು ಮತ್ತು ಅಧಿಕಾರಿಗಳು ಸೇರಿದಂತೆ 629 ಭಾರತೀಯರು ಪಾಕಿಸ್ತಾನದಿಂದ ಮರಳಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಾರ್ಕ್ ವೀಸಾಗಳನ್ನು ಹೊಂದಿರುವವರು ಭಾರತದಿಂದ ನಿರ್ಗಮಿಸಲು ಗಡುವು ಏ.26 ಆಗಿತ್ತು. ವಿದ್ಯಾರ್ಥಿ ವೀಸಾ, ಬ್ಯುಸಿನೆಸ್ ವೀಸಾ, ಯಾತ್ರಿಕರ ವೀಸಾ ಸೇರಿದಂತೆ ಉಳಿದ ವರಿಗೆ ಏ.27ರೊಳಗೆ ದೇಶ ತೊರೆಯಲು ಸೂಚಿಸಲಾಗಿದೆ.

ಉಗ್ರರಿಗೆ ತಕ್ಕ ಶಾಸ್ತಿ: ಮೋದಿ

ಪ್ರಧಾನಿ ನರೇಂದ್ರ ಮೋದಿ ತಮ್ಮ 121ನೇ ಮನ್ ಕಿ ಬಾತ್ ಕಾರ್ಯಕ್ರಮದಲ್ಲೂ ಪಹಲ್ಗಾಮ್ ದಾಳಿಯನ್ನು ತೀವ್ರವಾಗಿ ಖಂಡಿಸಿದ್ದು ಈ ಘಟನೆಯಿಂದ ಇಡೀ ಭಾರತೀಯರ ರಕ್ತವು ಕುದಿಯುತ್ತಿದೆ. ಮೃತರ ಕುಟುಂಬಕ್ಕೆ ಖಂಡಿತವಾಗಿಯೂ ನ್ಯಾಯವು ಸಿಕ್ಕೇ ಸಿಗುತ್ತದೆ. ದಾಳಿಕೋರರ ವಿರುದ್ಧ ಅತ್ಯಂತ ಕಠೋರ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಪ್ರತಿಜ್ಞೆ ಮಾಡಿದರು. ಇಡೀ ಜಗತ್ತು ಉಗ್ರರ ದಾಳಿಯನ್ನು ವಿರೋಧಿಸಿದೆ. ಕಾಶ್ಮೀರದಲ್ಲಿ ಅಭಿವೃದ್ಧಿ ಪಥದಲ್ಲಿದೆ. ಪ್ರಜಾಪ್ರಭುತ್ವವು ನೆಲೆಯಾಗಿದೆ. ಪ್ರವಾಸೋದ್ಯಮವು ಬೆಳೆಯುತ್ತಿದೆ. ಯುವಕರಿಗೆ ಹೊಸ ಅವಕಾಶಗಳು ತೆರೆದುಕೊಳ್ಳುತ್ತಿವೆ. ಆದರೆ ಉಗ್ರರು ಮತ್ತು ಅವರ ಮಾಸ್ಟರ್‌ಗಳಿಗೆ ಕಾಶ್ಮೀರವು ಶಾಂತವಾಗಿರೋದು ಬೇಕಿಲ್ಲ ಎಂದು ಪ್ರಧಾನಿ ಟೀಕಿಸಿದರು.

ಪಿಒಕೆಯಲ್ಲಿ ತುರ್ತು ನೆರೆ ಪರಿಸ್ಥಿತಿ



ಇಸ್ಲಾಮಾಬಾದ್: ಸಿಂಧೂ ನದಿ ನೀರು ಹರಿಯುವುದನ್ನು ನಿಲ್ಲಿಸಿದರೆ ಭಾರತ ದಲ್ಲಿ ರಕ್ತದ ನದಿಯನ್ನು ಹರಿಸುತ್ತೇವೆ ಎಂದು ಹೇಳಿದ್ದ ಪಾಕಿಸ್ತಾನಕ್ಕೆ, ನೀರು ಹರಿಸುವ ಮೂಲಕವೇ ಭಾರತ ತಿರು ಗೇಟು ನೀಡಿದೆ. ಝೀಲಂ ನದಿಗೆ ನೀರು ಹರಿಬಿಟ್ಟ ಪರಿಣಾಮ ಪಾಕ್ ಆಕ್ರಮಿತ ಪಾಕಿಸ್ತಾನದಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗಿದ್ದು, ಮುಜಾಫರಾಬಾದ್‌ನಲ್ಲಿ ತುರ್ತು ನೆರೆ ಪರಿಸ್ಥಿತಿ ಘೋಷಿಸಲಾಗಿದೆ. ಮಸೀದಿಗಳಲ್ಲಿ ಈ ಬಗ್ಗೆ ಪ್ರಕಟಣೆ ಹೊರಡಿಸಿ ಜನರಿಗೆ ಎಚ್ಚರಿಕೆ ನೀಡಲಾಗಿದೆ. ಯಾವುದೇ ಪೂರ್ವಸೂಚನೆ ನೀಡದೇ ಭಾರತ ಏಕಾಏಕಿ ನದಿಗೆ ನೀರನ್ನು ಹರಿಸಿದೆ ಎಂದು ಪಾಕ್ ಮಾಧ್ಯಮಗಳು ಭಾರತದ ವಿರುದ್ಧ ಆರೋಪ ಮಾಡಿದೆ.

ಬ್ರಹ್ಮೋಸ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ಇದೇ ವೇಳೆ ಭಾರತೀಯ ನೌಕಾಪಡೆಯು ಯಾವುದೇ ಕ್ಷಣ, ಎಲ್ಲಿಯೇ ಆದರೂ ರಾಷ್ಟ್ರದ ಕಡಲ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ, ಭವಿಷ್ಯಕ್ಕೆ ಸಿದ್ಧವಾಗಿದೆ ಎಂದು ಹೇಳಿದೆ. ಅರಬ್ಬಿ ಸಮುದ್ರದಲ್ಲಿ ಭಾನುವಾರ ಶತ್ರು ರಾಷ್ಟ್ರಗಳ ಹಡಗುಗಳನ್ನು ಉಡಾಯಿಸಬಲ್ಲ ಬ್ರಹ್ಮೋಸ್ ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿ ರುವ ನೌಕಾಪಡೆ ಅದರ ದೀರ್ಘ-ಶ್ರೇಣಿಯ ನಿಖರ ದಾಳಿಯ ಸಾಮರ್ಥ್ಯವನ್ನು ಪ್ರದರ್ಶಿ ಸಿದೆ.

ರಾಜನಾಥ್ ಸಿಂಗ್ ಸಭೆ

ಪಾಕಿಸ್ತಾನದ ವಿರುದ್ಧ ಮಿಲಿಟರಿ ಕಾರ್ಯಾಚರಣೆ ನಡೆಸಲೇಬೇಕೆಂಬ ದೇಶದ ಕೂಗಿಗೆ ಪೂರಕವಾಗಿ ಸೇನಾ ಪಡೆಗಳಲ್ಲೂ ಸಮರ ಸಿದ್ಧತೆ ನಡೆದಿದೆ. ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಭಾರತೀಯ ಸೇನೆಯ ಚೀಫ್ ಆಫ್ ಜನರಲ್ ಸ್ಟಾಫ್ ಜನರಲ್ ಅನಿಲ್ ಚೌಹಾಣ್ ಅವರೊಂದಿಗೆ ಸಭೆ ನಡೆಸಿ ಚರ್ಚಿಸಿದ್ದಾರೆ.

ಸಾಮಾಜಿಕ ಕಾರ್ಯಕರ್ತನ ಹತ್ಯೆ

ಉಗ್ರರ ವಿರುದ್ಧ ಕಾರ್ಯಾಚರಣೆ ಮುಂದುವರಿದಿರುವಂತೆಯೇ ಜಮ್ಮು ಮತ್ತು ಕಾಶ್ಮೀರದ ಕುಪ್ವಾರಾ ಜಿಲ್ಲೆಯ ಕಂಡಿಖಾಸ್ ಪ್ರದೇಶದಲ್ಲಿ ಉಗ್ರರು ಸಾಮಾಜಿಕ ಕಾರ್ಯಕರ್ತನನ್ನು ಗುಂಡಿಟ್ಟು ಕೊಂದಿದ್ದಾರೆ. ಆದರೆ ಇವರನ್ನು ಗುರಿಯಾಗಿಸಿ ಹತ್ಯೆ ಮಾಡಿದ ಉದ್ದೇಶ ತಿಳಿದು ಬಂದಿಲ್ಲ.

ಬಿಜೆಪಿಯಿಂದ ಅಪಪ್ರಚಾರ, ಅನಿವಾರ್ಯವಾದರೆ ಯುದ್ಧ ಮಾಡಬೇಕು ಎಂದ ಸಿದ್ದರಾಮಯ್ಯ

ಯುದ್ಧವೇ ಬೇಡ ಎಂದಿಲ್ಲ: ಸಿಎಂ ಸ್ಪಷ್ಟನೆ

ಬೆಂಗಳೂರು/ದೇವನಹಳ್ಳಿ: ಯುದ್ಧ ಅನಿವಾರ್ಯವಾದಾಗ ಮಾತ್ರ ಮಾಡಬೇಕು. ಯುದ್ಧದಿಂದಲೇ ಸಮಸ್ಯೆ ಪರಿಹಾರವಾಗಲು ಸಾಧ್ಯವಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಪಾಕಿಸ್ತಾನದ ಮೇಲೆ ಯುದ್ಧ ಮಾಡುವ ಅಗತ್ಯವಿಲ್ಲ ಎಂದಿದ್ದ ಸಿಎಂ ಹೇಳಿಕೆ ವಿವಾದಕ್ಕೆ ಕಾರಣವಾಗಿತ್ತು. ಈ ಹೇಳಿಕೆ ಪಾಕಿಸ್ತಾನದ ವಾಹಿನಿಗಳಲ್ಲೂ ಪ್ರಸಾರವಾಗಿತ್ತು. ಈ ಸಂಬಂಧ ಉಂಟಾದ ಪರ ವಿರೋಧ ಚರ್ಚೆಗೆ ಸಿಎಂ ಸ್ಪಷ್ಟನೆ ನೀಡಿದ್ದಾರೆ. ಭಾನುವಾರ ಸಾಮಾಜಿಕ ಜಾಲತಾಣದ ಎಕ್ಸ್ ನಲ್ಲಿ ಹೇಳಿಕೆ ಪೋಸ್ಟ್ ಮಾಡಿರುವ ಅವರು, ಯುದ್ಧದ ಕುರಿತು ನಾನು ನೀಡಿದ ಹೇಳಿಕೆಯ ಬಗ್ಗೆ ಪರ-ವಿರೋಧದ ಚರ್ಚೆಗಳು ನಡೆಯುತ್ತಿರುವುದನ್ನು ಗಮನಿಸಿದ್ದೇನೆ. ಯುದ್ಧ ಎನ್ನುವುದು ಯಾವುದೇ ದೇಶದ ಅಂತಿಮ ಆಯ್ಕೆಯೇ ಹೊರತು, ಮೊದಲ ಇಲ್ಲವೇ ಏಕೈಕ ಆಯ್ಕೆಯಲ್ಲ. ಶತ್ರುವನ್ನು ಮಣಿಸುವ ಉಳಿದೆಲ್ಲ ಆಯ್ಕೆಗಳು ವಿಫಲವಾದಾಗ ಮಾತ್ರ ಯುದ್ಧಕ್ಕೆ ಸಿದ್ಧರಾಗಬೇಕು ಎಂದು ಹೇಳಿದ್ದಾರೆ. ಪಹಲ್ಗಾಮ್‌ನಲ್ಲಿ ನಡೆದ ಪಾಕ್ ಪ್ರೇರಿತ ಉಗ್ರರ ದಾಳಿಗೆ ನಮ್ಮ ಗೂಢಚರ್ಯೆ ಮತ್ತು ಭದ್ರತಾ ವ್ಯವಸ್ಥೆಯ ವೈಫಲ್ಯ ಕಾರಣ ಎನ್ನುವುದು ದೇಶದ ಜನತೆಗೆ ಮತ್ತು ಕೇಂದ್ರ ಸರಕಾರಕ್ಕೂ ಈಗ ಮನವರಿಕೆಯಾಗಿದೆ. ಮೊದಲು ಈ ಲೋಪ ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ಇಂತಹ ಕೃತ್ಯಗಳು ನಡೆಯದಂತೆ ಎಚ್ಚರಿಕೆ ವಹಿಸುವ ಹೊಣೆಗಾರಿಕೆ ಕೇಂದ್ರ ಸರಕಾರದ ಮೇಲಿದೆ ಎಂದು ತಿಳಿಸಿದ್ದಾರೆ.

→ 4

ಭಯೋತ್ಪಾದನೆಯನ್ನು ಬೇರು ಸಮೇತ ಕಿತ್ತು ಹಾಕುವುದು, ಪ್ರತಿಯೊಬ್ಬ ಭಾರತೀಯರಿಗೆ ಸೂಕ್ತ ರಕ್ಷಣೆ ಕೊಡುವುದು ನಮ್ಮ ಈ ಕ್ಷಣದ ಆದ್ಯತೆ. ಇದರಲ್ಲಿ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ.
ಸಿದ್ದರಾಮಯ್ಯ, ಮುಖ್ಯಮಂತ್ರಿ

ಭಾರತದ ರಕ್ಷಣೆ ಮುಖ್ಯವಾಗಿದ್ದು, ಪಾಕಿಸ್ತಾನದ ವಿರುದ್ಧ ಕೇಂದ್ರ ಸರಕಾರ ತೆಗೆದುಕೊಂಡಿರುವ ತೀರ್ಮಾನಗಳಿಗೆ ಬದ್ಧ. ನಾವೆಲ್ಲರೂ ಭಾರತೀಯರು, ಎಲ್ಲರ ಪ್ರಾಣ ಕೂಡ ಮುಖ್ಯ. ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಪಕ್ಷದ ಕಾರ್ಯಕಾರಿ ಸಮಿತಿ ತೀರ್ಮಾನ ತೆಗೆದುಕೊಂಡಿದೆ. ಅದರಂತೆ ಕೇಂದ್ರ ಸರಕಾರದ ತೀರ್ಮಾನಕ್ಕೆ ಬದ್ಧ.
ಡಿ.ಕೆ.ಶಿವಕುಮಾರ್, ಡಿಸಿಎಂ

ಸಿಎಂ ಸಿದ್ದರಾಮಯ್ಯನವರ ದೃಷ್ಟಿಕೋನ ಖಂಡಿತ ಸರಿಯಲ್ಲ. ಇದು ಅಕ್ಷಮ್ಯ ಅಪರಾಧ. ಈ ರೀತಿಯ ಹೇಳಿಕೆ ಯಾರೂ ನಿರೀಕ್ಷಿಸಿರಲಿಲ್ಲ. ಸಿದ್ದರಾಮಯ್ಯನವರಿಗೆ ಅಲ್ಪಸಂಖ್ಯಾತರ ಬಗ್ಗೆ ಎಷ್ಟು ಪ್ರೀತಿ ಇದೆ ಹಾಗೂ ಅವರ ವಿಚಾರ ಬಂದಾಗ ಯಾವ ಮಟ್ಟಕ್ಕೂ ಇಳೀತಾರೆ ಎಂಬ ಸತ್ಯ ಜನರಿಗೆ ಗೊತ್ತಿದೆ.
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಮನ್‌ಕಿ ಬಾತ್‌ನಲ್ಲಿ ಮುಧೋಳ ಕೃಷಿಕನ ಸಾಧನೆಗೆ ಪ್ರಧಾನಿ ಪ್ರಶಂಸೆ

ಬಿಸಿಲನಾಡಲ್ಲಿ ಸೇಬು ಕೃಷಿ: ಮೋದಿ ಫಿದಾ

ಬಾಗಲಕೋಟೆ: ಜಿಲ್ಲೆಯ ಮುಧೋಳ ತಾಲೂಕಿನ ಕುಳಲಿ ಗ್ರಾಮದಲ್ಲಿ ಸೇಬು ಬೆಳೆದು ಯಶಸ್ವಿಯಾದ ರೈತ ಶ್ರೀಶೈಲ ತೇಲಿ ಅವರ ಸಾಧನೆಯನ್ನು ಪ್ರಧಾನಿ ನರೇಂದ್ರ ಮೋದಿ ಮನ್ ಕಿ ಬಾತ್‌ನಲ್ಲಿ ಹಾಡಿ ಹೊಗಳಿದ್ದಾರೆ.

ಏಪ್ರಿಲ್ ತಿಂಗಳ 121ನೇ ಮನ್ ಕಿ ಬಾತ್‌ನಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಪಹಲ್ಗಾಮ್ ದಾಳಿ, ಉಗ್ರ ಪೋಷಕರ ವಿರುದ್ಧ ಕಠಿಣ ಕ್ರಮ, ಅಗಲಿದ ಕಸ್ತೂರಿರಂಗನ್ ಅವರ ಕೊಡುಗೆಗಳನ್ನು ಸ್ಮರಿಸುವ ಜತೆಗೆ ಬಾಗಲಕೋಟದ ರೈತ ಶ್ರೀಶೈಲ ತೇಲಿ ಅವರ ಸಾಧನೆಯನ್ನು ಉಲ್ಲೇಖಿಸಿ ಕೊಂಡಾಡಿದ್ದಾರೆ. ಹಿಮಚ್ಛಾದಿತ ಪರ್ವತದ ತಪ್ಪಲು ಪ್ರದೇಶಗಳಲ್ಲಷ್ಟೇ ಹೆಚ್ಚಾಗಿ ಬೆಳೆಯುವ ಸೇಬು ಕೃಷಿಯನ್ನು ಈ ಕೃಷಿಗೆ ಯೋಗ್ಯವಲ್ಲದ ಕರ್ನಾಟಕದ ಬಯಲು ಸೀಮೆಯಲ್ಲಿ ಬೆಳೆಯುವ ಮೂಲಕ ಶ್ರೀಶೈಲ ಅವರು ಸಾಧನೆ ಮಾಡಿದ್ದಾರೆ.

ಕುಳಲಿ ಗ್ರಾಮದ ಸೇಬು ಬೆಳೆಯೊಂದಿಗೆ ರೈತ ಶ್ರೀಶೈಲ ತೇಲಿ.

ಇತರರಿಗೆ ಸ್ಫೂರ್ತಿಯಾಗಿದ್ದಾರೆ. ಅವರ ಕೃಷಿ ಪ್ರಯೋಗ ಮೆಚ್ಚುವಂತದ್ದು ಎಂದು ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 35 ಡಿಗ್ರಿ ಸೆಲ್ಸಿಯಸ್‌ಗಿಂತ ಅಧಿಕ ಉಷ್ಣಾಂಶವಿರುವ ಪ್ರದೇಶದಲ್ಲಿ,

- 35 ಡಿ.ಸೆಲ್ಸಿಯಸ್‌ನಲ್ಲೂ ಸೇಬು ಬೆಳೆದು ಯಶಸ್ವಿ
- ಎರಡೂವರೆ ವರ್ಷಕ್ಕೆ 15 ಲಕ್ಷ ಆದಾಯ ಪಡೆದ ರೈತ
- ಕುಳಲಿ ಗ್ರಾಮದಲ್ಲಿ ಸೇಬು ರೈತ ಈಗ ದೇಶಕ್ಕೇ ಪರಿಚಿತ

ಏಳು ಎಕರೆಗಳಲ್ಲಿ ಶ್ರೀಶೈಲ್ ಸೇಬು ಬೆಳೆದಿದ್ದಾರೆ. ಸೇಬು ಬೆಳೆದು ಉತ್ತಮ ಆದಾಯ ಕೂಡ ಗಳಿಸಿದ್ದಾರೆ. ಎಕರೆಗೆ ವೆಚ್ಚ ತೆಗೆದು 3 ಲಕ್ಷ ರು. ಲಾಭ ಮಾಡುತ್ತಿದ್ದಾರೆ ಎಂದು ಮೋದಿ ತಮ್ಮ ಭಾಷಣದಲ್ಲಿ ಪ್ರಶಂಸೆ ವ್ಯಕ್ತಪಡಿಸಿದರು.

ಯಶಸ್ವಿ ಪ್ರಯೋಗ: ಮೂಲತಃ ಬೆಳಗಾವಿಯ ಅಥಣಿ ತಾಲೂಕಿನ ಮಹಿಷವಾಡಗಿ ಗ್ರಾಮದ ರೈತ ಶ್ರೀಶೈಲ ತೇಲಿ ಅವರು ಕೆಲ ವರ್ಷಗಳ ಹಿಂದೆ ಕುಳಲಿ ಗ್ರಾಮದ ವ್ಯಾಪ್ತಿಯಲ್ಲಿ ಜಮೀನು ಖರೀದಿ ಮಾಡಿದ್ದರು.

→ 4

ಸೊಂಪಾದ ಪುಟಗಳು

ಹನುಮಂತ ಹಗ್ಗ ತಿನ್ನುವಾಗ ಪೂಜಾರಿಗೆಲ್ಲಿ ಶಾವಿಗೆ?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಇವರೆಲ್ಲ ಒಂದೇ ಸುಳ್ಳಿನ ಮಾರಾಟಗಾರರೇ!
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ನೀವು ಹಿಂದಕ್ಕೆ ಹೋಗಿ ಆರಂಭವನ್ನು ಬದಲಿಸಲು ಸಾಧ್ಯವಿಲ್ಲ. ಆದರೆ ಈಗ ನೀವು ಎಲ್ಲಿದ್ದೀರೋ ಅಲ್ಲಿಯೇ ಹೊಸ ಆರಂಭಕ್ಕೆ ಚಾಲನೆ ನೀಡಿ, ಅದರ ಕೊನೆಯನ್ನು ಬದಲಿಸಬಹುದು.

ವಕ್ರತುಂಡೋಕ್ತಿ

ಆಫೀಸಿನಲ್ಲಿ ಎಲ್ಲ ಸಿಬ್ಬಂದಿ ಎಷ್ಟು ಗಂಟೆಗೆ ಬರುತ್ತಾರೆ ಎಂಬುದು ಬಾಸ್ ಎಷ್ಟು ಗಂಟೆಗೆ ಬರುತ್ತಾರೆ ಎಂಬುದನ್ನು ಅವಲಂಬಿಸಿರುತ್ತದೆ.

2ನೇ ವರ್ಷದ ಸಾಧನಾ ಸಮಾವೇಶದಲ್ಲಿ ಸಿಎಂ

80 ಸಾವಿರ ಕೋಟಿ ಜನರ ಜೇಬಿಗೆ

ದೇವನಹಳ್ಳಿ: ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಗಳ ಮೂಲಕ ಇಲ್ಲಿಯ ವರೆಗೆ 80 ಸಾವಿರ ಕೋಟಿ ರು.ಗಳನ್ನು ಜನರ ಜೇಬಿಗೆ ಹಾಕಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಸರಕಾರದ ಎರಡು ವರ್ಷದ ಸಾಧನಾ ಸಮಾವೇಶದಲ್ಲಿ ಗ್ರಾಮಾಂತರ ಜಿಲ್ಲೆಯ ವಿವಿಧ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಫಲಾನುಭವಿಗಳಿಗೆ ಸವಲತ್ತು ವಿತರಿಸಿ ಮಾತನಾಡಿ, ಗ್ರಾಮಾಂತರ ಜಿಲ್ಲೆಯಲ್ಲಿ ಸಾವಿರ ಸಾವಿರ ಕೋಟಿ ವೆಚ್ಚದ ಕಾಮಗಾರಿಗಳಿಗೆ ಒಂದೇ ದಿನ ಚಾಲನೆ ನೀಡಿದ್ದೇವೆ. ಅಭಿವೃದ್ಧಿಗೆ ಹಣ ಇಲ್ಲ ಎನ್ನುವ ಬಿಜೆಪಿ ಪರಿವಾರದ ಸುಳ್ಳುಗಳಿಗೆ ಅಭಿವೃದ್ಧಿ ಮೂಲಕವೇ ಉತ್ತರ ನೀಡುತ್ತಿದ್ದೇವೆ ಎಂದರು.

ಮೇ 20ರೊಳಗೆ ಸಿಇಟಿ ಫಲಿತಾಂಶ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ-2 ಫಲಿತಾಂಶ ಪ್ರಕಟವಾದ ನಂತರ ಮೇ 20ರ ವೇಳೆಗೆ ಸಿಇಟಿ ಫಲಿತಾಂಶ ಪ್ರಕಟವಾಗುವ ನಿರೀಕ್ಷೆಯಿದೆ. ದ್ವಿತೀಯ ಪಿಯುಸಿ-1 ಮತ್ತು 2ರ ಪರೀಕ್ಷೆಯ ಫಲಿತಾಂಶದ ನಂತರ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಿಇಟಿ ಫಲಿತಾಂಶ ಪ್ರಕಟಿಸಿ ರ‍್ಯಾಂಕ್ ಪಟ್ಟಿ ಬಿಡುಗಡೆ ಮಾಡಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಅಮಾನತು ರದ್ದು: ಖಾದರ್ ಸ್ಪಷ್ಟನೆ

ಮಂಗಳೂರು: ವಿಧಾನಸಭೆಯಲ್ಲಿ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ ಬಿಜೆಪಿಯ 18 ಶಾಸಕರ ಅಮಾನತು ಮಾಡಿದ್ದು ಸದನದ ತೀರ್ಮಾನ. ಆದ್ದರಿಂದ ಅವರ ಅಮಾನತು ಹಿಂಪಡೆಯುವ ವಿಚಾರದಲ್ಲೂ ನಾನೊಬ್ಬನೇ ತೀರ್ಮಾನ ಕೈಗೊಳ್ಳಲಾಗದು ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು. ಶಾಸಕರನ್ನು ಅಮಾನತುಗೊಳಿಸಿದ ವಿಚಾರದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ ಖಾದರ್ ವಿರುದ್ಧ ಶಾಸಕ ಹರೀಶ್ ಪೂಂಜಾ ನೀಡಿರುವ ಹೇಳಿಕೆ ವಿರುದ್ಧ ಹಕ್ಕುಚ್ಯುತಿಗೆ ಕೆಲ ಕಾಂಗ್ರೆಸ್ ಶಾಸಕರು ನೀಡಿರುವ ದೂರಿನ ಬಗ್ಗೆ ಪ್ರತಿಕ್ರಿಯಿಸಿದ ಖಾದರ್, ಕೆಲ ಶಾಸಕರಿಗೆ ಏನಾದರೂ ಮಾತನಾಡುವ ಚಾಳಿ ಇದೆ. ತಮಗೆ ಪ್ರಚಾರ ಸಿಗುತ್ತದೆ ಎಂದು ಆ ರೀತಿ ಮಾತನಾಡ್ತಾರೆ.

ಸಮಾಚಾರ ಸಣ್ಣದಲ್ಲ

ಅದಾಲತ್: 1274 ಪ್ರಕರಣಗಳು ಇತ್ಯರ್ಥ

ಧಾರವಾಡ: ಕರ್ನಾಟಕ ಹೈಕೋರ್ಟ್‌ನ ಧಾರವಾಡ ಪೀಠದಲ್ಲಿ ಹಿರಿಯ ನ್ಯಾ.ಎಸ್ ಜಿ. ಪಂಡಿತ ಅವರ ನೇತೃತ್ವದಲ್ಲಿ ವಿಶೇಷ ಲೋಕ ಅದಾಲತ್ ಏರ್ಪಡಿಸಲಾಗಿತ್ತು. ಈ ವಿಶೇಷ ಲೋಕ ಅದಾಲತ್‌ನಲ್ಲಿ ನ್ಯಾ.ಎಸ್.ಜಿ.ಪಂಡಿತ, ಇ.ಎಸ್.ಇಂದಿರೇಶ್, ವಿ.ಶ್ರೀಶಾನಂದ, ಸಿ.ಎಮ್. ಪೂಣಚ್ಚ, ಜಿ. ಬಸವರಾಜ ಮತ್ತು ಉಮೇಶ ಎಮ್. ಅಡಿಗ ಹಾಗೂ ಇವರೊಂದಿಗೆ ಲೋಕ ಅದಾಲತ್‌ನ ಸದಸ್ಯರಾದ ಗೋಪಾಲ ಬಿ. ಪಾಟೀಲ, ಸಾಜೀದ ಗೂಡವಾಲಾ, ರಾಕೇಶ ಎಮ್. ಬಿಳ್ಳಿ, ವಿ. ಪಿ. ವಡವಿ, ಸೀತಾಲಕ್ಷ್ಮೀ ಪುರ್ಲಿ ಮತ್ತು ಶೈಲಾ ಬೆಳ್ಳಿಕಟ್ಟಿ, ಈ ರೀತಿಯಾಗಿ ಒಟ್ಟು 6 ಪೀಠಗಳನ್ನು ಆಯೋಜಿಸಲಾಗಿತ್ತು. ಸದರಿ ಲೋಕ ಅದಾಲತ್‌ನಲ್ಲಿ ಅಪಘಾತ ಪರಿಹಾರ ಪ್ರಕರಣಗಳ ಜತೆಗೆ ವಿಶೇಷವಾಗಿ ಚೆಕ್ಕು ಅಮಾನ್ಯ ಪ್ರಕರಣಗಳ ಮೇಲ್ಮನವಿಗಳು-43, ಸಿವಿಲ್ ಪ್ರಕರಣಗಳು-2, ರಿಟ್ ಅರ್ಜಿಗಳು-5 ಈ ರೀತಿ ಸುಮಾರು ವರ್ಷಗಳಿಂದ ಇತ್ಯರ್ಥವಾಗದ ಪ್ರಕರಣಗಳನ್ನು ಇತ್ಯರ್ಥಗೊಳಿಸಿದವು. ಲೋಕ ಆದಾಲತ್‌ನಲ್ಲಿ ಒಟ್ಟು 1274 ಪ್ರಕರಣಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಆ ಪೈಕಿ ಒಟ್ಟು 173 ಪ್ರಕರಣಗಳನ್ನು ,3,70,59,863/- ಮೊತ್ತಕ್ಕೆ ಇತ್ಯರ್ಥಪಡಿಸಲಾಯಿತು.

ಶಿಲಾ ಗೋಪುರ ಕಳಸಾರೋಹಣ

ನರಗುಂದ: ಉತ್ತರ ಕರ್ನಾಟಕದ ಕಟ್ಟಡ ರೊಟ್ಟಿ ಜಾತ್ರೆಗೆ ಹೆಸರಾದ ತಾಲೂಕಿನ ಶಿರೋಳ ಗ್ರಾಮದ ತೋಂಟದಾರ್ಯಮಠದಲ್ಲಿ ನೂತನವಾಗಿ ನಿರ್ಮಿಸಲಾದ ಗದ್ದುಗೆ ಶಿಲಾ ಮಂಟಪ ಲೋಕಾರ್ಪಣೆ, ಗೋಪುರ ಕಳಸಾರೊಹಣ ಇದರ ಅಂಗವಾಗಿ ತಿಂಗಳ ಪರಿಯಂತ ನಡೆದ ಬಸವ ಪುರಾಣ ಮಹಾಮಂಗಲೋತ್ಸವ ಹಾಗೂ ಸಾಮೂಹಿಕ ವಿವಾಹ



ಕಾರ್ಯ ಕ್ರಮಗಳು ಏ. 30ರಿಂದ ಮೇ.2ರ ವರೆಗೆ ಜರುಗಲಿದೆ. ತೋಂಟದಾರ್ಯಮಠದಲ್ಲಿ ಶಿಥಿಲಗೊಂಡಿದ್ದ ಗದ್ದುಗೆ ಶಿಲಾ ಮಂಟಪ ತೆರವುಗೊಳಿಸಿ 50 ಲಕ್ಷ ರು.ವೆಚ್ಚದಲ್ಲಿ ನೂತನ ಗದ್ದುಗೆ ಶಿಲಾ ಮಂಟಪ ಮತ್ತು ಗೋಪುರ ನಿರ್ಮಿಸಲಾಗಿದ್ದು, ತೋಂಟದ ಡಾ.ಸಿದ್ದರಾಮ ಸ್ವಾಮಿಗಳ ಸಾನಿಧ್ಯದಲ್ಲಿ ಶ್ರೀಮಠದ ಪೀಠಾಧಿಪತಿ ಶಾಂತಲಿಂಗ ಸ್ವಾಮೀಜಿಗಳ ನೇತೃತ್ವದಲ್ಲಿ ಏ.30ರಂದು ಬೆಳಗ್ಗೆ ಲಿಂಗದೀಕ್ಷೆ ಮತ್ತು ಅಯ್ಯಾಚಾರ ಸಿಂಧನೂರು ಕಲ್ಮಠದ ಸಿದ್ದಲಿಂಗ ಶ್ರೀಗಳು, ಬದಾಮಿ ಹಿರೇಮಠದ ಶಿವಪೂಜಾ ಶ್ರೀಗಳು, ಪಂಚಗೃಹ ಗುಡ್ಡದ ಹಿರೇಮಠದ ಸಿದ್ದಲಿಂಗ ಸ್ವಾಮೀಜಿಗಳ ಸಮ್ಮುಖದಲ್ಲಿ ಜರುಗಲಿದೆ. ಮೇ.1 ರಂದು ಸಂಜೆ 6 ಗಂಟೆಗೆ ಬಸವ ಪುರಾಣ ಮಂಗಲೋತ್ಸವವು ಹುಬ್ಬಳ್ಳಿ ಮೂರುಸಾವಿರಮಠದ ಗುರುಸಿದ್ದರಾಜಯೋಗೀಂದ್ರ ಸ್ವಾಮಿಗಳ ಸಾನಿಧ್ಯದಲ್ಲಿ, ಆನಂದಪುರ ಬೆಕ್ಕಿನಕಲ್ಮಠದ ಡಾ. ಮಲ್ಲಿಕಾರ್ಜುನ ಸ್ವಾಮಿಗಳು, ತೋಂಟದಾರ್ಯ ಸಂಸ್ಥಾನಮಠದ ಡಾ.ತೋಂಟದ ಸಿದ್ದರಾಮ ಸ್ವಾಮಿಗಳ ಸಾನಿಧ್ಯದಲ್ಲಿ, ಧಾರವಾಡ ಮುರುಘಾ ಮಠದ ಡಾ.ಮಲ್ಲಿಕಾರ್ಜುನ ಸ್ವಾಮಿಗಳ ಸಮ್ಮುಖದಲ್ಲಿ ಮಣಕವಾಡ,ಶೇಗುಣಸಿ ಮಠದ ಶ್ರೀಗಳ ನೇತೃತ್ವದಲ್ಲಿ ಜರುಗಲಿದೆ.

ಬಸವಾದಿ ಶರಣರ ರಥಯಾತ್ರೆಗೆ ಸ್ವಾಗತ

ಧಾರವಾಡ: ಕರ್ನಾಟಕ ರಾಜ್ಯ ಸರಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಆರಂಭಿಸಿರುವ ಅನುಭವ ಮಂಟಪ- ಬಸವಾದಿ ಶರಣರ ರಥ ಯಾತ್ರೆಗೆ ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಅದ್ದೂರಿ ಸ್ವಾಗತ ಕೋರಲಾಯಿತು. ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ.ಅವರು ಪುಷ್ಪಾರ್ಪಣೆ ಮಾಡಿ, ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಬಿ.ಎಸ್.ಮೂಗನೂರಮಠ, ಧಾರವಾಡ ತಹಸೀಲ್ದಾರ ಡಾ.ಡಿ.ಎಚ್.ಹೂಗಾರ, ಕನ್ನಡ ಸಾಹಿತ್ಯ ಪರಿಷತ ತಾಲೂಕು ಅಧ್ಯಕ್ಷ ಮಹಾಂತೇಶ ನರೇಗಲ್ಲ, ಮುಖಂಡರಾದ ಪ್ರಭಣ್ಣ ನಡಕಟ್ಟಿ, ನಾಗರಾಜ ಪಟ್ಟಣಶಟ್ಟಿ, ಶಾಂತವೀರ ಬಡಿಗೇರ, ಬಸವಂತಪ್ಪ ತೋಟದ, ಸವಿತಾ ಅಮರಶೆಟ್ಟಿ, ಸುರೇಶ ಹೊರಕೇರಿ, ಶಂಕರ ಹಲಗತ್ತಿ, ಡಾ.ಜಿನದತ್ತ ಹಡಗಲಿ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಬಸವ ಕೇಂದ್ರದ ಪ್ರತಿನಿಧಿಗಳು ಭಾಗವಹಿಸಿದ್ದರು

{ಗೋವಿಂದ ಕಾರಜೋಳ} ಸಂಸದ

ವೀರಶೈವ ಲಿಂಗಾಯತರನ್ನು ಸಣ್ಣ ಸಣ್ಣ ಜಾತಿಗಳಾಗಿ ವಿಂಗಡನೆ ಮಾಡಿದರು. ಅದೇ ರೀತಿ ಒಕ್ಕಲಿಗರು, ಹಿಂದೂಳಿದ ವರ್ಗದವರನ್ನು ವಿಂಗಡನೆ ಮಾಡಲಾಗಿದೆ. ಆದರೆ, ಮುಸ್ಲಿಮರನ್ನು ವಿಂಗಡಣೆ ಮಾಡಬೇಕಿತ್ತು. ಯಾಕೆ ಮಾಡಲಿಲ್ಲ? ಸಿದ್ದರಾಮಯ್ಯನವರೇ ನೀವು ವಿಂಗಡಣೆ ಮಾಡಬೇಕಿರುವುದು ಮುಸ್ಲಿಮರನ್ನು.

ದೈಹಿಕ ನ್ಯೂನತೆಗೆ ಸವಾಲೆಸೆದು ಸಾಮಾನ್ಯರಂತೆ ನರೇಗಾ ಕಾಮಗಾರಿಯಲ್ಲಿ ಕೆಲಸ ಮಾಡುತ್ತಿರುವ ವಿಶೇಷ ಚೇತನರು

ವಿಶೇಷ ಚೇತನರ ಜೀವನಕ್ಕೂ ಆಸರೆ ಉದ್ಯೋಗ ಖಾತ್ರಿ

ಮಾಳಿಂಗರಾಯ ಪೂಜಾರ

ಗದಗ: ರಕ್ತ ಸಂಬಂಧಿಕರಲ್ಲಿ ಮದುವೆಯಾದ ಕಾರಣದಿಂದಲೋ ಅಥವಾ ಇನ್ನ್ಯಾವುದೋ ಕಾರಣದಿಂದಲೋ ದೈಹಿಕವಾಗಿ ನ್ಯೂನತೆ ಹೊಂದಿರುವವರು ಸಮಾಜದಲ್ಲಿ ಸಾಮಾನ್ಯರಂತೆ ಜೀವನ ನಡೆಸೋದು ಕಷ್ಟ. ದೈಹಿಕವಾಗಿ ನ್ಯೂನತೆ ಹೊಂದಿರುವವರಿಗೆ ಸಮಾಜದಲ್ಲಿ ಕರೆದು ಕೆಲಸ ಕೊಡುವುದಕ್ಕಿಂತ ಅವರಿಂದ ಏನು ಕೆಲಸ ಮಾಡಲು ಸಾಧ್ಯ ಎಂಬ ಪ್ರಶ್ನೆಗಳನ್ನು ಕೇಳುವವರೇ ಹೆಚ್ಚು. ಹೀಗಿರುವಾಗ ದೈಹಿಕ ಮತ್ತು ಮಾನಸಿಕ ನ್ಯೂನತೆ ಹೊಂದಿರುವವರು ಗಜೇಂದ್ರಗಡ ತಾಲೂಕಿನಲ್ಲಿ ಶುರುವಾಗಿರುವ ನರೇಗಾ ಸಮುದಾಯ ಕಾಮಗಾರಿಗಳಲ್ಲಿ ಸಮಾನ್ಯರಂತೆ ಕೆಲಸ ಮಾಡುವುದರ ಮೂಲಕ ತಮ್ಮ ದೈಹಿಕ ನ್ಯೂನತೆಗೆ ಸವಾಲೆಸದಿದ್ದಾರೆ.

ಹೌದು, ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಗ್ರಾಪಂಗಳಲ್ಲಿ ಏಪ್ರೀಲ್ ಮತ್ತು ಮೇ ತಿಂಗಳಲ್ಲಿ ಇದ್ದೂರಲ್ಲೇ ಕೆಲಸ ದೊರೆಯಲಿ ಅಂತ ನರೇಗಾ ಸಮುದಾಯ ಕಾಮಗಾರಿಗಳಲ್ಲಿ ಕೆಲಸ ಆರಂಭವಾಗಿದೆ. ಗಂಡು-ಹೆಣ್ಣಿಗೆ ಸರಿಸಮಾನವಾಗಿ ಕೂಲಿಮೊತ್ತ ನೀಡುವ ನರೇಗಾ ಯೋಜನೆಯು ವಿಶೇಷ ಚೇತನರಿಗೆ ಮತ್ತು ಅಂಗವಿಕಲರಿಗೆ ಕೆಲಸದ ಪ್ರಮಾಣದಲ್ಲಿ ರಿಯಾಯತಿ ನೀಡುವುದರ ಮೂಲಕ ಅವರ ಸ್ವಾವಲಂಬನೆ ಜೀವನಕ್ಕೆ ಮುತುವರ್ಜಿವಹಿಸಿದೆ.

ತಾಲೂಕಿನ ಗುಳಗುಳಿ ಗ್ರಾಪಂ ವ್ಯಾಪ್ತಿಯ ಹಿರೇಅಳಗುಂಡಿ ಗ್ರಾಮದ 24 ವರ್ಷದ ಸುಮ್ಮವ್ವ ಬಾಲನ್ನವರ ಮತ್ತು 22 ವರ್ಷದ ಬಸವ್ವ ಬಾಲನ್ನವರ ಎಂಬ ಬುದ್ದಿಮಾಂಧ್ಯ ಸಹೋದರಿಯರಿಬ್ಬರಿಗೆ ನರೇಗಾ ಸಮುದಾಯ ಕೆಲಸ ಜೀವನ ಕಟ್ಟಿಕೊಟ್ಟಿದೆ. ಸರಿಯಾಗಿ ಮಾತು ಬಾರದ ಮತ್ತು ದೈಹಿಕವಾಗಿ ನ್ಯೂನತೆ ಹೊಂದಿರುವ ಈ ಇಬ್ಬರು ಬುದ್ಧಿಮಾಂಧ್ಯ ಸಹೋದರಿಯರು ಪಾಲಕರ ನೆರವಿನಿಂದ ಕೆಲಸ ಮಾಡುತ್ತಿದ್ದಾರೆ.

ತಂದೆ ರಂಗಪ್ಪ ಬಾಲನ್ನವರ ಯೋಜನೆಯಡಿ ಬದು ನಿರ್ಮಾಣ ಕೆಲಸದಲ್ಲಿ ಅಗೆಯುವ ಮಣ್ಣನ್ನು ಬುದ್ದಿಮಾಂಧ್ಯ ಸಹೋದರಿಯರು ಪರಸ್ಪರ ಸಹಕಾರದಿಂದ ಮಣ್ಣನ್ನು ಬುಟ್ಟಿಗೆ ತುಂಬಿ ಹೊಲದ ಬದುವಿಗೆ ಒಡ್ಡು ಹಾಕುವ ಕೆಲಸ ಮಾಡುತ್ತಾರೆ. ಬಡ ಕುಟುಂಬದಲ್ಲಿರುವ ಬಾಲನ್ನವರ ದಂಪತಿಗಳಿಗೆ ನರೇಗಾ ಕೆಲಸವೇ ಜೀವನಕ್ಕೆ ಆಧಾರ.

ಸರಿಯಾಗಿ ಮಾತನಾಡಲು ಬಾರದ ಸುಮ್ಮವ್ವ ಮತ್ತು ಬಸವ್ವ ಇಬ್ಬರನ್ನು ವಿಚಾರಿಸಿದಾಗ ತೊದಲಿಸುತ್ತಾ ಮಾತನಾಡಿದ ಇಬ್ಬರು ಬುದ್ದಿಮಾಂಧ್ಯ ಸಹೋದರಿಯರು ನರೇಗಾ ಯೋಜನೆಯಡಿ ಕೆಲಸ ಕೊಡುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಈ ಬಗ್ಗೆ ಮಾತನಾಡಿದ ಸುಮ್ಮವ್ವ ಅವರು ನಮಗೆ ಊರಿನಲ್ಲಿ ಯಾರು ಕೆಲಸ ಕೊಡಲ್ಲ. ತಂದೆ-ತಾಯಿಯ ಜತೆ ಒಡ್ಡಿನ ಕೆಲಸಕ್ಕೆ ಬರುತ್ತೇವೆ ಎಂದರು.

ಇಬ್ಬರು ಬೇಸಿಗೆ ಅವಧಿಯಲ್ಲಿ ಕೆಲಸಕ್ಕಾಗಿ ಗ್ರಾಪಂಗೆ ಭೇಟಿ ನೀಡಿ ಬೇಡಿಕೆ ಸಲ್ಲಿಸುತ್ತಾರೆ. ಬೇಸಿಗೆ ಅವಧಿಯಲ್ಲಿ ಕನಿಷ್ಟ 60 ದಿನಗಳ ಕಾಲ ದುಡಿದರೆ 22000 ಕೂಲಿ ಮೊತ್ತ ಬರುವ ಕಾರಣದಿಂದ ದೈಹಿಕ ನ್ಯೂನತೆ ಹೊಂದಿದ್ದರೂ ನರೇಗಾದ ಸಮುದಾಯ ಕೆಲಸದಲ್ಲಿ ದುಡಿದು ಸ್ವಾವಲಂಬನೆಯಾಗಿ ಬದುಕು ಕಟ್ಟಿಕೊಂಡಿದ್ದಾರೆ.

ಬುದ್ದಿಮಾಂಧ್ಯ ಸಹೋದರಿಯರು ಪರಸ್ಪರ ಸಹಕಾರದಿಂದ ಮಣ್ಣನ್ನು ಬುಟ್ಟಿಗೆ ತುಂಬಿ ಹೊಲದ ಬದುವಿಗೆ ಒಡ್ಡು ಹಾಕುವ ಕೆಲಸ ಮಾಡುತ್ತಿರುವುದು.

> ನರೇಗಾ ಯೋಜನೆಯಲ್ಲಿ ವಿಶೇಷ ಚೇತನರಿಗೆ, ಹಿರಿಯ ನಾಗರೀಕರಿಗೆ, ಅಂಗವಿಕಲರಿಗೆ ರಿಯಾಯತಿ ಕೆಲಸ ನೀಡಲಾಗುವುದು. ಗ್ರಾಮದಲ್ಲಿ ಖಾಸಗಿ ವ್ಯಕ್ತಿಗಳು ಇವರಿಗೆ ಕೆಲಸ ಕೊಡ್ತಾರೋ ಬಿಡ್ತಾರೋ ಗೊತ್ತಿಲ್ಲ. ಆದರೆ ನರೇಗಾ ಯೋಜನೆಯಡಿ ಇವರಿಗೆ ಅವರ ಸಾಮಾರ್ಥ್ಯದ ಆಧಾರದ ಮೇಲೆ ಕೆಲಸ ನೀಡಿ ದಿನವೊಂದಕ್ಕೆ 370 ರು. ಕೂಲಿ ಮೊತ್ತ ನೀಡುತ್ತೇವೆ. ತಾಲೂಕಿನ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ವಿಶೇಷ ಚೇತನರಿಗೆ ಇರುವ ಕೆಲಸದ ರಿಯಾಯತಿ ಬಗ್ಗೆ ಐಇಸಿ ಚಟುವಟಿಕೆ ಮೂಲಕ ಪ್ರಚಾರ ಮಾಡಲಾಗಿದೆ. ಹೀಗಾಗಿ ಪ್ರತಿಯೊಂದು ಗ್ರಾಪಂಗಳಲ್ಲಿ ವಿಶೇಷ ಚೇತನರು ನರೇಗಾ ಯೋಜನೆ ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ.
> -ಮಂಜುಳಾ ಹಕಾರಿ, ತಾಪಂ ಇಒ

> ದೈಹಿಕ ನ್ಯೂನತೆ ಹೊಂದಿದ್ದರೂ ಯೋಜನೆಯಡಿ ಕೆಲಸ ಮಾಡುವ ಆಸಕ್ತಿ ಈ ನಾಲ್ವರಿಗೆ ಬಂದಿರುವುದು ಒಳ್ಳೆಯದು. ಅವರಷ್ಟೇ ಅಲ್ಲದೆ ಬೇರೆ ಯಾರಾದರೂ ವಿಶೇಷ ಚೇತನರು ತಾಲೂಕಿನ ಗ್ರಾಪಂಗಳ ವ್ಯಾಪ್ತಿಯಲ್ಲಿದ್ದರೆ ಅವರು ಕೂಡಾ ನರೇಗಾ ಕೆಲಸಕ್ಕೆ ಬರಬಹುದು. ಯೋಜನೆಯಡಿ ನೀಡುವ ಕೂಲಿಮೊತ್ತದಲ್ಲಿ ಯಾವುದೇ ತಾರತಮ್ಯವಿಲ್ಲ. ಗಂಡಿಗೆ-ಹೆಣ್ಣಿಗೆ ಮತ್ತು ವಿಶೇಷ ಚೇತನರಿಗೆ ಹಾಗೂ ಹಿರಿಯ ನಾಗರಿಕರಿಗೂ ಒಂದೇ ಕೂಲಿಮೊತ್ತ ದಿನಕ್ಕೆ 370 ರು. ನೀಡಲಾಗುತ್ತಿದೆ. ಗ್ರಾಪಂಗೆ ಭೇಟಿ ನೀಡಿ ಬೇಸಿಗೆ ಅವಧಿಯಲ್ಲಿ ಸಮುದಾಯ ಕೆಲಸದಲ್ಲಿ ಭಾಗವಹಿಸಿ.
> -ಬಸವರಾಜ ಬಡಿಗೇರ, ತಾಪಂ ಇಒ

ಕೇಂದ್ರ ಕ್ರೀಡಾ ಸಚಿವರಿಂದ ಪರಿಶೀಲನೆ

ಹುಬ್ಬಳ್ಳಿ: ಉತ್ತರ ಕರ್ನಾಟಕ ಭಾಗದ ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ಹಾಗೂ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರದ ಅನುದಾನ ಹಾಗೂ ಸ್ಮಾರ್ಟ್ ಸಿಟಿ ಯೋಜನೆಯಡಿ ಒಟ್ಟು 180 ಕೋಟಿ ರು. ವೆಚ್ಚದಲ್ಲಿ 16 ಎಕರೆ ವಿಶಾಲ ಪ್ರದೇಶದಲ್ಲಿ ಹುಬ್ಬಳ್ಳಿಯಲ್ಲಿ ನಿರ್ಮಿಸುತ್ತಿರುವ ಅತ್ಯಾಧುನಿಕ ಗುಣಮಟ್ಟದ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸಮುಚ್ಚಯಕ್ಕೆ ಕೇಂದ್ರ ಕ್ರೀಡಾ ಯುವಜನ ಖಾತೆ ರಾಜ್ಯ ಸಚಿವರಾದ ರಕ್ಷಾ ನಿಖಿಲ್ ಖಡ್ಸೆ ಅವರೊಂದಿಗೆ ಶಾಸಕ ಅರವಿಂದ ಬೆಲ್ಲದ ಹಾಗೂ ಮಹೇಶ ತೆಂಗಿನಕಾಯಿ ಭೇಟಿ ನೀಡಿ ಕಾಮಗಾರಿಗಳ ಪರಿಶೀಲನೆ ನಡೆಸಿದರು.

> ಕ್ರೀಡಾಪಟುಗಳಿಗೆ ವಾರ್ಮ್ ಅಪ್, ವಿಶ್ರಾಂತಿ ಗೃಹ, ಶೌಚಾಲಯ ಹಾಗೂ 450 ಆಸನದ ಸಭಾಭವನ ಹಾಗೂ ಮ್ಯೂಸಿಕ್ ಆಡಿಟೋರಿಯಂ ಅನ್ನು ಇದು ಒಳಗೊಂಡಿದೆ. ಒಟ್ಟಾರೆಯಾಗಿ ಉತ್ತರ ಕರ್ನಾಟಕದ ಕ್ರೀಡಾಪಟುಗಳನ್ನು ಗುರುತಿಸಿ, ಪ್ರೋತ್ಸಾಹಿಸಿ ಅವರನ್ನು ಒಲಂಪಿಕ್ಸ್‌ಗೆ ಸಿದ್ಧಪಡಿಸುವುದು ಗುರಿಯಾಗಿದೆ.
> -ಅರವಿಂದ ಬೆಲ್ಲದ, ಶಾಸಕ

ಅತ್ಯಾಧುನಿಕ ಗುಣಮಟ್ಟದ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸಮುಚ್ಚಯದಲ್ಲಿ, ಎಲ್ಲ ಸೌಲಭ್ಯ ಹೊಂದಿರುವ ದೇಶದ ಮೊಟ್ಟಮೊದಲ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸಮುಚ್ಚಯ ಇದಾಗಿದ್ದು, ಅಂತಾರಾಷ್ಟ್ರೀಯ ಮಟ್ಟದ ಅಥ್ಲೆಟಿಕ್ ಈಜುಕೊಳ, ಬಾಸ್ಕೆಟ್ ಬಾಲ್ ಟೇಬಲ್ ಟೆನ್ನಿಸ್, ಬ್ಯಾಡ್ಮಿಂಟನ್, ರೈಫಲ್ ಶೂಟಿಂಗ್ ಫುಟ್ಬಾಲ್, ರನ್ನಿಂಗ್ ಟ್ರ್ಯಾಕ್, ವಾಕಿಂಗ್ ಪಾಥ್ ಸೇರಿದಂತೆ ಒಟ್ಟು 19 ಕ್ರೀಡೆಗಳಿಗೆ ಈ ಕ್ರೀಡಾ ಸಂಕೀರ್ಣದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸಮುಚ್ಚಯಕ್ಕೆ ಕೇಂದ್ರ ಕ್ರೀಡಾ ಯುವಜನ ಖಾತೆ ರಾಜ್ಯ ಸಚಿವರಾದ ರಕ್ಷಾ ನಿಖಿಲ್ ಖಡ್ಸೆ ಅವರೊಂದಿಗೆ ಶಾಸಕ ಅರವಿಂದ ಬೆಲ್ಲದ ಹಾಗೂ ಮಹೇಶ ತೆಂಗಿನಕಾಯಿ ಭೇಟಿ ನೀಡಿ ಕಾಮಗಾರಿಗಳ ಪರಿಶೀಲಿಸಿದರು.

ಈಗಾಗಲೇ 85% ಕಾಮಗಾರಿಗಳು ಪೂರ್ಣಗೊಂಡಿದ್ದು, ಆಗಸ್ಟ್ ವೇಳೆ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಅವರ ಅಮೃತಹಸ್ತದಿಂದ ಈ ಮಹತ್ವಾಕಾಂಕ್ಷೆಯ ಕ್ರೀಡಾ ಸಂಕೀರ್ಣವನ್ನು ಉದ್ಘಾಟಿಸುವ ಗುರಿ ಹೊಂದಲಾಗಿದೆ ಎಂದು ಶಾಸಕ ಅರವಿಂದ ಬೆಲ್ಲದ ತಿಳಿಸಿದರು.

ಶೈಕ್ಷಣಿಕ ಸಾಧನೆಗೆ ಪೂರಕ ಸೇವೆ

ಕರ್ನಾಟಕ ವಿವಿ ಕುಲಪತಿ, ಕುಲಸಚಿವರು ಮತ್ತು ಡಾ.ಎಂ.ಆರ್.ಗೋರಬಾಳ ಫೌಂಡೇಶನ್ ಜತೆಗೆ ಒಪ್ಪಂದ ಪತ್ರಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು.

ಧಾರವಾಡ: ಬದಲಾದ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯಗಳ ಜತೆಗೆ ಖಾಸಗಿ ಸಂಸ್ಥೆಗಳು, ಉದ್ಯಮಗಳು, ಕಾರ್ಪೊರೇಟ್ ಕಂಪನಿಗಳು ಮತ್ತು ಸಂಘ ಸಂಸ್ಥೆಗಳು ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕೈಜೋಡಿಸುವ ಇಂದಿನ ತುರ್ತು ಅಗತ್ಯವಾಗಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜಯಶ್ರೀ.ಎಸ್ ಅಭಿಪ್ರಾಯಪಟ್ಟರು.

ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜಿಸಿದ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕರ್ನಾಟಕ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗ ಮತ್ತು ಬೆಂಗಳೂರಿನ ಡಾ.ಎಂ.ಆರ್.ಗೋರಬಾಳ್ ಫೌಂಡೇಶನ್ ಜತೆಗೆ ಒಪ್ಪಂದ (ಖಟಖ) ಮಾಡಿ ಕೊಂಡು ಮಾತನಾಡಿದರು.

ಕರ್ನಾಟಕ ವಿವಿ ಕುಲಸಚಿವ ಡಾ.ಎ.ಚೆನ್ನಪ್ಪ ಮಾತನಾಡಿ, ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಇಂದು ಸಂಘ ಸಂಸ್ಥೆಗಳು ಮುಂದೆ ಬರಬೇಕಾದ ಅವಶ್ಯಕತೆ ಇದೆ. ಸಮಾಜದ ಬಲವರ್ಧನೆಗೆ ಮತ್ತು ಶಿಕ್ಷಣ ಸಂಸ್ಥೆಗಳ ಸಬಲೀಕರಣಕ್ಕೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್) ಎಂಬ ಯೋಜನೆ ಅಡಿಯಲ್ಲಿ ಉದ್ಯಮಿಗಳು. ಕಾರ್ಪೊರೇಟ್ ಕಂಪನಿಗಳು ಮತ್ತು ಸಂಘ ಸಂಸ್ಥೆಗಳು ವಿಶ್ವವಿದ್ಯಾಲಯಗಳು ಜೊತೆಗೆ ಕೈ ಜೋಡಿಸುವ ಅವಶ್ಯಕತೆ ಇದೆ ಎಂದರು.

ಬೆಂಗಳೂರಿನ ಡಾ.ಎಂ.ಆರ್ ಗೋರಬಾಳ ಫೌಂಡೇಶನ್ ಅಧ್ಯಕ್ಷರಾದ ರಮೇಶ್ ಗೋರಬಾಳ ಮಾತನಾಡಿ, ನನ್ನ ತಂದೆ ಎಂ.ಆರ್.ಗೋರಬಾಳ ಅವರು ಕರ್ನಾಟಕ ವಿಶ್ವವಿದ್ಯಾಲಯದ ಜತೆಗೆ ಅವಿನಾಭಾವ ಸಂಬಂಧ ಹೊಂದಿದ್ದ ಅವರು ಕಲಿತ ಮತ್ತು ಸೇವೆ ಸಲ್ಲಿಸಿದ ನನ್ನ ವಿಶ್ವವಿದ್ಯಾಲಯಕ್ಕೆ ಏನನ್ನಾದರೂ ಕೊಡುಗೆ ನೀಡಬೇಕು ಎಂಬುದು ಅವರ ಉದ್ದೇಶದಿಂದ ಡಾ.ಎಂ.ಆರ್.ಗೋರಬಾಳ ಫೌಂಡೇಶನ್ ವತಿಯಿಂದ ಸಂಶೋಧನಾ ನಿರತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವುದು, ಅಂತಾರಾಷ್ಟ್ರೀಯ ಉಪನ್ಯಾಸ ಆಯೋಜಿಸಲು ಧನಸಹಾಯ ಒದಗಿಸುವದು

ಉತ್ತಮ ಸಂಶೋಧನಾ ಪ್ರೌಢ ಪ್ರಬಂಧ ಮಂಡಿಸಿದ ರಸಾಯನಶಾಸ್ತ್ರದ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗೆ ನಗದು ಪ್ರಶಸ್ತಿಯನ್ನು ನೀಡಲಾಗುವುದು ಎಂದು ಒಪ್ಪಂದ ಉದ್ದೇಶವನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಡಾ.ಎಂ.ಆರ್. ಗೊರಬಾಳ ಅಧ್ಯಕ್ಷರಾದ ರಮೇಶ್ ಗೋರಬಾಳ, ಫೌಂಡೇಶನ್ ಕಾರ್ಯದರ್ಶಿ ಡಿ.ಎಸ್.ಪಾಟೀಲ, ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ರವೀಂದ್ರ ಕಾಂಬಳೆ, ಪ್ರಾಧ್ಯಾಪಕರಾದ ಪ್ರೊ.ಆರ್.ಬಿ.ಚೌಗಲೆ, ಪ್ರೊ.ಎಲ್.ಎ.ಶಾಸ್ತ್ರೀ, ಪ್ರೊ.ಸುಜಾತಾ, ಕವಿವಿ ಯೋಜನೆ ನಿರ್ವಹಣೆ ವಿಭಾಗದ ನಿರ್ದೇಶಕ ಡಾ.ಆರ್.ಎಫ್ ಭಜಂತ್ರಿ ಇದ್ದರು.

> ವಿದ್ಯಾರ್ಥಿಗಳಲ್ಲಿರುವ ಕ್ರಿಯಾಶೀಲತೆ, ಅನ್ವೇಷಣೆಗೆ ಪೂರಕವಾಗಿ ಉತ್ತೇಜನ ನೀಡಲು ಶಿಷ್ಯವೇತನ ಹೆಚ್ಚು ಮಹತ್ವ ಪಡೆದಿದೆ ಎಂದ ಅವರು ಪ್ರಸ್ತುತ ಕಾರ್ಪೊರೇಟ್ ಸಂಸ್ಥೆ, ಉದ್ಯಮ ಮತ್ತು ಸಂಘ ಸಂಸ್ಥೆಗಳು ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳ ಜತೆಗೆ ಸಹಾಯ ಸಹಕಾರ ಇಂದಿನ ಅಗತ್ಯ.
> -ಪ್ರೊ.ಜಯಶ್ರೀ.ಎಸ್, ಕರ್ನಾಟಕ ವಿವಿ ಕುಲಪತಿ

ವಿವಿಧ ಕಾಮಗಾರಿ ಪರಿಶೀಲಿಸಿದ ಜಿಪಂ ಸಿಇಒ

ನವಲಗುಂದ: ತಾಲೂಕಿನ ಶಿರೂರ ಗ್ರಾಮದಲ್ಲಿ ಜಿಪಂ ಸಿಇಒ ಭುವನೇಶ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕರ ಕುಂದು ಕೊರತೆ ಸಭೆ ನಡೆಯಿತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶಿರೂರು ಗ್ರಾಪಂಯ ಡಿಜಿಟಲ್ ಲೈಬ್ರರಿ ಅರಿವು ಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಕಥೆ, ಕವನ, ಕಾದಂಬರಿ ಹಾಗೂ ಸ್ಪರ್ಧಾತ್ಮಕ ಪುಸ್ತಕಗಳು ಅರಿವು ಕೇಂದ್ರದಲ್ಲಿ ಲಭ್ಯವಿದ್ದು, ಶಾಲಾ ಮಕ್ಕಳಿಗೆ ತುಂಬಾ ಉಪಯುಕ್ತವಾಗಿದೆ ಎಂದು ಗ್ರಾಮಸ್ಥರು ತಿಳಿಸಿದರು.

ಪ್ರತಿದಿನ ಅರಿವು ಕೇಂದ್ರದಲ್ಲಿ ಗ್ರಾಮದ ಹಿರಿಯರು ಭೇಟಿ ನೀಡುತ್ತಿದ್ದು, ಅರಿವು ಕೇಂದ್ರದಲ್ಲಿ ಇರತಕ್ಕಂತಹ ಪುಸ್ತಕಗಳನ್ನ ಓದುತ್ತಾ ಓದುತ್ತಾ ಆಧ್ಯಾತ್ಮಿಕ ಚಿಂತನೆ ಎಂಬ ಪುಸ್ತಕವನ್ನು ಗ್ರಾಮದ ಹಿರಿಯರಾದ ಈರಪ್ಪ ಸನಮನಿ ಬರೆದಿದ್ದು, ಪುಸ್ತಕವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಸ್ತಾಂತರಿಸಿದರು.

ಯುವಕ ಮಹೇಶ ತೊಗಲಂಗಿ ಅವರು ಪ್ರಜಾಪ್ರಭುತ್ವದ ಬಗ್ಗೆ ಅಂಬೇಡ್ಕರ್ ಅವರ ಚಿಂತನೆ ಕುರಿತು ಪಿಎಚ್.ಡಿ ಮಾಡುತ್ತಿದ್ದಾರೆ ಮತ್ತು ಗ್ರಾಮದ ಶಾಲಾ ಮಕ್ಕಳು ಅರಿವು ಕೇಂದ್ರದ ಸುದುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶಿರೂರ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ, ಪ್ರಗತಿಯಲ್ಲಿರುವ ಶೌಚಾಲಯ ಕಾಮಗಾರಿ ವೀಕ್ಷಣೆ ಮಾಡಿದರು. ನಂತರ ಶಿರೂರು ಗ್ರಾಪಂ ವ್ಯಾಪ್ತಿಯ ಕೂಸಿನ ಮನೆಗೆ ಭೇಟಿ ನೀಡಿ, ಕೂಸಿನ ಮನೆಯಲ್ಲಿ ಇರುವಂತಹ ಮಕ್ಕಳ ಕುರಿತು ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಜಿಪಂ ಉಪ ಕಾರ್ಯದರ್ಶಿ ಬಿ.ಎಸ್.ಮುಗನೂರಮಠ, ಆಯಟ್ಟಿ ಗ್ರಾಮ ಫಲಹಾರೇಶ್ವರ ಸ್ವಾಮೀಜಿ, ಶಿರೂರ ಗ್ರಾಪಂ ಅಧ್ಯಕ್ಷೆ ಉಮಾಶ್ರೀ ಕಾಳಿ, ಗ್ರಾಪಂ ಉಪಾಧ್ಯಕ್ಷ ಸಂಗನಗೌಡ ತೋಟದ, ಸಹಾಯಕ ನಿರ್ದೇಶಕ ಜಗದೀಶ ಹಡಪದ, ಹರ್ಷವರ್ಧನ ಹಂಚಿನಾಳ, ತಾಲೂಕ್ ಯೋಜನಾಧಿಕಾರಿ ಬಿ.ಎಸ್.ಪಾಟೀಲ, ಉಪತಹಸೀಲ್ದಾರ ಎಮ್. ಎಚ್.ಸದರಬಾಯಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಬಿ ಮಲ್ಲಾಡ, ತೋಟಗಾರಿಕೆ ಇಲಾಖೆ ಅಧಿಕಾರಿ ಸಂಜೀವಕುಮಾರ್ ಗುಡಿಮನಿ, ಸಮಾಜ ಕಲ್ಯಾಣ ಇಲಾಖೆ, ಸಾಮಾಜಿಕ ಅರಣ್ಯ ತಾಲೂಕಿನ ಎಲ್ಲ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಶಿರೂರು ಗ್ರಾಮದ ಹಿರಿಯರಾದ ಚಿನ್ನಪ್ಪಗೌಡ ಪಾಟೀಲ, ಶಂಕ್ರಪ್ಪ ಯಮನೂರ, ಶಂಕರಗೌಡ ಬಾಳಗೌಡ್ರು, ನಾಗಪ್ಪ ಸಂಕದ, ರೈತ ಮುಖಂಡರಾದ ಮಲ್ಲಿಕಾರ್ಜುನ್ ಗೌಡ ಬಾಳನಗೌಡ್ರು, ಉಪಸ್ಥಿತರಿದ್ದರು.



ದಾಳಿ ಘಟನೆ: ರಾಜಕಾರಣ ಅಗತ್ಯವಿಲ್ಲ

ಹುಬ್ಬಳ್ಳಿ: ಪೆಹಲ್ಗಾಮ್ ಪ್ರಕರಣದಲ್ಲಿ ಯಾರೂ ರಾಜಕಾರಣ ಮಾಡಬಾರದು ಎಂದು ಹುಬ್ಬಳ್ಳಿಯಲ್ಲಿ ಕೇಂದ್ರ ಯುವಜನ ಸೇವಾ ಮತ್ತು ಕ್ರೀಡಾ ಖಾತೆ ರಾಜ್ಯ ಸಚಿವೆ ರಕ್ಷಾ ಖಾಡ್ಸೆ ಹೇಳಿದರು. ಮಾಧ್ಯಮದವರ ಜತೆಗೆ ಮಾತನಾಡಿದ ಅವರು, ಉಗ್ರಗಾಮಿಗಳ ಕೃತ್ಯದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುದಾಗಿ ಪ್ರಧಾನಿಗಳು ಹೇಳಿದ್ದಾರೆ. ಭಾರತದ ಪ್ರತಿಯೊಬ್ಬ ನಾಗರಿಕರಿಗೆ ಸುರಕ್ಷತೆ ಕೊಡೋದು ಆದ್ಯ ಕರ್ತವ್ಯ. ಕಾಶ್ಮೀರದಲ್ಲಿ ನಡೆದ ಘಟನೆಗೆ ತಕ್ಕ ಉತ್ತರ ಕೊಡಲಾಗುತ್ತದೆ. ಕಲಂ 370 ವಾಪಸ್ ಪಡೆದ ನಂತರ ಜಮ್ಮು-ಕಾಶ್ಮೀರದ ಜನ ಹೊಸ ಜೀವನ ಆರಂಭಿಸಿದ್ದಾರೆ. ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಇತರೆ ರಾಜ್ಯಗಳಂತೆ ಕಾಶ್ಮೀರವೂ ಅಭಿವೃದ್ಧಿಯಾಗಬೇಕಿದೆ ಎಂದರು. ಪ್ರವಾಸೋದ್ಯಮದ ಜತೆಗೆ ಎಲ್ಲ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿಯಾಗಬೇಕಿದೆ. ಒಳ್ಳೆಯ ಯೋಜನೆ ಕೊಡಲು ಕೇಂದ್ರ ಸರಕಾರ ತಯಾರಿಯಿದೆ ಎಂದು ಹೇಳಿದರು.

ಸೇನಾ ಪಡೆ ಮೇಲೆ ಅನಗತ್ಯ ಟೀಕೆ ಬೇಡ

ಧಾರವಾಡ: ಜಮ್ಮುಕಾಶ್ಮೀರದ ಪೆಹಲ್ಗಾಮ್ ಘಟನೆಯನ್ನು ಭಯೋತ್ಪಾದಕರು 26 ಜನರ ಸಾವಿಗೆ ಕಾರವಾಗಿರುವ ಘಟನೆಯಲ್ಲಿ ಕೇಂದ್ರ ಸರಕಾರ ಯಾವುದೇ ನಿರ್ಧಾರ ಕೈಗೊಂಡರು ಅದಕ್ಕೆ ಭಾರತೀಯರಾದ ನಾವು ಬದ್ಧವಾಗಿರಬೇಕು. ಪೆಹಲ್ಗಾಮ್ ಘಟನೆ ಬಗ್ಗೆ ಖಂಡನೆ ವ್ಯಕ್ತಪಡಿಸಿರುವ ನಾವು, ಸಾವನ್ನಪ್ಪಿರುವವ ಕುಟುಂಬಕ್ಕೆ ನ್ಯಾಯ ಒದಗಿಸುವಲ್ಲಿ, ಬುದ್ದಿ ಜೀವಿಗಳೇ ಬಾಯಿ ಬಿಡಿ ಎಂದು ಧಾರವಾಡ ಹಿರಿಯ ವಕೀಲರಾದ ಅರುಣ ಜೋಶಿ ಅವರು ಧ್ವನಿ ಎತ್ತಿದ್ದಾರೆ. ಈ ಬಗ್ಗೆ ಪ್ರಕಟಣೆ ನೀಡಿರುವ ಅವರು ಕೆಲವೊಂದಿಷ್ಟು ವಿಚಾರ ಹಂಚಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಕೆಲವು ಸೋಕಾಲ್ಡ್ ಬುದ್ದಿಜೀವಿಗಳು ಬಾಯಿಗೆ ಬಂದಂತೆ ಮಾತನಾಡುತ್ತಾ, ಸೇನಾ ಮನೋಬಲವನ್ನು ಕುಗ್ಗಿಸುವಂತೆ ಮಾಡುತ್ತಿದ್ದಾರೆ. ಜಮ್ಮು-ಕಾಶ್ಮೀರ ದಲ್ಲಿ 370 ನೇ ವಿಧಿ ರದ್ದು ಮಾಡಿದ ಮೇಲೆ ಈ ಹಿಂದೆ 2000 ರಲ್ಲಿ ಇದ್ದಂತಹ ಕಲ್ಲುತೂರಾಟ, ಭಯೋತ್ಪಾದನೆ ಚಟುವಟಿಕೆಗಳು ಕೆಲ ಒಂದಿಷ್ಟು ಮಟ್ಟಿಗೆ ನಿಯಂತ್ರಣಕ್ಕೆ ಬಂದಿವೆ. ಯಾವುದೇ ರಾಜಕೀಯ ಮಾಡದೇ ಕೇಂದ್ರ ಕಟ್ಟು ನಿಟ್ಟಿನ ಕ್ರಮ ಕೈಗೊಂಡಿದೆ. ಬುರಾನ್ ವಾನಿ ಉಗ್ರವಾದಿಯನ್ನು ಹತ್ಯೆ ಮಾಡಿದಾಗಲೂ ಸೇನಾಪಡೆಯ ಮೇಲೆ ಆರೋಪ ಮಾಡುವ ಬುದ್ಧಿಜೀವಿಗಳು ಈಗ ಸುಮ್ಮನೆ ಕುಳಿತಿದ್ದಾರೆ.

ಮಾನವತಾವಾದಿ ಪ್ರಶಸ್ತಿ ಪ್ರದಾನ ಸಮಾರಂಭ ನಾಳೆ

ಗದಗ: ನಗರದ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದಲ್ಲಿ ಬಸವ ಜಯಂತಿ ಅಂಗವಾಗಿ ಪ್ರತಿ ವರ್ಷದಂತೆ ಸಂಪ್ರದಾಯಕವಾಗಿ ನಡೆದು ಬಂದ ಮಹಾ ಮಾನವತಾವಾದಿ ಪ್ರಶಸ್ತಿ ಪ್ರದಾನ ಸಮಾರಂಭ ಏ.29 ರಂದು ನಡೆಯಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಶಿವಪ್ರಕಾಶ ಲಿಂಬಯ್ಯಸ್ವಾಮಿಮಠ ಹೇಳಿದರು.

ಅವರು ನಗರದ ಪತ್ರಿಕಾ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲಕ್ಷ್ಮೇಶ್ವರದ ಪ್ರತಿಷ್ಠಿತ ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನದಿಂದ ಕೊಡಮಾಡುವ ಮಾನವತಾವಾದಿ ಬಸವೇಶ್ವರ ಪ್ರಶಸ್ತಿಯನ್ನು ಪ್ರಸಕ್ತ ವರ್ಷ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮತ್ತು ಮೀನಾಕ್ಷಿ ಕೃಷ್ಣ ಬೈರೇಗೌಡ ದಂಪತಿಗಳಿಗೆ ಪ್ರಧಾನ ಮಾಡಲಿದ್ದು, ಪ್ರಶಸ್ತಿ ಪ್ರದಾನವನ್ನು ಗಾಂಧಿ ಸ್ಮಾರಕ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ ಮಾಡಲಿದ್ದು, ಡಂಬಳ - ಗದಗ ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಡಾ.ತೋಂಟದ ಸಿದ್ಧರಾಮ ಸ್ವಾಮಿಗಳು ಹಾಗೂ ವಿಜಯಪುರ ಷಣ್ಮುಖಾರೂಢ ಮಠದ ಅಭಿನವ ಸಿದ್ಧಾರೂಢ ಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ.

ಸಮಾರಂಭವನ್ನು ಕಾನೂನು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಜಿ.ಎಸ್. ಪಾಟೀಲ, ಮಾಜಿ ಶಾಸಕ ಡಿ.ಆರ್.ಪಾಟೀಲ, ಮಾಜಿ ವಿಪ ಸದಸ್ಯ ಮೋಹನ ಲಿಂಬಿಕಾಯಿ ಪಾಲ್ಗೊಳ್ಳುವರು. ದ್ಯಾಂಪೂರ ಚನ್ನಕವಿಗಳು ಹಾಗೂ ವಿಶ್ವಗುರು ಬಸವಣ್ಣನವರು ಗ್ರಂಥಗಳನ್ನು ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ ಅವರು ಲೋಕಾರ್ಪಣೆಗೊಳಿಸುವರು ಎಂದು ಹೇಳಿದರು.

ನಂತರ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಡಾ.ಧನೇಶ ದೇಸಾಯಿ ಮಾತನಾಡಿ, ಮಾಜಿ ಸಚಿವ ಎಸ್.ಎಸ್.ಪಾಟೀಲ ಅಧ್ಯಕ್ಷತೆ ವಹಿಸಲಿದ್ದು, ಬೆಂಗಳೂರಿನ ಜಿ.ಬಿ. ಪಾಟೀಲ ಹಾಗೂ ಧಾರವಾಡದ ವಿಜಯಕುಮಾರ ಕಮ್ಮಾರ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಇದೇ ವೇಳೆ ಲಿಂಗಾಯತ ಚಳವಳಿ 2017-18 ಹಾಗೂ ವಚನ ದರ್ಶನ ಎನ್ನುವ ಅಪಸವ್ಯ ಹಾಗೂ ಅಧ್ವಾನ ಗ್ರಂಥಗಳು ಲೋಕಾರ್ಪಣೆಗೊಳ್ಳಲಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತೋಂಟದಾರ್ಯ ಮಠದ ಆಡಳಿತಾಧಿಕಾರಿ ಶಿವಾನಂದ ಪಟ್ಟಣಶೆಟ್ಟಿ, ನಿರಂಜನಯ್ಯ ಲಿಂಬಯ್ಯಸ್ವಾಮಿಮಠ, ಕುಮಾರ ತೋಟದ, ಅಮರೇಶ ಅಂಗಡಿ, ಶಾಂತರಾಜ ಓದುನವರ ಬಸಣ್ಣ ಗಾಂಜಿ ಇದ್ದರು.



ಪತ್ರಿಕಾ ಭವನದ ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನದ ಅಧ್ಯಕ್ಷ ಶಿವಪ್ರಕಾಶ ಲಿಂಬಯ್ಯಸ್ವಾಮಿಮಠ ಮಾತನಾಡಿದರು.

> ಏ.30 ರಂದು ಬಸವ ಜಯಂತಿಯಂದು ಬಸವೇಶ್ವರರ ಭಾವಚಿತ್ರ ಮೆರವಣಿಗೆ ಸಕಲ ವಾದ್ಯವೈಭವಗೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದೆ. ನಂತರ ಸಂಜೆ 7.30 ಕ್ಕೆ ಶ್ರೀಮಠದ ಆವರಣದಲ್ಲಿ ಸಮಾರಂಭ ನಡೆಯಲಿದ್ದು ಡಾ.ತೋಂಟದ ಸಿದ್ದರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.
> -ಡಾ.ಧನೇಶ ದೇಸಾಯಿ, ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ

ಸಮಾಚಾರ ಸಣ್ಣದಲ್ಲ

ಉಚಿತ ಸಹಾಯವಾಣಿ ಕೇಂದ್ರ ಆರಂಭ

ಹಾವೇರಿ: ಜಿಲ್ಲೆಯಲ್ಲಿ ಪ್ರಸ್ತುತ ಮುಂಗಾರಿನ ನಿರಂತರ ಗುಡುಗು ಸಿಡಿಲು ಸಹಿತ ಮಳೆ-ಗಾಳಿಯಿಂದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹಾನಿಯಾಗುವ ರಸ್ತೆ, ಸೇತುವೆ, ಸಾರ್ವಜನಿಕರ ಆಸ್ತಿ, ಕುಡಿಯುವ ನೀರಿನ ಸಮಸ್ಯೆ ಹಾಗೂ ಇನ್ನಿತರೆ ಹಾನಿಗಳಿಗೆ ಸ್ಪಂದಿಸಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಉಚಿತ ಸಹಾಯವಾಣಿ ಕೇಂದ್ರ (ಕಂಟ್ರೋಲ್ ರೂಮ್) ವನ್ನು ತೆರೆಯಲಾಗಿದೆ. 08375-249102 (1077) ಸಾರ್ವಜನಿಕರು ಟೋಲ್ ಫ್ರೀ ಸಂಖ್ಯೆಗೆ ಕರೆ ಮಾಡಿ ತಮ್ಮ ಅಹವಾಲು, ಸಮಸ್ಯೆಗಳನ್ನು ದಾಖಲಿಸಿ ತ್ವರಿತ ಪರಿಹಾರ ಕಂಡುಕೊಳ್ಳುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 4ಕ್ಕೆ ಸ್ವರ ಸಂಧ್ಯಾ ಶಾಸ್ತ್ರೀಯ ಸಂಗೀತ

ಶಿರಸಿ: ಬೆಂಗಳೂರಿನ ಸಪ್ತಕ ಸಂಸ್ಥೆ ನಗರದ ರಂಗಧಾಮದಲ್ಲಿ ಮೇ 4ರಂದು ಸಂಜೆ 5.30ಕ್ಕೆ ಸ್ವರ ಸಂಧ್ಯಾ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಹಮ್ಮಿಕೊಂಡಿದೆ. ಈಗಾಗಲೇ ಚಲನಚಿತ್ರ, ಸಂಗೀತ, ಸುಗಮ ಸಂಗೀತ ಕಲಾವಿದೆಯಾಗಿ ಪ್ರಸಿದ್ಧಿ ಪಡೆದಿರುವ ಬೆಂಗಳೂರಿನ ಗಾಯಕಿ, ಪಂ ವಿನಾಯಕ ತೊರವಿ ಅವರ ಶಿಷ್ಯೆ ಶ್ರೀಲಕ್ಷ್ಮೀ ಬೆಳ್ಮಣ್ಣು ಇವರು ಶಾಸ್ತ್ರೀಯ ಗಾಯನ ಹಾಡಲಿದ್ದು, ಗುರುರಾಜ ಆಡುಕಳ ತಬಲಾದಲ್ಲಿ, ಸತೀಶ ಭಟ್ಟ ಹೆಗ್ಗಾರು ಹಾರ್ಮೋನಿಯಂ ಸಾಥ್ ನೀಡಲಿದ್ದಾರೆ. ಬಳಿಕ ಅಂತಾರಾಷ್ಟ್ರೀಯ ಖ್ಯಾತಿಯ ಬೆಂಗಳೂರಿನ ಅನುಪಮ ಭಾಗ್ವತ್ ಅವರ ಸಿತಾರ ವಾದನಕ್ಕೆ ಶ್ರೇಷ್ಠ ಯುವ ಕಲಾವಿದ ಇಶಾನ್ ಘೋಶ್ ಮುಂಬೈ ತಬಲಾ ನುಡಿಸಲಿದ್ದಾರೆ. ಕಲಾಸಕ್ತರಿಗೆ ಮುಕ್ತ ಪ್ರವೇಶ ಎಂದು ಸಂಘಟಕ ಸಪ್ತಕ ಜಿ.ಎಸ್.ಹೆಗಡೆ ತಿಳಿಸಿದ್ದಾರೆ.

ಎನ್‌ಎಸ್‌ಎಸ್ ಶಿಬಿರಕ್ಕೆ ಚಾಲನೆ

ಹಳಿಯಾಳ: ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ರಾಷ್ಟ್ರೀಯ ಸೇವಾ ಯೋಜನಾ ವಾರ್ಷಿಕ ಶಿಬಿರಕ್ಕೆ ಮುರ್ಕವಾಡದ ಚೈತನ್ಯ ವಿದ್ಯಾಲಯದಲ್ಲಿ ಚಾಲನೆ ನೀಡಲಾಯಿತು. ಚೈತನ್ಯ ವಿದ್ಯಾಲಯದ ಮುಖ್ಯಸ್ಥ ಹಾಗೂ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಗುರುನಾಥ್ ಇನಾಮ್ದಾರ್ ಅವರು ಕಾರ್ಯಕ್ರಮದಲ್ಲಿ ಮಾತನಾಡಿ, ವಿದ್ಯಾರ್ಥಿಗಳಿಗೆ ಸಾಮಾಜಿಕ ಕಳಕಳಿ ಮೂಡಿಸುವ ಇಂತಹ ಕಾರ್ಯಕ್ರಮಗಳನ್ನು ಮಹಾವಿದ್ಯಾಲಯ ಆಯೋಜಿ ಸುತ್ತಿರುವುದು ಸಂತಸದ ವಿಷಯವಾಗಿದೆ ಎಂದು ಹೇಳಿದರು.ಮುರ್ಕವಾಡ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಕವಿತಾ ಎಸ್ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಗ್ರಾಮೀಣ ಭಾಗದಲ್ಲಿನ ಸಮಸ್ಯೆಗಳಿಗೆ ಪರಿಹಾರ ನೀಡುವಂತಹ ಆವಿಷ್ಕಾರ ಮಾಡಬೇಕೆಂದು ಹೇಳಿದರು. ಮುರ್ಕವಾಡ ಪಂಚಾಯತಿ ಅಧ್ಯಕ್ಷ ಲಕ್ಷ್ಮಣ ಬಿ. ಉಪಸ್ಥಿತರಿದ್ದರು. ಮಹಾವಿದ್ಯಾಲಯದ ಎನ್‌ಎಸ್ ಎಸ್ ವಿಭಾಗದ ಸಂಚಾಲಕ ಪ್ರೊ. ಸಂತೋಷ ಸವಣೂರ್ ಈ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ. ಕುಮಾರ. ಸಾಯಿ ಎಸ್. ನಿರೂಪಿಸಿದರು. ಮಹಾವಿದ್ಯಾಲಯದ 50ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಪಾಲ್ಗೊಂಡಿದ್ದು ವೃಕ್ಷಾರೋಪಣ, ಸ್ವಚ್ಛತಾ ಅಭಿಯಾನದ ಕುರಿತಾಗಿ ನಾಗರೀಕರಲ್ಲಿ ಜಾಗೃತಿ ಮೂಡಿಸಲಿದ್ದಾರೆ ಎಂದು ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕಲಿ ಫೇಸ್‌ಬುಕ್ ಖಾತೆ:ಒಬ್ಬನ ಬಂಧನ

ದಾಂಡೇಲಿ: ಪಹಲ್ಗಾಮ್ ದುರ್ಘಟನೆಯ ನಂತರ ಭಾರತ ಮತ್ತು ಪಾಕಿಸ್ಥಾನದ ನಡುವೆ ಯುದ್ಧದ ಕಾರ್ಮೋಡ ಆವರಿಸಿರುವ ಬೆನ್ನಲ್ಲೇ ವ್ಯಕ್ತಿಯೊರ್ವ ತನ್ನ ನಕಲಿ ಫೇಸ್‌ಬುಕ್ ಖಾತೆಯ ಮೂಲಕ ಶಾಂತಿ ಕದಡಲು ಯತ್ನಿಸಿದ ಹಿನ್ನೆಲೆಯಲ್ಲಿ ದಾಂಡೇಲಿ ನಗರಠಾಣೆ ಪೊಲೀಸರು ಆತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದಾರೆ. ದಾಂಡೇಲಿಯ ಆಜಾದ್ ನಗರದ ನಿವಾಸಿ, ಹಣ್ಣಿನ ವ್ಯಾಪಾರಿ ಮಹಮ್ಮದ ಅನೀಸ್ ಅಬ್ದುಲ್ ಕರೀಂ ಹುಲುಗೂರು (46) ಬಂಧಿತ ಆರೋಪಿ. ಈತನು ಕಾದೀರ್ ಖಾನ್ ಎಂಬ ಹೆಸರಿನ ತನ್ನ ಫೇಸ್ ಬುಕ್ ಖಾತೆಯಲ್ಲಿ ಪ್ರಧಾನ ಮಂತ್ರಿ, ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಉತ್ತರಪ್ರದೇಶದ ಸಿಎಂ ಯೋಗಿ ಆದಿತ್ಯನಾಥ, ಅಸ್ಸಾಂ ಮುಖ್ಯಮಂತ್ರಿ ಹೇಮಂತ ಬಿಸ್ವಾ ಶರ್ಮಾ ಅವರುಗಳ ಭಾವಚಿತ್ರಗಳನ್ನು ನಾಯಿಗಳ ಚಿತ್ರಕ್ಕೆ ಅಂಟಿಸಿ, ನಾಯಿ ಚೈನ್ ಮೂಲಕ ಸಂಸದ ಅಸಾವುದ್ದೀನ್ ಓವೈಸಿ ಕರೆದುಕೊಂಡು ಹೋಗುತ್ತಿರುವ ಚಿತ್ರವನ್ನು ಫೇಸ್‌ಬುಕ್ ಖಾತೆಯಲ್ಲಿ ಅಪ್‌ಲೋಡ್ ಮಾಡಿ ಪಿಕ್ಚರ್ ಆಫ್ ದಿ ಡೇ' ಎಂದು ಪೋಸ್ಟ ಮಾಡಿ ಶಾಂತಿ ಕದಡಲು ಯತ್ನಿಸಿದ್ದನು. ದಾಂಡೇಲಿ ನಗರ ಠಾಣೆಯ ಕಾನ್ಸ್‌ಟೇಬಲ್ ಮಹಬೂಬಸಾಬ್ ಕಿಲ್ಲೆದಾರ್ (32) ದೂರು ಸಲ್ಲಿಸಿದ್ದರು.

{ಅರವಿಂದ ಬೆಲ್ಲದ} ಶಾಸಕ

ಯಾವುದು ಸರಿ ಯಾವುದು ತಪ್ಪು ಅನ್ನೋ ಬಗ್ಗೆ ಪ್ರಧಾನಿ ಮೋದಿಯವರು ನಿರ್ಧಾರ ತೆಗೆದುಕೊಳ್ತಾರೆ. ಮತ ಬ್ಯಾಂಕ್ ರಾಜಕೀಯಕ್ಕಾಗಿ ಸಿದ್ದರಾಮಯ್ಯ ಅವರು ಈ ರೀತಿ ಪುಕ್ಕಟೆ ಹೇಳಿಕೆ ನೀಡಬಾರದು. ಖರ್ಗೆಯವರು ಸಹ ಈ ರೀತಿ ಹೇಳಿಕೆ ನೀಡಬಾರದು.

ಶಿರಸಿ-ಕುಮಟಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೇತುವೆ ನಿರ್ಮಾಣ ನಿಧಾನ | ಮಳೆಗಾಲ ಮುನ್ನ ಸಂಚಾರ ಮುಕ್ತತೆ ಅನುಮಾನ

ಬರುವ ಮಳೆಗಾಲಕ್ಕೂ ಮುಗಿಯದು ಕಾಮಗಾರಿ!

ಶಿರಸಿ: ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆ ಸಂಪರ್ಕ ಕೊಂಡಿಯಾಗಿರುವ ಬಹು ಬೇಡಿಕೆಯ ಶಿರಸಿ ಕುಮಟಾ ರಸ್ತೆಯ ಕಾಮಗಾರಿ ಇನ್ನೂ ನಡೆಯುತ್ತಲೇ ಇದ್ದು, ಹೆದ್ದಾರಿ ಮಧ್ಯದ ಸೇತುವೆ ಕಾಮಗಾರಿಯಿಂದಾಗಿ ಇಷ್ಟು ವರ್ಷ ಕಳೆದರೂ ಸಮಸ್ಯೆಗಳನ್ನೇ ಅನುಭವಿಸುತ್ತ ಈ ಮಳೆಗಾಲಕ್ಕೂ ಈ ರಸ್ತೆ ಪ್ರಯಾಣಿಕರಿಗೆ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಕಾಣುವುದಿಲ್ಲ. ಶಿರಸಿ-ಕುಮಟಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೇತುವೆ ನಿರ್ಮಾಣ ನಿಧಾನವಾಗಿ ನಡೆಯುತ್ತಿದ್ದು, ಮಳೆಗಾಲ ಮುನ್ನ ಸಂಚಾರ ಮುಕ್ತವಾಗುವ ಅನುಮಾನ ವ್ಯಕ್ತವಾಗುತ್ತಿದೆ.

ಕೇಂದ್ರ ಸರಕಾರದ ಸಾಗರಮಾಲಾ ಯೋಜನೆಯಲ್ಲಿ ಅನುಷ್ಠಾನಗೊಂಡ ಶಿರಸಿ-ಕುಮಟಾ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವು ಆರಂಭದಲ್ಲಿ ಭೂಸ್ವಾಧೀನ ಪ್ರಕ್ರಿಯೆ, ಅರಣ್ಯ ಭೂಮಿ ಹಸ್ತಾಂತರ ಸೇರಿದಂತೆ ಇನ್ನಿತರ ಕಾರಣದಿಂದ ವಿಳಂಬವಾಗಿ ಆರಂಭಗೊಂಡರೂ, ನಂತರ ವೇಗವಾಗಿ ಕಾಮಗಾರಿ ನಡೆದಿದೆ. ಘಟ್ಟದ ಮೇಲಿನ ಶಿರಸಿ ತಾಲೂಕಿನಲ್ಲಿ 34 ಕಿ.ಮೀ ರಸ್ತೆ ಸಂಪೂರ್ಣ ಮುಗಿದಿದ್ದು, ಹಾರೂಗಾರ ಸೇತುವೆ ಉಳಿದಂತೆ ಎಲ್ಲ ಸೇತುವೆ ಕಾಮಗಾರಿ ಮುಗಿದಿದೆ.

ಶಿರಸಿ ಕುಮಟಾ ರಸ್ತೆಯಲ್ಲಿ ನಿರ್ಮಿಸಲಾಗುತ್ತಿರುವ ಸೇತುವೆ ಕಾಮಗಾರಿ

ದೇವಿಮನೆ ಘಟ್ಟ ಪ್ರದೇಶದಲ್ಲಿ ಒಂದು ಕಡೆ ರಸ್ತೆ ಬಹುತೇಕ ಮುಗಿದಿದ್ದು, ಇನ್ನೊಂದು ಕಡೆಯಲ್ಲಿ ಈಗ ಆರಂಭಗೊಂಡಿದೆ. ದೇವಿಮನೆ ಘಟ್ಟದಲ್ಲಿ ಸಂಪೂರ್ಣ ರಸ್ತೆ ಕಾಮಗಾರಿ ಮುಕ್ತಾಯಗೊಳ್ಳಲು ಹಲವು ದಿನಗಳ ಕಾಲಾವಕಾಶ ಬೇಕಾಗಿರುವುದರಿಂದ ಮಳೆಗಾಲದಲ್ಲಿಯೂ ಬದಲಿ ರಸ್ತೆ ಬಳಕೆ ಮಾಡುವುದು ಅನಿವಾರ್ಯವಾಗಿದೆ.

ಕುಮಟಾ-ಶಿರಸಿ ರಸ್ತೆಯಲ್ಲಿ ಒಟ್ಟೂ 11 ಸೇತುವೆಯಲ್ಲಿ ಈಗಾಗಲೇ 2 ಸೇತುವೆ ಪೂರ್ಣಗೊಂಡಿದ್ದು, ಉಳಿದ 9 ಸೇತುವೆ ಸ್ಲ್ಯಾಬ್ ಲೇವಲ್ ಗೆ ಬಂದಿದೆ. 2 ಸೇತುವೆ ಕಾಮಗಾರಿಯು ಈಗಷ್ಟೇ ಆರಂಭಗೊಂಡಿದ್ದು, ಮಳೆಗಾಲದ ಒಳಗಡೆ ಸೇತುವೆ ಕಾಮಗಾರಿ ಮಾತ್ರ ಪೂರ್ಣಗೊಂಡರೂ, ಕುಮಟಾ ತಾಲೂಕಿನಲ್ಲಿ ಸುಮಾರು 8 ಕಿ.ಮೀ ರಸ್ತೆ ಬಾಕಿ ಉಳಿದಿದೆ. ಈ ಕಾರಣದಿಂದ ಇನ್ನೂ ಒಂದು ವರ್ಷದ ಒಳಗಡೆ ಕಾಮಗಾರಿ ಮುಕ್ತಾಯಗೊಳ್ಳುವ ಲಕ್ಷಣ ಕಾಣುತ್ತಿಲ್ಲ.

ವಾಹನ ದಟ್ಟಣೆ ಇರುವ ಶಿರಸಿ ಕುಮಟಾ ರಸ್ತೆಯಲ್ಲಿ, ರಸ್ತೆ ನಿರ್ಮಾಣಕ್ಕೆ ಸಮಸ್ಯೆ ಆಗುತ್ತದೆ ಎಂಬ ಕಾರಣದಿಂದ ಡಿ.2 ರಿಂದ ಫೆ.25 ರವರೆಗೆ ಸಂಚಾರ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದರು. ಅದರಂತೆ ಈ ಮಾರ್ಗದಲ್ಲಿ ಲಘುವಾಹನಗಳು, ಸ್ಥಳೀಯರ ವಾಹನ ಹೊರತಾಗಿ ಬೇರೆ ವಾಹನ ಸಂಚಾರಕ್ಕೆ ಆಸ್ಪದ ನೀಡಿರಲಿಲ್ಲ. ಇರುವ ಈ ಕಡಿಮೆ ಸಮಯದಲ್ಲಿ ದೇವಿಮನೆ ಘಟ್ಟ ಪ್ರದೇಶದಲ್ಲಿ ಬಾಕಿ ಇರುವ 5 ಕಿ.ಮೀ. ಮತ್ತು ಬಂಡಲ ಘಟ್ಟ ಪ್ರದೇಶದಲ್ಲಿ 2 ಕಿ.ಮೀ. ರಸ್ತೆ ನಿರ್ಮಾಣವಾಗಬೇಕಿತ್ತು. ಡಿಸೆಂಬರ್ ತಿಂಗಳಿನಲ್ಲಿ ಮಳೆ ಬಂದ ಕಾರಣ ಕಾಮಗಾರಿ ಆರಂಭಕ್ಕೆ ನಿಧಾನವೂ ಆಗಿತ್ತು. ಈಗಲೂ ಒಂದು ಕಡೆ ಮಾತ್ರ ರಸ್ತೆ ಆಗಿದ್ದು, ಮಳೆಗಾಲದ ಒಳಗಡೆ ಪೂರ್ಣಗೊಳ್ಳುವುದು ಅನುಮಾನವಾಗಿದೆ.

> **ಈಗಾಗಗಲೇ ಶಿರಸಿ ಕುಮಟಾ ರಸ್ತೆಯ ನಡುವಿನ ಸೇತುವೆಗಳ ಕಾಮಗಾರಿ ಕಾರ್ಯ ನಡೆಯುತ್ತಲೇ ಇದೆ. ಮಳೆಗಾಲ ಬರುವುದರೊಳಗಾಗಿ ಎಲ್ಲ ಸೇತುವೆಗಳ ಕಾಮಗಾರಿಯನ್ನು ಮುಗಿಸುವ ಪ್ರಯತ್ನ ನಮ್ಮದು. ಸೇತುವೆ ಕಾಮಗಾರಿ ಮುಕ್ತಾಯಗೊಂಡ ಬಳಿಕ ಬಸ್ಸುಗಳಿಗೆ ಅಥವಾ ದೊಡ್ಡ ವಾಹನಗಳ ಸಂಚಾರಕ್ಕೆ ಅವಕಾಶ ನೀಡುತ್ತೇವೆ.**
>
> -ಗೋವಿಂದ ಭಟ್ಟ, ಆರ್.ಎಸ್.ಎಸ್, ಎಂಜಿನಿಯರ್

ಮತ್ತೆ ಮಳೆಗಾಲದಲ್ಲಿ ಗುಡ್ಡ ಕುಸಿಯುವ ಸಂಭವ

ಕಳೆದ ಮಳೆಗಾಲದಲ್ಲಿ ಶಿರಸಿ, ಕುಮಟಾ ರಸ್ತೆಯಲ್ಲಿ ಗುಡ್ಡ ಕುಸಿತದಿಂದಾಗಿ ವಾಹನ ಸವಾರರು ಸಾಕಷ್ಟು ತೊಂದರೆ ಅನುಭವಿಸಲಾಗಿತ್ತು. ಆಗ ಬಂಡಲ ಹಾಗೂ ದೇವಿಮನೆ ಘಟ್ಟ ಪ್ರದೇಶದಲ್ಲಿ ರಸ್ತೆ ಅಗಲ ಮಾಡುವದುದಕ್ಕಾಗಿ ಗುಡ್ಡ ಕತ್ತರಿಸಿರುವುದರಿಂದ ಕಳೆದ ವರ್ಷ ಗುಡ್ಡ ಕುಸಿದು 15 ದಿನ ರಸ್ತೆ ಸಂಪರ್ಕ ಸಂಪೂರ್ಣ ಕಡಿತಗೊಂಡಿತ್ತು. ಆ ಸ್ಥಳದಲ್ಲಿ ಇನ್ನೂ ಯಾವುದೇ ಮರಗಳು ಇಲ್ಲದೇ ಇರುವುದರಿಂದ ಇಳಿಜಾರಾಗಿ ಗುಡ್ಡ ಕುಸಿಯುವ ಸಂಭವವಿದೆ.

ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಇಂದು

ಶಿರಸಿ: ಮತ್ತಿಘಟ್ಟದ ಕೆಳಗಿನಕೇರಿಯ ಜನರು ಹಿಂದಿನ ವರ್ಷ ನಡೆದಂತಹ ಭೂ ಕುಸಿತದಿಂದಾಗಿ ರಸ್ತೆಯನ್ನು ಕಳೆದುಕೊಂಡು ಕಷ್ಟ ಅನುಭವಿಸುತ್ತಿದ್ದರೂ, ಈ ವಿಷಯದ ಕುರಿತು ಶಾಸಕರು ಬಂದು ಸ್ಥಳ ಪರಿಶೀಲನೆ ಮಾಡದೇ ಹಾಗೂ ಪರಿಹಾರ ನೀಡದೆ ಇರುವುದನ್ನು ಖಂಡಿಸಿ ಮತ್ತಿಘಟ್ಟದ ಕೆಳಗಿನಕೇರಿಯ ಗ್ರಾಮಸ್ಥರ ಜತೆಗೂಡಿ ಕಾರವಾರದ ಡಿಸಿ ಕಚೇರಿ ಎದುರು ಏ.28 ರಂದು ಬೆಳಗ್ಗೆ 11 ಗಂಟೆಗೆ ಅನಿರ್ಧಿಷ್ಟಾವಧಿ ಅಹೋರಾತ್ರಿ ಧರಣಿಯನ್ನು ನಡೆಸಲು ನಿರ್ಧರಿಸಿದ್ದೇವೆ ಎಂದು ಸಾಮಾಜಿಕ ಹೋರಾಟಗಾರ ಅನಂತಮೂರ್ತಿ ಹೆಗಡೆ ಹೇಳಿದರು.

> **ಶಿರಸಿ ತಾಲೂಕಿನ ಮತ್ತಿಘಟ್ಟದ ಕೆಳಗಿನಕೇರಿಯ 5 ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಭಾರಿ ಮಳೆಯಿಂದಾಗಿ ಭೂ ಕುಸಿತ ಉಂಟಾಗಿತ್ತು. ಪರಿಣಾಮವಾಗಿ ಆ ಭಾಗದ ಜನರಿಗೆ ಹೊರಜಗತ್ತಿನ ಸಂಪರ್ಕವೇ ಇರಲಿಲ್ಲ. ವಿದ್ಯಾರ್ಥಿಗಳಿಗೆ ಶಾಲೆಗೆ ಹೋಗಲು ಸಮಸ್ಯೆ ಹಾಗೂ ಇನ್ನಿತರ ಕೆಲಸಗಳಿಗೆ ಹೋಗಲು ಸಮಸ್ಯೆ ಉಂಟಾಗುತ್ತಿದೆ.**
>
> -ಅನಂತಮೂರ್ತಿ ಹೆಗಡೆ, ಸಾಮಾಜಿಕ ಹೋರಾಟಗಾರ

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಸತತ 2 ವರ್ಷಗಳಿಂದ ಭೂ ಕುಸಿತ ಉಂಟಾದರೂ ಸರಕಾರದಿಂದ ಒಂದು ರುಪಾಯಿ ಕೂಡ ಅನುದಾನ ಬಂದಿಲ್ಲ. ಮತ್ತಿಘಟ್ಟ ಕೆಳಗಿನಕೇರಿ ಎಂಬಂತಹ ಊರುಗಳು ಇವೆಯಾ ಎಂಬುದು ಆಡಳಿತ ವರ್ಗಕ್ಕೆ ಗೊತ್ತಿದೆಯಾ ಅನ್ನುವಂಥ ಪ್ರಶ್ನೆ

ಇದೆ.

ಕಳೆದ 10 ತಿಂಗಳಿಂದ ಆ ಕಡೆ ಯಾರೂ ಮುಖ ಹಾಕಿಲ್ಲ. ಇದನ್ನು ಖಂಡಿಸಿ ಮಾ.17 ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಶಾಶ್ವತ ರಸ್ತೆಗೆ ಆಗ್ರಹಿಸಿ ಪ್ರತಿಭಟನೆ ಮತ್ತು ಮನವಿಯನ್ನು ಗ್ರಾಮಸ್ಥರ ನೇತೃತ್ವದಲ್ಲಿ ಸಲ್ಲಿಸಲಾಯಿತು. ತ್ವರಿತವಾಗಿ ಸ್ಪಂದಿಸಿದ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಅಧಿಕಾರಿಗಳಿಗೆ ತುರ್ತಾಗಿ ಕ್ರಮ ಕೈಗೊಳ್ಳಲು ಆದೇಶಿಸಿದರೂ ಕೂಡ ತಿಂಗಳಾದರು ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ. ಈ ನಿಟ್ಟಿನಲ್ಲಿ ಮಳೆಗಾಲ ಆರಂಭದೊಳಗೆ ಶಾಶ್ವತ ಪರಿಹಾರ ಆಗ್ರಹಿಸಿ ಧರಣಿ ನಡೆಸಲು ಮುಂದಾಗಿದ್ದೇನೆ. ಮೂಲಭೂತ ಹಕ್ಕಿಗಾಗಿ ನಡೆಸುತ್ತಿರುವ ಈ ಹೋರಾಟದಲ್ಲಿ ಹೆಚ್ಚಿನ ಸಾರ್ವಜನಿಕರು ಭಾಗಿಯಾಗಿ ಕೈಜೋಡಿಸಬೇಕೆಂದು ಅವರು ಕರೆ ನೀಡಿದ್ದಾರೆ.

ಉಗ್ರರ ಗುಂಡಿಗೆ ಬಲಿಯಾದ ಪ್ರವಾಸಿಗರಿಗೆ ಶ್ರದ್ಧಾಂಜಲಿ

ಗದಗ: ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೃಷ್ಣಗೌಡ ಎಚ್. ಪಾಟೀಲ ನೇತೃತ್ವದಲ್ಲಿ ನಡೆದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ನೂರಾರು ಕಾರ್ಯಕರ್ತರು ಮೇಣದ ಬತ್ತಿ ಹಚ್ಚಿ ಮೌನ ಆಚರಿಸುವ ಮೂಲಕ ಭಯೋತ್ಪಾದಕರ ಗುಂಡಿಗೆ ಬಲಿಯಾದ ಪ್ರವಾಸಿಗರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರಗಾಮಿಗಳು ನಡೆಸಿದ ಹೇಯ ಕೃತ್ಯದಲ್ಲಿ ಸಾವನ್ನಪ್ಪಿದ ನಾಗರಿಕರಿಗೆ ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಮೇಣದಬತ್ತಿ ಹಚ್ಚಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೃಷ್ಣಗೌಡ ಎಚ್. ಪಾಟೀಲ ಮಾತನಾಡಿ, ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ದಾಳಿ ನಡೆಸಿ 26ಕ್ಕೂ ಹೆಚ್ಚು ಪ್ರವಾಸಿಗರ ಹತ್ಯೆ ಮಾಡಿದ ಘಟನೆಯು ಅತ್ಯಂಯ ಹೇಯ ಕೃತ್ಯವಾಗಿದ್ದು, ಮಾನವೀಯತೆಯ ಕಗ್ಗೊಲೆಯಾದಂತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗದಗ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಬಿ.ಬಿ. ಅಸೂಟಿ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ, ತಾಪಂ ಮಾಜಿ ಸದಸ್ಯ ವಿದ್ಯಾಧರ ದೊಡ್ಡಮನಿ ಮಾತನಾಡಿದರು.

ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಮೇಣದಬತ್ತಿ ಹಚ್ಚಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

> **ಎಲ್ಲ ಜಾತಿ, ಧರ್ಮದವರು ಒಗ್ಗಟ್ಟಾಗಿರುವ ನಮ್ಮ ಭಾರತ ದೇಶದಲ್ಲಿ ವಿಭಜನೆ ಆಗಬೇಕು ಎಂಬ ಹುನ್ನಾರವನ್ನು ಇಟ್ಟುಕೊಂಡು ಮಾಡಿರುವಂತಹ ಭಯೋತ್ಪಾದಕರ ದಾಳಿಯನ್ನು ನಾವೆಲ್ಲರೂ ಏಕತೆಯಿಂದ, ಒಗ್ಗಟ್ಟಿನಿಂದ ಖಂಡಿಸಿ.**
>
> -ಕೃಷ್ಣಗೌಡ ಎಚ್. ಪಾಟೀಲ, ಕಾಂಗ್ರೆಸ್ ಸಮಿತಿ ಅಧ್ಯಕ್ಷ

ನಗರಸಭೆ ಮಾಜಿ ಅಧ್ಯಕ್ಷ ಸುರೇಶ ಕಟ್ಟಿಮನಿ, ಮುಖಂಡರಾದ ಬಸವರಾಜ ಕಡೆಮನಿ, ಎಸ್.ಎನ್. ಬಳ್ಳಾರಿ, ಷರೀಫ್ ಬಿಳೆಯಲಿ, ಬಾಷಾಸಾಬ ಮಲ್ಲಸಮುದ್ರ, ಸಯ್ಯದಖಾಲಿದ ಕೊಪ್ಪಳ, ಅನಿಲ ಗರಗ, ಲಕ್ಷ್ಮಣ ಭಜಂತ್ರಿ, ಸರ್ಫರಾಜ್ ಬಬರ್ಚಿ, ಎಂ.ಸಿ. ಶೇಖ್, ಡಿ.ಬಿ. ಮೂರ್ನಾಳ, ಮಂಜುನಾಥ ಪೂಜಾರ, ಮಹಮ್ಮದ ಶಾಲಗಾರ, ಉಮರಫಾರೂಖ್ ಹುಬ್ಬಳ್ಳಿ, ಮೋಹನ ಚಂದಪ್ಪನವರ, ಮಾರ್ತಾಂಡಪ್ಪ ಹಾದಿಮನಿ, ಡಿ.ಬಿ. ಜೋಗಣ್ಣವರ, ವಸಂತ ಸಿದ್ದಮನಹಳ್ಳಿ, ಚಿಮ್ಮಿ ನದಾಫ್, ಫರ್ವಿನಬಾನು ಮುಲ್ಲಾ, ಕಮಲಾಬಾಯಿ ಹಾದಿಮನಿ, ದ್ರಾಕ್ಷಾಯಿಣಿ ಹಾಸಿಲಕರ, ಮಹಾಂತೇಶ ಮಡಿವಾಳರ, ಉಮರಫಾರೂಖ್ ಬಾರಿಗಿಡದ, ಮೋಹನ ಕಟ್ಟಿಮನಿ, ಅಬ್ದುಲಮುನಾಫ ಮುಲ್ಲಾ, ಪರಪ್ಪ ಕಮತರ, ರಾಘವೇಂದ್ರ ದೊಡ್ಡಮನಿ, ದಯಾನಂದ ಪವಾರ, ಚಾಂದಸಾಬ ಕೊಟ್ಟೂರ, ಹಾಜರಿದ್ದರು.

ಭಟ್ಕಳ ತಂಡ ರಾಜ್ಯ ಮಟ್ಟಕ್ಕೆ

ಭಟ್ಕಳ: ಇತ್ತೀಚಿಗೆ ಕಾರವಾರದಲ್ಲಿ ನಡೆದ ಉತ್ತರಕನ್ನಡ ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯ ಸರಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಟ್ಕಳದ ತಂಡ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಯಿತು . ಶ್ರೀವಲ್ಲಿ ಪ್ರೌಢಶಾಲೆಯ ಶಿಕ್ಷಕ ನಾರಾಯಣ ನಾಯ್ಕ ನಿರ್ದೇಶಿಸಿದ 'ಕಂಬನಿ' ಎಂಬ ಸುಂದರ ಸಾಮಾಜಿಕ ನಾಟಕ ಎಲ್ಲರ ಮೆಚ್ಚುಗೆ ಪಡೆಯಿತು. ಕಲಾವಿದರು ತಮ್ಮ ತಮ್ಮ ಪಾತ್ರಗಳಿಗೆ ಜೀವ ತುಂಬುವ ಮೂಲಕ ಎಲ್ಲರ ಪ್ರೀತಿಗೆ ಪಾತ್ರರಾಗಿ ಕಲಾಭಿಮಾನಿಗಳ ಮನ ಗೆಲ್ಲುವಲ್ಲಿ ನಾಟಕವನ್ನು ಅದ್ಭುತವಾಗಿ ಪ್ರದರ್ಶಿಸಿದರು. ಕಂಬನಿ ನಾಟಕವನ್ನು ನೋಡಿದ ಪ್ರೇಕ್ಷಕರ ಕಣ್ಣುಹನಿಯಾಯಿತು. ಕಲಾವಿದ ವೆಂಕಟೇಶ ನಾಯ್ಕ, ದೇವರಾಯ ದೇವಾಡಿಗ, ಉಮೇಶ ಕೆರೆಕಟ್ಟೆ, ದಾಸ ಶೆಟ್ಟಿ, ವಸಂತ ನಾಯ್ಕ, ನಾಗರಾಜ ಅಂಬಿಗ, ನಾಗೇಶ ಭಟ್, ಜನಾರ್ಧನ ಮೊಗೇರ, ವಿಜಯ ಕುಮಾರ ನಾರ್ವೇಕರ್, ಮಹೇಶ ತೆರ್ನಮಕ್ಕಿ, ನಾಗಪ್ಪಯ್ಯ ಆಚಾರಿ, ಯು.ಎ.ಲೊಹಾನಿ, ಬಿ.ಕೆ.ನಾಯ್ಕ ತಮ್ಮ ಕಲಾ ಪ್ರದರ್ಶನಕ್ಕೆ ಸಾಕ್ಷಿಯಾದರು. ಈ ಎಲ್ಲ ಕಲಾವಿದರನ್ನು ಭಟ್ಕಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಭಟ್ಕಳ ನೌಕರರ ಸಂಘ, ಭಟ್ಕಳ ಶಿಕ್ಷಕರ ಸಂಘ ಅಭಿನಂದಿಸಿರುತ್ತಾರೆ.

ಗುತ್ತಿಗೆ ನೌಕರರನ್ನು ಕಾಯಂಗೊಳಿಸಲು ಆಗ್ರಹ

ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಹೋರಾಟದ ರೂಪರೇಷಗಳ ಕುರಿತು ಪ್ರವಾಸಿ ಮಂದಿರದಲ್ಲಿ ಸಭೆ ನಡೆಸಲಾಯಿತು.

ಹಾವೇರಿ: ರಾಜ್ಯ ಸರಕಾರದ ನಾನಾ ಇಲಾಖೆಗಳಲ್ಲಿ ಹೊರಗುತ್ತಿಗೆ ಮೇಲೆ ಕೆಲಸ ಮಾಡುತ್ತಿರುವ ಸಿಬ್ಬಂದಿಗಳಿಗೆ ನಿರಂತರ ಕೆಲಸ ನೀಡಬೇಕು. ಅವರನ್ನು ಕೆಲಸದಿಂದ ಕೈ ಬಿಡಕೂಡದು ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಎಂದು ಕರ್ನಾಟಕ ರಾಜ್ಯ ಸರಕಾರಿ ದಿನಗೂಲಿ ನೌಕರರ ಮಹಾ ಮಂಡಳ ಹುಬ್ಬಳ್ಳಿ, ರಾಜ್ಯ ಉಪಾಧ್ಯಕ್ಷರು, ನಿವೃತ್ತ ನ್ಯಾಯಾಧೀಶ ಎನ್.ಬಿ ಕುಲಕರ್ಣಿ ತಿಳಿಸಿದರು.

ಭಾನುವಾರ ನಗರದ ಪ್ರವಾಸಿ ಮಂದಿರದಲ್ಲಿ ಸಭೆಯಲ್ಲಿ ಮಾತನಾಡಿ ಅವರು, ಹೊರಗುತ್ತಿಗೆಯಲ್ಲಿ ಕೆಲಸವನ್ನು ಮಾಡುವ ಪ್ರತಿಯೊಬ್ಬರು ಸಂಘಟನೆ ಜತೆಗೆ ನಿಲ್ಲಬೇಕು. ಸಂಘಟನೆ ಬಲ ಇದ್ದಾಗ ಮಾತ್ರ ಸರಕಾರದ ವಿರುದ್ಧ ಹೋರಾಡಿ ಹಕ್ಕು ಪಡೆಯಲು ಸಾಧ್ಯ ಎಂದರು.

ಏಜೆನ್ಸಿ ರದ್ದುಗೊಳಿಸಿ ಬೀದರ್ ಮಾದರಿ ಜಾರಿಯಾಗಬೇಕು. ಕಡ್ಡಾಯವಾಗಿ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರನ್ನು ಸರಕಾರಿ ನೌಕರರನ್ನಾಗಿ ಘೋಷಣೆ ಆಗಬೇಕು. ಮೇ1 ರಂದು ಕಾರ್ಮಿಕರ ದಿನಾಚರಣೆ ಅವಧಿಯಲ್ಲಿ ಖಾಯಂ ನೌಕರರೆಂದು ಸಿಎಂ ಸಿದ್ದರಾಮಯ್ಯ ಅವರು ಘೋಷಣೆ ಮಾಡಲೇಬೇಕು ಎಂದು ಹಕ್ಕೋತ್ತಾಯಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರಕಾರಿ ದಿನಗೂಲಿ ನೌಕರರ ಮಹಾ ಮಂಡಳ ಹುಬ್ಬಳ್ಳಿ, ರಾಜ್ಯ ಉಪಾಧ್ಯಕ್ಷರು, ನಿವೃತ್ತ ನ್ಯಾ. ಎನ್.ಬಿ ಕುಲಕರ್ಣಿ ರಾಜ್ಯ ಉಪಾಧ್ಯಕ್ಷರಾದ ಸುಲೋಚನಾ ಪೋತನೀಸ್, ರಾಜ್ಯ ಖಜಾಂಚಿ ಸುಮಿತ್ರಾ ಪೋತನಿಸ್, ರಾಜ್ಯ ಕಾರ್ಯದರ್ಶಿ ವಿ.ಜಿ ಸೊಪ್ಪಿಮಠ, ಜಂಟಿ ಕಾರ್ಯದರ್ಶಿ ಎಂ.ಆರ್.ದೊರೆಸ್ವಾಮಿ, ರಾಜ್ಯ ಸಮಿತಿ ಆಡಳಿತ ಮಂಡಳಿ ಸದಸ್ಯರಾದ ಕೆ. ಬಸವರಾಜ, ಜಂಟಿ ಕಾರ್ಯದರ್ಶಿ ನಾಗರಾಜ ಕಲಾಲ ಜಿಲ್ಲಾ ಮುಖಂಡರಾದ ಸುಭಾಸ್ ಕ್ಯಾಲಕೊಂಡ ಹಾಜರಿದ್ದರು.

> **ಸಂಘಟನೆ ಬಲಗೊಳಿಸುವ ವಿಚಾರವಾಗಿ ಹಾವೇರಿಗೆ ಆಗಮಿಸಿದ್ದೇವೆ. ಸಭೆಯನ್ನು ನಡೆಸುತ್ತಾ ಬಂದಿದ್ದೇವೆ. ನಿಮ್ಮ ಸಹಕಾರ ಅತಿ ಮುಖ್ಯ. ಹೊರಗುತ್ತಿಗೆ ಮೇಲೆ ಕೆಲಸ ಮಾಡುತ್ತಿರುವವರಿಗೆ ವೇತನ ಹೆಚ್ಚಳ ಆಗಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಕೋರ್ಟ್‌ನಲ್ಲಿ ವ್ಯಾಜ್ಯ ಇದ್ದಾಗಲೂ ಕೆಲವರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ಅವರನ್ನು ಮರಳಿ ಕೆಲಸಕ್ಕೆ ತಗೆದುಕೊಳ್ಳಿ.**
>
> -ಎನ್.ಬಿ ಕುಲಕರ್ಣಿ, ನಿವೃತ್ತ ನ್ಯಾಯಾಧೀಶ

ಉಪ್ಪಾರ ಸಂಘದ ಪದಾಧಿಕಾರಿಗಳ ಆಯ್ಕೆ

ಜಿಲ್ಲಾ ಭಗೀರಥ ಉಪ್ಪಾರ ಜಿಲ್ಲಾ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ಗದಗ: ನಗರದ ಮುಳಗುಂದ ರಸ್ತೆಯ ಕಿತ್ತೂರು ರಾಣಿ ಚೆನ್ನಮ್ಮ ಮಂಗಳ ಭವನದಲ್ಲಿ ನಡೆದ ಉಪ್ಪಾರ ಸಮಾಜದ ಸಭೆಯಲ್ಲಿ ಜಿಲ್ಲಾ ಭಗೀರಥ ಉಪ್ಪಾರ ಜಿಲ್ಲಾ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ಜಿಲ್ಲಾ ಭಗೀರಥ ಉಪ್ಪಾರ ಸಂಘದ ಅಧ್ಯಕ್ಷರಾಗಿ ಭೀಮನಗೌಡ ಪಾಟೀಲ ಆಯ್ಕೆ ಮಾಡಲಾಯಿತು. ಗೌರವ ಅಧ್ಯಕ್ಷ ಅನಿಲ ಗರಗ, ಪ್ರಧಾನ ಕಾರ್ಯದರ್ಶಿ ರಾಜು ಗದ್ದಿ, ಖಜಾಂಚಿ ಪ್ರಭಾಕರ್ ಸಾವಕ್ಕನವರ್, ಸಹ ಖಜಾಂಚಿ ಮಂಜುನಾಥ ಸಂಜೀವಣ್ಣವರ್, ಉಪಾಧ್ಯಕ್ಷ ರಾಜಶೇಖರ್ ಮಾಲಗಿತ್ತಿ, ಮಹಾದೇವಪ್ಪ ಪ್ಯಾಟಿ, ಶಿವಪುತ್ರಪ್ಪ ಕುಂದ್ರಳ್ಳಿ, ಸಂಘಟನಾ ಕಾರ್ಯದರ್ಶಿ ಪಾಂಡುರಂಗ ಕನಕಾಪೂರ, ಸಹ ಕಾರ್ಯದರ್ಶಿ ದೇವಪ್ಪ ಉಪ್ಪಾರ, ಜಿಲ್ಲಾ ಸಂಚಾಲಕ ಮಂಜುನಾಥ ಉಪ್ಪಾರ, ಮಹಿಳಾ ಸಂಘಟನಾ ಕಾರ್ಯದರ್ಶಿ ನಿಂಗವ್ವ ಹುಗ್ಗೆಪ್ಪನವರ್, ಮಹಿಳಾ ಕಾರ್ಯದರ್ಶಿ ದೇವಕ್ಕ ತಿಪ್ಪಣ್ಣವರ್ ಅವರನ್ನು ಆಯ್ಕೆ ಮಾಡಲಾಯಿತು.

ಜಿಲ್ಲಾ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಆಯ್ಕೆ ನಂತರ ಮೇ.4 ರಂದು ಸರಕಾರದ ಸಹಯೋಗದೊಂದಿಗೆ ನಡೆಯುವ ಮಹರ್ಷಿ ಭಗೀರಥ ಜಯಂತಿ ಕುರಿತು ಚರ್ಚೆ ಮಾಡಲಾಯಿತು.

ಈರಣ್ಣ ಗಡಾದ, ಮಂಜುನಾಥ ಹುಯಿಲಗೋಳ, ಕೃಷ್ಣಾ ಗಡಾದ, ಸುರೇಶ್ ಉಪ್ಪಾರ, ಶಿವಪುತ್ರಪ್ಪ ಉಪ್ಪಾರ, ದೇವಪ್ಪ ಉಪ್ಪಾರ, ಶಂಕ್ರಪ್ಪ ಹೊನಕೇರಿ, ಪ್ರೊ.ಮಲ್ಲೇಶ್, ಚನ್ನಪ್ಪ ಹಸರಂಬಿ, ಕನಕಪ್ಪ ಜಮಾದಾರ್, ಮಾರ್ತಂಡಪ್ಪ ಉಪ್ಪಾರ, ಲಕ್ಷ್ಮಣ್ಣ ಜಮಾದಾರ್, ಬಸವಣ್ಣೆಪ್ಪ ಉಪ್ಪಾರ, ನವೀನ್ ಹುಯಿಲಗೋಳ, ಮಂಜುನಾಥ ಸಂಜೀವಣ್ಣವರ್, ರಾಮಪ್ಪ ಉಪ್ಪಾರ, ಕನಕಪ್ಪ ಅಗಸಿಮನಿ, ಮಂಜುನಾಥ ಕಟ್ಟಿಮನೊ, ಸಾಬಣ್ಣ, ಮಹಾಂತೇಶ ಮಂತ್ರಿ, ನಿಂಗಪ್ಪ ಇಟಗಿ, ಪರಸಪ್ಪ ತಿಪ್ಪಣ್ಣವರ್, ಗಿರೀಶ್ ಹಳ್ಳಿ, ನಾಗರಾಜ್ ಉಪ್ಪಾರ, ಶರಣಪ್ಪ ಉಪ್ಪಾರ, ಹನುಮಪ್ಪ ಹುಗ್ಗಪ್ಪನವರ್, ಸತೀಶ್ ಮಂತ್ರಿ, ರಾಮಪ್ಪ ಉಪ್ಪಾರ ಸೇರಿದಂತೆ ಸಮಾಜದ ಅನೇಕರು ಇದ್ದರು.

ನಾಳೆ ಗಾರ್ಮೆಂಟ್ಸ್ ಸ್ಥಾಪನೆಗೆ ಭೂಮಿಪೂಜೆ

ಹಾವೇರಿ: ನೇಕಾರರ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಹಾವೇರಿ ತಾಲೂಕಿನ ಭರಡಿ ಗ್ರಾಮದಲ್ಲಿ ಸಿದ್ಧ ಉಡುಪು ಘಟಕ ಪ್ರಾರಂಭ ಮಾಡಲಾಗುತ್ತಿದ್ದು ಏ.29ರಂದು ಬೆಳಗ್ಗೆ 10.30 ಕ್ಕೆ ಜೈ ಹನುಮಾನ ರೆಡಿಮೇಡ್ ಗಾರ್ಮೆಂಟ್ ಅಡಿಗಲ್ಲು ಸಮಾರಂಭ ಹಾಗೂ ಭೂಮಿ ಪೂಜೆ ನಡೆಯಲಿದೆ. ಸಮಾರಂಭದ ಸಾನಿಧ್ಯವನ್ನು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀಪ್ರಸನ್ನಾನಂದಪುರಿ ಸ್ವಾಮೀಜಿ ಅವರು ಅಲಂಕರಿಸಲಿದ್ದು, ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ವಹಿಸಿಕೊಳ್ಳಲಿದ್ದಾರೆ. ಉದ್ಘಾಟನೆಗೆ ಹಾವೇರಿ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ್, ಸಂಸದ ಬಸವರಾಜ ಬೊಮ್ಮಾಯಿ, ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ, ಸರಕಾರದ ಮುಖ್ಯ ಸಚೇತಕರಾದ ಸಲೀಂ ಅಹ್ಮದ್ ಮಾಜಿ ಶಾಸಕ ನೆಹರು ಓಲೇಕಾರ, ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ, ಸಿಇಒ ರುಚಿ ಬಿಂದಾಲ್ ಗ್ಯಾರಂಟಿ ಯೋಜನೆಯ ಜಿಲ್ಲಾಧ್ಯಕ್ಷ ಎಂ.ಎಂ ಹಿರೇಮಠ, ರೈತ ಸಂಘದ ಜಿಲ್ಲಾಧ್ಯಕ್ಷ ಹನುಮಂತಪ್ಪ ಹುಚ್ಚಣ್ಣನವರ ಸೇರಿದಂತೆ ರೈತ ಸಂಘದ ಅನೇಕ ಜಿಲ್ಲೆಯ ಜಿಲ್ಲಾಧ್ಯಕ್ಷರಗಳು ಹಾಗೂ ಜಿಲ್ಲೆಯ ರೈತ ಸಂಘದ ಪದಾಧಿಕಾರಿಗಳು ಆಗಮಿಸಲಿದ್ದಾರೆ ಎಂದು ರೈತ ಸಂಘಟನಾ ಕಾರ್ಯದರ್ಶಿ ಟಿ. ಡಿ.ಬಸವರಾಜ ತಿಳಿಸಿದ್ದಾರೆ.

ಒಳ್ಳೆಯ ಗೆಳೆತನ ಜೀವನದ ಮಂತ್ರ

ಹೊನ್ನಾವರ: ವಿದ್ಯಾರ್ಥಿಗಳು ಒಳ್ಳೆಯ ಕನಸು ಕಾಣಬೇಕು. ಒಳ್ಳೆಯ ನಡತೆ ಗುರುಗಳ ಮಾರ್ಗದರ್ಶನ ಒಳ್ಳೆಯ ಗೆಳೆತನ ಯಶಸ್ವಿ ಜೀವನದ ಮಂತ್ರಗಳು. ವಿದ್ಯಾರ್ಥಿಗಳು ಸದಾ ಆಶಾವಾದಿಗಳಾಗಿ ಭವ್ಯ ಭಾರತದ ಕನಸು ಉತ್ತಮ ಸಮಾಜದ ನಿರ್ಮಾಣಕ್ಕೆ ಸಹಕಾರಿಯಾಗಿರಬೇಕು. ಆಶಾವಾದವೇ ಯಶಸ್ವಿಗೆ ಮೂಲ ಮಂತ್ರ ಎಂದು ಮಂಕಿ ರಾಮಕ್ಷತ್ರಿಯ ಸಂಘದ ಅಧ್ಯಕ್ಷ ಎಚ್.ಆರ್. ನಾಯ್ಕ ಹೇಳಿದರು. ಅವರು ಇತ್ತೀಚೆಗೆ ಮಂಕಿಯಲ್ಲಿ ನಡೆದ ಆಶಾಕಿರಣ ಪ್ರೇರಣ ಶಿಬಿರ ಉದ್ಘಾಟಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆ ವಹಿಸಿದ ಸುರೇಶ್ ನಾಯಕ್ ಮಾತನಾಡಿ, ಆತ್ಮವಿಶ್ವಾಸ ಪರಿಶ್ರಮ ನಿರಂತರ ಅಧ್ಯಯನ ಯಶಸ್ವಿ ವಿದ್ಯಾರ್ಥಿಯ ಲಕ್ಷಣವಾಗಬೇಕು ಎಂದರು. ಆನಂದ ನಾಯ್ಕ ಚಂದಾವರ ಮಾತನಾಡಿ, ವಿದ್ಯಾರ್ಥಿಗಳು ಸದಾ ಅಧ್ಯಯನಶೀಲತೆ ಹೊಂದಿದರೆ ಮಾತ್ರ ಯಶಸ್ಸು ತಮ್ಮದಾಗುತ್ತದೆ ಎಂದರು. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಪ್ರಶಾಂತ್ ನಾಯ್ಕ, ಶರಾವತಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ರಾಜೇಶ್ ಸಾಳೆಹಿತ್ತಲ್, ಕೊಕ್ಕೇಶ್ವರ ರಾಮ ಕ್ಷತ್ರಿಯ ಸೇವಾ ಸಮಿತಿ ಅಧ್ಯಕ್ಷ ಅಣ್ಣಪ್ಪ ನಾಯ್ಕ ಕಾರ್ಯಕ್ರಮಕ್ಕೆ ಶುಭ ಕೋರಿದರು. ಉಪನ್ಯಾಸಕ ಜಗದೀಶ್ ನಾಯ್ಕ, ರಾಜೇಶ್ ನಾಯ್ಕ ಸಂಪನ್ಮೂಲ ವ್ಯಕ್ತಿಯಾಗಿ ವಿದ್ಯಾರ್ಥಿಗಳೊಂದಿಗೆ ಮಾರ್ಗದರ್ಶನ ಮತ್ತು ಸಂವಾದ ನಡೆಸಿದರು. ಸಾನಿಕಾ ಬೈಲೂರು ಪ್ರಾರ್ಥಿಸಿದರು. ಕಾರ್ಯದರ್ಶಿ ಅಣ್ಣಪ್ಪ ನಾಯ್ಕ ಸ್ವಾಗತಿಸಿದರು. ಉದಯ ನಾಯ್ಕ ಹಾಗೂ ರೂಪಾ ನಾಯ್ಕ ಕಾರ್ಯಕ್ರಮ ನಿರೂಪಿಸಿದರು.

ರಾಹುಲ್ ಗಾಂಧಿ ಹೇಳಿಕೆ ಖಂಡನೆ

ಶಿರಸಿ: ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಅವರ ಕುರಿತು ರಾಹುಲ್ ಗಾಂಧಿ ನೀಡಿದ ಹೇಳಿಕೆಗೆ ಸರ್ವೋಚ್ಚ ನ್ಯಾಯಾಲಯವು ಅವರನ್ನು ತರಾಟೆಗೆ ತೆಗೆದುಕೊಂಡು ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಯಾರೂ ಮನಬಂದಂತೆ ಮಾತನಾಡಬಾರದು ಎಂದು ಸ್ಪಷ್ಟವಾಗಿ ತಿಳಿಸಿದೆ. ಸುಪ್ರೀಂ ಕೋರ್ಟ್ ನಿರ್ದೇಶನವನ್ನು ರಾಹುಲ್ ಗಾಂಧಿಗೆ ನೀಡಿದ ಮೇಲಾದರೂ ಕಾಂಗ್ರೆಸ್ ಮುಖಂಡರು ಮಹಾಪುರುಷರ ಕುರಿತು ನಾಲಿಗೆ ಹರಿ ಬಿಡುವುದನ್ನು ನಿಲ್ಲಿಸಲಿ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಕುಟುಕಿದ್ದಾರೆ. ಈ ಹಿಂದೆ ಚುನಾವಣಾ ರ‍್ಯಾಲಿಯೊಂದರಲ್ಲಿ ಅವರು ಸಾವರ್ಕರ್ ವಿರುದ್ಧ ಬೇಜವಾಬ್ದಾರಿ ಹೇಳಿಕೆ ನೀಡಿದ್ದರ ವಿರುದ್ಧ ದಾಖಲಿಸಲಾಗಿದ್ದ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವು, ರಾಹುಲ್ ಹೇಳಿಕೆ ವಿವೇಚನಾ ರಹಿತ ಮತ್ತು ಬಾಲಿಶ ಎಂದು ತರಾಟೆಗೆ ತೆಗೆದುಕೊಂಡಿದೆ. ಈ ಮೂಲಕ ಕಾಂಗ್ರೆಸ್ ಮುಖ್ಯಸ್ಥ ರಾಹುಲ್ ಗಾಂಧಿ ಹಾಗೂ ಇತರ ಮುಖಂಡರುಗಳಿಗೆ ಎಚ್ಚರಿಕೆ ನೀಡಿದೆ. ವಿಚಾರಣೆಯ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್, ಮಾಜಿ ಪ್ರಧಾನಿ ಇಂದಿರಾಗಾಂಧಿ,ಸಾವರ್ಕರ್ ಅವರನ್ನು ಪ್ರಶಂಸಿಸಿ ಪತ್ರ ಬರೆದಿರುವುದನ್ನು ಉಲ್ಲೇಖಿಸಿದ್ದು ರಾಹುಲ್ ಗಾಂಧಿಯವರಿಗೆ ಅಧ್ಯಯನ ಮಾಡಿ ಮಾತನಾಡಲು ಹೇಳಿದೆ. ಇಂತಹ ಹೇಳಿಕೆಗಳು ಪುನರಾವರ್ತನೆಯಾದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದೆ. ವೀರ ಸಾವರ್ಕರ್‌ರನ್ನು ಅವಮಾನಿಸುವುದು ಖಂಡನೀಯ ಮತ್ತು ಇದನ್ನು ಸಹಿಸಲು ಸಾಧ್ಯವಿಲ್ಲ ಎಂದು ಕಾಗೇರಿ ಹೇಳಿದ್ದಾರೆ.

ಅಕಾಡೆಮಿಯಿಂದ ಶ್ರೀಧರ ಕುರಿತು ಕೃತಿ

ಶಿರಸಿ: ಹಿರಿಯ ಸಾಹಿತಿ ಪ್ರೊ.ಬಿ.ಎಚ್. ಶ್ರೀಧರ ಅವರ ಕುರಿತಾಗಿ ರಚಿಸಲಾದ ದೆಹಲಿ ಸಾಹಿತ್ಯ ಅಕಾಡೆಮಿ ಪ್ರಕಟಿತ ಕೃತಿ ಅನಾವರಣ ಕಾರ್ಯಕ್ರಮ ನಗರದ ಆರಾಧನಾ ಸಭಾಂಗಣದಲ್ಲಿ ನಡೆಯಿತು. ಬಿ.ಎಚ್.ಶ್ರೀಧರ ಸಾಹಿತ್ಯ ಪ್ರಶಸ್ತಿ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಲ್.ಎಸ್. ಶಾಸ್ತ್ರಿ ರಚಿಸಿದ ಕೃತಿಯನ್ನು ಹಿರಿಯ ಸಾಹಿತಿ ಶಾ.ಮಂ. ಕೃಷ್ಣರಾಯರು ಬಿಡುಗಡೆಗೊಳಿಸಿದರು. ಈ ವೇಳೆ ಮಾತನಾಡಿದ ಶಾ.ಮಂ.ಕೃಷ್ಣರಾಯ, ಸಾಹಿತ್ಯ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ ಬಿ.ಎಚ್.ಶ್ರೀಧರ ಬದುಕಿಲ್ಲದಿದ್ದರೂ ಅವರು ಸಾಹಿತ್ಯದ ಮೂಲಕ ಇಂದಿಗೂ ಜೀವಂತವಾಗಿದ್ದಾರೆ. ಇಂದು ಸಾಕಷ್ಟು ಕವಿಗಳು, ಸಾಹಿತಿಗಳು, ಲೇಖಕರು, ಚಿತ್ರಕಲಾವಿದರು ಹೀಗೆ ಪ್ರತಿ ಕ್ಷೇತ್ರದಲ್ಲಿ ಕೆಲಸ ಮಾಡಿದವರು ಅಲಕ್ಷಿತವಾಗುತ್ತಿದ್ದಾರೆ. ಅವರನ್ನು ಗುರುತಿಸುವ ಕೆಲಸ ಸರಿಯಾಗಿ ಆಗಬೇಕು ಎಂದರು. ಕೃತಿಕಾರ ಎಲ್.ಎಸ್. ಶಾಸ್ತ್ರಿ ಮಾತನಾಡಿ, ಕಳೆದ ನಾಲ್ಕು ವರ್ಷಗಳ ಪ್ರಯತ್ನದಿಂದ ಬಿ.ಎಚ್.ಶ್ರೀಧರರ 56 ಪುಸ್ತಕಗಳ ಅಧ್ಯಯನದೊಂದಿಗೆ 104 ಪುಟಗಳ ಕೃತಿ ರಚನೆ ಮಾಡಿದ್ದೇನೆ. ಅಕಾಡೆಮಿ ನೀಡಿದ ಸೀಮಿತ ಅವಕಾಶದಲ್ಲಿ ಕೃತಿ ಮಾಡಲಾಗಿದೆ. ಆದರೆ ಮುಂದಿನ ದಿನಗಳಲ್ಲಿ ಶ್ರೀಧರರ ಕುರಿತು 300 ಕ್ಕೂ ಹೆಚ್ಚು ಪುಟದ ಕೃತಿ ರಚನೆಯ ಗುರಿ ಹೊಂದಿದ್ದೇನೆ ಎಂದರು. ಕೃತಿಯ ಕುರಿತು ಮಾತನಾಡಿದ ಡಾ.ಎಂ.ಜಿ. ಹೆಗಡೆ, ವಿವಿಧ ಕ್ಷೇತ್ರಗಳಲ್ಲಿ ಬಿ.ಎಚ್.ಶ್ರೀಧರರು ಸಾಹಿತ್ಯ ರಚಿಸಿದ್ದರು. ಸಮಿತಿಯ ಕಾರ್ಯಾಧ್ಯಕ್ಷ ರಾಜಶೇಖರ ಹೆಬ್ಬಾರ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ರಂಗಭೂಮಿ ಕಲಾವಿದೆ ತೆರೆಸಮ್ಮ ನಿಧನ

ಹುಬ್ಬಳ್ಳಿ: ರಂಗಭೂಮಿಯ ಹಿರಿಯ ಕಲಾವಿದೆ ತೆರೇಸಮ್ಮ ಡಿಸೋಜಾ (91) ಅನಾರೋಗ್ಯದಿಂದ ಭಾನುವಾರ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ರಂಗಭೂಮಿ ಕಲಾವಿದರಾದ ಬಾಬು ಮೈಸೂರು, ಫ್ರಾನ್ಸಿಸ್ ಮೈಸೂರು, ಹೆಲನ್ ಮೈಸೂರು ಪುತ್ರರಿದ್ದು, ಇನ್ನೊಬ್ಬ ಪುತ್ರಿ ಗೀತಾ ಖಾಸಗಿ ಉದ್ಯೋಗಿಯಾಗಿದ್ದಾರೆ. ತೆರೇಸಮ್ಮ ಅವರು ಗುಬ್ಬಿ ವೀರಣ್ಣ, ಎಚ್.ಕೆ.ಯೋಗಾನರಸಿಂಹ, ಸುಳ್ಳದ ದೇಸಾಯಿ ಅವರ ಕಂಪನಿಗಳಲ್ಲಿ ಕಲಾವಿದೆಯಾಗಿದ್ದರು. ಹರಕೆ, ಕರಿಮಾಯಿ, ನೆಂಟರು ಗಂಟು ಕಳ್ಳರು, ಮಾಗಿಯ ಕನಸು, ಹುಲಿ ಹೆಜ್ಜೆ, ಪಡುವಾರಳ್ಳಿ ಪಾಂಡವರು, ಅಮೃತ ಘಳಿಗೆ, ಸಂಗ್ಯಾಬಾಳ್ಯಾ, ಸಿಂಧೂರ ಲಕ್ಷ್ಮಣ, ಪತಿತ ಪಾವನಿ ಹಲವಾರು ಸಿನಿಮಾಗಳಲ್ಲಿ ನಟಿಸಿದ್ದರು. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕಿತ್ತೂರು ಚೆನ್ನಮ್ಮ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತರಾಗಿದ್ದರು. ಸೋಮವಾರ ಮಧ್ಯಾಹ್ನ 2 ಗಂಟೆಗೆ ಮುಕ್ತಿಧಾಮದಲ್ಲಿ ಅಂತ್ಯಕ್ರಿಯ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಪಹಲ್ಗಾಮ್ ಪ್ರಕರಣ ರಾಜಕಾರಣ ಬೇಡ

ಹುಬ್ಬಳ್ಳಿ: ಪಹಲ್ಗಾಮ್ ಪ್ರಕರಣದಲ್ಲಿ ಯಾರೂ ರಾಜಕಾರಣ ಮಾಡಬಾರದು ಎಂದು ಕೇಂದ್ರ ಯುವಜನ ಸೇವಾ ಮತ್ತು ಕ್ರೀಡಾ ಖಾತೆ ರಾಜ್ಯ ಸಚಿವೆ ರಕ್ಷಾ ಖಾಡ್ಸೆ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಉಗ್ರಗಾಮಿಗಳ ಕೃತ್ಯದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುದಾಗಿ ಪ್ರಧಾನಿಗಳು ಹೇಳಿದ್ದಾರೆ. ಭಾರತದ ಪ್ರತಿಯೊಬ್ಬ ನಾಗರಿಕರಿಗೆ ಸುರಕ್ಷತೆ ಕೊಡುವುದು ಆದ್ಯ ಕರ್ತವ್ಯ. ಕಾಶ್ಮೀರದಲ್ಲಿ ನಡೆದ ಘಟನೆಗೆ ತಕ್ಕ ಉತ್ತರ ಕೊಡಲಾಗುತ್ತದೆ. ಕಲಂ 370 ವಾಪಸ್ ಪಡೆದ ನಂತರ ಜಮ್ಮು-ಕಾಶ್ಮೀರದ ಜನ ಹೊಸ ಜೀವನ ಆರಂಭಿಸಿದ್ದಾರೆ. ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಇತರೆ ರಾಜ್ಯಗಳಂತೆ ಕಾಶ್ಮೀರವೂ ಅಭಿವೃದ್ಧಿಯಾಗಬೇಕಿದೆ ಎಂದರು. ಪ್ರವಾಸೋದ್ಯಮದ ಜತೆಗೆ ಎಲ್ಲ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿಯಾಗಬೇಕಿದೆ. ಒಳ್ಳೆಯ ಯೋಜನೆ ಕೊಡಲು ಕೇಂದ್ರ ಸರಕಾರ ತಯಾರಿದೆ. ಅಲ್ಲಿ ನಡೆಯುತ್ತಿರುವ ಉಗ್ರಗಾಮಿ ಚಟುವಟಿಕೆ ಹತ್ತಿಕ್ಕಲು ಕೇಂದ್ರ ಎಲ್ಲ ರೀತಿಯ ಪ್ರಯತ್ನ ನಡೆಸಿದೆ. ಇದರಲ್ಲಿ ಯಾರೂ ರಾಜಕಾರಣ ಮಾಡಲು ಹೋಗಬಾರದು. ನಮ್ಮ ದೇಶದ ನಾಗರಿಕರ ಮೇಲೆ ದಾಳಿಯಾಗಿದೆ. ಎಲ್ಲ ಪಕ್ಷದ ನಾಯಕರೂ ಕೇಂದ್ರ ಸರಕಾರದ ಜತೆಗೆ ನಿಲ್ಲಬೇಕು. ಎಲ್ಲ ಪಕ್ಷಗಳೂ ಕೇಂದ್ರ ಸರಕಾರದ ಜತೆಗೆ ನಿಲ್ಲಲಿವೆ ಎನ್ನುವ ವಿಶ್ವಾಸವಿದೆ ಎಂದು ಹೇಳಿದರು.

ಸಾಲ ಕೇಳಿದಕ್ಕೆ ಕೊಲೆ ಆರೋಪಿಗಳೆ ಬಂಧನ

ಬೆಳಗಾವಿ: ಕೊಟ್ಟ ಹಣ ವಾಪಸ್ ಕೇಳಿದ್ದಕ್ಕೆ ಮಹಿಳೆಯನ್ನು ಕೊಲೆ ಮಾಡಿ ಆಭರಣ ಕದ್ದು ಪರಾರಿ ಆಗಿದ್ದ ಅಪ್ರಾಪ್ತ ಸೇರಿ ಮೂವರನ್ನು ಬೆಳಗಾವಿ ನಗರ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಏ.22ರಂದು ಅಂಜನಾ ದಡ್ಡಿಕರ್ (52) ಎಂಬುವವರನ್ನು ಬರ್ಬರವಾಗಿ ಹತ್ಯೆ ಮಾಡಿದ್ದ ಆರೋಪಿಗಳು ಚಿನ್ನಾಭರಣ ಕದ್ದು ಪರಾರಿಯಾಗಿದ್ದರು. ಈ ಕುರಿತು ಕ್ಯಾಂಪ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂಜನಾ ಎಂಬ ಮೃತ ಮಹಿಳೆ ನಗರದ ಜ್ಯೋತಿ ಬಾಂದೇಕರ ಎಂಬುವವರಿಗೆ ಹಣ ಕೊಟ್ಟಿದ್ದರು. ಕೊಟ್ಟ ಹಣ ವಾಪಸ್ ಕೇಳಿದ್ದಕ್ಕೆ ಆರೋಪಿ ಮಹಿಳೆ ಜ್ಯೋತಿ ಬಾಂದೇಕರ ಆಕೆಯ ಪುತ್ರಿ ಸುಹಾನಿ ಬಾಂದೇಕರ್ ಹಾಗೂ ಅಪ್ರಾಪ್ತ ಪುತ್ರನ ಜತೆ ಮಹಿಳೆಯನ್ನು ಹತ್ಯೆ ಮಾಡಿ 1.70 ಲಕ್ಷ ಮೌಲ್ಯದ ಆಭರಣ ಕದ್ದು ಪರಾರಿ ಆಗಿದ್ದರು. ಸಧ್ಯ ಬೆಳಗಾವಿ ನಗರ ಪೊಲೀಸರು ಆರೋಪಿಗಳನ್ನು ಬಂಧಿಸಿ 1.70 ಲಕ್ಷ ಮೌಲ್ಯದ ಆಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ವಾಹನ ಜಪ್ತಿ ಮಾಡಿದ್ದಾರೆ.

ಸಿಎಂ ಸಿದ್ದರಾಮಯ್ಯ ಪಾಕ್‌ನಲ್ಲಿ ಫೇಮಸ್

ಬೆಂಗಳೂರು: ಪಾಕಿಸ್ತಾನದ ವಿರುದ್ಧ ಯುದ್ಧ ಸಾರುವ ಅಗತ್ಯವಿಲ್ಲ. ಕಾಶ್ಮೀರದ ಪ್ರದೇಶದಲ್ಲಿ ಭದ್ರತಾ ಕ್ರಮಗಳನ್ನು ಬಿಗಿಗೊಳಿಸುವ ಕ್ರಮ ಕೈಗೊಳ್ಳಬೇಕು ಎಂದು ಹೇಳಿರುವ ಸಿಎಂ ಸಿದ್ದ ರಾಮಯ್ಯ ವಿರುದ್ಧ ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ ವಾಗ್ದಾಳಿ ನಡೆಸಿದ್ದಾರೆ. ಸಿದ್ದರಾಮಯ್ಯ ಅವರ ಹೇಳಿಕೆಗಳು ಪಾಕಿ ಸ್ತಾನದ ಸುದ್ದಿ ವಾಹಿನಿಗಳಲ್ಲಿ ಬಿತ್ತರಿಸಿದ್ದವು. ಈ ಸಂಬಂಧ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಅಶೋಕ ಟೀಕಾಪ್ರಹಾರ ಮಾಡಿದ್ದಾರೆ. 'ಪಾಕಿಸ್ತಾನ ರತ್ನ' ಸಿಎಂ ಸಿದ್ದರಾಮಯ್ಯ ನವರೇ, ತಮ್ಮ ಬಾಲಿಶ, ಅಸಂಬದ್ಧ ಹೇಳಿಕೆಗ ಳಿಂದ ಈಗ ರಾತ್ರೋರಾತ್ರಿ ಪಾಕಿಸ್ತಾನದಲ್ಲಿ ವರ್ಲ್ಡ್ ಫೇಮಸ್ ಆಗಿಬಿಟ್ಟಿದ್ದೀರಿ. ತಮಗೆ ಅಭಿನಂದನೆಗಳು. ಮುಂದೆಂದಾದರೂ ತಾವು ಪಾಕಿಸ್ತಾನಕ್ಕೆ ಭೇಟಿ ಕೊಟ್ಟರೆ ತಮಗೆ ರಾಜಾತಿಥ್ಯ ಗ್ಯಾರಂಟಿ. ಪಾಕಿಸ್ತಾನದ ಪರ ವಕಾಲತ್ತು ವಹಿಸಿದ ಮಹಾನ್ ಶಾಂತಿದೂತ ಎಂದು ಪಾಕಿಸ್ತಾನ ಸರಕಾರ ತಮಗೆ ಅಲ್ಲಿನ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ನಿಶಾನ್-ಎ- ಪಾಕಿ ಸ್ತಾನ' ಪ್ರಶಸ್ತಿ ಕೊಟ್ಟು ಸನ್ಮಾನ ಮಾಡಿದರೂ ಅಚ್ಚರಿಯಿಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ದೇಶ ಅತ್ಯಂತ ಸೂಕ್ಷ್ಮ ಪರಿಸ್ಥಿತಿ ಎದುರಿಸುತ್ತಿರುವಾಗ, ಗಡಿಯಲ್ಲಿ ಯುದ್ಧದ ಕಾರ್ಮೋಡ ಕವಿದಿರುವಾಗ ಈ ರೀತಿ ಶತ್ರುರಾಷ್ಟ್ರದ ಕೈಗೊಂಬೆಯಂತೆ ವರ್ತಿಸುತ್ತಿದ್ದೀರಲ್ಲ, ನಿಮ್ಮಂತಹವರು ಸಾರ್ವಜನಿಕ ಬದುಕಿನಲ್ಲಿ ಇರುವುದೇ ನಮ್ಮ ದೇಶದ ಅತ್ಯಂತ ದೊಡ್ಡ ದುರಂತ.
-**ಆರ್.ಅಶೋಕ** ವಿಧಾನಸಭೆ ಪ್ರತಿಪಕ್ಷ ನಾಯಕ

ಇಬ್ಬರೂ ಕೋಟ್ಯಂತರ ರು. ವ್ಯವಹಾರ ಮಾಡಿರುವುದು ಇ.ಡಿ ಅಧಿಕಾರಿಗಳ ತನಿಖೆ ವೇಳೆ ಬಹಿರಂಗ

ವಿನಯ್-ಐಶ್ವರ್ಯಾ ನಂಟಿನ ರಹಸ್ಯ ಬೆಳಕಿಗೆ

ಬೆಂಗಳೂರು: ಮಾಜಿ ಸಂಸದ ಡಿ.ಕೆ.ಸುರೇಶ್ ಹೆಸರು ಬಳಸಿ ವಂಚಿಸಿದ್ದ ಐಶ್ವರ್ಯ ಗೌಡ ಪ್ರಕರಣದಲ್ಲಿ ಇ.ಡಿ ತನಿಖೆ ಚುರುಕುಗೊಳಿಸಿದ್ದಾರೆ.

ಶಾಸಕ ವಿನಯ್ ಕುಲಕರ್ಣಿ, ಐಶ್ವರ್ಯ ಗೌಡ ನಂಟಿನ ರಹಸ್ಯ ಬಯಲಾಗಿದ್ದು, ಇಬ್ಬರೂ ಕೋಟ್ಯಂತರ ರು. ವ್ಯವಹಾರ ಮಾಡಿವುದು ತನಿಖೆ ವೇಳೆ ಸ್ಫೋಟಕ ವಿಚಾರಗಳು ಬಹಿರಂಗವಾಗಿದೆ.

ಯೋಗೇಶ್ ಗೌಡ ಹತ್ಯೆ ಪ್ರಕರಣದಲ್ಲಿ ಸಹಾಯ ಮಾಡಿದ್ದ ಐಶ್ವರ್ಯ, ವಿನಯ್ ಕುಲಕರ್ಣಿ ಬಳಿ 24 ಕೋಟಿ ರು. ಸಾಲದ ರೂಪದಲ್ಲಿ ಪಡೆದಿದ್ದು, ದಿನಕ್ಕೆ 2.4 ಲಕ್ಷ ರು. ಬಡ್ಡಿ ಕೊಡುವುದಾಗಿ ಹೇಳಿರುವ ಅಂಶ ಬೆಳಕಿಗೆ ಬಂದಿದೆ. ಐಶ್ವರ್ಯ ಹಾಗೂ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ನಡುವೆ 24 ಕೋಟಿ ರು. ವ್ಯವಹಾರ ನಡೆದಿದ್ದಕ್ಕಾಗಿ ಇ.ಡಿ ಅಧಿಕಾರಿಗಳು ಕುಲಕರ್ಣಿ ಮನೆ ಮೇಲೆ ದಾಳಿ ಮಾಡಿದ್ದು, ಸತತ 26 ಗಂಟೆ ದಾಳಿ ನಡೆಸಿ ಹಲವು ದಾಖಲೆಗಳನ್ನು ಸಂಗ್ರ ಹಿಸಿದೆ. ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲೂ ಶಾಸಕ ವಿನಯ್ ಕುಲರ್ಣಿಗೆ ಸಹಾಯ ಮಾಡಿದ್ದಳು ಎನ್ನುವುದು ಬೆಳಕಿಗೆ ಬಂದಿದೆ.

ವಿನಯ್ ಕುಲಕರ್ಣಿ ಬಳಿ 24 ಕೋಟಿ ಸಾಲದ ರೂಪದಲ್ಲಿ ಪಡೆದಿದ್ದ ಐಶ್ವರ್ಯ, ದಿನಕ್ಕೆ ಶೇ.1ರಷ್ಟು ಬಡ್ಡಿ ಕೊಡುತ್ತೇನೆ ಎಂದಿದ್ದಳು. ಅಂದರೆ 24 ಕೋಟಿಗೆ ದಿನಕ್ಕೆ 2.4 ಲಕ್ಷ ರು. ಬಡ್ಡಿ ಕೊಡುವುದಾಗಿ ಹಣ ಪಡೆದಿದ್ದಳು. ಆದರೆ, ಹಣ ಪಡೆದ ನಂತರ ಅಸಲು, ಬಡ್ಡಿ ಕೊಡದೆ ಸಮಯ ಕೇಳಿಕೊಂಡಿದ್ದಳು. ಆಗ ವಿನಯ್ ಕುಲಕರ್ಣಿ ಐಶ್ವರ್ಯ ಜತೆ ಮಾತುಕತೆ ನಡೆಸಿ ಒಪ್ಪಂದ ಮಾಡಿಕೊಂಡಿರುವುದು ತನಿಖೆ ವೇಳೆ ಗೊತ್ತಾಗಿದೆ. 24 ಕೋಟಿ ರು. ಹಣಕ್ಕೆ ಸ್ನೇಹಿತನ ಹೆಸರಿನಲ್ಲಿ ಕೈಸಾಲ ಪಡೆದಿದ್ದಾಗಿ ಅಗ್ರಿಮೆಂಟ್ ಜತೆಗೆ ಮಾಫಿ ಸಾಕ್ಷಿ ಟ್ರ್ಯಾಪ್ ಮಾಡುವಂತೆ ಶಾಸಕ ವಿನಯ್ ಕುಲಕರ್ಣಿ ಟಾಸ್ಕ್ ನೀಡಿದ್ದರು.

ಯೋಗೇಶ್ ಗೌಡ ಕೊಲೆ ಕೇಸಿನ ಅಂಶ ಬಯಲಿಗೆ: ಯೋಗೇಶ್ ಗೌಡ ಕೊಲೆ ಪ್ರಕರಣದ ಮಾಫಿ ಸಾಕ್ಷಿ ಟ್ರ್ಯಾಪ್ ಮಾಡಿದ್ದು ಸಹ ಬಯಲಿಗೆ ಬಂದಿದೆ. ಪ್ರಕರಣದ ಮಾಫಿ ಸಾಕ್ಷಿಯಾಗಿದ್ದ ಮುತ್ತಗಿಗೆ ಐಶ್ವರ್ಯ ಟ್ರ್ಯಾಪ್ ಮಾಡಿದ್ದಳು. ಐಶ್ವರ್ಯಾ ಹಾಗೂ ಯೋಗೇಶ್ ಗೌಡ ಕೊಲೆ ಪ್ರಕರಣದ ಆರೋಪಿ ಲಕ್ಷ್ಮಣ ಸೇರಿಕೊಂಡು, ಬಸವರಾಜ್ ಮುತ್ತಗಿಗೆ ಕರೆ ಮಾಡಿ ಹಣದ ಆಮಿಷವೊಡ್ಡಿ ರೆಕಾರ್ಡ್ ಮಾಡಿಕೊಂಡಿದ್ದರು. ಬಳಿಕ ಹೈಕೋರ್ಟ್‌ನಲ್ಲಿ ಈ ಆಡಿಯೋ ನೀಡಿ ಸಾಕ್ಷಿ ರದ್ದು ಮಾಡಲು ಮುಂದಾಗಿದ್ದಳು. ಆದರೆ ಈ ಪ್ರಕರಣ ಸಿಬಿಐ ನ್ಯಾಯಾಲಯಕ್ಕೆ ನೀಡಿತ್ತು. ಹೀಗಾಗಿ ಮಾಫಿ ಸಾಕ್ಷಿ ರದ್ದಿಗೆ ಸಲ್ಲಿಸಿದ್ದ ಅರ್ಜಿ ವಜಾಗೊಂಡಿತ್ತು.

ಏನಿದು ಪ್ರಕರಣ?

ಆರೋಪಿ ಐಶ್ವರ್ಯ ಗೌಡ ತನಗೆ 3 ಕೋಟಿ 25 ಲಕ್ಷ ರು. ನಗದು ಹಾಗೂ 430 ಗ್ರಾಂ ಚಿನ್ನಾ ಭರಣ ಪಡೆದು ವಂಚಿಸಿದ್ದಾರೆಂದು ಆರ್‌ಆರ್ ನಗರ ಠಾಣೆಯಲ್ಲಿ ತಿಬ್ಬೇಗೌಡ ಪತ್ನಿ ಶಿಲ್ಪಗೌಡ ದೂರು ನೀಡಿದ್ದರು. ತಾನು ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಸಹೋದರಿ, ರಿಯಲ್ ಎಸ್ಟೇಟ್ ವಿಲ್ಲಾ ನಿರ್ಮಾಣ ಮಾಡುತ್ತೇನೆ. ಕಡಿಮೆ ಬೆಲೆಗೆ ಚಿನ್ನಾಭರಣ ಕೊಡಿಸುತ್ತೇನೆ ಅಂತ ಐಶ್ವರ್ಯ ಗೌಡ ಹಲವರಿಗೆ ವಂಚಿಸಿದ್ದರು. 2022 ರಿಂದ 2024 ರ ಅವಧಿಯಲ್ಲಿ ಅಕ್ರಮವಾಗಿ ಕೋಟ್ಯಂತರ ರುಪಾಯಿ ಹಣದ ವಹಿವಾಟು ಮಾಡಿದ್ದರು. ಸುಮಾರು 70 ಕೋಟಿ ರು. ವಹಿವಾಟು ಅಕೌಂಟ್ ಮೂಲಕ ನಡೆಸಿದ್ದ ಬಗ್ಗೆ ತನಿಖೆ ವೇಳೆ ಗೊತ್ತಾಗಿತ್ತು. ಐಶ್ವರ್ಯಗೌಡ ವಿರುದ್ಧ ಬೆಂಗಳೂರಿನ ಆರ್.ಆರ್.ನಗರ, ಚಂದ್ರಾ ಲೇಔಟ್ ಸೇರಿ ಮಂಡ್ಯ ಠಾಣೆಗಳಲ್ಲಿ ಹಲವು ವಂಚನೆ ಪ್ರಕರಣ ದಾಖಲಾಗಿದ್ದವು.

ಫೋಟೋಗಳು ವೈರಲ್

ಚಿನ್ನ ವಂಚನೆ ಪ್ರಕರಣದಲ್ಲಿ ಬಂಧನದಲ್ಲಿರುವ ಐಶ್ವರ್ಯಾ ಗೌಡ ಅವರ ತನಿಖೆಯಲ್ಲಿ ಸ್ಫೋಟಕ ಸತ್ಯಗಳು ಬಯಲಾಗುತ್ತಿವೆ. ಇ.ಡಿ (ಜಾರಿ ನಿರ್ದೇಶನಾಲಯ ಐಶ್ವರ್ಯ ಗೌಡ ಅವರನ್ನ ಬಂಧಿಸಿದ್ದು ವಿಚಾರಣೆ ನಡೆಸಿದೆ. ಪ್ರಕರಣದ ತನಿಖೆ ಮುಂದುವರಿಯುತ್ತಿರುವಾ ಗಲೇ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಹಾಗೂ ಐಶ್ವರ್ಯ ಗೌಡ ಅವರ ಕೆಲವು ಫೋಟೋಗಳು ವೈರಲ್ ಆಗಿವೆ. ಚಿನ್ನದ ಪ್ರಕರಣದಲ್ಲಿ ತಮ್ಮ ಹೆಸರು ಕೇಳಿ ಬರುತ್ತಿದ್ದಂತೆ ವಿನಯ್ ಕುಲಕರ್ಣಿ ಅವರು ಐಶ್ವರ್ಯ ಗೌಡ ನನಗೆ ಪರಿಚಯ ಅಷ್ಟೇ ಎಂದಿದ್ದರು. ಶಾಸಕ ವಿನಯ್ ಕುಲಕರ್ಣಿ ಅವರ ಹೇಳಿಕೆ ಬೆನ್ನಲ್ಲೇ ಕೋಟಿ, ಕೋಟಿ ವಂಚನೆಯ ಆರೋಪಿ ಐಶ್ವರ್ಯ ಜತೆಗೆ ಶಾಸಕರು ಆಪ್ತರಾಗಿರೋ ಫೋಟೋಗಳು ಲಭ್ಯವಾಗಿದೆ.

ತಿಬ್ಬೇಗೌಡ ಜತೆ ಹಣದ ವ್ಯವಹಾರ

ಆರ್.ಆರ್.ನಗರದ ಕಾಂಗ್ರೆಸ್ ಮುಖಂಡ ತಿಬ್ಬೇಗೌಡ ಜತೆಗೂ ಐಶ್ವರ್ಯ ಗೌಡ ಹಣದ ವ್ಯವಹಾರ ನಡೆಸಿದ್ದರು ಎಂಬುವುದು ತಿಳಿದುಬಂದಿದೆ. ತಿಬ್ಬೇಗೌಡ ಜತೆ ಸುಮಾರು 60 ಕೋಟಿ ರು. ಹಣದ ವಹಿವಾಟನ್ನು ಐಶ್ವರ್ಯ ಗೌಡ ನಡೆಸಿದ್ದರು. ತಿಬ್ಬೇಗೌಡ ಜತೆ ವ್ಯವಹಾರ ನಡೆಸಿದ 60 ಕೋಟಿ ಹಣ ಯಾರಿಗೆ ಸೇರಿದ್ದು? ಹಣದ ಮೂಲ ಯಾವುದು ಎಂದು ಇ.ಡಿ ತನಿಖೆ ಮುಂದುವರಿಸಿದೆ. ಐಶ್ವರ್ಯ ಗೌಡ ಕೇವಲ ಮೂರು ವರ್ಷದಲ್ಲಿ 75 ಕೋಟಿ ರು. ಹಣದ ವ್ಯವಹಾರ ಮಾಡಿದ್ದಾರೆ. ಪ್ರಕರಣ ದಾಖಲಾಗುತ್ತಿದ್ದಂತೆ 46 ಲಕ್ಷ ರು. ಆದಾಯ ಬಂದಿದೆ ಎಂದು ತೆರಿಗೆ ಕಟ್ಟಲು ಮುಂದಾಗಿದ್ದರು. ಆದರೆ, ಆದಾಯ ತೆರಿಗೆ ಅಧಿಕಾರಿಗಳು ರಿಜೆಕ್ಟ್ ಮಾಡಿ ಕಳುಹಿಸಿದ್ದರು. ಇ.ಡಿ ಅಧಿಕಾರಿಗಳು ಸದ್ಯದರಲ್ಲಿ ತಿಬ್ಬೇಗೌಡ ಅವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಸರಕಾರದ 2 ವರ್ಷದ ಸಾಧನಾ ಸಮಾವೇಶ | 1 ಸಾವಿರ ಕೋಟಿ ವೆಚ್ಚದ ಕಾಮಗಾರಿ ಶಂಕುಸ್ಥಾಪನೆ | ನಂದಿ ಬೆಟ್ಟದಲ್ಲಿ ಮುಂದಿನ ಸಂಪುಟ ಸಭೆ

ಕೆಣಕಿದರೆ ಸುಮ್ಮನಿರಲ್ಲ: ಪಾಕ್‌ಗೆ ಸಿಎಂ ಸಿದ್ದರಾಮಯ್ಯ ಎಚ್ಚರಿಕೆ

ಬೆಂಗಳೂರು ಗ್ರಾ.ಜಿಲ್ಲೆ: ಬುದ್ಧ, ಬಸವರ ನಾಡು ನಮ್ಮದು. ಭಾರತವನ್ನು ಕೆಣಕಿದರೆ ಅದು ಪಾಕಿಸ್ತಾನವೇ ಆಗಲಿ, ಯಾವುದೇ ದೇಶವಾಗಲಿ ನಾವು ಸಹಿಸಲ್ಲ, ಯಾವುದೇ ಹಂತದ ಯುದ್ಧಕ್ಕೆ ಭಾರತ ಸದಾ ಸನ್ನದ್ಧ ಆಗಿರುತ್ತದೆ. ಅನಿವಾರ್ಯತೆ ಆದಾಗ ಯುದ್ಧಕ್ಕೆ ಮುನ್ನಡಿ ಇಡುವುದು ನಮಗೆ ಗೊತ್ತಿದೆ. ಇದನ್ನು ಭಾರತ ಪ್ರತೀ ಸಂದರ್ಭದಲ್ಲೂ ಸಾಬೀತುಪಡಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗಿದರು

ದೇವನಹಳ್ಳಿ ತಾಲೂಕಿನ ಭೈರದೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಜಿಲ್ಲಾಡಳಿತದ ವತಿಯಿಂದ ಭಾನುವಾರ ನಡೆದ ಸರಕಾರದ ಎರಡು ವರ್ಷದ ಸಾಧನಾ ಸಮಾವೇಶದಲ್ಲಿ ಮಾತನಾಡಿ, ಭಯೋತ್ಪಾದನೆಯನ್ನು ಬೇರು ಸಮೇತ ಕಿತ್ತು ಹಾಕುವುದು, ಪ್ರತಿಯೊಬ್ಬ ಭಾರತೀಯರಿಗೆ ಸೂಕ್ತ ರಕ್ಷಣೆ ಕೊಡುವುದು ಭಾರತ ಸರಕಾರದ ಆದ್ಯತೆ. ಇದರಲ್ಲಿ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಅನಿವಾರ್ಯವಾದರೆ ಯುದ್ಧಕ್ಕೂ ಸಿದ್ಧ ಎನ್ನುವ ಮಾತನ್ನು ನಿನ್ನೆ ನಾನು ಹೇಳಿದ್ದೆ. ಆದರೆ ಭಯೋತ್ಪಾದಕರ ವಿರುದ್ಧ, ಪಾಕಿಸ್ತಾನದ ವಿರುದ್ಧ ಯುದ್ಧವೇ ಬೇಡ ಎಂದು ಹೇಳಿದ್ದೇನೆ ಎಂದು ಸುಳ್ಳು ಸುಳ್ಳೇ ಬಿಜೆಪಿ ಪ್ರಚಾರ ಮಾಡುತ್ತಿದೆ. ನನ್ನ ಮಾತನ್ನು ತಿರುಚಿ ಯುದ್ಧವೇ ಬೇಡ ಎಂದು ಹೇಳಿದ್ದೇನೆ ಎಂದು ನನ್ನದಲ್ಲದ ಅಭಿಪ್ರಾಯವನ್ನು ತೋರಿಸುತ್ತಿದ್ದಾರೆ. ಇದು ತಪ್ಪು, ಇದಕ್ಕೆ ನಾನು ಹೊಣೆಗಾರನಲ್ಲ ಎಂದರು.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಅಭಿವೃದ್ಧಿ ಮತ್ತು ಪ್ರಗತಿಗೆ ನಮ್ಮ ಸರಕಾರ ಅನುದಾನ ನೀಡಿ, ಕಾರ್ಯಕ್ರಮ ರೂಪಿಸಿ ಜಾರಿ ಮಾಡುತ್ತಿದೆ. ಮೊದಲ ಕ್ಯಾಬಿನೆಟ್‌ನಲ್ಲೇ ಗ್ಯಾರಂಟಿ ಜಾರಿ ಮಾಡಿ ಇದಕ್ಕಾಗಿ 80 ಸಾವಿರ ಕೋಟಿ ವೆಚ್ಚ ಮಾಡಿದ್ದೇವೆ ಎಂದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಗ್ಯಾರಂಟಿ ಯೋಜನೆಗಳಿಂದ ಬಡವರಿಗೆ ಹಿಂದುಳಿದವರಿಗೆ, ಎಲ್ಲ ವರ್ಗದವರೆಗೂ ಅನುಕೂಲವಾಗಿದೆ. ಆದರೆ ವಿರೋಧ ಪಕ್ಷದವರು ಸುಖಾ ಸುಮ್ಮನೆ ಪ್ರತಿಭಟನೆ ಮಾಡುತ್ತಿದ್ದಾರೆ. ಕುಟುಂಬದ ಯಶಸ್ಸು, ಜೀವನದ ಯಶಸ್ಸಿಗೆ ನಾವು ಗ್ಯಾರಂಟಿಗಳನ್ನು ನೀಡಿದ್ದೇವೆ. ಎತ್ತಿನಹೊಳೆ ನೀರನ್ನು ಬಯಲು ಸೀಮೆ ಪ್ರದೇಶಗಳಿಗೆ ಹಾಗೂ ಬೆಂಗಳೂರು ಗ್ರಾಮಾಂತರ ಗ್ರಾಮಾಂತರ ಜಿಲ್ಲೆಗೆ ಆದಷ್ಟು ಶೀಘ್ರ ಹರಿಸಲಾಗುವುದು ಎಂದರು. ಕೆ.ಎಚ್.ಮುನಿಯಪ್ಪ ಜಿಲ್ಲಾ ಅಭಿವೃದ್ಧಿಗೆ ಶ್ರಮಿಸುತ್ತಿರುವುದಕ್ಕೆ ಡಿ.ಸಿ.ಎಂ ಮೆಚ್ಚುಗೆ ವ್ಯಕ್ತಪಡಿಸಿ ಸನ್ಮಾನಿಸಿದರು.

ದೇವನಹಳ್ಳಿ ತಾಲೂಕು ಭೈರದೇನಹಳ್ಳಿಯಲ್ಲಿ ಭಾನುವಾರ ನಡೆದ ಸರಕಾರದ ಎರಡು ವರ್ಷದ ಸಾಧನಾ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಯುದ್ಧವೇ ಬೇಡ ಎಂದಿಲ್ಲ: ಸಿಎಂ ಸ್ಪಷ್ಟನೆ

← ಮೊದಲಪುಟದಿಂದ

ಸಿಂಧೂ ನದಿ ಒಪ್ಪಂದದ ರದ್ದತಿಯೂ ಸೇರಿದಂತೆ ಕೇಂದ್ರ ಸರಕಾರ ಕೆಲವು ರಾಜತಾಂತ್ರಿಕ ಕ್ರಮಗಳನ್ನು ಕೈಗೊಂಡಿದೆ. ಇದನ್ನು ನಾವು ಸ್ವಾಗತಿಸುತ್ತೇವೆ. ಕೇಂದ್ರ ಸರಕಾರ ಮುಂದೆ ಇದಕ್ಕಿಂತಲೂ ಕಠಿಣ ಕ್ರಮಗಳನ್ನು ಕೈಗೊಳ್ಳಲಿದೆ ಎನ್ನುವ ಭರವಸೆ ನಮಗಿದೆ. ಅವುಗಳನ್ನೆಲ್ಲ ಬಹಿರಂಗಪಡಿಸುವ ಅಗತ್ಯವಿಲ್ಲ. ಅಂತಹ ಕ್ರಮಗಳಿಗೆ ನಮ್ಮ ಸಂಪೂರ್ಣ ಸಹಕಾರ ಇದೆ. ಇದೇ ವೇಳೆ ಕೆಲವು ಕಿಡಿಗೇಡಿಗಳು ಯುದ್ಧೋನ್ಮಾದವನ್ನು ಸೃಷ್ಟಿಸಿ ದೇಶದೊಳಗಿನ ಸೌಹಾರ್ದತೆ ಕಲಕುವ ಪ್ರಯತ್ನ ಮಾಡುತ್ತಿದ್ದು, ಇಂತಹವರ ವಿರುದ್ಧವೂ ಕೇಂದ್ರ ಸರಕಾರ ಕಠಿಣ ಕ್ರಮಕೈಗೊಳ್ಳಬೇಕು. ಇಂದು ದೇಶ ಅತ್ಯಂತ ಸೂಕ್ಷ್ಮ ಪರಿಸ್ಥಿತಿ ಎದುರಿಸುತ್ತಿದೆ. ಬಾಹ್ಯ ಶತ್ರುವನ್ನು ಎದುರಿಸಬೇಕಾದರೆ ಆಂತರಿಕವಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಇರಬೇಕಾಗುತ್ತದೆ ಎಂದು ಸಲಹೆ ನೀಡಿದ್ದಾರೆ.

ಪಾಕಿಸ್ತಾನ ಇಂದು ಆರ್ಥಿಕವಾಗಿ ದಿವಾಳಿಯಾಗಿರುವ ರೋಗಗ್ರಸ್ತ ದೇಶವಾಗಿದೆ. ಅವರು ಕಳೆದುಕೊಳ್ಳುವುದೇನೂ ಇಲ್ಲ. ಈ ಕಾರಣದಿಂದಾಗಿಯೇ ಜಗತ್ತಿನ ಬಲಾಢ್ಯ ರಾಷ್ಟ್ರವಾಗಿ ಬೆಳೆಯುತ್ತಿರುವ ಭಾರತ ಎಚ್ಚರಿಕೆಯ ಹೆಜ್ಜೆಗಳನ್ನು ಇಡಬೇಕಾಗಿದೆ. ಈ ಸಂದರ್ಭದಲ್ಲಿ ವಿಶ್ವದ ಎಲ್ಲ ರಾಷ್ಟ್ರಗಳು ಪಾಕ್ ಪ್ರೇರಿತ ಭಯೋತ್ಪಾದನೆಯನ್ನು ಖಂಡಿಸಿ ಭಾರತದ ಪರವಾಗಿ ನಿಂತಿವೆ. ಈ ಬೆಳವಣಿಗೆಯನ್ನು ಭಾರತ ಸದುಪಯೋಗಪಡಿಸಿಕೊಂಡು, ಪಾಕಿಸ್ತಾನ ಮುಂದೆಂದೂ ಇಂತಹ ದುಸ್ಸಾಹಸಕ್ಕೆ ಕೈಹಾಕದಂತೆ ತಕ್ಕ ಪಾಠ ಕಲಿಸಬೇಕಾಗಿದೆ ಎಂದು ಸಿಎಂ ಒತ್ತಾಯಿಸಿದ್ದಾರೆ.

ಬಿಜೆಪಿಯಿಂದ ಅಪಪ್ರಚಾರ: ದೇವನಹಳ್ಳಿಯಲ್ಲಿ ಎರಡು ವರ್ಷಗಳ ಸರಕಾರದ ಸಾಧನಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತು ಹಾಕಬೇಕು. ದೇಶದ ಸಾರ್ವಭೌಮತೆಗೆ ಧಕ್ಕೆ ಬಂದಾಗ ಪಾಕಿಸ್ತಾನವೇ ಆಗಲಿ, ಯಾವುದೇ ದೇಶದ ವಿರುದ್ಧವಾದರೂ ಭಾರತ ಯುದ್ಧ ಮಾಡಿಯೇ ಸಿದ್ಧ. ಇದನ್ನು ಪ್ರತೀ ಸಂದರ್ಭದಲ್ಲೂ ಭಾರತ ಸಾಬೀತು ಮಾಡಿದೆ. ಅನಿವಾರ್ಯವಾದಾಗ ಯುದ್ಧಕ್ಕೆ ಮುಂದಡಿ ಇಟ್ಟು ನಮ್ಮ ಸಾರ್ವಭೌಮತೆ ಕಾಪಾಡಿಕೊಳ್ಳುವುದು ನಮಗೆ ಗೊತ್ತಿದೆ ಎಂದು ಹೇಳಿದರು. ಭಾರತ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಅವರ ನಾಡು. ಇಲ್ಲಿ ಭಯೋತ್ಪಾದನೆಗೆ, ಅಶಾಂತಿಗೆ ಅವಕಾಶ ಇಲ್ಲ. ಅನಿವಾರ್ಯವಾದರೆ ಯುದ್ಧಕ್ಕೂ ಸಿದ್ಧ ಎನ್ನುವ ಮಾತನ್ನು ನಾನು ಹೇಳಿದ್ದೆ. ಆದರೆ ಭಯೋತ್ಪಾದಕರ ವಿರುದ್ಧ, ಪಾಕಿಸ್ತಾನದ ವಿರುದ್ಧ ಯುದ್ಧವೇ ಬೇಡ ಎಂದು ಹೇಳಿದ್ದೇನೆ ಎಂದು ಸುಳ್ಳು ಸುಳ್ಳೇ ಬಿಜೆಪಿ ಪ್ರಚಾರ ಮಾಡುತ್ತಿದೆ. ನನ್ನ ಮಾತನ್ನು ತಿರುಚಿ ಯುದ್ಧವೇ ಬೇಡ ಎಂದು ಹೇಳಿದ್ದೇನೆ ಎಂದು ತೋರಿಸುತ್ತಿದ್ದಾರೆ. ಇದು ತಪ್ಪು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಾಕಿಸ್ತಾನ ರತ್ನ ಸಿಎಂ ಸಿದ್ದರಾಮಯ್ಯ ತಮ್ಮ ಬಾಲಿಶ, ಅಸಂಬದ್ಧ ಹೇಳಿಕೆಗಳಿಂದ ಈಗ ರಾತ್ರೋರಾತ್ರಿ ಪಾಕಿಸ್ತಾನದಲ್ಲಿ ವರ್ಲ್ಡ್ ಫೇಮಸ್ ಆಗಿಬಿಟ್ಟಿದ್ದೀರಿ. ತಮಗೆ ಅಭಿನಂದನೆ. ತಾವು ಪಾಕಿಸ್ತಾನಕ್ಕೆ ಭೇಟಿ ಕೊಟ್ಟರೆ ರಾಜಾತಿಥ್ಯ ಗ್ಯಾರಂಟಿ. ಪಾಕಿಸ್ತಾನದ ಪರ ವಕಾಲತ್ತು ವಹಿಸಿದ ಮಹಾನ್ ಶಾಂತಿದೂತ ಎಂದು ಪಾಕಿಸ್ತಾನ ಅಲ್ಲಿನ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ನಿಶಾನ್-ಎ-ಪಾಕಿಸ್ತಾನ ಪ್ರಶಸ್ತಿ ಕೊಟ್ಟು ಸನ್ಮಾನ ಮಾಡಿದರೂ ಅಚ್ಚರಿಯಿಲ್ಲ. ದೇಶ ಅತ್ಯಂತ ಸೂಕ್ಷ್ಮ ಪರಿಸ್ಥಿತಿ ಎದುರಿಸುತ್ತಿರುವಾಗ, ಗಡಿಯಲ್ಲಿ ಯುದ್ಧದ ಕಾರ್ಮೋಡ ಕವಿದಿರುವಾಗ ಈ ರೀತಿ ಶತ್ರುರಾಷ್ಟ್ರದ ಕೈಗೊಂಬೆಯಂತೆ ವರ್ತಿಸುತ್ತಿದ್ದೀರಲ್ಲ, ನಿಮ್ಮಂತಹವರು ಸಾರ್ವಜನಿಕ ಬದುಕಿನಲ್ಲಿ ಇರುವುದೇ ನಮ್ಮ ದೇಶದ ಅತ್ಯಂತ ದೊಡ್ಡ ದುರಂತ.
-**ಆರ್.ಅಶೋಕ**, ವಿರೋಧ ಪಕ್ಷದ ನಾಯಕ

ಬಿಸಿಲನಾಡಲ್ಲಿ ಸೇಬು ಕೃಷಿ: ಮೋದಿ ಫಿದಾ

← ಮೊದಲಪುಟದಿಂದ

ಬಳಿಕ ಉಳಿದ ಕೃಷಿಕರಿ ಗಿಂತ ಭಿನ್ನವಾಗಿ ಕಾಶ್ಮೀರದಂತಹ ತಂಪು ಪ್ರದೇಶದಲ್ಲಿ ಬೆಳೆಯುವ ಸೇಬುವನ್ನು ಬೆಳೆದು ಭರ್ಜರಿ ಫಸಲು ತೆಗೆದಿದ್ದಾರೆ. ಮಹಾರಾಷ್ಟ್ರದ ಶಿರಡಿಯಿಂದ ಅನ್ನಾರಿ, ಹರ್ಮನ್ 99, ಗೋಲ್ಡನ್ ಡಾಟ್ ಎಂಬ ತಳಿಯ ಸಸಿ ತಂದು ಏಳು ಎಕರೆ ಜಮೀನಿನಲ್ಲಿ ಒಟ್ಟು 2,620 ನಾಟಿ ಮಾಡಿ, ಸಸಿಗಳ ಆರೈಕೆಗೆ ಜೀವಾಮೃತ, ಸಾವಯವ ಗೊಬ್ಬರ ಮಾತ್ರ ಬಳಕೆ ಮಾಡಿದ್ದಾರೆ. ಮೊದ ಮೊದಲು ಪ್ರಾಯೋಗಿಕ ಬೆಳೆಯನ್ನಾಗಿ ಬೆಳೆದಿದ್ದ ರೈತ, ನಂತರ ಅಧಿಕ ಇಳುವರಿ, ಕಡಿಮೆ ಖರ್ಚಿನಿಂದ ಸೇಬು ಬೆಳೆ ಕಡೆ ಗಮನ ನೀಡಿದ್ದಾರೆ. ಸದ್ಯ ಪ್ರತಿ ಗಿಡಕ್ಕೆ ನೂರರಿಂದ ನೂರಿಪ್ಪತ್ತು ಹಣ್ಣು ಬರುತ್ತಿವೆ. ಕಾಶ್ಮೀರ ಸೇಬು ಮೀರಿಸುವ ರುಚಿ ಈ ಸೇಬುವಿನಲ್ಲಿದೆ ಎನ್ನುತ್ತಾರೆ ಸ್ಥಳೀಯರು. ಶ್ರೀಶೈಲ ತೇಲಿ ಬೆಳೆದ ಸೇಬುವಿಗೆ ಸ್ಥಳೀಯ ಮಾರುಕಟ್ಟೆಯಲ್ಲಿಯೇ ಬೇಡಿಕೆ ಹೆಚ್ಚಾಗಿದೆ. ಜಮಖಂಡಿ, ಮಹಾಲಿಂಗಪುರ, ಮುಧೋಳ, ಬೀಳಗಿ, ರಾಯಬಾಗ ಸೇರಿದಂತೆ ಸುತ್ತಮುತ್ತಲಿನ ನಗರ ಪ್ರದೇಶಗಳಿಗೆ ಸೇಬು ಕಳುಹಿಸಲಾಗುತ್ತಿದೆ. ಪ್ರತಿ ಕೆಜಿಗೆ 80 ರಿಂದ 150 ರು. ರಂತೆ ಮಾರಾಟವಾಗುತ್ತಿದೆ. 2 ವರ್ಷ 1 ತಿಂಗಳ ಸಸಿಗಳಿಂದ ಸದ್ಯ 6 ರಿಂದ 7 ಟನ್ ಮಾರಾಟವಾಗುತ್ತಿದೆ. ಈವರೆಗೂ ಬೆಳೆಗಳಿಗೆ ಹಾಕಿದ ಹಣ ವಾಪ್ಸ್ ಬಂದಿದ್ದು, ಇನ್ನೂ ಮುಂದೆ ಲಾಭದ ನಿರೀಕ್ಷೆಯಲ್ಲಿದ್ದಾರೆ.

ಸರಕಾರಿ ಗೌರವದೊಂದಿಗೆ ವಿಜ್ಞಾನಿ ಕಸ್ತೂರಿರಂಗನ್ ಅಂತ್ಯಕ್ರಿಯೆ

ಬೆಂಗಳೂರು: ಶುಕ್ರವಾರ ನಿಧನರಾದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾಜಿ ಅಧ್ಯಕ್ಷ ಕೆ. ಕಸ್ತೂರಿರಂಗನ್ ಅವರ ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ 2.30ರ ವೇಳೆಗೆ ಹೆಬ್ಬಾಳದ ಚಿತಾಗಾರದಲ್ಲಿ ಸಕಲ ಸರಕಾರಿ ಗೌರವಗಳೊಂದಿಗೆ ನೆರವೇರಿತು.

ಇದಕ್ಕೂ ಮುನ್ನ ಕಸ್ತೂರಿರಂಗನ್ ಅವರ ಪಾರ್ಥಿವ ಶರೀರವನ್ನು ಸದಾಶಿವನಗರದ ರಾಮನ್ ರೀಸರ್ಚ್ ಇನ್ಸ್ಟಿಟ್ಯೂಟ್ ಆವರಣದಲ್ಲಿ ಬೆಳಗ್ಗೆ 9ರಿಂದ 12ರ ವರೆಗೆ ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಸಿ. ಮಹದೇವಪ್ಪ, ಬೋಸರಾಜು, ಜಮೀರ್ ಅಹಮದ್ ಖಾನ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಸಿ.ಎನ್.ಅಶ್ವತ್ಥ ನಾರಾಯಣ ಸೇರಿದಂತೆ ಹಲವು ರಾಜಕೀಯ ನಾಯಕರು ಅಂತಿಮ ನಮನ ಸಲ್ಲಿಸಿದರು. ಶಿಕ್ಷಣ ತಜ್ಞ ಎಂ.ಕೆ. ಶ್ರೀಧರ್, ಇಸ್ರೊ ಸಂಸ್ಥೆಯ ಹಾಲಿ ಹಾಗೂ ಮಾಜಿ ವಿಜ್ಞಾನಿಗಳಿಗಳು, ವಿವಿಧ ಕ್ಷೇತ್ರಗಳಲ್ಲಿನ ಒಡನಾಡಿಗಳು ಅಂತಿಮ ದರ್ಶನ ಪಡೆದರು.

ಪಾರ್ಥಿವ ಶರೀರದ ಮೇಲೆ ತ್ರಿವರ್ಣ ಧ್ವಜವನ್ನು ಹೊದಿಸಲಾಯಿತು. ಪೊಲೀಸರು ಗೌರವಾರ್ಥ ಮೂರು ಸುತ್ತು ಕುಶಾಲು ತೋಪು ಹಾರಿಸಿದರು. ನಂತರ ಪಾರ್ಥಿವ ಶರೀರ ವನ್ನು ಹೆಬ್ಬಾಳದ ಚಿತಾಗಾರಕ್ಕೆ ಕೊಂಡೊಯ್ದು, ಅಂತಿಮ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು. ಪುತ್ರ ರಾದ ಸಂಜಯ್ ಮತ್ತು ರಾಜೇಶ್ ಅವರು ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

ಬೆಂಗಳೂರಿನ ಸಿ.ವಿ.ರಾಮನ್ ಸಂಶೋಧನಾ ಸಂಸ್ಥೆಗೆ ಗೌರವಾನ್ವಿತ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಭೇಟಿ ನೀಡಿ, ಬಾಹ್ಯಾಕಾಶ ವಿಜ್ಞಾನಿ ಡಾ.ಕಸ್ತೂರಿ ರಂಗನ್ ಅವರ ಪಾರ್ಥೀವ ಶರೀರಕ್ಕೆ ಗೌರವ ನಮನ ಸಲ್ಲಿಸಿ, ಅವರ ಕುಟುಂಬಕ್ಕೆ ಸಾಂತ್ವನ ಹೇಳಿದರು.

ವಿಜ್ಞಾನಿಗಳಲ್ಲಿ ಅಗ್ರಸ್ಥಾನ

ಸ್ಥಾನ ಪಡೆದಿದ್ದ ಡಾ.ಕೆ.ಕಸ್ತೂರಿರಂಗನ್ ಅವರು ಪದ್ಮವಿಭೂಷಣ, ಪದ್ಮಭೂಷಣ, ಪದ್ಮಶ್ರೀ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ ಪಡೆದುಕೊಂಡ ಒಬ್ಬ ಹಿರಿಯ ಚೇತನ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಇಸ್ರೊ ಮಾಜಿ ಅಧ್ಯಕ್ಷ ಕೆ.ಕಸ್ತೂರಿರಂಗನ್ ಅವರ ಪಾರ್ಥಿವ ಶರೀರಕ್ಕೆ ಶ್ರದ್ಧಾಂಜಲಿ ಅರ್ಪಿಸಿದ ಬಳಿಕ ಮಾತನಾಡಿದ ಅವರು, ಈ ಹಿಂದೆ ಬಿ.ಎಸ್ .ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಜ್ಞಾನ ಆಯೋ ಗದ ಮೂಲಕ ಬೇರೆ ಬೇರೆ ಸಂದರ್ಭಗಳಲ್ಲಿ ಅಂದಿನ ಸರಕಾರಕ್ಕೆ ಕಸ್ತೂರಿರಂಗನ್ ಸಲಹೆ ನೀಡಿದ್ದರು. ರಾಜ್ಯಸಭಾ ಸದಸ್ಯರಾಗಿಯೂ ತಮ್ಮ ಸೇವೆ ಸಲ್ಲಿಸಿದ್ದರು. ಅಂತಹ ಹಿರಿಯ ಚೇತನ ನಮ್ಮನ್ನಿಂದು ಅಗಲಿದೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರ ಅಗಲಿಕೆ ತಡೆಯುವಂತಹ ಶಕ್ತಿಯನ್ನು ಭಗವಂತ ಅವರ ಕುಟುಂಬಕ್ಕೆ ಮತ್ತು ವಿಜ್ಞಾನಿಗಳಿಗೆ ಹಾಗೂ ಲಕ್ಷಲಕ್ಷ ಸಂಖ್ಯೆಯಲ್ಲಿರುವ ವಿದ್ಯಾರ್ಥಿಗಳಿಗೆ ದಯಪಾಲಿಸಲಿ ಎಂದರು.

ತುಂಬಲಾರದ ನಷ್ಟ

ಕಸ್ತೂರಿ ರಂಗನ್ ಅವರ ನಿಧನದಿಂದ ದೇಶಕ್ಕೆ ಅದರಲ್ಲೂ ವಿಜ್ಞಾನ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಇಸ್ರೊ ಮಾಜಿ ಅಧ್ಯಕ್ಷ ಡಾ.ಕೆ. ಕಸ್ತೂರಿ ರಂಗನ್ ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಸ್ತೂರಿ ರಂಗನ್ ದೇಶ ಕಂಡಂತ ಹೆಸರಾಂತ ವಿಜ್ಞಾನಿ. ಬಾಹ್ಯಾಕಾಶ ಕ್ಷೇತ್ರದಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. ದೀರ್ಘ ಕಾಲ ಇಸ್ರೋ ಅಧ್ಯಕ್ಷರಾಗಿದ್ದವರು. ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದ ಅವರನ್ನು ಮರೆಯಲು ಸಾಧ್ಯವಿಲ್ಲ. ರಾಜ್ಯ ಸರಕಾರ ಕೂಡ ಮಾಡುವ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ರಾಷ್ಟ್ರ ಮಟ್ಟದಲ್ಲಿ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಪರಿಸರ ಕ್ಷೇತ್ರಕ್ಕೆ ಹಾಗೂ ಕರ್ನಾಟಕಕ್ಕೆ ಅವರ ಕೊಡುಗೆ ಅಪಾರ. ಅವರನ್ನು ಸ್ಮರಿಸುವ ಕೆಲಸ ಸರಕಾರ ಮಾಡಿದೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ತಿಳಿಸಿದರು.

ಜ್ಞಾನ ಸಂಪತ್ತು ಮರೆ

ಖ್ಯಾತ ವಿಜ್ಞಾನಿ ಡಾ.ಕಸ್ತೂರಿ ರಂಗನ್ ಅವರ ನಿಧನದಿಂದ ಅಪಾರ ಜ್ಞಾನ ಸಂಪತ್ತನ್ನು ಕಳೆದುಕೊಂಡಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು. ಕಸ್ತೂರಿ ರಂಗನ್ ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದ ನಂತರ ಮಾತನಾಡಿದ ಅವರು, ನಾಡು ಮತ್ತು ಕಾಡಿನ ಸಂಪತ್ತು ಉಳಿಯಲು ದಿಟ್ಟ ನಿರ್ಧಾರ ತೆಗೆದುಕೊಂಡವರು ಕಸ್ತೂರಿ ರಂಗನ್. ಭಾರತದ ಹಾಗೂ ಪ್ರಪಂಚದ ಶ್ರೇಷ್ಠ ವಿಜ್ಞಾನಿಯಾಗಿದ್ದ ಅವರು ಜ್ಞಾನ ಆಯೋಗದ ಅಧ್ಯಕ್ಷರಾಗಿ, ರಾಜ್ಯಸಭಾ ಸದಸ್ಯರಾಗಿ ಸಮಾಜಕ್ಕೆ ಅಪಾರ ಕೊಡುಗೆ ಕೊಟ್ಟಿದ್ದಾರೆ.

ಸಾವು ಖಚಿತ, ಆದರೆ ನಾವು ಏನು ಕೊಡುಗೆಗಳನ್ನು ಬಿಟ್ಟು ಹೋಗು ತ್ತೇವೆ ಎನ್ನುವುದು ಮುಖ್ಯ. ಸರಕಾರ ಇವರ ಕೊಡುಗೆಗಳ ಬಗ್ಗೆ ಚರ್ಚಿಸಿ, ಅವುಗಳನ್ನು ಉಳಿಸುವ ಕೆಲಸ ಮಾಡಲಾಗುವುದು. ಇಸ್ರೋಗೆ ದೊಡ್ಡ ಹೆಸರು ಬರಲು ಕಸ್ತೂರಿ ರಂಗನ್ ಕೊಡುಗೆ ಅಪಾರ ಎಂದು ಸ್ಮರಿಸಿದರು.

ಟ್ವೀಟೂ-ಖಾರಾ

ಆರ್.ಅಶೋಕ

40 ವರ್ಷಗಳ ಸುದೀರ್ಘ ರಾಜಕೀಯ ಅನುಭವ ಇರುವ, ಎರಡೆರಡು ಬಾರಿ ಮುಖ್ಯಮಂತ್ರಿ ಆಗಿರುವ ಸಿಎಂ ಸಿದ್ದರಾಮಯ್ಯನವರಿಗೆ ಯಾವ ಸಂದರ್ಭದಲ್ಲಿ ಏನು ಮಾತನಾಡಬೇಕು ಎನ್ನುವ ಕನಿಷ್ಠ ಪರಿಜ್ಞಾನ ಇಲ್ಲದಿರುವುದು ಕರ್ನಾಟಕದ ದೌರ್ಭಾಗ್ಯ. ನಮ್ಮ ದೇಶದಲ್ಲಿ ವೃತ್ತಿಪರ ಸೇನಾಪಡೆಗಳಿವೆ. ಯಾವ ಸಂದರ್ಭದಲ್ಲಿ ಎಂತಹ ಕ್ರಮ ಕೈಗೊಳ್ಳಬೇಕು ಎನ್ನುವ ಪರಿಣತಿ, ಅನುಭವ ನಮ್ಮ ಸೇನಾಪಡೆಗಳಿವೆ. ಈ ವಿಷಯದಲ್ಲಿ ನಿಮ್ಮ ಸಲಹೆಯ ಅಗತ್ಯವೂ ಇಲ್ಲ, ಸಲಹೆ ನೀಡುವ ಯಾವುದೇ ಅರ್ಹತೆಯೂ ತಮಗಿಲ್ಲ.

ಬದ್ರಿನಾಥ್

ಏನ್ರಿ ತಪ್ಪು.. !
ಅವರು ಹೇಳಿದ್ದು, narendramodi ಅಂದ್ರೇ ಭೀಮಸೇನ... ಒಂದ್ ಏಟಿಗೆ ಹೊಡೆದು ಬಿಸಾಕ್ತಾರೆ, ಅದಕ್ ಯುದ್ಧ ಯಾಕ್ ಬೇಕು? ನೋಡು, ನಿಮಗೇ ಮೋದಿ ಬಗ್ಗೆ ನಂಬಿಕೆ ಇಲ್ಲಾ..
ನೀನೇ ಹಿಂಗಾದ್ರೆ ಆ ಹುಡುಗ Tejasvi Surya ಇನ್ನೂ ನಿನಕಿಂತ ತಪ್ಪಾಗಿ ಹೇಳ್ತಾನೆ..

ಉನ್ನತ ಹುದ್ದೆಗೆ ಐಪಿಎಸ್‌ಗಳಲ್ಲಿ ಭಾರೀ ಪೈಪೋಟಿ, ಕನ್ನಡಿಗರಿಗೆ ಅವಕಾಶಕ್ಕೆ ಆಸಕ್ತಿ | ಠಾಕೂರ್ ಕೋರ್ಟ್ ಮೆಟ್ಟಿಲೇರಿದರೆ ಕೊಂಚ ಹಿನ್ನಡೆ

ನೂತನ ಡಿಜಿಪಿಯಾಗಿ ಡಾ.ಸಲೀಂ ನೇಮಕ ಸಾಧ್ಯತೆ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯ ಪೊಲೀಸ್ ಮಹಾನಿರ್ದೇಶಕರಾದ ಡಾ. ಅಲೋಕ್ ಮೋಹನ್ ಅವರ ಸೇವಾ ಅವಧಿ ಮೂರು ದಿನಗಳಲ್ಲಿ ಅಂತ್ಯವಾಗಲಿದ್ದು, ಹಿರಿಯ ಐಪಿಎಸ್ ಅಧಿಕಾರಿ ಡಾ.ಎಂ.ಎ.ಸಲೀಂ ನೂತನ ಡಿಜಿಪಿಯಾಗಿ ನೇಮಕವಾಗುವ ಸಾಧ್ಯತೆ ಹೆಚ್ಚಾಗಿದೆ. ಇದರೊಂದಿಗೆ ಅನೇಕ ವರ್ಷಗಳ ನಂತರ ಕನ್ನಡದ ಹಿರಿಯ ಐಪಿಎಸ್ ಅಧಿಕಾರಿಯೊಬ್ಬರು ಡಿಜಿಪಿ ಹುದ್ದೆ ಅಲಂಕರಿಸುವ ಅವಕಾಶ ದೊರೆಯುವ ನಿರೀಕ್ಷೆ ಇದೆ. ಆದರೆ ಸೇವಾ ಹಿರಿತನ ಹೊಂದಿರುವ ಪ್ರಶಾಂತ್ ಕುಮಾರ್ ಠಾಕೂರ್ ಏನಾದರೂ ಕೋರ್ಟ್ ಮೆಟ್ಟಿಲೇರಬಹುದೆಂಬ ಆತಂಕ ಸರಕಾರಕ್ಕಿದ್ದರೆ ಸಲೀಂ ಅವರ ನೇಮಕಕ್ಕೆ ಕೊಂಚ ಹಿನ್ನಡೆಯಾಗಬಹುದು ಎಂದು ಹೇಳಲಾಗಿದೆ.

ಈ ಮಧ್ಯೆ, ಹಾಲಿ ಪೊಲೀಸ್ ಮಹಾನಿರ್ದೇಶಕರಾದ ಡಾ.ಅಲೋಕ್ ಮೋಹನ್ ಅವರು ತಮ್ಮ ಸೇವೆಯನ್ನು ಇನ್ನೂ ಮೂರು ತಿಂಗಳ ಕಾಲ ವಿಸ್ತರಿಸಬೇಕೆಂದು ಮನವಿ ಸಲ್ಲಿಸಿದ್ದು, ಇದನ್ನು ರಾಜ್ಯ ಸರಕಾರ ಪುರಸ್ಕರಿಸಿದೆ. ಹಾಗೆಯೇ ಇದನ್ನು ಕೇಂದ್ರ ಸರಕಾರದ ಅನುಮತಿಗೂ ಕಳುಹಿಸಿದೆ. ಆದರೆ ಕೇಂದ್ರ ಸರಕಾರದಿಂದ ಈತನಕ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಒಂದೊಮ್ಮೆ ಮುಂದಿನ ಮೂರು ದಿನಗಳಲ್ಲಿ ಅಲೋಕ್ ಮೋಹನ್ ಅವರ ಕೋರಿಕೆಯನ್ನು ಕೇಂದ್ರ ಸರಕಾರ ಪುರಸ್ಕರಿಸಿದರೆ, ಅದರ ಪ್ರಕಾರ ಸರಕಾರ ನಡೆದುಕೊಂಡಿದ್ದೇ ಆದರೆ ಅವರು ಇನ್ನೂ ಮೂರು ತಿಂಗಳ ಕಾಲ ಡಿಜಿಪಿಯಾಗಿಯೇ ಇರಬಹುದು. ಆದರೆ ಸದ್ಯದ ಸನ್ನಿವೇಶದಲ್ಲಿ ಆ ಸಾಧ್ಯತೆ ಕ್ಷೀಣ ಎನ್ನಲಾಗುತ್ತಿದೆ. ಪ್ರಸ್ತುತ ರಾಜ್ಯ ರಾಜಕೀಯ ಸನ್ನಿವೇಶ, ಸರಕಾರದ ನಡೆಗಳು ಹಾಗೂ ಮುಂದಿನ ಯೋಜನೆಗಳನ್ನು ಗಮನದಲ್ಲಿಟ್ಟುಕೊಂಡು ಸಲೀಂ ಅವರನ್ನೇ ಡಿಜಿಪಿಯಾಗಿ ನೇಮಕ ಮಾಡುವ ಸಾಧ್ಯತೆಗಳಿವೆ ಎನ್ನಲಾಗುತ್ತಿದೆ. ಅಷ್ಟಕ್ಕೂ ಸಲೀಂ ಅವರು ತುಮಕೂರು ಮೂಲದ ಕನ್ನಡದ ಹಿರಿಯ ಐಪಿಎಸ್ ಅಧಿಕಾರಿಯಾಗಿದ್ದು, ಉಡುಪಿ, ಹಾಸನ ಎಸ್‌ಪಿಯಾಗಿದ್ದ ಅವರು, ಮೈಸೂರು ನಗರ ಪೊಲೀಸ್ ಆಯುಕ್ತರಾಗಿದ್ದರು. ಹಾಗೆಯೇ ಇಲಾಖೆಯ ಅನೇಕ ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಸೈ ಎನಿಸಿಕೊಂಡಿದ್ದಾರೆ. ಅದರಲ್ಲೂ ವಿಶೇಷವಾಗಿ ನಗರಗಳ ಸಂಚಾರ ದಟ್ಟಣೆ ನಿಯಂತ್ರಿಸುವಲ್ಲಿ ಅವರು ಮಾಡಿರುವ ಎಲ್ಲ ಯಶಸ್ವಿ ಪ್ರಯೋಗಗಳು ಮತ್ತು ಅವರ ಅನುಭವಗಳನ್ನು ಆಧರಿಸಿ ಸಲೀಂ ಅವರನ್ನೇ ನೇಮಿಸುವುದು ಸೂಕ್ತ ಎನ್ನುವ ಲೆಕ್ಕಾಚಾರ ಸರಕಾರದ್ದಾಗಿದೆ ಎಂದು ಉನ್ನತ ಮೂಲಗಳು ಸ್ಪಷ್ಟಪಡಿಸಿವೆ.

ಇದರ ಮಧ್ಯೆ, 1980ರ ದಶಕದಲ್ಲಿ ನಿಜಾಮುದ್ದೀನ್ ಅವರ ನಂತರ ಅಲ್ಪಸಂಖ್ಯಾತರ ಸಮುದಾಯದ ಅಧಿಕಾರಿಯೊಬ್ಬರಿಗೆ ಡಿಜಿಪಿ ಹುದ್ದೆ ದೊರಕಿಸಿದಂತಾಗುತ್ತದೆ. ಹಾಗೆಯೇ ದಕ್ಷತೆಗೂ ಅವಕಾಶ ನೀಡಿದಂತಾಗುತ್ತದೆ ಎನ್ನುವ ಅಭಿಪ್ರಾಯವೂ ಸರಕಾರದಲಿದೆ. ಹೀಗಾಗಿ ಕೆಲವು ವರ್ಷಗಳ ನಂತರ ಸರಕಾರ ಡಿಜಿಪಿ ನೇಮಕ ವಿಚಾರದಲ್ಲಿ ಪಾಲಿಸಿಕೊಂಡು ಬಂದಿರುವ ಸೇವಾ ಹಿರಿತನ ಸಂಪ್ರದಾಯ ದಾಟಿ ಸಲೀಂ ಅವರಿಗೆ ಅವಕಾಶ ಕಲ್ಪಿಸುವ ಬಗ್ಗೆ ಸರಕಾರ ಮಟ್ಟದಲ್ಲಿ ಗಂಭೀರ ಚಿಂತನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಡಿಜಿಪಿ ಹುದ್ದೆಗೆ ಏನೆಲ್ಲಾ ಆಗುತ್ತಿದೆ?

ಹಾಲಿ ಡಿಜಿಪಿ ಅಲೋಕ್ ಮೋಹನ್ ತಮ್ಮ ಸೇವೆಯನ್ನು ಮೂರು ತಿಂಗಳ ಕಾಲ ವಿಸ್ತರಿಸುವಂತೆ ಸರಕಾರಕ್ಕೆ ಕೋರಿಕೆ ಸಲ್ಲಿಸಿದ್ದರು. ಅವರು ತಿಂಗಳ ಅಂತ್ಯಕ್ಕೆ ತಾವು ನಿವೃತ್ತಿಯಾಗುತ್ತಿರುವ ಕಾರಣ ಈ ಹುದ್ದೆಯಲ್ಲಿ ಎರಡು ವರ್ಷ ಪೂರೈಸಲು ಆಗುತ್ತಿಲ್ಲ. ಆದ್ದರಿಂದ ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ಪೊಲೀಸ್ ಮುಖ್ಯಸ್ಥರ ಹುದ್ದೆಗಳಿಗೆ ಎರಡು ವರ್ಷಗಳ ಅವಧಿ ನೀಡಬೇಕೆಂದು ವಿನಂತಿಸಿದ್ದಾರೆ. ಇದನ್ನು ಸರಕಾರ ಪುರಸ್ಕರಿಸಿ, ಕೇಂದ್ರದ ಯುಪಿಎಸ್‌ಸಿ ಮತ್ತು ಕೇಂದ್ರ ಗೃಹ ಇಲಾಖೆ ಅನುಮತಿಗೆ ಕಳುಹಿಸಿದೆ. ಆದರೆ ಕೇಂದ್ರದಿಂದ ಪ್ರತಿಕ್ರಿಯೆ ಬಂದಿಲ್ಲ ಎನ್ನಲಾಗಿದೆ. ಇದೇ ವೇಳೆ ಸರಕಾರ ಹೊಸ ಡಿಜಿಪಿ ನೇಮಕ ಪ್ರಕ್ರಿಯೆಯನ್ನೂ ಆರಂಭಿಸಿದ್ದು, ನಿಯಮದಂತೆ ನಾಲ್ಕು ಹಿರಿಯ ಐಪಿಎಸ್ ಅಧಿಕಾರಿಗಳ ಹೆಸರುಗಳನ್ನು ಕೇಂದ್ರಕ್ಕೆ ಸಲ್ಲಿಸಿದೆ. ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಡಿಜಿಯಾಗಿರುವ ಪ್ರಶಾಂತ್ ಕುಮಾರ್ ಠಾಕೂರ್, ಸಿಐಡಿ ಡಿಜಿಯಾಗಿರುವ ಡಾ.ಎಂ.ಎ.ಸಲೀಂ, ಪೊಲೀಸ್ ಗೃಹ ನಿರ್ಮಾಣ ವಿಭಾಗದ ಡಿಜಿಯಾಗಿರುವ ರಾಮಚಂದ್ರ ರಾವ್, ಸಿಐಡಿ ಸೈಬರ್ ವಿಭಾಗದ ಡಿಜಿಪಿ ಪ್ರಣಬ್ ಮೊಹಂತಿ ಅವರ ಹೆಸರುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಆಯ್ಕೆ ಸಮಿತಿ ಕೇಂದ್ರಕ್ಕೆ ಶಿಫಾರಸು ಮಾಡಿದೆ. ಇದಕ್ಕೆ ಇನ್ನೆರಡು ದಿನಗಳಲ್ಲಿ ಕೇಂದ್ರದಿಂದ ಪ್ರತಿಕ್ರಿಯೆ ಬರಲಿದ್ದು, ಆನಂತರ ಸರಕಾರ ತನ್ನ ವಿವೇಚನಾಧಿಕಾರ ಬಳಸಿ ಮುಂದಿನ ಆಡಳಿತಕ್ಕೆ ಪೂರಕವಾದ ಹಿರಿಯ ಅಧಿಕಾರಿಯನ್ನು ಡಿಜಿಪಿಯಾಗಿ ನೇಮಕ ಮಾಡಲಿದೆ. ಹೀಗಾಗಿ ಇನ್ನೆರಡು ದಿನಗಳಲ್ಲಿ ಸರಕಾರದ ಆಯ್ಕೆ ಅಧಿಕೃತವಾಗಿ ಪ್ರಕಟವಾಗಲಿದೆ.

ಐಪಿಎಸ್ ಅಧಿಕಾರಿಗಳ ರೇಸ್ ಹೇಗಿದೆ?

ಸದ್ಯ ಡಿಜಿಪಿ ಹುದ್ದೆಗೆ ಸೇವಾ ಹಿರಿತನ ಆಧಾರದಲ್ಲಿ ಪ್ರಶಾಂತ್ ಕುಮಾರ್ ಠಾಕೂರ್ ಅರ್ಹರಿದ್ದಾರೆ. ಆದರೆ ಇವರು ಇಲಾಖೆಯಲ್ಲಿ ಸರಕಾರದ ನಿಲುವುಗಳನ್ನು ನಿರ್ಧರಿಸುವ ಪ್ರಮುಖ ಹಾಗೂ ಆಯಕಟ್ಟಿನ ಹುದ್ದೆಗಳಲ್ಲಿ ಸೇವೆ ಸಲ್ಲಿಸಿಲ್ಲ. ಅಷ್ಟಕ್ಕೂ ಬಿಹಾರ ಮೂಲದ ಅವರು ಸರಕಾರಕ್ಕೆ ಅಷ್ಟಾಗಿ ಆಪ್ತವಾಗಿರುವಂತೆ ಕಾಣುತ್ತಿಲ್ಲ ಎನ್ನಲಾಗಿದೆ. ಹೀಗಾಗಿ ಸರಕಾರ ಸಿಐಡಿ ಡಿಜಿಯಾಗಿರುವ ಸಲೀಂ ಅವರಿಗೆ ಅವಕಾಶ ನೀಡುವ ಸಾಧ್ಯತೆ ಇದೆ. ಆದರೆ ಇದನ್ನು ವಿರೋಧಿಸಿ ಠಾಕೂರ್ ಅವರು ಕೇಂದ್ರ ಆಡಳಿತ ನ್ಯಾಯಾಧೀಕರಣಕ್ಕೂ ಹೋಗಬಹುದು. ಇಲ್ಲವೆ ಸಲೀಂ ಅವರು ಡಿಜಿಪಿಯಾಗಿ ನಿವೃತ್ತಿಯಾದ ನಂತರವೂ ಠಾಕೂರ್ ಅವರಿಗೆ ಅವಕಾಶ ಸಿಗುವುದರಿಂದ ಕೋರ್ಟ್ ಮೆಟ್ಟಿಲೇರದೆ ಸುಮ್ಮನಿರುವುದಕ್ಕೂ ಅವಕಾಶವಿದೆ. ಇನ್ನು ಮೂರನೇ ಸೇವಾ ಹಿರಿತನದಲ್ಲಿರುವ ರಾಮಚಂದ್ರರಾವ್ ಅವರು ರನ್ಯಾರಾವ್ ಬಹುಕೋಟಿ ಚಿನ್ನಸಾಗಣೆ ಪ್ರಕರಣದಲ್ಲಿ ತಳುಕು ಹಾಕಿಕೊಂಡಿರುವ ಕಾರಣ ಅವರ ನೇಮಕ ಸಾಧ್ಯತೆ ಕಡಿಮೆ ಎಂದು ಸರಕಾರದ ಮೂಲಗಳು ತಿಳಿಸಿವೆ. ಇವರ ನಂತರ ಪ್ರಣಬ್ ಮೊಹಂತಿ ಕೂಡ ರೇಸ್‌ನಲ್ಲಿದ್ದಾರೆ ಎನ್ನಲಾಗಿದೆ.

ಅಖಿಲ ಹವ್ಯಕ ಮಹಾಸಭಾವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 82ನೇ ವಾರ್ಷಿಕ ಹವ್ಯಕ ಸಂಸ್ಥಾಪನೋತ್ಸವದಲ್ಲಿ ನಾರಾಯಣ ಭಟ್ ಹುಳೇಗಾರು, ಪರಮೇಶ್ವರ ಹೆಗಡೆ, ಎಸ್.ಎನ್.ಹೆಗಡೆ, ಜಿ.ವಿ.ಭಟ್ ಗೋರೆ, ಪಾದೇಕಲ್ಲು ವಿಷ್ಣು ಭಟ್ಟ, ಕೆ.ಜೆ.ದಿಲೀಪ್, ಕಾವ್ಯ ಜಿ.ರಾವ್ ಹಾಗೂ ಸಂಜಯ ಬೆಳೆಯೂರು ಅವರಿಗೆ ವಾರ್ಷಿಕ ಹವ್ಯಕ ವಿಶೇಷ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಸಿಎಂ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಾಗ್ದಾಳಿ

ಸಿದ್ದರಾಮಯ್ಯ ಪಾಕ್ ಏಜೆಂಟ್

ಕಲಬುರಗಿ: ಸಿದ್ದರಾಮಯ್ಯ ಒಬ್ಬ ಮುಸ್ಲಿಂ ಏಜೆಂಟ್, ಪಾಕಿಸ್ತಾನದ ಏಜೆಂಟ್. ಅವನಿಗೆ ಮಾನ ಮರ್ಯಾದೆ ಇಲ್ಲ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಾಗ್ದಾಳಿ ನಡೆಸಿದರು.

'ಪಾಕ್ ಮೇಲೆ ಯುದ್ಧ ಸಾರುವ ಅಗತ್ಯವಿಲ್ಲ' ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಕರ್ನಾಟಕದ ಮುಖ್ಯಮಂತ್ರಿಯಾಗಿ, ಭಾರತದ ಪ್ರಜೆಯಾಗಿ ಹಿಂದೂಗಳನ್ನು ಟಾರ್ಗೆಟ್ ಮಾಡಿ ದಾಳಿ ನಡೆಸಿದರೂ ಅವರು ಹೀಗೆ ಹೇಳುತ್ತಾರೆ. ಹಾಗಾದ್ರೆ, ಸಿದ್ದರಾಮಯ್ಯಗೆ ಹಿಂದೂಗಳು ವೋಟ್ ಹಾಕಿಲ್ವಾ? ಬರಿ ಸಾಬರೇ ಮಾತ್ರ ವೋಟು ಹಾಕಿದ್ದಾರಾ? ಕಾಂಗ್ರೆಸ್ ಸಾಬರ ಎಂಜಲು ತಿನ್ನುವ ಪಕ್ಷವಾಗಿದೆ. ಅವರಿಗೆ ದೇಶ, ಧರ್ಮ ಮುಖ್ಯವಲ್ಲ ಎಂದು ಹರಿಹಾಯ್ದರು.

ಹಾವೇರಿಯಲ್ಲಿ ದಲಿತ ಹೆಣ್ಣು ಮಗಳ ಮೇಲೆ ಅತ್ಯಾಚಾರವಾಗಿದೆ. ಈ ಮಹಾನ್ ದಲಿತ ನಾಯಕ ಪ್ರಿಯಾಂಕ್ ಖರ್ಗೆ ಎಲ್ಲಿದ್ದಾರೆ? ಪ್ರಿಯಾಂಕ್ ಧರ್ಮ ಕೇಳಿ ಹೊಡೆದಿಲ್ಲ ಎನ್ನುತ್ತಾರೆ ಎಂದರೆ ಅವರಿಗೆ ಪ್ರಬುದ್ಧತೆ ಇದೆಯಾ? ಈಗಲಾದರೂ ಹಿಂದೂಗಳು ಒಂದಾಗಬೇಕು. ವೀರಶೈವರು, ಲಿಂಗಾಯತರು ನಾವೆಲ್ಲ ಒಂದೇ. ನಾವೆಲ್ಲ ವಿಭೂತಿಯನ್ನು ಹಚ್ಚಿಕೊಂಡು, ಲಿಂಗ ಪೂಜೆ ಮಾಡುತ್ತೇವೆ. ತಾಳ್ಮೆಗೊಂದು ಮಿತಿಯಿದೆ. ಪಾಕ್ ಇನ್ನೆಂದೂ ಭಾರತದತ್ತ ತಲೆಹಾಕದಂತೆ ಪ್ರಧಾನಿ ನರೇಂದ್ರ ಮೋದಿ ಅವರು ಪಾಕಿಸ್ತಾನಕ್ಕೆ ಬುದ್ಧಿ ಕಲಿಸುವ ವಿಶ್ವಾಸವಿದೆ. ಮುಸ್ಲಿಮರಿಗಿಂತಲೂ ಹಿಂದೂಗಳಲ್ಲಿರುವ ಕೆಲವು ಮನಸ್ಥಿತಿಗಳು ಅಪಾಯಕಾರಿಯಾಗಿವೆ ಎಂದರು.

ಕಲಬುರಗಿಯಲ್ಲಿ ರಸ್ತೆಗೆ ಅಂಟಿಸಿದ ಪಾಕ್ ಧ್ವಜವನ್ನು ಮುಸ್ಲಿಂ ಮಹಿಳೆಯರು ತೆಗೆಯಲು ಕಾರಣವೇನು? ಅದಕ್ಕೂ ಆ ಮಹಿಳೆಗೂ ಏನು ಸಂಬಂಧ? ಇಸ್ಲಾಂನಲ್ಲಿ ಮತ್ತೊಂದು ಧರ್ಮವನ್ನು ಸೌಹಾರ್ದದಿಂದ ನೋಡುವ ಗುಣವಿಲ್ಲ ಎಂದು ಡಾ.ಅಂಬೇಡ್ಕರ್ ಹೇಳಿದ್ದರು. ಭಾರತ-ಪಾಕಿಸ್ತಾನ ಪ್ರತ್ಯೇಕಿಸುವುದಾದರೆ, ಭಾರತದಲ್ಲಿ ಕೊನೆಯ ಮುಸ್ಲಿಂ ಪಾಕ್‌ಗೆ ಹೋಗಬೇಕು. ಪಾಕ್‌ನಲ್ಲಿರುವ ಕೊನೆಯ ಹಿಂದೂ ಭಾರತಕ್ಕೆ ಬರಬೇಕು ಎಂದು ಬಾಬಾಸಾಹೇಬರು ಹೇಳಿದ್ದರು. ಇದೀಗ ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕ್ ಖರ್ಗೆ ಅವರು ತಾವು ಬಾಬಾಸಾಹೇಬ ಅಂಬೇಡ್ಕರ್ ಅನುಯಾಯಿಗಳೋ ಅಥವಾ ಒವೈಸಿ ಅನುಯಾಯಿಗಳೋ ಎಂಬುದನ್ನು ಜನರ ಮುಂದೆ ಹೇಳಬೇಕು ಎಂದು ಒತ್ತಾಯಿಸಿದರು.

'ಸಿದ್ದರಾಮಯ್ಯ ಹೇಳಿಕೆ ಪಾಕ್ ಮಾಧ್ಯಮಗಳಲ್ಲಿ ಹರಿದಾಡುತ್ತಿದೆಯಲ್ಲ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಯತ್ನಾಳ, ಸಿದ್ದರಾಮಯ್ಯ ಪಾಕಿಸ್ತಾನದವರಿಗೆ ಹುಟ್ಟಿದ ಹಾಗೆ ಮಾತಾಡಿದ್ರೆ, ಹೊಗಳುತ್ತಾರೆ. ಸಿದ್ದರಾಮಯ್ಯಗೆ ಮಾನ, ಮರ್ಯಾದೆ ಇದೇನಾ? ದೇಶಕ್ಕೆ ಆಪತ್ತು ಬಂದಾಗ ಈ ರೀತಿ ಮಾತಾಡೋದು ಸರಿನಾ? ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ಸಿಗರು ಪಾಕಿಸ್ತಾನದ ಪರವಾಗಿ ಮಾತನಾಡುತ್ತಿದ್ದಾರೆ. ಯುದ್ಧ ಬೇಕು, ಬೇಡ ಎಂಬುದು ಸಿದ್ದರಾಮಯ್ಯ ಅವರಿಗೆ ಸಂಬಂಧಿಸಿದ ವಿಚಾರವಲ್ಲ. ಅದನ್ನು ನಿರ್ಧರಿಸುವವರು ಪ್ರಧಾನಿ, ರಾಷ್ಟ್ರಪತಿ ಹಾಗೂ ಸೈನ್ಯ. ಸಿದ್ದರಾಮಯ್ಯ ಬರೀ ಕರ್ನಾಟಕದ ಮುಖ್ಯಮಂತ್ರಿಯಷ್ಟೇ. ರಾಜ್ಯದಲ್ಲಿ ಹಿಂದೂಗಳು ಮೇಲೆ ನಡೆಯುತ್ತಿರುವ ದೌರ್ಜನ್ಯ, ಲವ್ ಜಿಹಾದ್, ದಲಿತರ ಮೇಲಿನ ಅತ್ಯಾಚಾರ ತಡೆಗೆ ಗಮನಕೊಡಲಿ.
-ಬಸನಗೌಡ ಪಾಟೀಲ ಯತ್ನಾಳ

- ಸಿದ್ದರಾಮಯ್ಯಗೆ ಹಿಂದೂಗಳು ವೋಟ್ ಹಾಕಿಲ್ವಾ? ಬರಿ ಸಾಬರೇ ಮಾತ್ರ ವೋಟು ಹಾಕಿದ್ದಾರಾ?
- ಈಗಲಾದರೂ ಹಿಂದೂಗಳು ಒಂದಾಗಬೇಕು. ವೀರಶೈವರು, ಲಿಂಗಾಯತರು ನಾವೆಲ್ಲ ಒಂದೇ
- ಪಾಕ್ ಇನ್ನೆಂದೂ ಭಾರತದತ್ತ ತಲೆಹಾಕದಂತೆ ಮೋದಿ ಪಾಕಿಸ್ತಾನಕ್ಕೆ ಬುದ್ಧಿ ಕಲಿಸುವ ವಿಶ್ವಾಸವಿದೆ
- ಮುಸ್ಲಿಮರಿಗಿಂತಲೂ ಹಿಂದೂಗಳಲ್ಲಿರುವ ಕೆಲವು ಮನಸ್ಥಿತಿಗಳು ಅಪಾಯಕಾರಿಯಾಗಿವೆ

ಪಾಕಿಸ್ತಾನ ಬಗ್ಗೆ ಸಹಾನುಭೂತಿ ಏಕೆ?

ಬೆಂಗಳೂರು: ಪಾಕಿಸ್ತಾನವು ಭಯೋತ್ಪಾದಕರ ಮೂಲಕ ಭಾರತದ ಮೇಲೆ ದಾಳಿ ಮಾಡುತ್ತಿದ್ದರೂ ಅವರ ವಿರುದ್ಧ ಯುದ್ಧ ಮಾಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಇದು ಅಕ್ಷಮ್ಯ ಅಪರಾಧ ಮತ್ತು ಅವರು ದೇಶ ಜನರ ಕ್ಷಮೆ ಕೇಳಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಶ್ಮೀರದ ಭಯೋತ್ಪಾದಕರ ದಾಳಿ ಮತ್ತು ಹತ್ಯೆಯ ಘಟನೆಯನ್ನು ಪ್ರತಿಯೊಬ್ಬ ಸ್ವಾಭಿಮಾನಿ ಭಾರತೀಯನೂ ಖಂಡಿಸಿದ್ದಾನೆ. ಭಾರತ ಯಾವತ್ತೂ ಯುದ್ಧ ಸಾರಿದ ಇತಿಹಾಸ ಹೊಂದಿಲ್ಲ. ಭಾರತೀಯರ ರಕ್ಷಣೆ ಮಾಡಬೇಕಾದ ಸಂದರ್ಭದಲ್ಲಿ ಏನು ತೀರ್ಮಾನ ಮಾಡಬೇಕೋ ಅದನ್ನು ಪ್ರಧಾನಿಯವರು ಎಲ್ಲ ಮುಖ್ಯಮಂತ್ರಿಗಳ ಜತೆ ಚರ್ಚಿಸಿಯೇ ನಿರ್ಧರಿಸುತ್ತಾರೆ. ಇಲ್ಲಿನ ಅಲ್ಪಸಂಖ್ಯಾತರ ಓಲೈಕೆಗಾಗಿ ಪಾಕಿಸ್ತಾನ ಪರವಾಗಿ ಮಾತನಾಡುವುದು ಸರಿಯಲ್ಲ ಎಂದರು.

ಪಾಕಿಸ್ತಾನದಲ್ಲಿ ನಿಮ್ಮ ಹೇಳಿಕೆ ಆಧರಿಸಿ ಅಲ್ಲಿನ ಸುದ್ದಿವಾಹಿನಿಗಳು ನಿಮ್ಮನ್ನು ವೈಭವೀಕರಿಸುತ್ತಿರುವ ಪರಿ ನೋಡಿದರೆ ನಿಮ್ಮ ಅಜೆಂಡಾ ಏನು ಎನ್ನುವುದು ಜನರಿಗೆ ಅರ್ಥವಾಗುತ್ತಿದೆ. ಸಮರ್ಪಣೆಯ ಸಂಕಲ್ಪ ಹೊತ್ತ ಲಕ್ಷಾಂತರ ದೇಶಭಕ್ತ ಕಾರ್ಯಕರ್ತರ ಪಡೆ ಹೊಂದಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಶತಮಾನ ಪೂರೈಸಿ ವಿಶ್ವ ಮಾನ್ಯತೆ ಪಡೆದ ಭಾರತದ ಹೆಮ್ಮೆಯ ಸಂಘಟನೆ ಎಂದು ವಿಜಯೇಂದ್ರ ಹೇಳಿದ್ದಾರೆ.

ಒಂದು ಕಡೆ ಪಾಕಿಸ್ತಾನದ ಕುರಿತು ನಿಮ್ಮ ಸಹಾನುಭೂತಿ ಹೇಳಿಕೆ, ಮತ್ತೊಂದು ಕಡೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ನಿಮ್ಮ ದ್ವೇಷದ ಮಾತುಗಳು ಜನರ ಮನದಲ್ಲಿ ನೀವು ರಾಷ್ಟ್ರನಿಷ್ಠರೋ ಅಥವಾ ಪಾಕಿ ಮನಸ್ಥಿತಿಯ ವಕ್ತಾರರೋ ಎಂಬ ಅನುಮಾನ ಮೂಡಿಸುತ್ತಿದೆ.
- ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಸಮಾಚಾರ ಸಣ್ಣದಲ್ಲ

ನಮಗೆ ಗುಂಡು ಹೊಡೀಲಿ ನೋಡೋಣ

ರಾಣೆಬೆನ್ನೂರು: ನಾವು ಸನ್ಯಾಸಿಗಳು, ಸ್ವಾಮೀಜಿಗಳು, ಸಾಧು-ಸಂತರು ಪಾಕಿಸ್ತಾನ ಗಡಿಗೆ ಹೋಗುತ್ತೇವೆ. ಅವರು ಹೇಗೆ ನಮಗೆ ಗುಂಡು ಹೊಡೆಯುತ್ತಾರೋ ನೋಡೋಣ ಎಂದು ಶರಣಬಸವೇಶ್ವರ ಮಠದ ಪೀಠಾಧಿಪತಿ ಪ್ರಣವಾನಂದ ಸ್ವಾಮೀಜಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕಾಶ್ಮೀರದ ಪಹಲ್ ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ಗುಂಡಿನ ದಾಳಿ ನಡೆಸಿದ್ದು ಹೇಯ ಕೃತ್ಯ. ಪಾಕಿಸ್ತಾನ ಯಾವಾಗಲೂ ಭಾರತದ ವಿರುದ್ಧವಿದೆ. ಕರ್ನಾಟಕದಲ್ಲಿರುವ ಪಾಕಿಸ್ತಾನಿ ಪ್ರಜೆಗಳನ್ನು ಮರಳಿ ಪಾಕಿಸ್ತಾನಕ್ಕೆ ಕಳುಹಿಸಬೇಕು. ಭಾರತದಲ್ಲಿ ವಾಸವಿದ್ದು, ಪಾಕಿಸ್ತಾನಕ್ಕೆ ಸಹಕರಿಸುವ ದೇಶದ್ರೋಹಿಗಳನ್ನು ಪತ್ತೆ ಮಾಡಿ ಅವರನ್ನು ಗಲ್ಲಿಗೇರಿಸಬೇಕು ಎಂದರು.

ಸಿದ್ದರಾಮಯ್ಯ ಹೇಳಿಕೆ ಹಿಂಪಡೆಯಬೇಕು

ಬೆಳಗಾವಿ: ಜಮ್ಮು ಕಾಶ್ಮೀರದಲ್ಲಿ ಭಯೋತ್ಪಾದಕರ ಗುಂಡಿನ ದಾಳಿಗೆ 28 ಜನ ಬಲಿಯಾಗಿರುವುದಕ್ಕೆ ಇಡೀ ದೇಶದ ಜನರು ದುಃಖಪಡುತ್ತಿದ್ದಾರೆ. ಆದರೆ ಸಿಎಂ ಸಿದ್ದರಾಮಯ್ಯ ಅವರನ್ನು ಪಾಕಿಸ್ತಾನದ ಮಾಧ್ಯಮದಲ್ಲಿ ಹೊಗಳುತ್ತಿರುವುದು ದುರ್ದೈವದ ಸಂಗತಿ. ಪಾಕಿಸ್ತಾನದಲ್ಲಿ ಪಾಪ್ಯುಲರ್ ಆಗಿರುವ ಸಿದ್ದರಾಮಯ್ಯ ಅವರನ್ನು ಪಾಕಿಸ್ತಾನಕ್ಕೆ ಕಳುಹಿಸುವುದು ಉತ್ತಮ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಪ್ರತಿಪಕ್ಷಗಳು ಕೇಂದ್ರ ಸರಕಾರದ ನಿಲುವಿನ ಬಗ್ಗೆ ಒಪ್ಪಿಗೆ ಇದೆ ಎಂದು ಹೇಳುತ್ತಿದ್ದಾರೆ. ಸಿದ್ದರಾಮಯ್ಯ ಇಂಥ ಹೇಳಿಕೆ ನೀಡುವುದು ಸರಿಯಲ್ಲ. ಕೂಡಲೇ ಮೂರ್ಖತನದ ಹೇಳಿಕೆ ಹಿಂಪಡೆಯಬೇಕು ಎಂದು ಸಂಸದ ಜಗದೀಶ್ ಶೆಟ್ಟರ್ ಆಗ್ರಹಿಸಿದರು.

ರಿಕ್ಕಿ ರೈ ಮೇಲೆ ಶೂಟೌಟ್: ಮುತ್ತಪ್ಪ ರೈ 2ನೇ ಪತ್ನಿ ವಿಚಾರಣೆ

ರಾಮನಗರ: ಭೂಗತ ಲೋಕದ ಮಾಜಿ ಡಾನ್ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ನಡೆದ ಗುಂಡಿನ ದಾಳಿ ಪ್ರಕರಣದ 2ನೇ ಆರೋಪಿಯಾಗಿರುವ ಮುತ್ತಪ್ಪ ಅವರ ಎರಡನೇ ಪತ್ನಿ ಅನುರಾಧ ಅವರನ್ನು ಬಿಡದಿ ಠಾಣೆ ಪೊಲೀಸರು ಭಾನುವಾರ ವಿಚಾರಣೆ ನಡೆಸಿದರು. ಬೆಳಗ್ಗೆ 11 ಗಂಟೆ ಸುಮಾರಿಗೆ ಠಾಣೆಗೆ ಬಂದ ಅವರನ್ನು ಇನ್ಸ್‌ಪೆಕ್ಟರ್ ಶಂಕರ್ ನಾಯಕ್ ಅವರನ್ನು ಒಳಗೊಂಡ ತಂಡವು ಸತತ 5 ತಾಸು ವಿಚಾರಣೆಗೆ ಒಳಪಡಿಸಿತು. ವಿಚಾರಣೆ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅನುರಾಧ, ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ, ಆದರೂ, ಯಾಕೆ ನನ್ನ ಮೇಲೆ ಆರೋಪ ಮಾಡಿ ದೂರು ಕೊಟ್ಟಿದ್ದಾರೋ ಗೊತ್ತಿಲ್ಲ. ವಿಚಾರಣೆ ಸಂದರ್ಭದಲ್ಲಿ ಪೊಲೀಸರಿಗೆ ಎಲ್ಲ ಮಾಹಿತಿ ನೀಡಿರುವೆ ಎಂದರು. ರಿಕ್ಕಿ ಮತ್ತು ನನ್ನ ನಡುವೆ ಕೋರ್ಟ್‌ನಲ್ಲಿದ್ದ ಜಮೀನು ವ್ಯಾಜ್ಯ ಪ್ರಕರಣವು ರಾಜಿಯಾಗಿ ಸುಖಾಂತ್ಯ ಕಂಡಿದೆ. ಕಳೆದ ಅಕ್ಟೋಬರ್‌ನಲ್ಲಿ ಕೋರ್ಟ್‌ಗೆ ಸಹಿ ಹಾಕಲು ಬಂದಾಗಷ್ಟೇ ರಿಕ್ಕಿ ಅವರನ್ನು ನಾನು ನೋಡಿದ್ದೆ. ಉಳಿದಂತೆ ನನಗೂ ಮತ್ತು ಅವರಿಗೂ ಯಾವುದೇ ಸಂಪರ್ಕವಿಲ್ಲ ಎಂದು ತಿಳಿಸಿದರು.



ಕೇಂದ್ರದ ನಿರ್ಧಾರಕ್ಕೆ ಬೆಂಬಲ

ಅಥಣಿ: ಭಯೋತ್ಪಾದಕರ ವಿರುದ್ಧ ಕ್ರಮ ಕೈಗೊಳ್ಳಲು ಇದು ಸರಿಯಾದ ಸಮಯ. ಕೇಂದ್ರ ಸರಕಾರ ಉಗ್ರಗಾಮಿಗಳನ್ನು ಮಟ್ಟ ಹಾಕುವಲ್ಲಿ ತೆಗೆದುಕೊಳ್ಳುವ ಎಲ್ಲ ದಿಟ್ಟ ನಿರ್ಧಾರಗಳಿಗೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಶ್ಮೀರದ ಪಹಲ್‌ಗಾಮ್‌ನಲ್ಲಿ ಉಗ್ರಗಾಮಿಗಳು ಅಟ್ಟಹಾಸ ಮೆರೆದು 27 ಜನ ಪ್ರವಾಸಿಗರನ್ನು ಹತ್ಯೆ ಮಾಡಿರುವ ದುಷ್ಕೃತ್ಯವನ್ನು ಖಂಡಿಸುತ್ತೇನೆ. ನಾನು ಕೂಡ ಕಳೆದ ಆರು ತಿಂಗಳ ಹಿಂದೆ ಜಮ್ಮು ಕಾಶ್ಮೀರದ ಅನೇಕ ಪ್ರವಾಸಿ ತಾಣಗಳಿಗೆ ಭೇಟಿಕೊಟ್ಟು ಬಂದಿದ್ದೇನೆ. ಅದೊಂದು ಭೂಲೋಕದ ಸ್ವರ್ಗವಿದ್ದಂತೆ. ಈ ದುಷ್ಕೃತ್ಯದಿಂದ ಮತ್ತೆ ಅಲ್ಲಿನ ನಿವಾಸಿಗಳಿಗೆ ಆತಂಕ ಎದುರಾಗಿದೆ. ಅಲ್ಲದೆ ಈ ಘಟನೆ ಇಡೀ ಭಾರತೀಯರ ನೋವಿಗೆ ಕಾರಣವಾಗಿದೆ ಎಂದರು.

ಅಕ್ರಮವಾಗಿ ಭಾರತದಲ್ಲಿ ವಲಸಿರುವ ಪಾಕಿಸ್ತಾನಿಗಳನ್ನು, ವಿಸಾ ಪಡೆದುಕೊಂಡು ಬಂದಿರುವ ಜನರ ವಿಸಾ ರದ್ದುಪಡಿಸಿ ಅವರನ್ನು ಭಾರತದಿಂದ ಹೊರ ಹೋಗುವಂತೆ ಸೂಚನೆ ನೀಡಿದ್ದು ಸ್ವಾಗತಾರ್ಹ. ಕೇಂದ್ರ ಸರಕಾರ ಪಾಕಿಸ್ತಾನದ ವಿರುದ್ಧ ತೆಗೆದುಕೊಂಡ ರಾಜತಾಂತ್ರಿಕ 5 ನಿರ್ಧಾರಗಳು ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ಇಂತಹ ಸಂದರ್ಭದಲ್ಲಿ ರಾಜಕೀಯ ಮಾಡುವುದು ಒಳಿತಲ್ಲ, ರಾಜ್ಯ ಹಾಗೂ ಕೇಂದ್ರದ ನಾಯಕರು ಒಗ್ಗಟ್ಟಿನಿಂದ ಪಾಪಿ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಬೇಕು ಎಂದರು.

ಸಿದ್ದರಾಮಯ್ಯ ಮಾನಸಿಕ ಸ್ಥಿತಿ ಸರಿ ಇಲ್ಲ

ಬಾಗಲಕೋಟೆ: ಸಿಎಂ ಸಿದ್ದರಾಮಯ್ಯ ಮಾನಸಿಕ ಅಸ್ವಸ್ಥರಾಗಿದ್ದಾರೆ. ಅವರ ಮನಸ್ಥಿತಿ ಸರಿಯಿಲ್ಲ. ಉಗ್ರಗಾಮಿಗಳು ಬರೀ ಧರ್ಮ ಕೇಳಿ ಗುಂಡು ಹಾಕಿಲ್ಲ. ಬೆತ್ತಲೆ ಮಾಡಿ ಲಿಂಗ ಪರೀಕ್ಷೆ ಮಾಡಿ ಗುಂಡು ಹಾರಿಸಿದ್ದಾರೆ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕುರ್ಚಿಗೆ ಕಂಟಕ ಬಂದಾಗ ಸಿದ್ದರಾಮಯ್ಯ ಅವರು ಜಾತಿ ಗಣತಿಯಂತಹ ಕೆಲಸ ಮಾಡುತ್ತಾರೆ. ಎರಡು ವರ್ಷ ಸುಮ್ಮನಿದ್ದು, ಈಗ ಕುರ್ಚಿ ಖಾಲಿ ಮಾಡಿ ಅಂದಾಗ ಇಂತಹ ಗಿಮಿಕ್ ಪ್ರಾರಂಭವಾಗಿದೆ. ಅವರಿಗೆ ನಿಜವಾಗಿಯೂ ಸಾಮಾಜಿಕ ಕಳಕಳಿ ಇಲ್ಲ. ವೀರಶೈವ ಲಿಂಗಾಯತರನ್ನು ಸಣ್ಣ ಸಣ್ಣ ಜಾತಿಗಳಾಗಿ ವಿಂಗಡನೆ ಮಾಡಿದರು. ಅದೇ ರೀತಿ ಒಕ್ಕಲಿಗರು, ಹಿಂದೂಳಿದ ವರ್ಗದವರನ್ನು ವಿಂಗಡನೆ ಮಾಡಲಾಗಿದೆ. ಆದರೆ, ಮುಸ್ಲಿಮರನ್ನು ವಿಂಗಡಣೆ ಮಾಡಬೇಕಿತ್ತು. ಯಾಕೆ ಮಾಡಲಿಲ್ಲ? ಸಿದ್ದರಾಮಯ್ಯನವರೇ ನೀವು ವಿಂಗಡಣೆ ಮಾಡಬೇಕಿರುವುದು ಮುಸ್ಲಿಮರನ್ನು ಎಂದರು.

ಶ್ರೀಮಂತ, ಬಡವ, ದಲಿತ ಹಾಗೂ ಮುಸ್ಲಿಂರನ್ನಾಗಿ ವಿಂಗಡಣೆ ಮಾಡಬೇಕಿತ್ತು. ದಲಿತ (ಕ್ಷೌರಿಕ) ಮುಸ್ಲಿಂ, ಬಂಗಿ ಮುಸ್ಲಿಂ, ಮೋಚಿ ಮುಸ್ಲಿಂ, ಚಪ್ಪಲ ಬಂದ್ ಮುಸ್ಲಿಂ, ನದಾಫ್, ಪಿಂಜಾರ್ ಈ ಎಲ್ಲ ಮುಸ್ಲಿಂ ಹಿಂದುಳಿದ ವರ್ಗದವರನ್ನು ವಿಂಗಡಣೆ ಮಾಡಬೇಕಿತ್ತು. ಇಂತವರಿಗೆ ನ್ಯಾಯ ಕೊಡುವ ಕೆಲಸ ಮಾಡಿದರೆ ನಾ ಒಪ್ಪಿಕೊಳ್ಳುತ್ತಿದ್ದೆ. ಇದನ್ನೇ ನಮೋ ಹೇಳಿದರು. ಪಸಬಂದಾ ಮುಸಲ್ಮಾನರಿಗೆ ನಾವು ಸೌಲತ್ತುಗಳನ್ನು ಕೊಡಬೇಕು. ಬರೀ ಸಿಎಂ ಸಿದ್ದರಾಮಯ್ಯ ವೋಟ್ ಬ್ಯಾಂಕ್‌ಗಾಗಿ ಈ ರೀತಿ ಮಾಡಿದರೆ ಖಂಡಿಸುತ್ತೇನೆ ಎಂದರು.

18 ಶಾಸಕರ ಅಮಾನತು ರದ್ದು ನಾನೊಬ್ಬನೇ ನಿರ್ಧರಿಸಲಾಗದು

ಮಂಗಳೂರು: ವಿಧಾನಸಭೆಯಲ್ಲಿ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ ಬಿಜೆಪಿಯ 18 ಶಾಸಕರ ಅಮಾನತು ಮಾಡಿದ್ದು ಸದನದ ತೀರ್ಮಾನ. ಆದ್ದರಿಂದ ಅವರ ಅಮಾನತು ಹಿಂಪಡೆಯುವ ವಿಚಾರದಲ್ಲೂ ನಾನೊಬ್ಬನೇ ತೀರ್ಮಾನ ಕೈಗೊಳ್ಳಲಾಗದು ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಶಾಸಕರನ್ನು ಅಮಾನತುಗೊಳಿಸಿದ ವಿಚಾರದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ ಖಾದರ್ ವಿರುದ್ಧ ಶಾಸಕ ಹರೀಶ್ ಪೂಂಜಾ ನೀಡಿರುವ ಹೇಳಿಕೆ ವಿರುದ್ಧ ಹಕ್ಕುಚ್ಯುತಿಗೆ ಕೆಲ ಕಾಂಗ್ರೆಸ್ ಶಾಸಕರು ನೀಡಿರುವ ದೂರಿನ ಬಗ್ಗೆ ಪ್ರತಿಕ್ರಿಯಿಸಿದ ಖಾದರ್, ಕೆಲ ಶಾಸಕರಿಗೆ ಏನಾದರೂ ಮಾತನಾಡುವ ಚಾಳಿ ಇದೆ. ತಮಗೆ ಪ್ರಚಾರ ಸಿಗುತ್ತದೆ ಎಂದು ಆ ರೀತಿ ಮಾತನಾಡ್ತಾರೆ. ಅವರ ಹೇಳಿಕೆ ಸಂವಿಧಾನಕ್ಕೆ ಬದ್ಧವಾಗಿರಬೇಕು. ಈ ಕುರಿತು ಶಾಸಕರು ಹಕ್ಕುಚ್ಯುತಿ ಸಮಿತಿಗೆ ದೂರು ಕೊಟ್ಟಿದ್ದಾರೆ. ಸಮಿತಿಯೇ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದರು.

ನಿವೃತ್ತ ಡಿಜಿಪಿ ಮತ್ತು ಐಜಿಪಿ ಓಂ ಪ್ರಕಾಶ್ ಹತ್ಯೆ ಪ್ರಕರಣದಲ್ಲಿ ಪಿಎಫ್‌ಐ ಕೈವಾಡದ ಇದೆ ಎಂದು ಮಾಜಿ ಡಿವೈಎಸ್‌ಪಿ ಅನುಪಮಾ ಶೆಣೈ ಆರೋಪಿಸಿರುವ ಕುರಿತು ಮತ್ತು ಈ ಬಗ್ಗೆ ಪತ್ರ ಬರೆದ ಕುರಿತು ಪ್ರತಿಕ್ರಿಯಿಸಿದ ಖಾದರ್, ನಾನು ತನಿಖಾ ಏಜೆನ್ಸಿ ಅಲ್ಲ. ನಾನು ಸಾರ್ವಜನಿಕ ಹುದ್ದೆಯಲ್ಲಿರುವವನು. ಅವರು ಈ ಬಗ್ಗೆ ಸರಕಾರಕ್ಕೆ ಪತ್ರ ಬರೆಯಲಿ. ನನ್ನ ಕಚೇರಿಗೆ ಪತ್ರ ಬಂದಿದೆಯೇ ಎಂದು ಪರಿಶೀಲನೆ ನಡೆಸುತ್ತೇನೆ. ಅವರಲ್ಲಿ ನಿಜವಾಗಿಯೂ ಪುರಾವೆಗಳಿದ್ದಲ್ಲಿ ತನಿಖಾ ಸಂಸ್ಥೆಗೆ ಕೊಡಲಿ ಎಂದರು.

ಪಹಲ್‌ಗಾಮ್ ಉಗ್ರರ ದಾಳಿ ಪ್ರಕರಣದಲ್ಲಿ 'ಯುದ್ಧ ಬೇಡ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ನೀಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, ನಮ್ಮ ದೇಶದ ಏಕತೆ, ಒಗ್ಗಟ್ಟನ್ನು ಮುರಿಬೇಕೆಂಬುದೇ ಈ ಸಂಚಿನ ಉದ್ದೇಶ. ಅದಕ್ಕೆ ನಾವು ಆಸ್ಪದ ಕೊಡಬಾರದು. ದುರ್ಬಲಗೊಳಿಸಲು ನಾವು ಪ್ರಯತ್ನಪಟ್ಟರೆ ಸಂಚುಕೋರರಿಗೆ ಸಹಾಯ ಮಾಡಿದ ಹಾಗಾಗುತ್ತದೆ. ಕೃತ್ಯ ಎಸಗಿದರನ್ನು ಮತ್ತು ಬೆಂಬಲ ನೀಡಿದವರನ್ನು ಮಟ್ಟ ಹಾಕಬೇಕು. ಯುದ್ಧ ನಡೆಸುವ ಬಗ್ಗೆ ಸರ್ವಪಕ್ಷ ಸಭೆ, ಅಧಿಕಾರಿಗಳು, ಕೇಂದ್ರ ಸರಕಾರ ನಿರ್ಧಾರ ಮಾಡುತ್ತದೆ. ಈ ವಿಚಾರದಲ್ಲಿ ಇಡೀ ದೇಶ ಒಗ್ಗಟ್ಟಾಗಿರಬೇಕು ಎಂದು ಹೇಳಿದರು.

ಪೀಠದ ಗೌರವ ಉಳಿಸಲು ಆರು ತಿಂಗಳವರೆಗೆ ಅಮಾನತು ಮಾಡಲಾಗಿದೆ. ಸಮಿತಿ ಸಭೆಯಲ್ಲೂ ಭಾಗವಹಿಸಬಾರದು ಎಂದು ಸೂಚಿಸಲಾಗಿದೆ. ತಪ್ಪಿನ ಅರಿವು ಅವರಿಗೆ ಆಗಬೇಕು. ಇದು ಅವರಿಗೆ ಕೊಟ್ಟಿರುವ ಶಿಕ್ಷೆಯಲ್ಲ. ಮುಂದೆ ಉತ್ತಮ ನಾಯಕರಾಗಿ ಬೆಳೆಯುವುದಕ್ಕೆ ಶಾಸಕರಿಗೆ ಕೊಟ್ಟಿರುವ ಸವಾಲು ಇದು. ಅಮಾನತು ರದ್ದತಿ ಬಗ್ಗೆ ಸರಕಾರದೊಂದಿಗೆ ಚರ್ಚೆ ನಡೆಸುತ್ತೇನೆ.
-ಯು.ಟಿ.ಖಾದರ್ ವಿಧಾನ ಸಭಾಧ್ಯಕ್ಷ

ಕೇಂದ್ರಕ್ಕೆ ಬೆಂಬಲದ ಮಾತಿಗೆ ನಾವು ಬದ್ಧ

ಬೆಂಗಳೂರು: ಪಹಲ್‌ಗಾಮ್‌ನಲ್ಲಿ ಭಯೋತ್ಪಾದಕರ ದಾಳಿಗೆ ಪ್ರತ್ಯುತ್ತರವಾಗಿ ಕೇಂದ್ರ ಸರಕಾರ ತೆಗೆದುಕೊಳ್ಳುವ ಯಾವುದೇ ಕ್ರಮಗಳಿಗೂ ನಾವು ಬೆಂಬಲ ಘೋಷಿಸಿದ್ದೇವೆ. ಅದಕ್ಕೆ ನಾವು ಬದ್ಧರಾಗಿದ್ದು, ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ದಾಳಿಯ ವಿಚಾರದಲ್ಲಿ ಧರ್ಮ ಮತ್ತು ಜಾತಿ ಮುಂದೆ ತರುವುದು ಸರಿಯಲ್ಲ. ಇಲ್ಲಿ ನಾವು ಮುಖ್ಯವೇ ಅಲ್ಲ. ನಾನು ಇಂದು ಇರುತ್ತೇನೆ, ಆಮೇಲೆ ಹೋಗುತ್ತೇನೆ. ಮೋದಿ ಅವರೂ ಇಂದು ಇರುತ್ತಾರೆ, ಆಮೇಲೆ ಹೋಗುತ್ತಾರೆ. ಆದರೆ ದೇಶ ಶಾಶ್ವತವಾಗಿ ಇರುತ್ತದೆ. ಹೀಗಾಗಿ ದೇಶ ಮತ್ತು ದೇಶದ ರಕ್ಷಣೆಯೇ ಮುಖ್ಯ ಎಂದರು. ಕೇಂದ್ರ ಸರಕಾರ ಸರ್ವಪಕ್ಷ ಸಭೆ ಕರೆದು, ಹಲವು ವಿಚಾರಗಳನ್ನು ಮುಂದಿಟ್ಟಿದೆ. ದೇಶದ ರಕ್ಷಣೆ ವಿಚಾರದಲ್ಲಿ ಏನು ಅಗತ್ಯವಿತ್ತೋ ಅದನ್ನು ನಾವೂ ಸರಕಾರದ ಮುಂದೆ ಇರಿಸಿದ್ದೇವೆ. ಕೇಂದ್ರವು ನಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕ್ರಮ ತೆಗೆದುಕೊಳ್ಳಬೇಕು ಎಂದರು.

ಅವರಿಗೆ (ಕೇಂದ್ರ ಸರಕಾರಕ್ಕೆ) ನಾವು ಬೆಂಬಲ ಘೋಷಿಸಿದ್ದೇವೆ. ದೇಶದ ರಕ್ಷಣೆಗಾಗಿ ಕೇಂದ್ರವು ಹೋರಾಟಕ್ಕೆ ಇಳಿದರೆ, ನಾವು ಅದರ ಜತೆಗೆ ನಿಲ್ಲುತ್ತೇವೆ. ನಮ್ಮ ಈ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ.
-ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷ

ಯುದ್ಧ ಅವಶ್ಯಕತೆ ಇಲ್ಲ ಎಂಬ ಹೇಳಿಕೆ ಸಿಎಂ ಸಿದ್ದರಾಮಯ್ಯಗೆ ಶೋಭೆಯಲ್ಲ

ಹುಬ್ಬಳ್ಳಿ: ಪಾಕಿಸ್ತಾನದ ಜತೆ ಯುದ್ಧ ಅವಶ್ಯಕತೆಯಿಲ್ಲ ಎಂಬ ಸಿಎಂ ಸಿದ್ದರಾಮಯ್ಯ ಹೇಳಿಕೆ ಬಾಲಿಶತನದ ಹೇಳಿಕೆ. ಅವರಿಗೆ ಇಂತಹ ಮಾತು ಶೋಭೆ ತರುವುದಿಲ್ಲ. ಇದು ಮುಸ್ಲಿಂರ ಓಲೈಕೆ ಮಾಡುವಂತಹ ಹೇಳಿಕೆ ಎಂದು ಶಾಸಕ ಅರವಿಂದ ಬೆಲ್ಲದ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪಾಕಿಸ್ತಾನ ಮುಸ್ಲಿಂ ದೇಶವಾಗಿದೆ. ಆ ದೇಶದ ಮೇಲೆ ಯುದ್ಧ ಮಾಡುವುದರಿಂದ ಇಲ್ಲಿನ ಮುಸ್ಲಿಂರು ಏನಾದರೂ ತಿಳಿದುಕೊಳ್ಳುತ್ತಾರೆ ಅಂತಾ ಸಿದ್ದರಾಮಯ್ಯ ತಿಳಿದುಕೊಂಡಿದ್ದಾರೆ. ಹೀಗಾಗಿ ಈ ರೀತಿ ಹೇಳಿಕೆ ನೀಡುತ್ತಿದ್ದಾರೆ. ಭಾರತದ ಹಿತದೃಷ್ಟಿಯಿಂದ ಯಾವ ರೀತಿ ಪಾಕಿಸ್ತಾನವನ್ನು ಮಟ್ಟ ಹಾಕಬೇಕು ಆ ಕೆಲಸಗಳಾಗುತ್ತವೆ ಎಂದರು.

ಯಾವುದು ಸರಿ ಯಾವುದು ತಪ್ಪು ಅನ್ನೋ ಬಗ್ಗೆ ಪ್ರಧಾನಿ ಮೋದಿಯವರು ನಿರ್ಧಾರ ತೆಗೆದುಕೊಳ್ತಾರೆ. ಮತಬ್ಯಾಂಕ್ ರಾಜಕೀಯಕ್ಕಾಗಿ ಸಿದ್ದರಾಮಯ್ಯ ಅವರು ಈ ರೀತಿ ಪುಕ್ಕಟೆ ಹೇಳಿಕೆ ನೀಡಬಾರದು. ಖರ್ಗೆಯವರು ಸಹ ಈ ರೀತಿ ಹೇಳಿಕೆ ನೀಡಬಾರದು ಎಂದರು.

ಈ ಹಿಂದೆ ಕಾಂಗ್ರೆಸ್ ಪಕ್ಷದ ರಾಜ್ಯಭಾರ ಇದ್ದ ಸಂದರ್ಭ ಯಾವ ಪರಿಸ್ಥಿತಿ ಇತ್ತು? ಮೋದಿಯವರು ಅಧಿಕಾರಕ್ಕೆ ಬಂದಾಗಿನಿಂದ ಯಾವ ಪರಿಸ್ಥಿತಿ ಇದೆ ಅನ್ನೋದನ್ನು ಮನವರಿಕೆ ಮಾಡಿಕೊಳ್ಳಬೇಕು.

ರಾಷ್ಟ್ರದ ಸುರಕ್ಷತೆ ವಿಚಾರದಲ್ಲಿ ಕಾಂಗ್ರೆಸ್‌ನವರು ಅವಲೋಕನ ಮಾಡಿಕೊಳ್ಳಬೇಕು. ಪಾಕಿಸ್ತಾನವನ್ನು ಬಗ್ಗು ಬಡಿಯುವ ನಿಟ್ಟಿನಲ್ಲಿ ಕೇಂದ್ರ ಸರಕಾರ ದಿಟ್ಟ ನಿರ್ಧಾರ ತೆಗೆದುಕೊಳ್ಳುತ್ತದೆ. ಇದನ್ನು ರಾಜಕೀಯವಾಗಿ ಬಳಸಿಕೊಳ್ಳುವುದು ಸರಿಯಲ್ಲ. ದೇಶದ ರಕ್ಷಣೆ ವಿಚಾರವಾಗಿ ಕೇಂದ್ರ ಸರಕಾರ ಸೂಕ್ತ ನಿರ್ಧಾರ ಕೈಗೊಳ್ಳಲಿದೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಹುಲಿಯ ಚರ್ಮ ಹೊದ್ದ ನರಿ!

ಪಾಕಿಸ್ತಾನ ಬೆಂಬಲಿತ ಉಗ್ರರು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆಸಿದ ಪೈಶಾಚಿಕ ಕೃತ್ಯಕ್ಕೆ ತಕ್ಕ ಶಾಸ್ತಿ ಮಾಡುವ ಯತ್ನದ ಭಾಗವಾಗಿ ಭಾರತವು ಈಗ ಸಿಂಧೂ ನದಿ ನೀರಿನ ಹಂಚಿಕೆಯ ಒಪ್ಪಂದವನ್ನು ರದ್ದುಗೊಳಿಸಿದೆ. ಈ ಕ್ರಮದಿಂದ ಕೆರಳಿರುವ ಪಾಕಿಸ್ತಾನ, 'ಸಿಂಧೂ ನೀರು ಸ್ಥಗಿತಗೊಳಿಸಿದರೆ ಸುಮ್ಮನಿರುವುದಿಲ್ಲ; ನಾವು ಶಾಂತಿಪ್ರಿಯರು, ಆದರೆ ಅದು ನಮ್ಮ ದೌರ್ಬಲ್ಯವಲ್ಲ' ಎಂದೆಲ್ಲಾ ಬಡಬಡಿಸಿದೆ. ಭಾರತದ ರಾಜತಾಂತ್ರಿಕ ಚಾಟಿಯೇಟಿಗೆ ಏನು ಮಾಡಬೇಕೆಂದು ಗೊತ್ತಾಗದ ಪಾಕಿಸ್ತಾನ ಹೀಗೆಲ್ಲಾ ಪಟಾಕಿ ಹಾರಿಸುತ್ತಿರುವುದು ಸಹಜವೇ. ಆದರೆ 'ನಾವು ಶಾಂತಿಪ್ರಿಯರು' ಎಂಬ ಪಾಕಿಸ್ತಾನದ ಮಾತಿದೆಯಲ್ಲಾ, ಅದನ್ನು ಬಹಳಷ್ಟು ಪಾಕಿಸ್ತಾನೀಯರೇ ಒಪ್ಪುವುದಿಲ್ಲ ಎಂಬುದು ಹದಿನಾರಾಣೆ ಸತ್ಯ! ಇದೊಂಥರಾ 'ಹುಲಿಯ ಚರ್ಮವನ್ನು ಹೊದ್ದ ನರಿ'ಯು ಹುಲಿಯಂತೆಯೇ ಗರ್ಜಿಸಲು ಹೋಗಿ ಮುಖಭಂಗಕ್ಕೆ ಮತ್ತು ಫಜೀತಿಗೆ ಒಳಗಾದ ಕಥಾಪ್ರಸಂಗವನ್ನು ನೆನಪಿಸುವ ಪಾಕಿಸ್ತಾನದ ಬಯಲಾಟ ಎನ್ನಲಡ್ಡಿಯಿಲ್ಲ. ಸ್ವಸಮರ್ಥನೆಗೂ ಒಂದು ಮಿತಿಯುದೆ, ರೀತಿಯಿದೆ. ಆದರೆ ಈ ಪರಿಯ ಮುಟ್ಠಾಳತನವೇ?! 'ಶಾಂತಿ' ಮತ್ತು 'ಶಾಂತಿಪ್ರಿಯ' ಎಂಬ ಶಬ್ದಗಳನ್ನು ಉಚ್ಚರಿಸಲೂ ಯೋಗ್ಯತೆಯಿಲ್ಲದವರು ಅಂಥ ಮಾತುಗಳನ್ನಾಡಿದರೆ ಅದು ಅವರ 'ನರಿಬುದ್ಧಿ'ಯ ಅನಾವರಣವೇ ಹೊರತು 'ಗಿರಿಸದೃಶ' ವಿಶ್ವಾಸಾರ್ಹತೆಯ ದ್ಯೋತಕವಾಗುವುದಿಲ್ಲ. ಭಾರತದಂಥ ಶಾಂತಿಪ್ರಿಯ ರಾಷ್ಟ್ರದಲ್ಲಿ ಮುಂಬೈ ಬಾಂಬ್ ಸ್ಫೋಟ ಪ್ರಕರಣ ಸೇರಿದಂತೆ ನೂರಾರು ವಿಧ್ವಂಸಕ ಕೃತ್ಯಗಳನ್ನು ನಡೆಸಿದ್ದು ಪಾಕಿಸ್ತಾನವೇ ಎಂಬುದು ಜಗಜ್ಜಾಹೀರು ವಿಷಯ. ಇಂಥ ಅಂಗೈ ಹುಣ್ಣುಗಳಿಗೆ ಕನ್ನಡಿ ಯಂತೂ ಬೇಕಿಲ್ಲ. ಇಷ್ಟಾಗಿಯೂ ಪಾಕಿಸ್ತಾನ ತನ್ನತನದ ಮರುವ್ಯಾಖ್ಯಾನಕ್ಕೆ ಇಳಿದಿರುವುದು ವಿಶ್ವದ ಎಷ್ಟನೇ ಅದ್ಭುತವೋ?! ತನ್ನ ನಾಗರಿಕರಿಗೆ ಗೋಧಿಹಿಟ್ಟು ಮುಂತಾದ ಪಡಿತರವನ್ನೇ ವಿತರಿಸಲಾಗದೆ ಪತರಗುಟ್ಟುತ್ತಿರುವ ಪಾಕಿಸ್ತಾನವು ಭಾರತದ ಮೇಲೆ ಬಾಂಬ್ ದಾಳಿ ಮಾಡುವುದಾಗಿ ಅಬ್ಬರಿಸಿದೆ. ಉತ್ಪ್ರೇಕ್ಷೆಗೂ ಒಂದು ಮಿತಿ ಬೇಡವೇ?! ಪಾಕಿಸ್ತಾನವು ದಶಕಗಳಿಂದ ಉಗ್ರರಿಗೆ ತರಬೇತಿ ಮತ್ತು ಹಣಕಾಸು ನೆರವು ನೀಡುವ ಕೊಳಕು ಕೆಲಸ ಮಾಡುತ್ತಿದೆ ಎಂದು ಪಾಕಿಸ್ತಾನದ ರಕ್ಷಣಾ ಸಚಿವರೇ ಒಪ್ಪಿಕೊಂಡಿರುವಾಗ, ತಾನು ಶಾಂತಿಪ್ರಿಯ ಎಂದು ಹೇಳಿಕೊಳ್ಳುತ್ತಿದೆ ಪಾಕಿಸ್ತಾನ. ಛೀ... ನಾಚಿಕೆಗೇಡು!

ಸೊಂಪಾದಕೀಯ

ಎಲ್ಲಮ್ಮನ್ ದುಡ್ಡು, ಯಾರದ್ದೋ ಜಾತ್ರೆ

ಜನರಿಗೆ ದೇವರ ಬಗ್ಗೆ ಎಷ್ಟೇ ಭಕ್ತಿ ಇದ್ರೂ, ದೇವಸ್ಥಾನಗಳಲ್ಲಿ ಹುಂಡಿ ಕಳ್ಳತನ ಆಗೋದು ಮಾತ್ರ ಇನ್ನೂ ನಡೆಯುತ್ತಲೇ ಇದೆ. ಹಾಗಂತ ಭಗವಂತನನ್ನು ನಂಬುವವರು ಹುಂಡಿಗೆ ಹಣ ಹಾಕ್ತಾರೆ, ನಂಬದೇ ಇರುವವರು ಹುಂಡಿಯಿಂದ ಹಣ ಕದೀತಾರೆ ಅನ್ನೋ ಹಾಗೂ ಇಲ್ಲ. ಯಾಕಂದ್ರೆ ಕೆಲ ತಿಂಗಳ ಹಿಂದೆ ಸಿಕ್ಕಿಬಿದ್ದ ಖತರ್‌ನಾಕ್ ಕಳ್ಳನೊಬ್ಬ ಪ್ರತಿಸಲ ಕದ್ದಾಗಲೂ ತನ್ನ ಊರಿನ ದೇವಸ್ಥಾನಕ್ಕೆ ಹೋಗಿ ಅಲ್ಲಿನ ದೇವರಿಗೆ ತಪ್ಪುಕಾಣಿಕೆ ಹಾಕಿ, ಕದ್ದ ಬಂಗಾರವನ್ನು ಆಮೇಲೆ ಮಾರಾಟ ಮಾಡುತ್ತಿದ್ದನಂತೆ. ಇದಕ್ಕಿಂತ ಗಾಬರಿ ಬೀಳಿಸೋ ವಿಷಯ ಅಂದ್ರೆ, ಅವನು ಮೊದಲು ಅದೇ ದೇವಸ್ಥಾನದಲ್ಲಿ ಪೂಜಾರಿ ಆಗಿದ್ದನಂತೆ. ಹಾಗಾಗಿ ಹುಂಡಿಗೆ ಕನ್ನ ಹಾಕುವವರೆಲ್ಲ ನಾಸ್ತಿಕರು ಅನ್ನಂಗಿಲ್ಲ. ಒಟ್ಟಿನಲ್ಲಿ ಸುಲಭವಾಗಿ ಸಿಕ್ಕರೆ ದೇವರ ದುಡ್ಡನ್ನೂ ಕಳ್ಳರು ಬಿಡ್ತಾ ಇಲ್ಲ. ಕೆಲ ತಿಂಗಳ ಹಿಂದೆ ಎಲ್ಲಮ್ಮದೇವಿಯ ದೇವಸ್ಥಾನದ

ಹುಂಡಿಗೆ ಕನ್ನ ಹಾಕಿ ಕಳ್ಳರು ಎಲ್ಲವನ್ನೂ ದೋಚಿದ ಮೇಲೆ 'ಎಲ್ಲಮ್ಮನ್ ದುಡ್ಡು, ಯಾರದ್ದೋ ಜಾತ್ರೆ' ಅಂತ ಜನ ತಮಗೆ ತೋಚಿದಂತೆ ಮಾತಾಡಿದ್ದು ಕೇಳಿಬಂದಿತ್ತು. ಇದನ್ನೆಲ್ಲ ನೋಡಿಯೇ ಏನೋ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನ ದಲ್ಲಿ ಗರ್ಭಗುಡಿಯ ಬಾಗಿಲ ಸಂದಿನಲ್ಲಿ ಹಾವೊಂದು ಒಂದಷ್ಟು ದಿನ ಠಿಕಾಣಿ ಹೂಡಿತ್ತು. ಸಾಮಾನ್ಯವಾಗಿ ಹಾವುಗಳು ನಿಧಿ ಕಾಯುತ್ತವೆ ಅನ್ನೋದು ನಂಬಿಕೆಯ ಮಾತು. ಹಾಗಾಗಿ ಈಗ ನಾಗರಾಜ ಕೂಡಾ ದೇವಸ್ಥಾನದ ಹುಂಡಿಯನ್ನು ಕಾಯುತ್ತಾ ಅಲ್ಲೇ ಮೊಕ್ಕಾಂ ಹೂಡಿದ್ದನಾ ಅನ್ನೋ ಅನುಮಾನ ಬಂದರೆ ತಪ್ಪೇನಿಲ್ಲ. ಯಾಕಂದ್ರೆ, ಉರಗ ತಜ್ಞರು ಬಂದು ಎಷ್ಟೇ ಹರಸಾಹಸ ಮಾಡಿದರೂ ಹಾವು ಅಲ್ಲಿಂದ ಕದಲಲು ತಯಾರಿರಲಿಲ್ಲವಂತೆ. ಕೊನೆಗೆ ಹಾವನ್ನು ಅದರ ಪಾಡಿಗೆ ಬಿಟ್ಟು ಜನ ಎಂದಿನಂತೆ ದೇವರ ದರ್ಶನ ಮತ್ತು ಪೂಜೆಯಲ್ಲಿ ನಿರತರಾಗಿದ್ದರು. ಆದರೆ ಹಾವಿನ ಚಲನವಲನಗಳ ಮೇಲೆ ಸಿಸಿಟಿವಿ ಮೂಲಕ ನಿಗಾ ಇಡಲಾಗಿತ್ತಂತೆ. ಕೊನೆಗೆ ಒಂದು ರಾತ್ರಿ ಆ ಹಾವು ತನ್ನ ಜಾಗ ಬಿಟ್ಟು ದೇವಾಲಯದಿಂದ ಹೊರಹೋಗಿರುವ ದೃಶ್ಯ ಸಿಸಿಟಿವಿ ಫೂಟೇಜ್‌ನಿಂದ ಗೊತ್ತಾಯಿತು. ಆದರೆ, ಅಷ್ಟು ದಿನ ನಾಗಪ್ಪ ದೇವಸ್ಥಾನದ ಹುಂಡಿಗೆ ಸಿಸಿಟಿವಿ ಥರ ಕೆಲಸ ಮಾಡುತ್ತಿದ್ದನಾ ಅನ್ನೋದರ ಬಗ್ಗೆ ಮಾತ್ರ ಯಾವುದೇ ಫೂಟೇಜ್ ಇಲ್ಲದ ಕಾರಣ ಮಾಹಿತಿ ಸಿಕ್ಕಿಲ್ಲ.

ಸಂಪಾದಕರ ಸದ್ಯಶೋಧನೆ

ಅಪರಿಚಿತ, ಅಬ್ಬೇಪಾರಿ ದೇಶಗಳು!

ಪಿ.ವಿ.ನರಸಿಂಹರಾಯರು ಪ್ರಧಾನಿಯಾಗಿದ್ದಾಗ, ಆಫ್ರಿಕಾ ಖಂಡದ ಒಂದು ದೇಶಕ್ಕೆ ಹೋಗಿದ್ದರು. ಅದರ ಹೆಸರು ಬುರ್ಕಿನೋ ಫಾಸೊ. ಅಂಥ ಹೆಸರಿನ ಒಂದು ದೇಶ ಈ ಭೂಮಂಡಲದ ಮೇಲೆ ಇದೆಯೆಂಬುದೇ ಅನೇಕರಿಗೆ ಗೊತ್ತಿರಲಿಲ್ಲ. ಪ್ರಧಾನಿ ಅಲ್ಲಿಗೆ ಹೋದಾಗ ಅಲ್ಲಿಂದ ಸುದ್ದಿ ಬರಲಾರಂಭಿಸಿದಾಗ, ಕನ್ನಡ ಪತ್ರಿಕೆಗಳ ಸುದ್ದಿಮನೆಗಳ ಡೆಸ್ಕಿನಲ್ಲಿ ಕೆಲಸ ಮಾಡುವ ಉಪಸಂಪಾದಕರಿಗೆ ಅದನ್ನು ಹೇಗೆ ಉಚ್ಚರಿಸಿ ಬರೆಯಬೇಕೆಂಬುದು ಗೊತ್ತಾಗದೇ ಫಜೀತಿ ಅನುಭವಿಸುತ್ತಿದ್ದರು. ಆ ದೇಶದ ಹೆಸರು ಒಂದೊಂದು ಪತ್ರಿಕೆಯಲ್ಲಿ ಒಂದೊಂದು ರೀತಿಯಲ್ಲಿ ಪ್ರಕಟವಾಗಿತ್ತು. ನರಸಿಂಹರಾಯರಿಗಿಂತ ಮುಂಚೆ ಭಾರತದ ಪ್ರಧಾನಿಯಾಗಲಿ, ರಾಷ್ಟ್ರಪತಿಯಾಗಲಿ ಅಥವಾ ವಿದೇಶಾಂಗ ವ್ಯವಹಾರಗಳ ಖಾತೆ ಸಚಿವರಾಗಲಿ ಆ ದೇಶಕ್ಕೆ ಭೇಟಿ ನೀಡಿರಲಿಲ್ಲ. ನರಸಿಂಹರಾಯರ ನಂತರವೂ ಭಾರತದ ಮುಖ್ಯಸ್ಥರಾರೂ ಅಲ್ಲಿಗೆ ಹೋಗಿಲ್ಲ. ತೀರಾ ಕುಗ್ರಾಮ, ಅಪರಿಚಿತ ಅಥವಾ ಕಾಲ್ಪನಿಕ ಊರಿಗೆ ಟಿಂಬಕ್ಟು ಎನ್ನುವಂತೆ, ಇಂಥದೊಂದು ಊರು ಇದೆಯೋ ಇಲ್ಲವೋ ಎಂಬ ಅನುಮಾನ ತೋಡಿಕೊಳ್ಳುವಾಗ, 'ಬುರ್ಕಿನೋ ಫಾಸೊ' ಎಂದು ತಮಾಷೆಗೆ ಹೇಳುವುದುಂಟು. ಅದೇನು ನಮಗೆ ಗೊತ್ತಿಲ್ಲದ ಊರಾ? ಒಳ್ಳೆ ಕಥೆಯಾಯ್ತಲ್ಲ, ಬುರ್ಕಿನೋ ಫಾಸೊದಿಂದ ಬಂದವರ ಥರ ಆಡ್ತಾನೆ ಎಂದು ಕಿಚಾಯಿಸುವುದುಂಟು. ವಿಚಿತ್ರ ಏನು ಗೊತ್ತಾ? ಜಗತ್ತಿನ ಶೇ.81ರಷ್ಟು ಮಂದಿಗೆ ಬುರ್ಕಿನೊ ಫಾಸೊ ಎಂಬ ದೇಶ ಇದೆ ಎಂಬುದೇ ಗೊತ್ತಿಲ್ಲವಂತೆ. ಇತ್ತೀಚೆಗೆ ಅಂಥದೊಂದು ಸುದ್ದಿಯನ್ನು ಪತ್ರಿಕೆಯಲ್ಲಿ ನೋಡಿ ಸೋಜಿಗವಾಯಿತು. ನಮ್ಮ ಮಗ ಬುರ್ಕಿನೋ ಫಾಸೊದಲ್ಲಿದ್ದಾನೆ, ಮಗಳು-ಅಳಿಯ ಬುರ್ಕಿನೋ ಫಾಸೊದಲ್ಲಿದ್ದಾರೆ, ಮಗಳ ಬಾಣಂತನಕ್ಕೆ ಬುರ್ಕಿನೋ ಫಾಸೊಕ್ಕೆ ಹೋಗಿದ್ದೆವು, ನಾವೆಲ್ಲ ಸೇರಿ ಬುರ್ಕಿನೋ ಫಾಸೊಗೆ ಟೂರ್ ಹೋಗಿದ್ದೆವು ಎಂದು ಹೇಳಿದ ಒಬ್ಬೇ ಒಬ್ಬ ನರಮಾನವನನ್ನು ನಾನು ನೋಡಿಲ್ಲ ಅಥವಾ ಹಾಗೆ ಹೇಳಿದ್ದು ಕೇಳಿಲ್ಲ. ಅದೇ ಸಾಲಿಗೆ ಸೇರಿದ ಇನ್ನಿತರ ಕೆಲವು ದೇಶಗಳೆಂದರೆ ಮೈಕ್ರೋನೇಶಿಯಾ, ವನೌತು, ಟೋಂಗಾ, ಕಿರಿಬಾಟಿ, ತುವಾಲು, ನೌರು, ಪಲಾವು, ಸಮೋಅ, ಬೆಲಿಝು, ಹೊಂಡುರಾಸ್, ಏರಿಟ್ರಿಯಾ, ಚಾಡ್, ಕೇಪ್ ವರ್ಡೆ, ಕೋಟ್ ಡಿ ಐವೊರ್, ಟೋಗೊ, ಬೆನಿನ್ ಇತ್ಯಾದಿ. ಇವುಗಳ ಹೆಸರುಗಳನ್ನು ಕೇಳಿದರೆ, ಇಂಥ ದೇಶಗಳು ಇವೆಯಾ ಎಂದು ಯಾರಿಗಾದರೂ ಅನಿಸದೇ ಇರದು. ಅಮೆರಿಕನ್ ಸಮೋಅ ದೇಶದ ರಾಜಧಾನಿಯ ಹೆಸರು ಪ್ಯಾಗೋ ಪ್ಯಾಗೋ ಅಂತ. ಆ ಹೆಸರಿನ ನಗರವಿದೆಯೆಂದು ಜಗತ್ತಿಗೆ ಗೊತ್ತಾಗಿದ್ದು ಕೆಲವು ವರ್ಷಗಳ ಹಿಂದೆ. ನ್ಯೂಜಿಲೆಂಡಿನ ಆಕ್ಲೆಂಡ್‌ನಿಂದ (ಪ್ಯಾಗೋ ಪ್ಯಾಗೋ ಮಾರ್ಗವಾಗಿ) ಕ್ಯಾಲಿಫೋರ್ನಿಯಾದ ಲಾಸ್ ಏಂಜಲೀಸ್‌ಗೆ ಹೊರಟಿದ್ದ ವಿಮಾನ ಪ್ಯಾಗೋ ಪ್ಯಾಗೋ ವಿಮಾನ ನಿಲ್ದಾಣದಲ್ಲಿ ಅಪಘಾತಕ್ಕೀಡಾಗಿ ವಿಮಾನದಲ್ಲಿದ್ದ ಎಲ್ಲ 97 ಮಂದಿ ಮೃತಪಟ್ಟರು. ಆಗಲೇ ಅಂಥ ಹೆಸರಿನ ಊರಿದೆ ಎಂಬುದು ಹೊರಜಗತ್ತಿಗೆ ಗೊತ್ತಾಗಿದ್ದು. ಒಂದು ದೇಶ ಕೂಡ ಈ ರೀತಿ ಅಜ್ಞಾತವಾಗಿರುವುದು ಸೋಜಿಗವೇ. ಈ ಎಲ್ಲ ದೇಶಗಳಿಗಿಂತ ಸಿಂಗಾಪುರ ಇನ್ನೂ ಚಿಕ್ಕದು. ಆದರೆ ಅದಕ್ಕಿಂತ ದೊಡ್ಡ ಮತ್ತು ಪರಿಚಿತ ದೇಶಗಳು ಸಹ ತಾವು ಸಿಂಗಾಪುರದಂತೆ ಆಗಬೇಕು ಎಂದು ಬಯಸುವುದು ಚಿಕ್ಕ ದೇಶಗಳಿಗೆ ತೋರುದೀಪ ಆಗಬೇಕು. ಒಟ್ಟಾರೆ ಒಂದು ದೇಶ ಅಜ್ಞಾತವಾಗಿರುವುದು ಸೋಜಿಗವೇ.

ಹನುಮಂತ ಹಗ್ಗ ತಿನ್ನುವಾಗ ಪೂಜಾರಿಗೆಲ್ಲಿ ಶಾವಿಗೆ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ರಾಜ್ಯ ಬಿಜೆಪಿಯಲ್ಲಿರುವ ವಿಜಯೇಂದ್ರ ವಿರೋಧಿ ಪಡೆ ಮೌನಕ್ಕೆ ಜಾರಿದೆ. ಪಕ್ಷ ವಿರೋಧಿ ಚಟುವಟಿಕೆಯ ಹೆಸರಿನಲ್ಲಿ ಯತ್ನಾಳ್ ಅವರನ್ನು ವರಿಷ್ಠರು ಉಚ್ಚಾಟಿಸಿದ ನಂತರ ಅದು ಕುದಿಯುತ್ತಿದೆಯಾದರೂ ಮುಂದೇನು ಮಾಡಬೇಕು ಅಂತ ಅದಕ್ಕೆ ತೋಚುತ್ತಿಲ್ಲ. ಹಾಗಂತ ವಿಜಯೇಂದ್ರ ಅವರ ವಿರುದ್ಧ ಹೋರಾಡುವ ವಿಷಯದಲ್ಲಿ ಅದಕ್ಕೆ ಪ್ಲಾನುಗಳು ಇಲ್ಲವೆಂತಲ್ಲ. ವಸ್ತುಸ್ಥಿತಿ ಎಂದರೆ ರಾಜ್ಯ ಬಿಜೆಪಿಯ ಚುನಾವಣಾ ಉಸ್ತುವಾರಿ ವಹಿಸಿಕೊಂಡಿರುವ ಶಿವರಾಜ್ ಸಿಂಗ್ ಚೌಹಾಣ್ ಕರ್ನಾಟಕಕ್ಕೆ ಬಂದರೆ ವಿಜಯೇಂದ್ರ ವಿರುದ್ಧ ಹಲವು ದೂರುಗಳನ್ನು ಕೊಡಲು ಅದು ಸಜ್ಜಾಗಿ ನಿಂತಿದೆ.

ಮೊದಲನೆಯದಾಗಿ, ವಿಜಯೇಂದ್ರ ನಾಯಕತ್ವವನ್ನು ಸೀನಿಯರ್ ಲೀಡರುಗಳು ಒಪ್ಪುವುದಿಲ್ಲ. ಹೀಗಾಗಿ ಆಗಸ್ಟ್ ವೇಳೆಗೆ ಅವರ ಅಧ್ಯಕ್ಷಾವಧಿ ಮುಗಿಯುವುದರಿಂದ ಅವರ ಜಾಗಕ್ಕೆ ಬೇರೊಬ್ಬರನ್ನು ತರಬೇಕು ಎಂಬುದು ಭಿನ್ನರ ಮೊದಲ ವಾದ. ಇದೇ ರೀತಿ ಪಕ್ಷ ವಿರೋಧಿ ಚಟುವಟಿಕೆಯ ಹೆಸರಿನಲ್ಲಿ ಯತ್ನಾಳ್ ಅವರನ್ನೇನೋ ಉಚ್ಚಾಟನೆ ಮಾಡಿದಿರಿ. ಆದರೆ ವಿಜಯೇಂದ್ರ ಪರ ನಿಲ್ಲುವ ಭರದಲ್ಲಿ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಕೂಡಾ ಪಕ್ಷದ ಶಿಸ್ತನ್ನು ಉಲ್ಲಂಘಿಸಿದರು. ಹೀಗಾಗಿ ಅವರನ್ನೂ ಉಚ್ಚಾಟನೆ ಮಾಡಿ ಎಂಬುದು ಭಿನ್ನರ ಮತ್ತೊಂದು ಅಹವಾಲು. ಹಾಗಂತಲೇ ಏಪ್ರಿಲ್ 9ರಂದು ಶಿವರಾಜ್ ಸಿಂಗ್ ಚೌಹಾಣ್ ಕರ್ನಾಟಕಕ್ಕೆ ಬರುತ್ತಾರೆ ಅಂತ ದಿಲ್ಲಿಯಿಂದ ಸುದ್ದಿ ಬಂದಾಗ ಈ ಪಡೆ ಕಂಪ್ಲೇಂಟು ಮತ್ತು ಡಿಮಾಂಡುಗಳ ಪಟ್ಟಿ ರೆಡಿ ಮಾಡಿ ಕುಳಿತಿತ್ತು.

ಆದರೆ ಏಪ್ರಿಲ್ 9ರಂದು ಶಿವರಾಜ್ ಸಿಂಗ್ ಚೌಹಾಣ್ ಬರಲೇ ಇಲ್ಲ. ಚೆಕ್ ಮಾಡಿ ನೋಡಿದರೆ ಅವರು ಸದ್ಯಕ್ಕೆ ಬರುವ ಸೂಚನೆಗಳೂ ಕಾಣುತ್ತಿಲ್ಲ. ಕಾರಣ? ರಾಜ್ಯ ಬಿಜೆಪಿಯ ಗೊಂದಲ ಪರಿಹರಿಸಬೇಕಾದ ಮೋದಿ- ಅಮಿತ್ ಶಾ ಜೋಡಿಯೇ ಗೊಂದಲದಲ್ಲಿದೆ. ಅರ್ಥಾತ್, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಯಾರು ಬರಬೇಕು? ಎಂಬ ವಿಷಯದಲ್ಲಿ ಮೋದಿ-ಅಮಿತ್ ಶಾ ಒಂದು ಹೇಳಿದರೆ ಆರೆಸ್ಸೆಸ್ ವರಿಷ್ಠರು ಮತ್ತೊಂದು ಹೇಳುತ್ತಾ ಆ ಸಂಬಂಧದ ಎಪಿಸೋಡೇ ಕಲಸು ಮೇಲೋಗರವಾಗಿ ಹೋಗಿದೆ. ಈಗ ಕರ್ನಾಟಕದ ಬಿಜೆಪಿ ಭಿನ್ನರಿಗೆ ಸಿಕ್ಕ ಮಾಹಿತಿಯ ಪ್ರಕಾರ, ಮೋದಿ-ಅಮಿತ್ ಶಾ ಜೋಡಿಗೆ ತಮ್ಮ ಆಪ್ತರಾದ ಧರ್ಮೇಂದ್ರ ಪ್ರಧಾನ್ ಇಲ್ಲವೇ ಭೂಪೇಂದ್ರ ಯಾದವ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಲಿ ಎಂಬ ಮನಸ್ಸಿದೆ. ಆದರೆ ಆರೆಸ್ಸೆಸ್ ವರಿಷ್ಠರಿಗೆ ತಮ್ಮ ಪರಿವಾರದ ಶಿವರಾಜ್ ಸಿಂಗ್ ಚೌಹಾಣ್ ಅಧ್ಯಕ್ಷರಾಗಲಿ ಎಂಬ ಬಯಕೆ ಇದೆ. ಆರೆಸ್ಸೆಸ್‌ನ ಈ ಲೆಕ್ಕಾಚಾರಕ್ಕೆ ಬಹುಮುಖ್ಯ ಕಾರಣವೆಂದರೆ ಸೂಕ್ತ ಕಾಲದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ದಿಲ್ಲಿ ಗದ್ದುಗೆಯ ಮೇಲೆ ನೋಡುವ ಬಯಕೆ. ಮುಂದೆ ಅಂಥ ಪ್ರಕ್ರಿಯೆ ಶುರುವಾಗುವ ಕಾಲದಲ್ಲಿ ಪರಿವಾರಕ್ಕೆ ನಿಷ್ಠರಾದವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿರಬೇಕು ಎಂಬುದು ಈ ಬಯಕೆಯ ಹಿಂದಿರುವ ಲಾಜಿಕ್ಕು.

ಆದರೆ ಮೋದಿ-ಅಮಿತ್ ಶಾ ಜೋಡಿಗೆ ಭವಿಷ್ಯದ ಯಾವುದೇ ಬೆಳವಣಿಗೆಗಳು ತಮ್ಮಿಚ್ಛೆಯಂತೆ ನಡೆಯಬೇಕು ಮತ್ತು ಈ ಕಾರಣಕ್ಕಾಗಿ ತಾವು ಬಯಸಿದ ಧರ್ಮೇಂದ್ರ ಪ್ರಧಾನ್ ಅಥವಾ ಭೂಪೇಂದ್ರ ಯಾದವ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನದಲ್ಲಿರಬೇಕು ಎಂಬ ಲೆಕ್ಕಾಚಾರವಿದೆ. ಕುತೂಹಲದ ಸಂಗತಿ ಎಂದರೆ ಇಂಥದೇ ಕಾರಣಗಳಿಗಾಗಿ ದಿಲ್ಲಿಯಲ್ಲಿ ಸೆಟ್ಲಾಗಿರುವ ಆರೆಸ್ಸೆಸ್ ನಾಯಕ, ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಕೂಡಾ ಇಲ್ಲೇ ಇರಲಿ ಅಂತ ಅಮಿತ್ ಶಾ ಬಯಸುತ್ತಿದ್ದಾರೆ. ಆದರೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ತಾವು ಬಯಸಿದವರು ಕೂರಬೇಕು ಮತ್ತು ದಿಲ್ಲಿಯಲ್ಲಿ ಸೆಟ್ಲಾಗಿ ಅಮಿತ್ ಶಾ ಅವರಿಗೆ ಹತ್ತಿರವಾಗಿರುವ ಬಿ.ಎಲ್.ಸಂತೋಷ್ ಅವರನ್ನು ವಾಪಸ್ಸು ಕರೆಸಿಕೊಂಡು, ಆ ಜಾಗಕ್ಕೆ ಬೇರೆಯವರನ್ನು ತಂದು ಕೂರಿಸಬೇಕು ಅಂತ ಆರೆಸ್ಸೆಸ್ ಬಯಸಿದೆ. ಆದರೆ ರಾಷ್ಟ್ರ ರಾಜಕಾರಣ ವಿದ್ಯಮಾನಗಳ ನಡುವೆ ಈ ಪ್ರಕ್ರಿಯೆ ಮುಗಿಯುತ್ತಿಲ್ಲ. ಹೀಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಮುಗಿಯದ ಕಾರಣಕ್ಕಾಗಿ ಕರ್ನಾಟಕದ ಕಡೆ ಗಮನ ಹರಿಸುವ ಸ್ಥಿತಿಯೂ ಇಲ್ಲ. ಹೀಗಾಗಿ ಮುಂದೇನು ಮಾಡಬೇಕು ಅಂತ ತೋಚದೆ ಭಿನ್ನರ ಪಡೆ ಮೌನವಾಗಿದೆ. ಹನುಮಂತನೇ ಹಗ್ಗ ತಿನ್ನುವಾಗ ಪೂಜಾರಿಗೆಲ್ಲಿ ಶಾವಿಗೆ? ಅನ್ನುವುದು ಅವರ ಪರಿಸ್ಥಿತಿ. ಮುಂದೇನು ಕತೆಯೋ ಕಾದು ನೋಡಬೇಕು.

ಬಿಜೆಪಿಯಲ್ಲಿ ಈಗ ಲೆಟರ್ ವಾರ್

ಇನ್ನು ರಾಜ್ಯ ಬಿಜೆಪಿಯಲ್ಲೀಗ ವಿಜಯೇಂದ್ರ ವರ್ಸಸ್ ಅಶೋಕ್ ನಡುವಿನ ಸಮರದ್ದೇ ದೊಡ್ಡ ಸುದ್ದಿ. ಯತ್ನಾಳ್ ಆ್ಯಂಡ್ ಗ್ಯಾಂಗು ತಮ್ಮ ವಿರುದ್ಧ ಹೋರಾಡುತ್ತಿದ್ದ ಕಾಲದಲ್ಲಿ ಅಶೋಕ್ ತಮ್ಮ ಪರವಾಗಿ ನಿಲ್ಲಲಿಲ್ಲ ಎಂಬುದು ವಿಜಯೇಂದ್ರ ಅವರ ಸಿಟ್ಟಾದರೆ, ಪ್ರತಿಪಕ್ಷ ನಾಯಕರಾಗಿ ತಾವು ಎಫೆಕ್ಟಿವ್ ಆಗಿ ಕೆಲಸ ಮಾಡುತ್ತಿಲ್ಲ ಅಂತ ವಿಜಯೇಂದ್ರ ವರಿಷ್ಠರಿಗೆ ಹೇಳಿದ್ದಾರೆ ಎಂಬುದು ಅಶೋಕ್ ಸಿಟ್ಟು. ಹೀಗೆ ಉಭಯ ನಾಯಕರ ಮಧ್ಯೆ ಶುರುವಾದ ಕದನ ಈಗ ಟಾಪ್ ಲೆವೆಲ್ಲಿಗೆ ಬಂದಿದೆ.

ಇದರ ಭಾಗವಾಗಿ ವಿಜಯೇಂದ್ರ ಅವರ ಜನಾಕ್ರೋಶ ಯಾತ್ರೆಯ ಬಗ್ಗೆ ಅಶೋಕ್ ನಿರಾಸಕ್ತಿ ತೋರುತ್ತಿದ್ದರೆ, ಅಶೋಕ್ ಪ್ರತಿಪಕ್ಷ ನಾಯಕರಾಗಿ ಫೇಲ್ ಆಗಿದ್ದಾರೆ ಅಂತ ವಿಜಯೇಂದ್ರ ಗ್ಯಾಂಗು ಪತ್ರ ಚಳವಳಿ ಆರಂಭಿಸಿದೆ. ಈ ಚಳವಳಿಗೆ ಪೂರಕವಾಗಿ ಬೆಂಗಳೂರು ಮಹಾನಗರಪಾಲಿಕೆ ಎಪಿಸೋಡನ್ನು ಹಿಡಿದುಕೊಂಡಿರುವ ವಿಜಯೇಂದ್ರ ಗ್ಯಾಂಗು, 'ಪಾಲಿಕೆಯನ್ನು ಐದು ಹೋಳುಗಳನ್ನಾಗಿ ಮಾಡುವ ರಾಜ್ಯ ಸರಕಾರದ ವಿರುದ್ಧ ಅಶೋಕ್ ಎಫೆಕ್ಟಿವ್ ಆಗಿ ಹೋರಾಡುತ್ತಿಲ್ಲ' ಅಂತ ಪಕ್ಷದ ವರಿಷ್ಠರಿಗೆ ದೂರು ರವಾನಿಸುತ್ತಿದೆ.

ದೆಹಲಿಯಲ್ಲಿ ಪಾಲಿಕೆಯನ್ನು ವಿಭಜನೆ ಮಾಡಿದ ಕ್ರಮದಿಂದ ಆದ ಹಾನಿ ಏನು ಮತ್ತು ಆ ತಪ್ಪನ್ನು ಹೇಗೆ ಸರಿಪಡಿಸಲಾಯಿತು ಅನ್ನುವುದನ್ನು ಮುಖ್ಯವಾಗಿಟ್ಟುಕೊಂಡು ಅದೇ ಮಾದರಿಯಲ್ಲಿ ಅಶೋಕ್ ಹೋರಾಡಬೇಕಿತ್ತು. ರಾಜ್ಯಪಾಲರಿಗೆ ಕನ್ವಿನ್ಸ್ ಮಾಡಬೇಕಿತ್ತು. ಆದರೆ ಅಶೋಕ್ ಆ ಕೆಲಸ ಮಾಡುವ ಬದಲು ರಾಜ್ಯ ಸರಕಾರಕ್ಕೆ ಅನುಕೂಲವಾಗುವ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂಬುದು ಈ ಪತ್ರಗಳ ಸಾರ. ಇದು ಒಂದು ಕಡೆಯಾದರೆ, ಮತ್ತೊಂದು ಕಡೆ ವಿಜಯೇಂದ್ರ ಅವರ ಪರವಾಗಿ ಧ್ವನಿ ಎತ್ತುವ ವಾಟ್ಸ್ಯಾಪ್ ಗ್ರೂಪುಗಳು ಜನಾಕ್ರೋಶ ಯಾತ್ರೆಯ ಬಗ್ಗೆ ನಿರಾಸಕ್ತಿ ತೋರಿಸುತ್ತಿದ್ದಾರೆ ಅಂತ ಅಶೋಕ್ ವಿರುದ್ಧ ಲಕ್ಷ ಕುಂಕುಮಾರ್ಚನೆ ಮಾಡುತ್ತಾ ಕುಳಿತಿವೆ.

ಸಿದ್ದು ಸಂಪುಟಕ್ಕೆ ಮೈನರ್ ಸರ್ಜರಿ

ಈ ಮಧ್ಯೆ ಸಿದ್ದರಾಮಯ್ಯ ಸಂಪುಟಕ್ಕೆ ಮೈನರ್ ಸರ್ಜರಿ ಯಾಗುವ ಲಕ್ಷಣಗಳಿವೆ. ರಾಜ್ಯ ಸರಕಾರ ಅಸ್ತಿತ್ವಕ್ಕೆ ಬಂದು ಎರಡು ವರ್ಷ ಭರ್ತಿಯಾಗುತ್ತಿರುವಾಗ ಇಂಥ ಸರ್ಜರಿ ನಡೆದರೆ ಪಕ್ಷ ಮತ್ತು ಸರಕಾರದಲ್ಲಿ ಉತ್ಸಾಹ ಕಂಡು ಬರುತ್ತದೆ ಎಂಬುದು ಕಾಂಗ್ರೆಸ್ ಹೈಕಮಾಂಡ್ ಲೆಕ್ಕಾಚಾರ. ಹಾಗಂತಲೇ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಸಂದೇಶ ರವಾನಿಸಿರುವ ವರಿಷ್ಠರು, 'ಸಂಪುಟಕ್ಕೆ ಮೈನರ್ ಸರ್ಜರಿ ಮಾಡಲು ರೆಡಿಯಾಗಿ' ಎಂದಿದ್ದಾರೆ. ಮೂಲಗಳ ಪ್ರಕಾರ, ಸಿದ್ದರಾಮಯ್ಯ ಸಂಪುಟದ ನಾಲ್ಕು ಅಥವಾ ಐದು ಮಂದಿ ಮಂತ್ರಿಗಿರಿ ಕಳೆದುಕೊಳ್ಳಲಿದ್ದು, ಐದಾರು ಮಂದಿ ಸಂಪುಟಕ್ಕೆ ಸೇರ್ಪಡೆಯಾಗಲಿದ್ದಾರೆ. ಇದೇ ರೀತಿ ಪ್ರಮುಖ ಪ್ರತಿಪಕ್ಷ ಬಿಜೆಪಿ ಈಗಾಗಲೇ ಸರಕಾರದ ವಿರುದ್ಧ ರಾಜ್ಯಾದ್ಯಂತ ಹೋರಾಟ ಆರಂಭಿಸಿದ್ದು, ಇದಕ್ಕೆ ತಿರುಗೇಟು ನೀಡಲು ನಾವು ಸಜ್ಜಾಗಬೇಕು ಎಂಬುದು ಸುರ್ಜೇವಾಲಾ ತಂದ ಮತ್ತೊಂದು ಸಂದೇಶ. ಅಂದ ಹಾಗೆ, ಮೇ 20ರಂದು ಹೊಸಪೇಟೆಯಲ್ಲಿ ಅದ್ದೂರಿ ಸಾಧನಾ ಸಮಾವೇಶವನ್ನು ನಡೆಸಲಿರುವ ಕಾಂಗ್ರೆಸ್, ಇದಾದ ನಂತರ ರಾಜ್ಯದ ವಿವಿಧೆಡೆ ಇಂಥ ಸಮಾವೇಶಗಳನ್ನು ನಡೆಸಲು ತೀರ್ಮಾನಿಸಿದೆ.

ರಾಹುಲ್‌ಗೇಕೆ ಗಣತಿ ಬೇಕು?

ಇನ್ನು ರಾಜ್ಯ ಸಚಿವ ಸಂಪುಟದಲ್ಲಿ ಮಂಡನೆಯಾಗಿರುವ ಸಾಮಾಜಿಕ, ಶೈಕ್ಷಣಿಕ ಗಣತಿ ಕೆಲ ಸಚಿವರಿಗೆ ಇರುಸು ಮರಿಸು ಉಂಟು ಮಾಡಿರುವುದೇನೋ ನಿಜ. ಆದರೆ ಇದನ್ನವರು ವಿರೋಧಿಸುವ ಸ್ಥಿತಿಯಲ್ಲೂ ಇಲ್ಲ. ಕಾರಣ? ಮಂಡನೆಯಾಗಿರುವ ವರದಿ ರಾಜ್ಯದಲ್ಲಿ ಯಾವ ಜಾತಿ- ಜನಾಂಗದವರ ಸಂಖ್ಯೆ ಎಷ್ಟು ಅಂತ ಹೇಳಿರುವುದು. ಹೀಗೆ ಜಾತಿವಾರು ಜನರ ಪ್ರಮಾಣವನ್ನು ಹೇಳಿರುವಾಗ ತಾವು ಅದನ್ನು ವಿರೋಧಿಸಿದರೆ ಹಲವು ಜಾತಿಗಳ ಮತದಾರರು ತಮಗೆ ಉಲ್ಟಾ ಹೊಡೆಯಬಹುದು ಎಂಬುದು ಅವರ ಆತಂಕ. ಹೀಗಾಗಿ ವರದಿಯಲ್ಲಿ ಇಂಥ ಜಾತಿಗಳ ಜನಸಂಖ್ಯೆ ಪ್ರಮಾಣ ನಿಖರವಾಗಿ ನಮೂದಾಗಿಲ್ಲ ಎಂಬುದನ್ನೇ ಅವರು ಬೊಟ್ಟು ಮಾಡಿ ತೋರಿಸುತ್ತಿದ್ದಾರೆ.

ಇದು ಒಂದು ಕಡೆಗಾದರೆ ಮತ್ತೊಂದು ಕಡೆ ರಾಹುಲ್ ಗಾಂಧಿ ಅವರ ಆಸಕ್ತಿಯೇ ಈ ಸಚಿವರ ಪಾಲಿಗೆ ತಲೆನೋವಾಗಿದೆ. ಯಾಕೆಂದರೆ ಸಚಿವ ಸಂಪುಟದಲ್ಲಿ ಭಿನ್ನಾಭಿಪ್ರಾಯಗಳು ವ್ಯಕ್ತವಾಗುತ್ತಿವೆ ಎಂದರೂ ರಾಹುಲ್ ಗಾಂಧಿ ಕೇರ್ ಮಾಡುತ್ತಿಲ್ಲ, ಬದಲಿಗೆ ಸಣ್ಣ ಪುಟ್ಟ ಲೋಪಗಳಿದ್ದರೆ ಚರ್ಚಿಸಿ ಸರಿ ಮಾಡಿ. ಆದರೆ ಗಣತಿ ಮಾತ್ರ ಅಂಗೀಕಾರವಾಗಲೇಬೇಕು ಎಂಬುದು ರಾಹುಲ್ ಗಾಂಧಿ ಮೆಸೇಜು.

ಅಂದ ಹಾಗೆ, ಈ ವರದಿ ಅಂಗೀಕಾರವಾಗಬೇಕು ಅಂತ ರಾಹುಲ್ ಗಾಂಧಿ ಪಟ್ಟು ಹಿಡಿದಿರುವುದಕ್ಕೆ ಮತ್ತೊಂದು ಕಾರಣವಿದೆ. ಅದೆಂದರೆ ಇದು ಅಂಗೀಕಾರವಾದರೆ ಕರ್ನಾಟಕದ ಅಹಿಂದ ವರ್ಗಗಳಲ್ಲಿ ರಾಜಕೀಯ ಪ್ರಜ್ಞೆ ದಟ್ಟವಾಗುತ್ತದಲ್ಲದೆ, ತಮ್ಮಲ್ಲಿ ಇಂಥ ಪ್ರಜ್ಞೆ ಮೂಡಿಸಿದ ಕಾಂಗ್ರೆಸ್ ಪರವಾಗಿ ಅವರು ನಿಲ್ಲುತ್ತಾರೆ. ನಮ್ಮ ಜಾತಿಯ ಜನಸಂಖ್ಯೆ ಎಷ್ಟು ಎಂಬುದು ಅವರಿಗೆ ನಿಖರವಾಗಿ ಗೊತ್ತಾಗುವುದರಿಂದ ವ್ಯವಸ್ಥೆಯಲ್ಲಿ ತಮಗೆ ದಕ್ಕಬೇಕಾದ ಪಾಲೆಷ್ಟು ಎಂಬುದು ಅವರಿಗೆ ಮನದಟ್ಟಾಗುತ್ತದೆ ಮತ್ತು ಅದಕ್ಕಾಗಿ ಹೋರಾಡುವ ಗುಣ ಅವರಲ್ಲಿ ಬರುತ್ತದೆ. ಇದೇ ರಾಜಕೀಯ ಪ್ರಜ್ಞೆ. ಇಂಥ ಪ್ರಜ್ಞೆಯನ್ನು ಮೂಡಿಸಿದ ಕಾರಣಕ್ಕಾಗಿ ಅಹಿಂದ ವರ್ಗಗಳ ಮೆಜಾರ್ ಷೇರು ಕಾಂಗ್ರೆಸ್ ಪಕ್ಷದ ಜತೆ ನಿಲ್ಲುತ್ತವೆ. ಈ ಹಿಂದೆ ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದ ಹಲವು ಕಾರ್ಯಕ್ರಮಗಳು ಅಹಿಂದ ವರ್ಗಗಳಲ್ಲಿ ಒಂದು ಮಟ್ಟದ ಜಾಗೃತಿ ಮೂಡಿಸಿದ್ದಲ್ಲದೆ, ಕಾಂಗ್ರೆಸ್ಸಿನ ಮೂಲ ಮತಬ್ಯಾಂಕ್ ಆಗಿ ನೆಲೆಯಾದವು. ಇದರ ಪರಿಣಾಮವಾಗಿಯೇ ಕಾಂಗ್ರೆಸ್ ರಾಜ್ಯದಲ್ಲಿ ಮೂಲ ಮತಬ್ಯಾಂಕ್‌ನ ಶಕ್ತಿಯೊಂದಿಗೆ ಹೋರಾಡುತ್ತಾ ಬರಲು ಸಾಧ್ಯವಾಯಿತು. ಈಗ ಸಿದ್ದರಾಮಯ್ಯ ಮಂಡಿಸಿರುವ ಸಾಮಾಜಿಕ, ಶೈಕ್ಷಣಿಕ ಗಣತಿಯ ವರದಿಯೂ ಅಂಥದ್ದೇ ಪರಿಣಾಮವನ್ನುಂಟುಮಾಡುತ್ತದೆ ಎಂಬುದು ರಾಹುಲ್ ಗಾಂಧಿಯವರ ಯೋಚನೆ. ಅವರ ಈ ಯೋಚನೆ ಸಿದ್ದು ಸಂಪುಟದ ಕೆಲ ಸಚಿವರಿಗೆ ನುಂಗಲಾರದ ತುತ್ತಾಗಿದ್ದರೆ, ಇನ್ನು ಹಲವರಿಗೆ ಸಮಾಧಾನ ತಂದಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು!

''ಪಹಲ್ಗಾಮ್‌ನಲ್ಲಿ ಭಾರತೀಯ ಪ್ರವಾಸಿಗರನ್ನು ಹತ್ಯೆಗೈದಿರುವುದು ಪಾಕಿಸ್ತಾನದ 'ನಾಗರಿಕ'ರಲ್ಲ, ಉಗ್ರಗಾಮಿಗಳು. ಪ್ರತೀಕಾರದ ಕ್ರಮವಾಗಿ ಭಾರತ ಸರಕಾರವು ಸಿಂಧೂ ಜಲ

ಒಪ್ಪಂದವನ್ನು ಸ್ಥಗಿತಗೊಳಿಸುವುದರ ಬದಲು ಬೇರೆ 'ನಾಗರಿಕವಾದ' ಕ್ರಮಗಳನ್ನು ಕೈಗೊಳ್ಳಬೇಕಿತ್ತು'' ಎಂದು ಅನೇಕರು ಅಭಿಪ್ರಾಯಪಡುತ್ತಾರೆ. ಪಾಕಿಸ್ತಾನದ ನೆರವಿಲ್ಲದೆ, ಪಾಕ್ ಬಗ್ಗೆ ಮೃದುಧೋರಣೆ ಹೊಂದಿರುವ ಸ್ಥಳೀಯರ ಸಹಕಾರವಿಲ್ಲದೆ ಉಗ್ರರು ಜಮ್ಮು-ಕಾಶ್ಮೀರದಲ್ಲಿ ಇಂಥ ಹೇಯ ಕೃತ್ಯವನ್ನೆಸಗಲು ಸಾಧ್ಯವಾಗದು.

''ಪಾಕಿಸ್ತಾನವು ದಶಕಗಳಿಂದ ಉಗ್ರರಿಗೆ ತರಬೇತಿ ಮತ್ತು ಹಣಕಾಸು ನೆರವು ನೀಡುವ ಕೊಳಕು ಕೆಲಸ ಮಾಡುತ್ತಿದೆ'' ಎಂದು ಪಾಕಿಸ್ತಾನದ ರಕ್ಷಣಾ ಸಚಿವರೇ ಒಪ್ಪಿಕೊಂಡಿದ್ದಾರೆ. ಪಾಕಿಸ್ತಾನದ ಅನಪೇಕ್ಷಿತ, ಅಪ್ರಚೋದಿತ ಪುಲ್ವಾಮಾ ಮತ್ತು ಕಾರ್ಗಿಲ್ ದಾಳಿಗಳು, ಪಾಕ್‌ನ ಪೂರ್ಣನೆರವಿನಿಂದ ಮುಂಬೈನಲ್ಲಿ ನಡೆದ ಉಗ್ರರ ದಾಳಿ ಮತ್ತು ಸಂಸತ್ ಭವನದ ಮೇಲಿನ ದಾಳಿಗಳು ಈ ಮಾತನ್ನು ಪುಷ್ಟೀಕರಿಸುತ್ತವೆ ಮತ್ತು ತಾನು ನಂಬಿಕೆಗೆ ಅರ್ಹವಲ್ಲದ ದೇಶ ಎಂಬುದನ್ನು ಪಾಕಿಸ್ತಾನ ಸಾಬೀತುಪಡಿಸುತ್ತಲೇ ಬಂದಿದೆ. ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸಿರುವುದರಿಂದ ಪಾಕಿಗಳಿಗೆ ಸಮಸ್ಯೆಯಾಗುವುದೇನೋ ನಿಜ. ಆದರೆ ತಮ್ಮದೇ ಸರಕಾರದ ದರ್ಪ, ದುರ್ವರ್ತನೆ ಮತ್ತು ಭಾರತದ ವಿರುದ್ಧ ಉಗ್ರರನ್ನು 'ಛೂ' ಬಿಡುವ ಕಾರಣಕ್ಕಾಗಿ ಅವರು ಸ್ವಲ್ಪ ಮಟ್ಟಿನ ಸಮಸ್ಯೆಯನ್ನು ಎದುರಿಸಲೇಬೇಕು. ಉಗ್ರರಿಗೆ ಆಶ್ರಯತಾಣ ವಾಗಿರುವ ಮತ್ತು ಅವರ ಮೂಲಕ ಭಾರತದೊಡನೆ 'ಪ್ರಾಕ್ಸಿ ಯುದ್ಧ'ದಲ್ಲಿ ತೊಡಗಿಸಿಕೊಂಡಿರುವ ಪಾಕ್‌ನ ವಿಷಯದಲ್ಲಿ ಭಾರತದ ಸೌಮ್ಯಭಾಷೆ ಮತ್ತು ಪ್ರತಿಕ್ರಿಯೆಗಳು ಅಪ್ರಯೋಜಕ ಎಂಬುದು ಕಟುಸತ್ಯ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕಾದ ಅನಿವಾರ್ಯ ಸ್ಥಿತಿಗೆ ಪಾಕಿಸ್ತಾನವೇ ಭಾರತವನ್ನು ದೂಡಿದೆ. ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸಿರುವುದರಿಂದ ಬಾಧಿತರಾಗುವ ಪಾಕ್‌ನ ಪ್ರಜ್ಞಾವಂತರಾದರೂ ತಮ್ಮ ಸರಕಾರಕ್ಕೆ 'ಬುದ್ಧಿ' ಹೇಳಬಹುದು, ಪಾಠ ಕಲಿಸಬಹುದು ಎಂಬ ಆಶಾಭಾವವನ್ನು ಭಾರತೀಯರು ಇಟ್ಟುಕೊಳ್ಳಬಹುದೇನೋ!

- ಪುಟ್ಟೇಗೌಡ, ಬೆಂಗಳೂರು

ಉಗ್ರರ ದಮನವಾಗಲಿ

ಅಮಾಯಕ ಹಿಂದೂಗಳನ್ನು ಗುರಿಯಾಗಿಸಿಕೊಂಡು ಮತಾಂಧ ಉಗ್ರರು ನಡೆಸಿದ ದಾಳಿಯು, ಅವರ ಕ್ರೌರ್ಯವನ್ನು ಜಗತ್ತಿಗೆ ಮತ್ತೊಮ್ಮೆ ಪರಿಚಯಿಸಿದೆ. ಭಾರತವನ್ನು ತಮ್ಮ ತೆಕ್ಕೆಗೆ ಪಡೆಯಲು ಹಾಗೂ ತನ್ಮೂಲಕ ಭಾರತೀಯರ ನೆಮ್ಮದಿಯನ್ನು ಹಾಳುಮಾಡಲು ಬಾಹ್ಯ ಶಕ್ತಿಗಳು ಇಂಥ ವಿಧ್ವಂಸಕ ಕೃತ್ಯಗಳನ್ನು ಎಸಗುತ್ತಿರುವುದು ಇದೇ ಮೊದಲಲ್ಲ. ಪಾಕಿಸ್ತಾನ-ಪ್ರೇರಿತ ಇಂಥ ಎಲ್ಲ ಉಗ್ರ ಸಂಘಟನೆಗಳನ್ನು ನಿರ್ನಾಮ ಮಾಡುವುದು ಭಾರತದ ಆದ್ಯತೆಯಾಗಬೇಕು. ಉಗ್ರರಿಗೆ ಸಹಾಯ ಮಾಡುವ ಮತ್ತು ಅವರ ಬಗ್ಗೆ ಸಹಾನುಭೂತಿ ಹೊಂದಿರುವ ಸ್ಥಳೀಯ ರಿಗೂ, ಉಗ್ರರ ಕುಕೃತ್ಯಗಳನ್ನು ಖಂಡಿಸದವರಿಗೂ ಸರಿಯಾಗೇ ಬಿಸಿ ಮುಟ್ಟಿಸಬೇಕು. ಭಾರತದ ಭದ್ರತೆ, ಸಮಗ್ರತೆ, ಸುರಕ್ಷತೆಗೆ ಧಕ್ಕೆಯಾಗಬಾರದು ಎಂದಿದ್ದರೆ ಪಾಕಿಸ್ತಾನ ಮತ್ತು ಬಾಂಗ್ಲಾಗಳಿಂದ ಭಾರತದೊಳಗೆ ಅಕ್ರಮವಾಗಿ ನುಸುಳಿಕೊಂಡಿರುವವರನ್ನು ಶಾಶ್ವತವಾಗಿ ಹೊರದಬ್ಬಬೇಕು. ಜತೆಗೆ, ಭಯೋತ್ಪಾದಕರೊಂದಿಗೆ ಸಂಪರ್ಕ ಹೊಂದಿರುವ ಸಂಘಟನೆಗಳಿಗೆ ಅಂಕುಶ ಹಾಕಬೇಕು. ಮಾತ್ರವಲ್ಲದೆ, ರಾಷ್ಟ್ರದ ಹಿತದೃಷ್ಟಿಯಿಂದ ಭಯೋತ್ಪಾದನೆಯ ವಿರುದ್ಧ ಹಮ್ಮಿಕೊಳ್ಳಲಾಗುವ ಹೋರಾಟದಲ್ಲಿ ಭಾರತೀಯರೆಲ್ಲರೂ ತಮ್ಮ ಧರ್ಮ, ಜಾತಿ, ಪಂಗಡ, ಭಾಷೆ ಎಲ್ಲವನ್ನೂ ಮರೆತು ಕೈಜೋಡಿಸಬೇಕು.

- ಉದಯ ಮ.ಯಂಡಿಗೇರಿ, ಧಾರವಾಡ

'ಹೋಗಿ ನಿಮ್ಮ ಮೋದಿಗೆ ಹೇಳಿ' ಎಂದ ಆ ಮತಾಂಧ ರಾಕ್ಷಸ!

ಕಾಶ್ಮೀರದ ಸಮಸ್ಯೆಯನ್ನು ಮುನ್ನೆಲೆಗೆ ತರುವುದು ಉಗ್ರರ ಷಡ್ಯಂತ್ರವಾಗಿತ್ತು; ಇದರ ಭಾಗವಾಗಿ ಮತ್ತು ಬದಲಾಗುತ್ತಿದ್ದ ಕಾಶ್ಮೀರ ಕೈಬಿಟ್ಟು ಹೋಗುತ್ತಿರುವ ಆತಂಕದಿಂದಾಗಿ ಉಗ್ರರು ಪಹಲ್ಗಾಮ್‌ನಲ್ಲಿ 26 ಪ್ರವಾಸಿಗರನ್ನು ಗುಂಡಿಟ್ಟು ಕೊಂದರು. ತಾವು ನಿಶ್ಚಯಿಸಿದಾಗ ಅಮಾಯಕರ ಹತ್ಯೆಗೈಯಲು ಸಮರ್ಥರು ಎಂಬ ಸ್ಪಷ್ಟ ಸಂದೇಶ ಅವರು ಭಾರತ ಸರಕಾರಕ್ಕೆ ರವಾನಿಸಿದ್ದಾರೆ.

ಪ್ರಕಾಶಪಥ

ಪ್ರಕಾಶ್ ಶೇಷರಾಘವಾಚಾರ್

vveditoped@gmail.com

ಪಹಲ್ಗಾಮ್‌ನ ಬೈಸಾರನ್ ಕಣಿವೆಯಲ್ಲಿ ಭಯೋತ್ಪಾದಕರು ನರಮೇಧ ನಡೆಸಿದರಲ್ಲವೇ? ಈ ವೇಳೆ ಉಗ್ರನೊಬ್ಬ ಶಿವಮೊಗ್ಗದ ಮಂಜುನಾಥ್‌ರನ್ನು ಕೊಂದ ನಂತರ ಅವರ ಪತ್ನಿ ಪಲ್ಲವಿಯವರಿಗೆ ''ಹೋಗಿ ನಿಮ್ಮ ಮೋದಿಗೆ ಹೇಳಿ...'' ಎಂದನಂತೆ. ಇಸ್ಲಾಮಿಕ್ ಭಯೋತ್ಪಾದಕರ, ಕಲ್ಪನೆಗೂ ಮೀರಿದ ರಾಕ್ಷಸ ಪ್ರವೃತ್ತಿ, ಮನುಷ್ಯತ್ವದ ಲವಲೇಶವೂ ಇಲ್ಲದ ಮತಾಂಧತೆಯ ಕ್ರೂರ ವರ್ತನೆಯು ನಾಗರಿಕ ಸಮಾಜವನ್ನು ಬೆಚ್ಚಿ ಬೀಳಿಸಿದೆ. ಧರ್ಮವನ್ನು ಕೇಳಿ ಅಥವಾ 'ಕಲ್ಮಾ ಹೇಳಿ' ಎಂದು ಕೇಳಿ 26 ಜನರನ್ನು ಗುಂಡಿಟ್ಟು ಕೊಂದ ದುರುಳರ ಅಟ್ಟಹಾಸದಿಂದಾಗಿ ಭಾರತೀಯರ ರಕ್ತ ಕುದಿಯುವಂತಾಗಿದೆ.

ಕಾಶ್ಮೀರದ ಆಹ್ಲಾದಕರ ವಾತಾವರಣದಲ್ಲಿ ಕುಟುಂಬದೊಂದಿಗೆ ವಿಹರಿಸಲು ಹೋಗಿದ್ದವರನ್ನು ಮಕ್ಕಳ ಮುಂದೆಯೇ ಮತ್ತು ಮಧುಚಂದ್ರಕ್ಕೆ ತೆರಳಿದ್ದ ನವಜೋಡಿಯ ಪೈಕಿ ಪತಿಯನ್ನು ಪತ್ನಿಯ ಎದುರೇ ಹತ್ಯೆಗೈದು ತಮ್ಮ ರಾಕ್ಷಸೀ ಗುಣವನ್ನು ಉಗ್ರರು ವಿಜೃಂಭಿಸಿದ್ದಾರೆ. ಗಂಡನ ಕಳೇಬರದ ಮುಂದೆ ನಿಸ್ಸಹಾಯಕಳಾಗಿ ಕಣ್ಣೀರಿಡುತ್ತ ಕುಳಿತಿದ್ದ ನವವಿವಾಹಿತೆಯ ದೃಶ್ಯವು ನಿರ್ದಯಿಯ ಕಣ್ಣನ್ನೂ ತೇವವಾಗಿಸುವಂಥದ್ದು. ಆದರೇನು, ಧರ್ಮದ ಅಫೀಮನ್ನು ಸೇವಿಸಿದವರಿಗೆ ರಾಕ್ಷಸೀ ಪ್ರವೃತ್ತಿಯೇ ಉಸಿರು! ಮಕ್ಕಳ ಮುಂದೆಯೇ ತಂದೆಯನ್ನು ಕೊಂದ ಪಾತಕಿಗಳು, ಆ ಎಳೆಯ ಮನಸ್ಸಿನ ಮೇಲೆ ಮಾಡಿದ ಗಾಯವು ಊಹೆಗೆ ನಿಲುಕದ್ದು. ಕರುಣೆಯೇ ಇಲ್ಲದ ಮತಾಂಧತೆಯ ಭೂತವನ್ನು ಮೈಮೇಲೆ ಆವಾಹಿಸಿಕೊಂಡಿದ್ದ ಈ ಪಾಪಿಗಳಿಗೆ ಇಂಥ ಭೀಕರ ಕೃತ್ಯವನ್ನೆಸಗಲು ಅದಿನ್ಯಾವ ಮಟ್ಟಿಗಿನ ತರಬೇತಿ ನೀಡಿರಬೇಕು?! ಸ್ಥಳೀಯರು ಸಕ್ರಿಯವಾಗಿ ಕೈಜೋಡಿಸದೆ ಇಂಥ ಘನಘೋರ ಕೃತ್ಯವನ್ನು ಕೈಗೊಳ್ಳಲು ಅಸಾಧ್ಯ. ಅಭಿವೃದ್ಧಿಯ ಫಲವನ್ನು ಅನುಭವಿಸಿಯೂ ಪ್ರತ್ಯೇಕತಾವಾದದ ಅಮಲಿನಲ್ಲೇ ಇರುವ ಶಕ್ತಿಗಳು ಭಯೋತ್ಪಾದಕರಿಗೆ ನೀಡಿದ ಸಹಕಾರದಿಂದಾಗಿಯೇ ಇಂಥ ರಕ್ತದೋಕುಳಿ ಹರಿದಿದೆ ಎಂಬುದರಲ್ಲಿ ಅನುಮಾನವಿಲ್ಲ.

ಕಾಶ್ಮೀರದಲ್ಲಿ ಭಯೋತ್ಪಾದಕತೆಯು ಕೊನೆಯಾಗಿರಲಿಲ್ಲ, ಆದರ ಪ್ರಮಾಣ ತಗ್ಗಿತ್ತು. ಪಾಕ್‌ನಿಂದ ನುಸುಳಿ ಬಂದ ಉಗ್ರರು ಸುರಕ್ಷಾ ಸಿಬ್ಬಂದಿಗಳ ಮೇಲೆ ಆಗಾಗ್ಗೆ ದಾಳಿ ನಡೆಸುತ್ತಿದ್ದರಾದರೂ ಪ್ರವಾಸಿಗರ ತಂಟೆಗೆ ಹೋಗಿರಲಿಲ್ಲ. ಪ್ರವಾಸಿಗರ ಮೇಲೆರಗಿದರೆ ಸ್ಥಳೀಯರು ಮಣ್ಣು ತಿನ್ನಬೇಕಾಗುತ್ತದೆ ಎಂಬ ಕಾರಣಕ್ಕೆ ಅವರು ಹೀಗೆ ದೂರವುಳಿದಿದ್ದರು. ಕಳೆದ 5 ವರ್ಷದಿಂದ ಪ್ರವಾಸಿಗರು ಕಣಿವೆಯಲ್ಲಿ ನಿರ್ಭಯವಾಗಿ ಸಂಚರಿಸಲು ಸಾಧ್ಯವಾಗಿತ್ತು, 2024ರಲ್ಲಿ 2.35 ಕೋಟಿಗೂ ಹೆಚ್ಚು ಪ್ರವಾಸಿಗರು ಕಾಶ್ಮೀರಕ್ಕೆ ಭೇಟಿ ನೀಡಿದ್ದರು. ಭಯೋತ್ಪಾದನೆ ಅಡಗಿ ಪರಿಸ್ಥಿತಿ ಸುಧಾರಣೆಯಾಗಿದೆ ಎಂದು ನಂಬಿ ಪ್ರವಾಸಿಗರು ಮುಗಿಬಿದ್ದು ಹೋಗುತ್ತಿದ್ದರು. ಕಾಶ್ಮೀರದ ಪ್ರವಾಸೋದ್ಯಮದಿಂದಾಗಿ ಆದಾಯವು 24,000 ಕೋಟಿ ರು. ಮೀರಲಿದೆ ಎಂದು ಅಂದಾಜಿಸಲಾಗಿತ್ತು.

2020ರ ಫೆಬ್ರವರಿಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತಕ್ಕೆ ಭೇಟಿ ನೀಡಿದಾಗ, ಕೇಂದ್ರ ಸರಕಾರಕ್ಕೆ ಮುಜುಗರ ಉಂಟುಮಾಡುವ ದುರುದ್ದೇಶದೊಂದಿಗೆ ದೆಹಲಿಯಲ್ಲಿ ಕೋಮು ಗಲಭೆಯನ್ನು ಸಂಘಟಿಸಲಾಗಿತ್ತು. ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರು ಇತ್ತೀಚೆಗೆ ಭಾರತ ಭೇಟಿಗೆ ಆಗಮಿಸಿದ್ದ ಸಂದರ್ಭದಲ್ಲಿ, ಕಾಶ್ಮೀರದ ಸಮಸ್ಯೆಯನ್ನು ಮುನ್ನೆಲೆಗೆ ತರುವುದು ಉಗ್ರರ ಷಡ್ಯಂತ್ರವಾಗಿತ್ತು; ಇದರ ಭಾಗವಾಗಿ ಮತ್ತು ಬದಲಾಗುತ್ತಿದ್ದ ಕಾಶ್ಮೀರ ಕೈಬಿಟ್ಟು ಹೋಗುತ್ತಿರುವ ಆತಂಕದಿಂದಾಗಿ ಉಗ್ರರು ಪಹಲ್ಗಾಮ್‌ನಲ್ಲಿ 26 ಪ್ರವಾಸಿಗರನ್ನು ಗುಂಡಿಟ್ಟು ಕೊಂದರು. ತಾವು ನಿಶ್ಚಯಿಸಿದಾಗ ಅಮಾಯಕರ ಹತ್ಯೆಗೈಯಲು ಸಮರ್ಥರು ಎಂಬ ಸ್ಪಷ್ಟ ಸಂದೇಶವನ್ನು ಅವರು ಭಾರತ ಸರಕಾರಕ್ಕೆ ರವಾನಿಸಿದ್ದಾರೆ. ಸದರಿ ಉಗ್ರರ ಕುರಿತಾಗಿ ಮಕ್ಕಳು, ಹಿರಿಯರು ಹೇಳಿದ ಸಂಗತಿ ಎದೆಯನ್ನು ನಡುಗಿಸುವಂಥದ್ದು. ಶಿವಮೊಗ್ಗದ ಮಂಜುನಾಥ್ ಅವರ ಪತ್ನಿ ಈ ಕುರಿತು ಮಾತನಾಡಿ, ''ನನ್ನ ಕಣ್ಣೆದುರಿಗೇ ಪತಿಯ ತಲೆಗೆ ಗುಂಡಿಟ್ಟು ಕೊಂದರು, ನೀವು ಹಿಂದೂಗಳಾ ಎಂದು ಕೇಳಿ ಮಿಕ್ಕ ಗಂಡಸರನ್ನು ಕೊಂದರು. ಅಸ್ಸಾಂನ ಪ್ರೊಫೆಸರ್ ಒಬ್ಬರು 'ಕಲ್ಮಾ' ಪಠಿಸಿ ಪ್ರಾಣ ಉಳಿಸಿಕೊಂಡರು. ಸೇನಾಧಿಕಾರಿಗಳ ಪ್ರಕಾರ 20ಕ್ಕೂ ಹೆಚ್ಚು ಮಂದಿಯ ಧರ್ಮ ತಿಳಿಯಲು ಅವರ ಪ್ಯಾಂಟ್ ಅನ್ನು ಕಳಗೆಳೆಯಲಾಗಿತ್ತು'' ಎಂದಿದ್ದಾರೆ.

ಈ ಘಟನೆಯ ನಂತರದ ಪರಿಣಾಮದಿಂದ ತಲ್ಲಣಗೊಂಡಿದ್ದ ಮೋದಿ ವಿರೋಧಿಗಳು, 'ಅಂದಿನ ಸಂಕಟದ ಸಮಯದಲ್ಲಿ ಕಾಶ್ಮೀರಿಗಳು ಪ್ರವಾಸಿಗರನ್ನು ಕಾಪಾಡಿದರು, ಬೆನ್ನ ಮೇಲೆ ಮಗುವನ್ನು ಎತ್ತಿಕೊಂಡು ಕಾಪಾಡಿದ್ದಾರೆ, ಹಿಂದೂ-ಮುಸ್ಲಿಂ ನಡುವೆ ಕಂದಕವಿರಲಿಲ್ಲ' ಎಂಬೆಲ್ಲಾ ಸುದ್ದಿಗೆ ಒತ್ತುಕೊಟ್ಟು, ಉಗ್ರರ ಕ್ರೌರ್ಯದಿಂದಾದ 26 ಜನರ ಸಾವನ್ನು ಗೌಣವಾಗಿಸಿ ವಿಷಯಾಂತರ ಮಾಡತೊಡಗಿದ್ದಾರೆ. ಕಾಶ್ಮೀರ ಕಣಿವೆಯು ಮುಸ್ಲಿಮರ ಬಾಹುಳ್ಯವಿರುವ ಪ್ರದೇಶ. ಈಗ ತಮ್ಮದೇ ದೇಶದ ನಾಗರಿಕರು, ಅತಿಥಿಯಾಗಿ ಬಂದವರು ತೊಂದರೆಯಲ್ಲಿದ್ದಾಗ ಅವರು ನೆರವು ನೀಡಿರುವುದು ಪ್ರಶಂಸನೀಯ. ಆದರೆ ಅಮಾನುಷ ಹತ್ಯೆಯ ಪ್ರಸಂಗವನ್ನು ನೇಪಥ್ಯಕ್ಕೆ ಸರಿಸಿ, ವಿಷಯಾಂತರದ ದುರುದ್ದೇಶದಿಂದ ಕಾಶ್ಮೀರಿಗಳ ಗುಣಗಾನಕ್ಕೆ ಅದನ್ನು ಬಳಸಿಕೊಳ್ಳುತ್ತಿರುವುದು ಅಸಹ್ಯಕರವಾಗಿದೆ.

ಕಾಶ್ಮೀರದ ಆರ್ಥಿಕತೆಗೆ ಪ್ರವಾಸೋದ್ಯಮದಿಂದ ಗಮನಾರ್ಹ ಕೊಡುಗೆಯಿದೆ, ಹೀಗಾಗಿ ಅಲ್ಲಿನವರು ಹಣದ ಥೈಲಿಯ ಪ್ರವಾಸಿಗರನ್ನು ನಿರ್ಲಕ್ಷಿಸುವಷ್ಟು ಮೂರ್ಖರಲ್ಲ. ಪ್ರವಾಸಿಗರ ಹಿತ ಕಾಯುವುದರಲ್ಲೇ ತಮ್ಮ ಭವಿಷ್ಯವಿದೆ ಎಂಬ ಸ್ಪಷ್ಟ ತಿಳಿವಳಿಕೆ ಅವರಿಗಿದೆ. ಯಾವುದೇ ಅಪಾಯಕ್ಕೆ ಸಿಲುಕದೆ, ಕಣಿವೆಯಿಂದ ಅದೃಷ್ಟವಶಾತ್ ಸುರಕ್ಷಿತವಾಗಿ ಮರಳಿದವರು ಸ್ಥಳೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿದ್ದಾರೆ ಮತ್ತು ಅವರಲ್ಲಿ ಅನೇಕರು 'ಸ್ಟಾಕ್ ಹೋಮ್ ಸಿಂಡ್ರೋಮ್'ಗೆ ಒಳಗಾಗಿ ಹೊಗಳಿರುವುದು ಸಹಜ ವರ್ತನೆಯೇ. ಆದರೆ, ಅಮಾನುಷವಾಗಿ ಗುಂಡೇಟಿಗೆ ಬಲಿಯಾದವರ ಬಗ್ಗೆ ಸಹಾನುಭೂತಿ ತೋರುವುದಕ್ಕಿಂತ, ಪ್ರವಾಸವನ್ನು ಮೊಟಕುಗೊಳಿಸಿ ಸುರಕ್ಷಿತವಾಗಿ ಮರಳಿದವರು ಕಾಶ್ಮೀರಿಗಳನ್ನು ಪ್ರಶಂಸಿಸಿದ್ದನ್ನು ಕೆಲವರು ಬಂಡವಾಳ ಮಾಡಿಕೊಂಡು, ಅಂದು ನಡೆದ ದುರ್ಘಟನೆಯನ್ನು ತೆರೆಮರೆಗೆ ತಳ್ಳುವ ಕುತಂತ್ರ ಮಾಡುತ್ತಿದ್ದಾರೆ. ಉಗ್ರರು ಪ್ರವಾಸಿಗರ ಧರ್ಮವನ್ನು ಕೇಳಿ ಹತ್ಯೆಗೈದಿದ್ದನ್ನು ಹಲವರು ದೃಢಪಡಿಸಿದ್ದರೂ ಕೆಲವು ಕಾಂಗ್ರೆಸ್ಸಿಗರು ಇದನ್ನು ಅಲ್ಲಗಳೆದು, ''ಕೇವಲ ಎರಡು ಧರ್ಮದವರ ನಡುವೆ ಕಂದಕ ನಿರ್ಮಿಸಲು ಬಿಜೆಪಿ ಮತ್ತು ಹಿಂದೂ ಸಂಘಟನೆಗಳು ಯತ್ನಿಸುತ್ತಿವೆ'' ಎಂಬ ಅಪಪ್ರಚಾರದಲ್ಲಿ ತೊಡಗಿದ್ದಾರೆ. ''ಈ ರೀತಿಯ ಘಟನೆ ಸುಳ್ಳು'' ಎಂಬ ಕಾಂಗ್ರೆಸ್‌ನ ನಾಯಕರೊಬ್ಬರ ಮಾತಿಗೆ ಮತ್ತೊಬ್ಬ ನಾಯಕರು ದನಿಗೂಡಿಸುತ್ತಾರೆ. ಕಾಂಗ್ರೆಸ್‌ನ ವಕ್ತಾರರೊಬ್ಬರು ಹೀಗೆಯೇ ಮಾತನಾಡಿ ಹುತಾತ್ಮರ ಕುಟುಂಬಗಳಿಗೆ ಅಪಮಾನ ಮಾಡಿದ್ದಾರೆ. ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಕಾರ್ಯಕರ್ತರು, ''ಧರ್ಮದ ಆಧಾರದ ಮೇಲೆ ಹತ್ಯೆ ನಡೆದಿಲ್ಲ, ಇದು ಬಿಜೆಪಿಯ ಕುತಂತ್ರ'' ಎಂದು ಬೇಜವಾಬ್ದಾರಿಯಿಂದ ಟೀಕಿಸಿದ್ದಾರೆ. ಭೀಕರ ಕೃತ್ಯ ನಡೆಸಿದ ಉಗ್ರರ ಪರವಾಗಿ ಇವರೆಲ್ಲಾ ಹೀಗೆ ವಕಾಲತ್ತು ವಹಿಸಿ ಅವರ ವಕ್ತಾರರಂತೆ ಕೆಲಸ ಮಾಡುತ್ತಿರುವುದು ಶೋಚನೀಯ ಸಂಗತಿ. ಉಗ್ರರ ಗುಂಡಿಗೆ ಬಲಿಯಾದ ಬೆಂಗಳೂರಿನ ಭರತ್ ಭೂಷಣ್‌ರವರ ಪತ್ನಿ ಡಾ.ಸುಜಾತರವರು, ''ನನ್ನ ಗಂಡನಿಗೆ ಏಕಾಏಕಿ ಗುಂಡು ಹೊಡೆದು ಕೊಂದರು, ಅವರು ಧರ್ಮ ಕೇಳಲಿಲ್ಲ'' ಎಂದು ತಮ್ಮ ಅನುಭವವನ್ನು ಹೇಳಿಕೊಂಡರೆ, ಕಾಂಗ್ರೆಸ್ಸಿಗರು ಆ ವಿಡಿಯೋವನ್ನು ಹಂಚಿಕೊಂಡು, 'ಕೊಂದವರು ಧರ್ಮವನ್ನು ಕೇಳಿಲ್ಲ' ಎಂದು ಪ್ರಚಾರಕ್ಕಿಳಿದಿದ್ದಾರೆ. ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಇನ್ನೊಂದಿಲ್ಲ. ಆದರೆ, ಉಗ್ರರ ಕೈಯಲ್ಲಿದ್ದ ರೈಫಲ್ ಕಿತ್ತುಕೊಳ್ಳಲು ಹೋಗಿ ಪಹಲ್ಗಾಮ್ ಪೋನಿ ರೈಡರ್ ಸೈಯದ್ ಆದಿಲ್ ಹುಸೇನ್ ಶಾ ತನ್ನ ಪ್ರಾಣತ್ಯಾಗ ಮಾಡಿದ ಎಂದಾಗ, ಅದನ್ನು ಯಾರೂ ಅನುಮಾನಿಸದೆ ಅವನ ಬಲಿದಾನವನ್ನು ಗೌರವಿಸಿದ್ದೇವೆ ಎಂಬುದನ್ನು ಮರೆಯಬಾರದು.

2002ರಲ್ಲಿ, ಗೋಧ್ರಾ ರೈಲು ನಿಲ್ದಾಣದಲ್ಲಿ ಬೋಗಿಗೆ ಬೆಂಕಿ ಹಚ್ಚಿ ಕರಸೇವಕರನ್ನು ಜೀವಂತ ಸುಟ್ಟು ಹಾಕಿದ ಘಟನೆ ಗೊತ್ತಿರುವಂಥದ್ದೇ. ಈ ಸಂಬಂಧವಾಗಿ 2004ರಲ್ಲಿ ಅಂದಿನ ಯುಪಿಎ ಸರಕಾರ ಜಸ್ಟಿಸ್ ಯು.ಸಿ.ಬ್ಯಾನರ್ಜಿ ಆಯೋಗವನ್ನು ನೇಮಿಸಿ, 'ಬೋಗಿಗೆ ಹೊರಗಡೆಯಿಂದ ಯಾರೂ ಬೆಂಕಿಯನ್ನೇ ಹಚ್ಚಿಲ್ಲ' ಎಂಬುದಾಗಿ ವರದಿ ತರಿಸಿಕೊಂಡಿತು. 2008ರಲ್ಲಿ ನಡೆದ ದೆಹಲಿಯ ಬಾಟ್ಲಾ ಎನ್‌ಕೌಂಟರ್ ವೇಳೆ ದೆಹಲಿ ಪೊಲೀಸ್ ಅಧಿಕಾರಿ ಮೋಹನ್ ಚಂದ್ ಶರ್ಮಾ ಹುತಾತ್ಮರಾದರು, ಅಡಗಿದ್ದ ನಾಲ್ವರು ಉಗ್ರರನ್ನು ಕೊಲ್ಲಲಾಯಿತು. ಆದರೆ, 'ಇದೊಂದು ನಕಲಿ ಎನ್‌ಕೌಂಟರ್' ಎನ್ನುವ ಮೂಲಕ ಅಂದಿನ ಕಾಂಗ್ರೆಸ್ ಮುಖಂಡರೇ ಉಗ್ರರ ಪರವಾಗಿ ನಿಂತರು. ಇಶ್ರತ್ ಜಹಾನ್ ಎಂಬ ಭಯೋತ್ಪಾದಕಿಯು ಪೊಲೀಸ್ ಎನ್‌ಕೌಂಟರ್‌ನಲ್ಲಿ ಸತ್ತಾಗ, ಅವಳನ್ನು 'ಅಮಾಯಕಿ' ಎಂದು ಬಿಂಬಿಸಿ, ಸಿಬಿಐ ತನಿಖೆ ನಡೆಸಿ, ದೇಶದ ಬೇಹುಗಾರಿಕಾ ಸಂಸ್ಥೆಯನ್ನು ಕಟಕಟೆಯಲ್ಲಿ ನಿಲ್ಲಿಸಲು ಯುಪಿಎ ಸರಕಾರ ಮುಂದಾಗಿತ್ತು. ಎಂಥ ವಿಚಿತ್ರ ನೋಡಿ- ಉಗ್ರರಿಂದ ಹಿಂದೂಗಳು ಸತ್ತರೆ ಅವರ ಬಲಿದಾನಕ್ಕೆ ಬೆಲೆ ನೀಡದೆ ವಿಷಯಾಂತರ ಮಾಡಿ ಉಗ್ರರಿಗೆ ಕ್ಲೀನ್‌ಚಿಟ್ ನೀಡುತ್ತಾರೆ; ಪೊಲೀಸ್ ಎನ್‌ಕೌಂಟರ್ ನಲ್ಲಿ ಮುಸ್ಲಿಂ ಸತ್ತರೆ ಅದನ್ನು ನಕಲಿ ಎನ್‌ಕೌಂಟರ್ ಎಂದು ತಿರುಚುವ ಮೂಲಕ ಢೋಂಗಿ ಜಾತ್ಯತೀತವಾದಿಗಳು ಉಗ್ರರನ್ನು ಬೆಂಬಲಿಸುತ್ತಾರೆ! ಪ್ರಧಾನಿ ಮೋದಿಯವರು ಕಳೆದ 10 ವರ್ಷಗಳಲ್ಲಿ ಬಲಿಷ್ಠ ಭಾರತವನ್ನು ನಿರ್ಮಿಸಿರುವುದು, ಜಮ್ಮು-ಕಾಶ್ಮೀರದಲ್ಲಿ ಅಭಿವೃದ್ಧಿಯ ಮಹಾಪೂರವಾಗಿರುವುದು, ದೇಶವನ್ನು ವಿಭಜಿಸಲು ಹವಣಿಸುತ್ತಿರುವ ಶಕ್ತಿಗಳಿಗೆ ಹತಾಶೆ ಉಂಟುಮಾಡಿದೆ. ಹೀಗಾಗಿಯೇ ಅಮಾಯಕರ ಮಾರಣಹೋಮ ನಡೆಸಿ 'ನಿಮ್ಮ ಮೋದಿಗೆ ಹೇಳಿ' ಎಂದು ಅವರು ಒದರಿರುವುದು!

ಪಹಲ್ಗಾಮ್‌ನಲ್ಲಿನ ಮಾರಣಹೋಮ ಪ್ರತಿಯೊಬ್ಬ ಭಾರತೀಯರನ್ನೂ ವಿಚಲಿತಗೊಳಿಸಿದ್ದು, ಪ್ರತೀಕಾರಕ್ಕಾಗಿ ಅವರು ಹಾತೊರೆಯುತ್ತಿದ್ದಾರೆ. ಪಹಲ್ಗಾಮ್‌ನಲ್ಲಿ ರಕ್ತಹರಿಸಿದವರಿಗೂ, ಅವರ ಹಿಂದಿನ ಶಕ್ತಿಗಳಿಗೂ ಮರೆಯಲಾಗದ ಪೆಟ್ಟು ಬೀಳಬೇಕು ಎಂದು ನಿರೀಕ್ಷಿಸುತ್ತಿದ್ದಾರೆ.

(ಲೇಖಕರು ಬಿಜೆಪಿಯ ವಕ್ತಾರರು)

ಭಟ್ಟರ್ ಸ್ಕಾಚ್

- **ಸುಮಿತ್ರಾ ನಾರಾಯಣ, ಬೆಂಗಳೂರು**
ಭಟ್ರೇ, ನನ್ನ ವಾರಭವಿಷ್ಯದಲ್ಲಿ 'ಸುಗಮ ಸಂಚಾರ ಯೋಗ' ಎಂದಿದೆ. ನೀವಾದರೂ ಬಿಡಿಸಿ ಹೇಳಬಾರದಾ?
- **ಹಾಗಾದ್ರೆ ಬಿಎಂಟಿಸಿ ಬಸ್ಸಿನಲ್ಲಿ ಹಾಗೂ ಮೆಟ್ರೋದಲ್ಲಿ ಯಾರಿಗೂ ಕಿಂಚಿತ್ತೂ ತಾಕಿಸಿಕೊಳ್ಳದೇ ಪ್ರಯಾಣ ಮಾಡುವ ಭಾಗ್ಯ ಒದಗಿಬಂದಿದೆ!**

- **ಸಂದೀಪ ನಾಯಕ, ಬೆಂಗಳೂರು**
ಭಟ್ರೇ, ದಿನವೂ ಇಪ್ಪತ್ತು ನಿಮಿಷ ಧ್ಯಾನ ಮಾಡಬೇಕಂತೆ. ಇಲ್ಲದಿದ್ದರೆ ಏನು ಮಾಡಬೇಕು?
- **ಒಂದು ಗಂಟೆ ಧ್ಯಾನ ಮಾಡಬೇಕು!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ದಿನಾ ಸಾಯಂಕಾಲ ತನ್ನ ಹೆಂಡತಿಗೆ ಹೂ ತೆಗೆದುಕೊಂಡು ಹೋಗುವ ಗಂಡ ಈಗಲೂ ಇದಾನಾ?
- **'ತನ್ನ ಹೆಂಡತಿಗೆ' ಎಂದು ಬರೆಯದಿದ್ದರೆ ಉತ್ತರಿಸುತ್ತಿದ್ದೆ!**

- **ಡಾ.ಆನಂದ ಕುಲಿಗೋಡ, ಧಾರವಾಡ**
ಭಟ್ರೇ, ನೀವು ಮುಂದಿನ ಜನ್ಮದಲ್ಲಿ ಏನಾಗಬಯಸುತ್ತೀರಿ?
- **ಈ ಜನ್ಮದಲ್ಲಿ ಕಲಿತಿದ್ದು ವೇಸ್ಟ್ ಆಗಬಾರದಲ್ಲ, ಹೀಗಾಗಿ ಸಂಪಾದಕನೇ ಆಗಿ ಮುಂದುವರಿಯಬಯಸುವೆ!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ದಡ್ಡನಂತೆ ಇರು ದಡ ಸೇರುವವರೆಗೂ ಅಂತ ಹಿರಿಯರೊಬ್ಬರು ಹೇಳ್ತಿರ್ತಾರಲ್ಲ?
- **ಸಮಸ್ಯೆ ಅಂದ್ರೆ ಕೆಲವರು ದಡ ಸೇರಿದ ನಂತರವೂ ಹಾಗೆ ಇದ್ದುಬಿಡ್ತಾರೆ!**

- **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ನಿಜಜೀವನದಲ್ಲಿ ಗಂಡ-ಹೆಂಡತಿ ಯಾಕೆ ಡುಯೆಟ್ ಹಾಡುವುದಿಲ್ಲ?
- **ಅವನ್ನು ನೋಡಲು, ಕೇಳಲು ಬೇರೆಯವರಿಗೆ ಬಿಡು, ಅವರಿಬ್ಬರಿಗೂ ಪುರುಸೊತ್ತಿರುವುದಿಲ್ಲ!**

- **ವಾದಿರಾಜ ದಂಡಿನ, (ಇಮೇಲ್ ಮೂಲಕ)**
ಭಟ್ರೇ, ಬಸ್ಸು, ಚಲಿಸುವ ಟ್ರೇನುಗಳಿಗೆ ಕಲ್ಲು ಹೊಡೆಯುವವರಿಗೆ ಯಾವ ಶಿಕ್ಷೆ ಕೊಡಬೇಕು?
- **ದೇಶದ ಗಡಿ ಕಾಯುವ ಶಿಕ್ಷೆ ಕೊಟ್ರೆ ಹೇಗೆ ?**

ಇವರೆಲ್ಲ ಒಂದೇ ಸುಳ್ಳಿನ ಮಾರಾಟಗಾರರೇ!

ವಾರದಿಂದ ವಾರಕ್ಕೆ ನಿಮ್ಮ ತ್ವಚೆಯಲ್ಲಿ ಯಾವ ರೀತಿಯ ಬದಲಾವಣೆಯಾಗುತ್ತದೆ ಎಂದು ಪ್ಯಾಕೆಟ್ ಮೇಲೆ ಮುದ್ರಿಸುವ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಬಳಸಿ ಇದುವರೆಗೆ ಬೆಳ್ಳಗಾದವರ ಲೆಕ್ಕ ಕೊಟ್ಟಿಲ್ಲ. ಜೂಹಿ ಚಾವ್ಲಾ, ಪ್ರಿಯಾಂಕಾ ಚೋಪ್ರಾ, ದೀಪಿಕಾ ಪಡುಕೋಣೆ, ಜಾನ್ ಅಬ್ರಹಾಂ, ಶಾಹಿದ್ ಕಪೂರ್‌ರನ್ನು ಜಾಹೀರಾತಿನಲ್ಲಿ ತೋರಿಸಿದರೇ ವಿನಾ ಸದಾಶಿವ ಅಮ್ರಪೂರ್ಕರ್, ನಾನಾ ಪಾಟೇಕರ್‌ರನ್ನು ತೋರಿಸಲಿಲ್ಲ.

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಯಾವುದು ಸರಿ? ಎಲ್ಲಿಯವರೆಗೆ ಮಾರುವವರು ಇರುತ್ತಾರೆ ಅಲ್ಲಿಯವರೆಗೆ ಸುಳ್ಳನ್ನೂ ಕೊಂಡುಕೊಳ್ಳುವವರು ಇರುತ್ತಾರೆ ಎನ್ನುವುದೋ ಅಥವಾ ಎಲ್ಲಿಯವರೆಗೆ ಕೊಂಡುಕೊಳ್ಳುವವರು ಇರುತ್ತಾರೋ ಅಲ್ಲಿಯವರೆಗೆ ಸುಳ್ಳನ್ನೂ ರಾಜಾರೋಷವಾಗಿ ಮಾರಬಹುದು ಎಂಬುದೋ? ಎರಡೂ ಸತ್ಯ. ಆದರೆ ಸತ್ಯವನ್ನು ಮಾರುವುದು ಕಷ್ಟ, ಸುಳ್ಳನ್ನು ಮಾರುವುದೇ ಸುಲಭ. ಸತ್ಯಕ್ಕೆ ಸತ್ವಪರೀಕ್ಷೆಯ ಸವಾಲುಗಳು ಹೆಚ್ಚು. ಸುಳ್ಳಿಗೆ ಹಾಗಲ್ಲ, ಅಮಾಯಕರನ್ನು, ಅವಶ್ಯಕತೆ ಇರುವವರನ್ನು ನಂಬಿಸಿದರೆ ಸಾಕು. ಅದು ಸುಲಭದ ಕೆಲಸ. ಅದಕ್ಕೇ ಸುಳ್ಳು ಮಸಾಲೆ ಮಂಡಕ್ಕಿಯಂತೆ ಮಾರಾಟವಾದರೆ, ಸತ್ಯವು ಮೊಸರಲ್ಲಿ ಬಿದ್ದ ವಡೆಯಂತೆ ತಣ್ಣಗೆ ಕುಳಿತಿರುತ್ತದೆ.

ಸುಳ್ಳಿಗೆ ಯಾವ ಜವಾಬ್ದಾರಿಯೂ ಇಲ್ಲ, ಅದಕ್ಕೆ ಹೆಚ್ಚಿನ ಬೆಲೆಯೂ ಇಲ್ಲ, ಅದು ಬಹುಕಾಲ ಬದುಕುವುದೂ ಇಲ್ಲ. ಆಜನ್ಮ ಪರ್ಯಂತ ಬದುಕುವುದಿದ್ದರೆ ಅದು ಸತ್ಯ ಮಾತ್ರ. ಆದರೆ, ಮನುಷ್ಯನ ಬದುಕೇ ಕೆಲವು ವರ್ಷಗಳಿಗೆ ಸೀಮಿತವಾಗಿರುವಾಗ, ಇರುವಷ್ಟು ದಿನ ಖುಷಿಯಾಗಿ ಇರೋಣ ಎಂಬ ಕಾರಣಕ್ಕೆ ಅರಿತೋ, ಅರಿಯದೆಯೋ ಸುಳ್ಳನ್ನು ಅಪ್ಪಿಕೊಳ್ಳುವವರಿಗೆ ಬರವಿಲ್ಲ. ಅದನ್ನು ನಗದೀಕರಿಸಿಕೊಳ್ಳುವವರಿಗೂ ಕೊರತೆಯಿಲ್ಲ. ಇದು ವ್ಯಾಪಾರಕ್ಕೂ ಹೊರತಲ್ಲ. ಹಾಗೆ ನೋಡಿದರೆ ಸಂಸಾರ, ಸ್ನೇಹ, ಸಂಬಂಧ, ಸಮಾಜ ಸಾಹಿತ್ಯ, ಕಲೆ ಇತ್ಯಾದಿಗಳಿಗಿಂತ ಸುಳ್ಳು ಹೆಚ್ಚು ಖರ್ಚಾಗುವುದು ವ್ಯಾಪಾರದಲ್ಲಿ.

'ಯುನಿಲಿವರ್' ಎಂದರೆ ಕೆಲವರಿಗೆ ಥಟ್ಟನೆ ತಿಳಿಯಲಿಕ್ಕಿಲ್ಲ. ಲಕ್ಸ್ ಸಾಬೂನು, ಲಿಪ್ಟನ್ ಚಹಾ, ವಾಲ್ಸ್ ಐಸ್ ಕ್ರೀಮ್ ಎಂದರೆ ಪಟ್ಟನೆ ಅರ್ಥವಾಗುತ್ತದೆ. ಅವೆಲ್ಲ ಯುನಿಲಿವರ್ ಸಂಸ್ಥೆಯ ಉತ್ಪನ್ನಗಳು. ನೋರ್ ಸೂಪಿನಿಂದ ಮ್ಯಾಗ್ನಮ್ ಐಸ್‌ಕ್ರೀಮ್‌ವರೆಗೆ, ಸನ್‌ಸಿಲ್ಕ್ ಶಾಂಪೂವಿನಿಂದ ರೆಕ್ಸೋನಾ ದುರ್ಗಂಧಹರ (ಡಿಯೋಡರೆಂಟ್) ದವರೆಗೆ, ಲೈಫ್‌ಬಾಯ್ ಸಾಬೂನಿನಿಂದ ಹಿಡಿದು ಓಮೊ ಮಾರ್ಜಕ (ಡಿಟರ್ಜೆಂಟ್) ಪುಡಿಯವರೆಗೆ ಯುನಿಲಿವರ್ ಸಂಸ್ಥೆಯ ಕೊಡುಗೆಗಳೇ. ವ್ಯಾಸಲೀನ್, ಪೆಪ್ಸೊಡೆಂಟ್, ಕ್ಲೋಸ್‌ಅಪ್, ಹಾರ್ಲಿಕ್ಸ್, ಬ್ರೂಕ್‌ಬಾಂಡ್, ಪಾಂಡ್ಸ್ ಪೌಡರ್ ಇತ್ಯಾದಿಗಳೆಲ್ಲ ಯುನಿಲಿವರ್‌ನ ಉತ್ಪಾದನೆಗಳೇ. ಸಂಸ್ಥೆ ಬೇರೆ ಬೇರೆ ವಿಭಾಗಗಳಲ್ಲಿ ಸುಮಾರು 400ಕ್ಕೂ ಹೆಚ್ಚು ಬಗೆಯ ವಸ್ತುಗಳನ್ನು ಉತ್ಪಾದಿಸುತ್ತದೆ. ಪ್ರಪಂಚದಾದ್ಯಂತ ಸುಮಾರು 190 ದೇಶಗಳಲ್ಲಿ ಈ ಸಂಸ್ಥೆಯ ಉತ್ಪನ್ನಗಳು ಇಂದು ಲಭ್ಯವಿವೆ. ಸುಮಾರು 70 ಬಿಲಿಯನ್ ಯೂರೋ ಮೌಲ್ಯದ ಆಸ್ತಿ ಹೊಂದಿರುವ ಸಂಸ್ಥೆಗೆ ಪ್ರತಿವರ್ಷ 50 ಬಿಲಿಯನ್ ಯೂರೋ ಆದಾಯವಿದೆ. ಇದರ ಜತೆಗೆ, ವಿಶ್ವದಾದ್ಯಂತ ಸುಮಾರು ಒಂದೂವರೆ ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನೂ ಸಂಸ್ಥೆ ಒದಗಿಸಿಕೊಟ್ಟಿದೆ.

ಯುನಿಲಿವರ್ ಹುಟ್ಟಿಕೊಂಡದ್ದು 1929ರಲ್ಲಿ. ಅಡುಗೆ ಉತ್ಪನ್ನಗಳನ್ನು ತಯಾರಿಸುತ್ತಿದ್ದ ನೆದರ್‌ಲ್ಯಾಂಡ್‌ನ ಮಾರ್ಜರೀನ್ ಯೂನಿ ಮತ್ತು ಸಾಬೂನು ತಯಾರಿಸುತ್ತಿದ್ದ ಬ್ರಿಟಿಷ್ ಸಂಸ್ಥೆ, ಲಿವರ್ ಬ್ರದರ್ಸ್ ಸೇರಿ ಇಂಗ್ಲೆಂಡಿನಲ್ಲಿ ಆರಂಭಿಸಿದ ಕಂಪನಿ ಯುನಿಲಿವರ್. ದಶಕದ ಒಳಗೆ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಕ್ಕೂ ತನ್ನ ವ್ಯಾಪ್ತಿಯನ್ನು ಹಬ್ಬಿಸಿಕೊಂಡಿತು.

1930ರ ದಶಕದಲ್ಲಿ ಸಂಸ್ಥೆ ಭಾರತಕ್ಕೂ ಕಾಲಿಟ್ಟಿತು. ಹಿಂದೂಸ್ತಾನ್ ವನಸ್ಪತಿ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಎಂಬ ಹೆಸರಿನಲ್ಲಿ ನೋಂದಾಯಿಸಿಕೊಂಡು, ಡಾಲ್ಡಾ ಉತ್ಪಾದಿಸಲು ಆರಂಭಿಸಿತು. ಆರಂಭವಾದ 25 ವರ್ಷದ ನಂತರ 'ಹಿಂದೂಸ್ತಾನ್ ಲಿವರ್ ಲಿಮಿಟೆಡ್' ಎಂದು, ಅದಾಗಿ ಸುಮಾರು ಐವತ್ತು ವರ್ಷದ ನಂತರ 'ಹಿಂದೂಸ್ತಾನ್ ಯೂನಿಲಿವರ್ ಲಿಮಿಟೆಡ್' ಎಂದೂ ಮರುನಾಮಕರಣ ಮಾಡಿಕೊಂಡಿತು. ಇಂದು ಭಾರತದಲ್ಲಿಯೇ ಸುಮಾರು ಇಪ್ಪತ್ತೊಂದು ಸಾವಿರಕ್ಕೂ ಹೆಚ್ಚು ಜನ ಈ ಸಂಸ್ಥೆಗಾಗಿ ದುಡಿಯುತ್ತಿದ್ದಾರೆ. ಸಂಸ್ಥೆ ಪ್ರತಿ ವರ್ಷ ನಲವತ್ತು ಸಾವಿರ ಕೋಟಿ ರುಪಾಯಿಯ ಆದಾಯ ಗಳಿಸುತ್ತಿದೆ. ಭಾರತೀಯರು ಬಳಸುವ ಸಾಬೂನು, ಡಿಟರ್ಜೆಂಟ್, ಚಹಾಗಳಲ್ಲಿ ಯುನಿಲಿವರ್ ವಸ್ತುಗಳ ದೊಡ್ಡ ಪಾಲಿದೆ. ಶೇ.60ರಷ್ಟು ಭಾರತೀಯರು ಯುನಿಲಿವರ್‌ನ ಈ ಮೂರು ವಿಭಾಗದ ವಸ್ತುಗಳನ್ನು ಬಳಸುತ್ತಾರೆ. ಭಾರತದ ಜನಸಂಖ್ಯೆಯ ಶೇಕಡಾ ತೊಂಬತ್ತೆಂಟರಷ್ಟು ಮಂದಿ ಜೀವನದಲ್ಲಿ ಒಮ್ಮೆಯಾದರೂ ಯುನಿಲಿವರ್ ಸಂಸ್ಥೆಯ ಒಂದಿಲ್ಲೊಂದು ವಸ್ತುವನ್ನು ಬಳಸುತ್ತಾರೆ ಎಂಬ ಮಾತಿದೆ. ಇರಲಿ, ಅದೆಲ್ಲದೂ ಒಳ್ಳೆಯದೇ. ಆದರೆ, ಇಷ್ಟೊಂದು ಒಳ್ಳೆಯ ಉತ್ಪನ್ನಗಳನ್ನು ಕೊಟ್ಟ ಸಂಸ್ಥೆ ಸೌಂದರ್ಯವರ್ಧಕದ ಹೆಸರಿನಲ್ಲಿ ಕೆಲವು ವಸ್ತುಗಳನ್ನು ಮಾರುಕಟ್ಟೆಗೆ ತಂದದ್ದಕ್ಕೆ ಕಾರಣ ಹಣದ ಹೊರತು ಇನ್ನೇನೂ ಕಾರಣ ಕಾಣುವುದಿಲ್ಲ.

1975ರ ವೇಳೆಗೆ ಸಂಸ್ಥೆಯ 'ಫೇರ್ ಆ್ಯಂಡ್ ಲವ್ಲಿ' ಉತ್ಪನ್ನಗಳು ಭಾರತದ ಅಂಗಡಿ-ಮುಂಗಟ್ಟುಗಳನ್ನು ತಟ್ಟಿದವು. ಭಾರತದಲ್ಲಿ ಸಂಸ್ಥೆಯ ಉತ್ಪನ್ನಗಳನ್ನು ಬಹುತೇಕ ಪುರುಷರೇ ಖರೀದಿಸುತ್ತಿದ್ದು, ಮಹಿಳೆಯರು ಯುನಿಲಿವರ್ ಉತ್ಪನ್ನಗಳ ಕಡೆ ಹೆಚ್ಚಿನ ಗಮನ ಕೊಡುತ್ತಿರಲಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರು ಆಗಲೇ ಸೌಂದರ್ಯವರ್ಧಕ ಉತ್ಪನ್ನದ ಕಡೆಗೆ ಆಕರ್ಷಿತರಾಗಿದ್ದನ್ನು ಸಂಸ್ಥೆ ಗಮನಿಸಿತ್ತು. ಭಾರತದ ಮಹಿಳೆಯರನ್ನು ತಾನು ಉತ್ಪಾದಿಸುವ ವಸ್ತುವಿನೆಡೆಗೆ ಸೆಳೆಯುವುದಕ್ಕೆ ಆ ಕಾಲದಲ್ಲಿ ಇದಕ್ಕಿಂತ ಒಳ್ಳೆಯ ಉಪಾಯ ಇರಲಿಲ್ಲ. ಹುಟ್ಟುವಾಗಲೇ ಕಪ್ಪಾಗಿದ್ದವರು ಬೆಳ್ಳಗಾಗುತ್ತಾರೆ ಎಂದರೆ ತಮಾಷೆಯಾ!? ಅದೂ ಕೆಲವೇ ವಾರದಲ್ಲಿ, ಕೆಲವೇ ರುಪಾಯಿಯಲ್ಲಿ, ಕೆಲವೇ ಗ್ರಾಂ ಕ್ರೀಂ ಹಚ್ಚಿಕೊಳ್ಳುವುದರಿಂದ! ಸಂಸ್ಥೆಯ ವ್ಯಾಪಾರಿ ಬುದ್ಧಿ ಕೆಲಸಮಾಡಿತ್ತು. ಕಪ್ಪಗಿದ್ದವರು ಬೆಳ್ಳಗಾಗಲು, ಬೆಳ್ಳಗಿದ್ದವರು ಇನ್ನಷ್ಟು ಬೆಳ್ಳಗಾಗಲು ಇದನ್ನು ಖರೀದಿಸಿದ್ದೇ ಖರೀದಿಸಿದ್ದು! ಅದರಲ್ಲೂ, ಬೆಳ್ಳಗಿಲ್ಲದಿದ್ದರೆ ಹೆಣ್ಣು ಮಕ್ಕಳ ಮದುವೆಯಾಗುವುದಿಲ್ಲ, ಕಪ್ಪಗಿದ್ದರೆ ಕೆಲಸ ಸಿಗುವುದಿಲ್ಲ, ಆದ್ದರಿಂದ 'ಫೇರ್ ಆ್ಯಂಡ್ ಲವ್ಲಿ' ಬಳಸಿ, ಬೆಳ್ಳಗಾಗಿ ಎನ್ನುವ ಜಾಹೀರಾತುಗಳನ್ನು ಕಂಡ ನಂತರವಂತೂ ಕೇಳುವುದೇ ಬೇಡ!

ಹಾಗಂತ ಭಾರತದಲ್ಲಿ ಇದಕ್ಕೂ ಮೊದಲು ಈ ರೀತಿಯ ಉತ್ಪನ್ನ ಬರಲಿಲ್ಲ ಎಂದೇನಿಲ್ಲ. 1919ರಲ್ಲಿ ಮುಂಬೈನ ಪತಂಗ್ವಾಲಾ ಹೆಸರಿನ ಸಂಸ್ಥೆ 'ಆಫ್ಘನ್ ಸ್ನೋ' ಹೆಸರಿನ ಸೌಂದರ್ಯವರ್ಧಕ ಉತ್ಪನ್ನವನ್ನು ತಯಾರಿಸಿತ್ತು. ಅದರ ಪ್ಯಾಕೆಟ್ ಮೇಲೆ 'ದೇವರಿಂದಲೇ ಬಂದ ಉಡುಗೊರೆ' ಎಂಬ ಅರ್ಥದಲ್ಲಿ, A Gift from God ಎಂದು ಮುದ್ರಿಸಲಾಗುತ್ತಿತ್ತು. ಆ ಕಾಲದಲ್ಲಿ ಜನ ನಂಬಲಿಲ್ಲವೋ, ಬೆಳ್ಳಗಾಗುವುದರ ಬಗ್ಗೆ ಆಸಕ್ತಿ ಇರಲಿಲ್ಲವೋ, ಗೊತ್ತಿಲ್ಲ, ಆಫ್ಘನ್ ಸ್ನೋ ಹಿಮದಂತೆ ಕರಗಿಹೋಯಿತು.

ಭಾರತದ ಜನಸಂಖ್ಯೆಯ ಶೇಕಡಾ ಎಂಬತ್ತರಷ್ಟು ಜನರದ್ದು ಕಪ್ಪು ಅಥವಾ ಗೋಧಿ ಬಣ್ಣ. ಕೆಲಸ ನೀಡುವವರೂ ಅವರೇ, ಕೆಲಸ ಮಾಡುವವರೂ ಅವರೇ, ಮದುವೆ ಆಗುವವರೂ ಅದೇ ಬಣ್ಣದವರು, ಮಾಡಿಕೊಳ್ಳುವವರೂ ಅದೇ ಬಣ್ಣದವರು ಎನ್ನುವುದನ್ನು ಜನ ಅರ್ಥ ಮಾಡಿಕೊಳ್ಳಲೇ ಇಲ್ಲ. ವಿಶ್ವಸುಂದರಿ ಐಶ್ವರ್ಯ ರೈಯಂಥವರನ್ನು ಜಾಹೀರಾತಿಗೆ ಬಳಸಿ ಜನರನ್ನು ಮರುಳುಮಾಡುವಲ್ಲಿ ಯುನಿಲಿವರ್ ಯಶಸ್ವಿಯಾಗಿತ್ತು. ದಕ್ಷಿಣ ಏಷ್ಯಾದ ಉಳಿದ ದೇಶಗಳಲ್ಲೂ ಇದೇ ತಂತ್ರ ಬಳಸಿ, ಅಲ್ಲಿಯ ಪ್ರಸಿದ್ಧ ತಾರೆಯರನ್ನು ಸಂಸ್ಥೆ ಜಾಹೀರಾತಿಗೆ ಬಳಸಿಕೊಂಡಿತು. ನೋಡುನೋಡುತ್ತಾ ಉಳಿದ ಉತ್ಪನ್ನಗಳಿಗಿಂತ ಸೌಂದರ್ಯ ವರ್ಧಕಗಳಿಗೆ ಹೆಚ್ಚಿನ ಬೇಡಿಕೆ ಆರಂಭವಾಯಿತು. ಆಗಲೇ ಮಾರುಕಟ್ಟೆಗೆ ಇನ್ನೊಂದು ಸಂಸ್ಥೆಯ ಪ್ರವೇಶವಾಗಿತ್ತು. ಅದು ಇಮಾಮಿ!

ಇಬ್ಬರು ಸ್ನೇಹಿತರಿದ್ದರು. ಇಬ್ಬರೂ ವ್ಯಾಪಾರ ಮತ್ತು ನಕಲು ಮಾಡುವುದರಲ್ಲಿ ಆಸಕ್ತರಾಗಿದ್ದರು. ಕಾಕತಾಳೀಯವೋ ಎಂಬಂತೆ, ಇಬ್ಬರ ಹೆಸರೂ ನಕಲಿನಂತೆಯೇ ಇತ್ತು. ಒಬ್ಬ ರಾಧೇಶ್ಯಾಮ್ ಅಗರ್ವಾಲ್, ಇನ್ನೊಬ್ಬ ರಾಧೇಶ್ಯಾಮ್ ಗೋಯಂಕ. ಇಬ್ಬರೂ ತಮ್ಮ ಬಳಿ ಇರುವ ಹಣದಿಂದ ಬೇರೆ ಬೇರೆ ಉದ್ಯಮ ಆರಂಭಿಸಿ, ಕೆಲವು ಬಾರಿ ಕೈ ಸುಟ್ಟುಕೊಂಡಿದ್ದರು. ಬದಲಾವಣೆಗೆ ಎಂಬಂತೆ ಇಬ್ಬರೂ ಬಿರ್ಲಾ ಗ್ರೂಪ್‌ನಲ್ಲಿ ನೌಕರಿಗೆ ಸೇರಿಕೊಂಡರು. ಕೈಯಲ್ಲಿ ಸ್ವಲ್ಪ ಹಣ ಸಂಗ್ರಹವಾದೊಡನೆ ಪುನಃ ವ್ಯಾಪಾರ ಆರಂಭಿಸಿದರು. ಆಗ ಹುಟ್ಟಿಕೊಂಡ ಸಂಸ್ಥೆಯೇ 'ಇಮಾಮಿ'.

ಈ ಬಾರಿ ಹೊಸ ಉದ್ದಿಮೆ ಆರಂಭಿಸುವಾಗ ಅವರು ಒಂದು ಅಂಶವನ್ನು ಗಮನಿಸಿದ್ದರು. ಅದೇನೆಂದರೆ, ಆಗ ಭಾರತದ ಮಾರುಕಟ್ಟೆಯಲ್ಲಿ ವಿದೇಶಿ ಉತ್ಪನ್ನಗಳೇ ಹೆಚ್ಚು ಇರುತ್ತಿದ್ದವು ಮತ್ತು ಅವುಗಳ ಪ್ಯಾಕಿಂಗ್ ವಿಶೇಷವಾಗಿರುತ್ತಿತ್ತು. ಭಾರತೀಯ ವಸ್ತುಗಳ ಪ್ಯಾಕಿಂಗ್‌ಗಿಂತ ವಿದೇಶಿ ವಸ್ತುಗಳ ಪ್ಯಾಕಿಂಗ್ ಗುಣಮಟ್ಟದಲ್ಲಿ ಚೆನ್ನಾಗಿದ್ದು, ಗ್ರಾಹಕರನ್ನು ಹೆಚ್ಚು ಆಕರ್ಷಿಸುತ್ತಿತ್ತು. ಅದಕ್ಕಾಗಿ ಅವರು ಇಮಾಮಿಯ ಪ್ಯಾಕಿಂಗ್ ಕಡೆ ಹೆಚ್ಚಿನ ಗಮನ ಹರಿಸಿದರು.

ವಿದೇಶದಿಂದ ಆಮದಾಗುತ್ತಿದ್ದ ವಸ್ತುಗಳಿಗೆ ನಿರ್ಮಾಣ ವೆಚ್ಚ, ತೆರಿಗೆ ಸೇರಿಕೊಂಡು ಮಾರಾಟದ ಬೆಲೆ ಹೆಚ್ಚಾಗುತ್ತಿತ್ತು. ಇವೆರಡರಲ್ಲೂ ಉಳಿತಾಯವಾಗುತ್ತಿದ್ದುದರಿಂದ ಇಮಾಮಿ ತನ್ನ ಉತ್ಪನ್ನಗಳನ್ನು ಕಮ್ಮಿ ಬೆಲೆಗೆ ಮಾರಾಟ ಮಾಡುತಿತ್ತು. ಜತೆಗೆ, ವಿತರಕರಿಗೆ, ಅಂಗಡಿಯವರಿಗೆ ಹೆಚ್ಚಿನ ಲಾಭಾಂಶ ಕೊಡುತ್ತಿತ್ತು. ಇದರಿಂದ ಭಾರತದ ಮಾರುಕಟ್ಟೆಯಲ್ಲಿ ಬೇಗ ಪಸರಿಸಿದ್ದಲ್ಲದೇ, ವಿದೇಶಿ ಕಂಪನಿಗಳಿಗೆ ಪೆಟ್ಟುಕೊಡಲು ಸಿದ್ಧವಾಗಿ ನಿಂತಿತ್ತು. ಇದು ಯುನಿಲಿವರ್‌ಗೆ ದೊಡ್ಡ ತಲೆನೋವಾಯಿತು.

ಯುನಿಲಿವರ್‌ನ ವ್ಯಾಸಲಿನ್‌ಗೆ ಸಮನಾಗಿ ಇಮಾಮಿ ವ್ಯಾಸೊಕೇರ್ ತಯಾರಿಸುತ್ತಿತ್ತು. ಪಾಂಡ್ಸ್ ಕೋಲ್ಡ್ ಕ್ರೀಮ್‌ಗೆ ಪರ್ಯಾಯವಾಗಿ ಮಲಾಯಿ ಕೇರ್ಸ್ ಕ್ರೀಮ್, ಸ್ಟೇ ಫ್ರೀಗೆ ಬದಲಾಗಿ 'ಶಿ' ಸ್ಯಾನಿಟರಿ ಪ್ಯಾಡ್ ತಯಾರಿಸುತ್ತಿತ್ತು. ಯುನಿಲಿವರ್ ಇದನ್ನೆಲ್ಲ ಸಹಿಸಿಕೊಳ್ಳುವ ಹೊತ್ತಿಗೆ ಇನ್ನೊಂದು ಪೆಟ್ಟು ಕೊಟ್ಟಿತ್ತು ಇಮಾಮಿ. ಅದುವರೆಗೆ ಹಸಿರು ತಗಡಿನಂಥ ಟ್ಯೂಬ್‌ನಲ್ಲಿ ಬರುತ್ತಿದ್ದ ಬೊರೊಲಿನ್ ಕ್ರೀಮನ್ನು ಬೊರೊ ಪ್ಲಸ್ ಹೆಸರಿನಲ್ಲಿ ಫೇರ್ ಆ್ಯಂಡ್ ಲವ್ಲಿಗೆ ಸ್ಪರ್ಧಿಯಾಗಿ ಮಾರುಕಟ್ಟೆಗೆ ತಂದಿತ್ತು. ಯುನಿಲಿವರ್ ಸೌಂದರ್ಯವರ್ಧಕಗಳ ಮಾರಾಟದಿಂದ ಬರುವ ಆದಾಯದಲ್ಲಿ ಶೇ.65ರಷ್ಟು ಫೇರ್ ಆ್ಯಂಡ್ ಲವ್ಲಿಯಿಂದ ಬರುತ್ತಿತ್ತು. ಅದರಲ್ಲಿ ಶೇಕಡಾ ಮೂವತ್ತರಷ್ಟನ್ನು ಬಾಚಿಕೊಂಡ ಇಮಾಮಿ ಒಂದು ಹೆಜ್ಜೆ ಮುಂದೆ ಹೋಗಿ ಗಂಡಸರನ್ನೂ ಬೆಳ್ಳಗಾಗಿಸುವ 'ಫೇರ್ ಆ್ಯಂಡ್ ಹ್ಯಾಂಡ್ಸಮ್' ಕ್ರೀಮನ್ನು ಮಾರುಕಟ್ಟೆಗೆ ತಂದಿತು. ಹೌದು ಮತ್ತೆ, ಗಂಡಸರಿಗೆ ಬೆಳ್ಳಗಾಗುವ ಹಕ್ಕಿಲ್ಲವೇ, ಅಥವಾ ಮನಸ್ಸಿಲ್ಲವೇ! ಅದರ ಜಾಹೀರಾತಿಗೆ ಬಾಲಿವುಡ್ ಸೂಪರ್‌ಸ್ಟಾರ್ ಶಾರುಖ್ ಖಾನ್‌ರನ್ನು ಬಳಸಿಕೊಂಡಿತು! ಯುನಿಲಿವರ್ ಕೂಡ ಗಂಡಸರಿಗಾಗಿ 'ಗ್ಲೋ ಆ್ಯಂಡ್ ಹ್ಯಾಂಡ್ಸಮ್' ಉತ್ಪನ್ನವನ್ನು ಮಾರುಕಟ್ಟೆಗೆ ತಂದಿತು.

ಈ ನಡುವೆ 'ಬ್ಲ್ಯಾಕ್ ಲೈವ್ಸ್ ಮ್ಯಾಟರ್' ಅಭಿಯಾನ ಆರಂಭವಾಯಿತು. 2014ರಲ್ಲಿ ಭಾರತದ ಜಾಹೀರಾತುಗಳ ಮಾನದಂಡ ಮತ್ತು ಗುಣಮಟ್ಟವನ್ನು ಪರೀಕ್ಷಿಸುವ ಸಂಸ್ಥೆ ಸೌಂದರ್ಯವರ್ಧಕಗಳ ಜಾಹೀರಾತಿಗೆ ಹೊಸ ಮಾರ್ಗಸೂಚಿಯನ್ನು ಜಾರಿಗೊಳಿಸಿತು. ಕಂಪನಿಗಳು ತಮ್ಮ ಜಾಹೀರಾತಿನಲ್ಲಿ ಕಪ್ಪು ತ್ವಚೆಯವರು ಖಿನ್ನತೆಗೆ ಒಳಗಾದವರಂತೆ ಅಥವಾ ಜೀವನದಲ್ಲಿ ವಿಫಲರಾದವರಂತೆ ತೋರಿ ಸುವುದನ್ನು ನಿಷೇಧಿಸಿತು. ಆಗ ಫೇರ್ ಆ್ಯಂಡ್ ಲವ್ಲಿ ಉತ್ಪನ್ನವು 'ಗ್ಲೋ ಆ್ಯಂಡ್ ಲವ್ಲಿ' ಆಗಿ ಬದಲಾಯಿತು. ಅಲ್ಲಿಗೆ, ಹಳೆ ಹೆಂಡವನ್ನು ಹೊಸ ಬಾಟಲಿಯಲ್ಲಿ ತುಂಬಿದಂತಾಯಿತೇ ವಿನಾ ಹೆಚ್ಚಿನದ್ದೇನೂ ಆಗಲಿಲ್ಲ.

ಇದು ಸೌಂದರ್ಯವರ್ಧಕ ಮಾರುವ ಎರಡು ಪ್ರಮುಖ ಪಾತ್ರಧಾರಿಗಳ ಕಥೆ ಅಷ್ಟೆ. ಈ ನಾಟಕದಲ್ಲಿ ಇನ್ನೂ ಸಾಕಷ್ಟು ಸಹಕಲಾವಿದರಿದ್ದಾರೆ. ಉತ್ಪಾದನೆ ಆರಂಭಿಸಿದಂದಿನಿಂದ ಇಲ್ಲಿಯವರೆಗೆ ಇಮಾಮಿಯ ಫೇರ್ ಆ್ಯಂಡ್ ಹ್ಯಾಂಡ್ಸಮ್ ಒಂದೇ ಮುನ್ನೂರು ಕೋಟಿಯಷ್ಟು ವ್ಯಾಪಾರವಾಗಿದೆಯಂತೆ. ವಾರದಿಂದ ವಾರಕ್ಕೆ ನಿಮ್ಮ ತ್ವಚೆಯಲ್ಲಿ ಯಾವ ರೀತಿಯ ಬದಲಾವಣೆಯಾಗುತ್ತದೆ ಎಂದು ಪ್ಯಾಕೆಟ್ ಮೇಲೆ ಮುದ್ರಿಸುವ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಬಳಸಿ ಇದುವರೆಗೆ ಬೆಳ್ಳಗಾದವರ ಲೆಕ್ಕ ಕೊಟ್ಟಿಲ್ಲ. ಜೂಹಿ ಚಾವ್ಲಾ, ಪ್ರಿಯಾಂಕಾ ಚೋಪ್ರಾ, ದೀಪಿಕಾ ಪಡುಕೋಣೆ, ಜಾನ್ ಅಬ್ರಹಾಂ, ಶಾಹಿದ್ ಕಪೂರ್‌ರನ್ನು ಜಾಹೀರಾತಿನಲ್ಲಿ ತೋರಿಸಿದರೇ ವಿನಾ ಸದಾಶಿವ ಅಮ್ರಪೂರ್ಕರ್, ನಾನಾ ಪಾಟೇಕರ್‌ರನ್ನು ತೋರಿಸಲಿಲ್ಲ.

ಹಾಗಾದರೆ ಈ ರೀತಿಯ ಕ್ರೀಮ್‌ಗಳನ್ನು ಮಾರುವುದು ತಪ್ಪೆ, ಅಥವಾ ಬಳಸುವುದೇ ತಪ್ಪೆ? ತಜ್ಞರ ಪ್ರಕಾರ, ವ್ಯಕ್ತಿಯ ನೈಸರ್ಗಿಕ ತ್ವಚೆಯ ಬಣ್ಣ ಬದಲಾಯಿಸಲು ಯಾವುದರಿಂದಲೂ ಸಾಧ್ಯವಿಲ್ಲ. ಇವುಗಳು ನಮ್ಮ ಚರ್ಮವನ್ನು ಸೂರ್ಯನ ಪ್ರಖರ ಬಿಸಿಲಿನಿಂದ ಕಾಪಾಡಿಕೊಳ್ಳಲು ಸ್ವಲ್ಪ ಮಟ್ಟಿಗೆ ಸಹಕರಿಸಬಹುದು. ಆದರೆ ಇವುಗಳ ಅತಿಯಾದ ಬಳಕೆಯಿಂದ ಹಾನಿಯೇ ಹೆಚ್ಚು. ಇವುಗಳಲ್ಲಿರುವ ಪಾದರಸ, ಕ್ರೋಮಿಯಮ್, ನಿಕೆಲ್, ಸೀಸದಂಥ ವಸ್ತುಗಳು ಹಾನಿಕಾರಕ. ಇವನ್ನು ಬಳಸುವುದರಿಂದ ಕೆಲವರಲ್ಲಿ ಮೊಡವೆ, ಚರ್ಮದ ದದ್ದು ಕಾಣಿಸಿಕೊಳ್ಳುತ್ತವೆ. ಕೆಲವು ಸಂಸ್ಥೆಗಳ ಕ್ರೀಮ್‌ಗಳಲ್ಲಿ ಲೋಹ ಮತ್ತು ಸ್ಟೆರಾಯ್ಡ್ ಪ್ರಮಾಣ ಹೆಚ್ಚಾಗಿದ್ದು, ಕ್ಯಾನ್ಸರ್ ರೋಗಕ್ಕೂ ಅವು ಕಾರಣವಾಗಬಹುದು ಎನ್ನುತ್ತಾರೆ ತಜ್ಞರು. ಕೊನೆಯದಾಗಿ, ಇಂಥ ಕ್ರೀಮ್ ಬಳಸಿ ಬೆಳ್ಳಗಾಗುವುದಿದ್ದರೆ ಭಾರತ ಬಿಡಿ, ಇಂದು ಆಫ್ರಿಕಾದಲ್ಲೂ ಯಾರೂ ಕಪ್ಪಗೆ ಇರುತ್ತಿರಲಿಲ್ಲ. ಅದು ನಿಜವೇ ಆಗಿದ್ದರೆ ನಮ್ಮ ಮನೆಯ ಎಮ್ಮೆಯನ್ನೂ, ಕೋಣವನ್ನೂ ಬೆಳ್ಳಗಾಗಿಸಬಹು ದುತ್ತು. ಇದನ್ನು ಅರಿತರೆ ಜಾಣರಾಗುತ್ತೇವೆ, ಇಲ್ಲವಾದರೆ ನಾವೂ ಕೋಣನ ಬದಿಯಲ್ಲಿ ನಿಲ್ಲುತ್ತೇವೆ!

ಪಾಕಿಸ್ತಾನದಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಡಾ.ಸ್ಟ್ರೇಂಜ್‌ಲವ್!



ಅಕ್ಬರ್‌ನಾಮಾ

ಎಂ.ಜೆ.ಅಕ್ಬರ್
vveditoped@gmail.com

ಪಾಕಿಸ್ತಾನವೆಂಬುದು ಒಂದು ದೇಶವಲ್ಲ. ಅದೊಂದು ಮನಸ್ಥಿತಿ. ಒಂಥರಾ ವಿಚಿತ್ರವಾದ ಮೇಲರಿಮೆ, ಇತರ ನಂಬಿಕೆಗಳಿಂದ ಅಂತರ ಕಾಯ್ದುಕೊಂಡು ಬೆಳೆದ ಸಂಕುಚಿತವಾದ ಹಾಗೂ ಹಿಂದೂಗಳ ಮೇಲಿನ ದ್ವೇಷದಿಂದ ಸುದೀರ್ಘ ಅವಧಿಯಲ್ಲಿ ರೂಪುಗೊಂಡ ಕುತ್ಸಿತ ಮನಸ್ಥಿತಿಯದು. ಈ ಮನಸ್ಥಿತಿಯೇ ದಶಕಗಳ ಹಿಂದೆ ಶುದ್ಧ ಇಸ್ಲಾಮ್‌ನ ಆಚರಣೆಯ ನೆಪದಲ್ಲಿ ಅಥವಾ ಧಾರ್ಮಿಕ ಶುದ್ಧೀಕರಣದ ಕಲ್ಪನೆಯಲ್ಲಿ ಪಾಕಿಸ್ತಾನೀಯರಿಗೆ ಭಾರತದಿಂದ ಬೇರೆಯಾಗಲು ಪ್ರೇರೇಪಣೆ ನೀಡಿತು. ಹಿಂದೂಗಳಿಂದ ದೂರ ಉಳಿಯಬೇಕು ಎಂಬ ಸಿದ್ಧಾಂತದಿಂದ ಹುಟ್ಟಿದ ಕಲ್ಪನೆಯೇ ಪಾಕಿಸ್ತಾನ. ಭಾರತೀಯ ಉಪಖಂಡದಲ್ಲಿದ್ದುಕೊಂಡೇ ಈ ಸಿದ್ಧಾಂತವನ್ನು ಮೊದಲು ಹರಿಬಿಟ್ಟವನು ಶಾ ವಲೀಉಲ್ಲಾ. ಸುದೀರ್ಘ ಎರಡು ಶತಮಾನಗಳ ಬಳಿಕ 1940ರ ದಶಕದಲ್ಲಿ ದೇಶ ವಿಭಜನೆಯ ಹೆಸರಿನಲ್ಲಿ ಈ ಸಿದ್ಧಾಂತ ಮತ್ತೆ ಚಿಗಿತುಕೊಂಡಿತು. ಶಾ ವಲೀಉಲ್ಲಾನ ಸಿದ್ಧಾಂತದ ಮರುಹುಟ್ಟಿಗೆ ಕಾರಣನಾದ ವ್ಯಕ್ತಿ ಇಸ್ಲಾಂ ಬಗ್ಗೆ ಸ್ವಲ್ಪವೇ ಸ್ವಲ್ಪ ತಿಳಿವಳಿಕೆ ಹೊಂದಿದ್ದ ಮೊಹಮ್ಮದ್ ಅಲಿ ಜಿನ್ನಾ. ಆದರೆ ಆತ 'ಇಸ್ಲಾಂ ಅಪಾಯದಲ್ಲಿದೆ' ಎಂಬ ಸುಳ್ಳು ಪ್ರಚಾರದ ಲಾಭ ಪಡೆದು ತಮ್ಮ ಬೇಳೆ ಬೇಯಿಸಿಕೊಳ್ಳಲು ಭಾರತದ ಏಕತೆಯನ್ನು ನಾಶಪಡಿಸಿದರು. ಪಾಕಿಸ್ತಾನ ಪ್ರತ್ಯೇಕ ರಾಷ್ಟ್ರವಾಗಬೇಕು ಎಂಬ ಜಿನ್ನಾ ಪ್ರಯತ್ನ ಕೇವಲ ಸ್ವಾರ್ಥದ್ದಾಗಿತ್ತೇ ಹೊರತು ಅದರಲ್ಲಿ ಇಸ್ಲಾಮ್ ಧರ್ಮಕ್ಕೆ ಅನುಕೂಲ ಮಾಡಿಕೊಡುವ ಅಥವಾ ಭಾರತದ ಮುಸ್ಲಿಮರಿಗೆ ಒಳ್ಳೆಯದನ್ನು ಮಾಡುವ ಯಾವ ಉದ್ದೇಶವೂ ಇರಲಿಲ್ಲ. ಜಿನ್ನಾರಿಗೆ ದೇಶವನ್ನು ಆಳಬೇಕಿತ್ತು. ಅದು ಏಕೀಕೃತ ಭಾರತದಲ್ಲಿ ಸಾಧ್ಯವಿರಲಿಲ್ಲ.

ಜಿನ್ನಾ ಅವರ ಪರಂಪರೆಯೇ ದ್ವೇಷದ ಪರಂಪರೆ. ಅದರಿಂದ ಜನಿಸಿದ ಪ್ರಮುಖ ಉತ್ಪನ್ನವೆಂದರೆ ಹಿಂಸೆ. ಮೊದಲು ಯುದ್ಧದ ರೂಪದಲ್ಲಿ, ನಂತರ ಭಯೋತ್ಪಾದನೆಯ ರೂಪದಲ್ಲಿ ಪಾಕ್ ಪ್ರೇರಿತ ಹಿಂಸಾಚಾರ ನಿರಂತರವಾಗಿ ಚಾಲ್ತಿಯಲ್ಲಿದೆ. ಇದಕ್ಕೆ ಮೂಲಪುರುಷ ಜಿನ್ನಾ. 1947ರ ಅಕ್ಟೋಬರ್‌ನಲ್ಲೇ ಅವರು ಭಾರತದ ವಿರುದ್ಧ ಮೊದಲ ಯುದ್ಧಕ್ಕೆ ಆದೇಶ ನೀಡಿದ್ದರು. ನಿರಂತರವಾದ ಸೋಲಿನ ಬಳಿಕವೂ ಅವರ ಉತ್ತರಾಧಿಕಾರಿಗಳು ಭಾರತದ ವಿರುದ್ಧ ಯುದ್ಧ ಮುಂದುವರಿಸಿದರು. ಕೊನೆಗೆ ನೇರ ಯುದ್ಧದಿಂದ ಪ್ರಯೋಜನವಿಲ್ಲ ಎಂದು ಅರಿತು ಭಯೋತ್ಪಾದನೆಯೆಂಬ ರಾಕ್ಷಸನನ್ನು ಸೃಷ್ಟಿಸಿದರು. ಆತನ ಮೂಲಕ ಮುಗ್ಧ ಭಾರತೀಯರ ಮಾರಣಹೋಮ ನಡೆಸಿದರು. ಭಯೋತ್ಪಾದನೆಯೆಂಬುದು ಯಾವುದೇ ನಾಗರಿಕತೆ ಅಥವಾ ಧರ್ಮದಲ್ಲೂ ಅಪ್ಪಟ ಅಪರಾಧ. ಆದರೆ ಪಾಕಿಸ್ತಾನ ತನ್ನ ಪರಂಪರೆಯನ್ನು ಉಳಿಸಿಕೊಳ್ಳಲು ಇದೇ ರಾಕ್ಷಸನಿಗೆ ಶರಣಾಗಿದೆ. ಅಭಿವೃದ್ಧಿ ಹೊಂದಲು ಒಳ್ಳೆಯ ಯಾವ ಮಾರ್ಗಗಳ ಬಗ್ಗೆಯೂ ಯೋಚಿಸದ ಪಾಕಿಸ್ತಾನ, ಕೇವಲ ಪೈಶಾಚಿಕ ನಡತೆಯನ್ನೇ ತನ್ನ ದಿನನಿತ್ಯದ ಆಹಾರವೆಂಬಂತೆ ಸೇವಿಸುತ್ತಾ ಬಂದಿದೆ. ಅದರ ಪರಿಣಾಮವಾಗಿ ದಿನದಿಂದ ದಿನಕ್ಕೆ ಕುಸಿಯುತ್ತಾ ಅಧಃಪತನದತ್ತ ಸಾಗುತ್ತಿದೆ. ಪಾಕ್ ಪ್ರೇರಿತ ಭಯೋತ್ಪಾದನೆಯು ದಶಕದ ಹಿಂದಿನವರೆಗೆ ಭಾರತದ ಎಲ್ಲಾ ಮೂಲೆಗಳಲ್ಲೂ ಸಾವುನೋವಿಗೆ ಕಾರಣವಾಗುತ್ತಿತ್ತು. ಆದರೆ ಈಗ ಅದು ಭಾರತದ ಮುಕುಟಪ್ರಾಯವಾಗಿರುವ ಕಾಶ್ಮೀರವನ್ನೇ ತನ್ನ ಮುಖ್ಯ ರಣಾಂಗಣವನ್ನಾಗಿ ಮಾಡಿಕೊಂಡಿದೆ.

ಜಿನ್ನಾ ಅವರ ಹೊಸ ಅವತಾರವೇ ಪಾಕಿಸ್ತಾನದ ಸೇನಾಪಡೆಯ ಮುಖ್ಯಸ್ಥ ಜನರಲ್ ಆಸಿಮ್ ಮುನೀರ್. ಈತ ತನ್ನ ಬುದ್ಧಿವಂತಿಕೆ ಅಥವಾ ಆಡಳಿತದ ಚತುರತೆಯಿಂದ ಅಥವಾ ಮಿಲಿಟರಿ ಕೌಶಲಗಳಿಂದ ಯಾವತ್ತೂ ಪ್ರಸಿದ್ಧನಾಗಿಲ್ಲ. ಪಾಕಿಸ್ತಾನದಲ್ಲೇ ಇವನನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಅಂಥ ವ್ಯಕ್ತಿ ಕಳೆದ ವಾರ ಬಹಿರಂಗವಾಗಿ ಭಯೋತ್ಪಾದನೆಯನ್ನು ಸಮರ್ಥಿಸಿಕೊಂಡು ಹೇಳಿಕೆ ನೀಡಿದ್ದಾನೆ. ಈ ಹಿಂದೆಯೂ ಪಾಕಿಸ್ತಾನದ ಅನೇಕ ನಾಯಕರು ಭಯೋತ್ಪಾದನೆಯನ್ನು ಸಮರ್ಥಿಸಿಕೊಂಡಿದ್ದರು. ಅದಕ್ಕಿದು ಹೊಸ ಸೇರ್ಪಡೆ. ನಮಗೆ ಸಾವಿರ ಗಾಯಗಳಾಗಿವೆ, ಅವುಗಳನ್ನು ಗುಣಪಡಿಸಿಕೊಳ್ಳಲು ಇಂಥ ಮಾರ್ಗ ಅಗತ್ಯ ಎಂಬುದು ಭಯೋತ್ಪಾದನೆಗೆ ಪಾಕಿಸ್ತಾನ ನೀಡುವ ಸಮರ್ಥನೆ. ಮುನೀರ್ ಮಾತನಾಡುವಾಗ ಪಾಕಿಸ್ತಾನದ ಅಸ್ತಿತ್ವವನ್ನು ಬಲವಾಗಿ ಪ್ರತಿಪಾದಿಸುತ್ತಾ, ಕಾಶ್ಮೀರವನ್ನು ಏಕೆ ಭಾರತದಿಂದ ಬೇರ್ಪಡಿಸಬೇಕು ಎಂಬುದಕ್ಕೂ ತನ್ನದೇ ಆದ ವ್ಯಾಖ್ಯಾನ ನೀಡಿದ್ದಾನೆ. ಇಷ್ಟಕ್ಕೂ ಆತ ಕಾಶ್ಮೀರದ ಸ್ವಾತಂತ್ರ್ಯಕ್ಕೆ ನೀಡಿದ ಕಾರಣ ಅದೇ ಹಳಸಲಾದ ಹಳೆಯ ಹೇಳಿಕೆ. "ಮುಸ್ಲಿಮರು ಎಲ್ಲಾ ರೀತಿಯಲ್ಲೂ ಹಿಂದೂಗಳಿಗಿಂತ ಭಿನ್ನ. ನಮ್ಮ ಧರ್ಮ ಭಿನ್ನ. ನಮ್ಮ ಯೋಚನೆ ಭಿನ್ನ. ನಮ್ಮ ಗುರಿಗಳೂ ಭಿನ್ನ. ಈ ಕಾರಣಕ್ಕಾಗಿಯೇ ಭಾರತ ವಿಭಜನೆಯಾಯಿತು. ನಾವಿಬ್ಬರೂ ಬೇರೆ ಬೇರೆ ದೇಶಗಳು. ಯಾವತ್ತೂ ಒಂದಾಗಲು ಸಾಧ್ಯವಿಲ್ಲ. ಎರಡು ದೇಶಗಳ ಥಿಯರಿ ಹುಟ್ಟಿದ್ದೇ ಈ ಕಾರಣಕ್ಕೆ. ಆದ್ದರಿಂದಲೇ ಕಾಶ್ಮೀರವು ಭಾರತದಿಂದ ಬೇರೆಯಾಗಬೇಕು" - ಇದು ಮುನೀರ್‌ನ ಪ್ರತಿಪಾದನೆ.

ಮುನೀರ್‌ಗೆ ಯಾರಾದರೂ ಗಣಿತದ ಮೂಲಪಾಠ ಮಾಡುವ ಅಗತ್ಯವಿದೆ. ಲೆಕ್ಕ ಹಾಕುವುದು ಹೇಗೆಂಬುದನ್ನು ಮೊದಲು ಈ ಮನುಷ್ಯನಿಗೆ ಕಲಿಸಬೇಕು. ಬಹುಶಃ ಪಾಕಿಸ್ತಾನದ ಈ ಜನರಲ್‌ಗೆ ಅಮ್ನೇಶಿಯಾ ಕಾಯಿಲೆ ಇರಬಹುದು. 'ಎರಡು ದೇಶ' ಸಿದ್ಧಾಂತ 1971ರಲ್ಲಿ 'ಮೂರು ದೇಶಗಳ' ಸಿದ್ಧಾಂತವಾಯಿತು. ಅದಕ್ಕೆ ಕಾರಣ ಬಂಗಾಳದ ಮುಸ್ಲಿಮರು ಕಡಿಮೆ ಮುಸ್ಲಿಮರಾಗಿದ್ದರು ಎಂಬುದಲ್ಲ. ಬದಲಿಗೆ ಅವರು ಕಡಿಮೆ ಪಾಕಿಸ್ತಾನಿಗಳಾಗಿದ್ದರು ಎಂಬ ಕಾರಣಕ್ಕೆ ಮೂರನೇ ದೇಶ ಹುಟ್ಟಿಕೊಂಡಿತು. ಪೂರ್ವ ಬಂಗಾಳಿಗಳು ತಮ್ಮನ್ನು ತಾವು ಸ್ವತಂತ್ರಗೊಳಿಸಿಕೊಂಡು ಬಾಂಗ್ಲಾದೇಶವೆಂದು ಹೆಸರಿಟ್ಟುಕೊಂಡರು. ಇವತ್ತೇನೋ ಬಾಂಗ್ಲಾದೇಶದಲ್ಲಿರುವ ಚುನಾಯಿತವಲ್ಲದ ಸರಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಪಾಕಿಸ್ತಾನದ ಜತೆ ಕೈಜೋಡಿಸಲು ಹೊರಟಿದ್ದಾರೆ. ಆದರೆ, 1971ರಿಂದ ಕಳೆದ ವರ್ಷದವರೆಗೂ ಬಾಂಗ್ಲಾದೇಶಕ್ಕೆ ಪಾಕಿಸ್ತಾನವನ್ನು ಕಂಡರೆ ಆಗುತ್ತಿರಲಿಲ್ಲ. ಹಿಂದೆ 1971ರ ಮಾರ್ಚ್‌ನಿಂದ ಡಿಸೆಂಬರ್ ನಡುವೆ ಬಾಂಗ್ಲಾದೇಶದಲ್ಲಿ ಪಾಕಿಸ್ತಾನ ನಡೆಸಿದ ಮಾರಣಹೋಮಕ್ಕೆ ಪರಿಹಾರ ಧನವಾಗಿ ನೂರಾರು ಕೋಟಿ ಡಾಲರ್ ನೀಡಬೇಕೆಂದು ಬಾಂಗ್ಲಾದೇಶವು ಪಾಕಿಸ್ತಾನದ ಬಳಿ ಕೇಳಿದ್ದುಂಟು. ಅದನ್ನೆಲ್ಲ ಯೂನಸ್ ಮರೆತಂತಿದೆ.



ಪಾಕಿಸ್ತಾನದ ಮಸೀದಿಗಳು ಮತ್ತು ಕಂಟೋನ್ಮೆಂಟ್‌ಗಳು ಹಳೆಯ ಮಾರಣಹೋಮವನ್ನು ಜನರ ನೆನಪಿನಿಂದ ಅಳಿಸಿಹಾಕಲು ಸಾಕಷ್ಟು ಪ್ರಯತ್ನ ಮಾಡುತ್ತಿವೆ. ಬಹುಶಃ ಹಾಗೆ ಮಾಡಬೇಕು ಎಂದು ಅವುಗಳಿಗೆ ಕಟ್ಟುನಿಟ್ಟಿನ ಆದೇಶವಿರಬಹುದು. ಬಾಂಗ್ಲಾ ಯುದ್ಧಕ್ಕೂ ಮುನ್ನ ಪಾಕ್ ನಡೆಸಿದ ಹಿಂಸಾಚಾರದಿಂದಾಗಿ ಅನಾಮತ್ತು ಒಂದು ಕೋಟಿ ಬಂಗಾಳಿ ಮುಸ್ಲಿಮರು ಮತ್ತು ಹಿಂದೂಗಳು ಭಾರತಕ್ಕೆ ಓಡಿಬಂದು ಆಶ್ರಯ ಪಡೆದುಕೊಂಡರು. ನಂತರ ಪೂರ್ಣ ಪ್ರಮಾಣದ ಯುದ್ಧ ನಡೆದು, ಭಾರತದ ಸಹಾಯದಿಂದ ಪಾಕಿಸ್ತಾನದ ರೆಕ್ಕೆಪುಕ್ಕ ಕತ್ತರಿಸಿ, ಪಾಕಿಸ್ತಾನದ ರಕ್ತದಾಹಿ ಸರ್ವಾಧಿಕಾರಿಗಳ ಕೈಲಿ ಸಿಲುಕಿದ್ದ ಮಿಲಿಟರಿಯನ್ನು ಸ್ವತಂತ್ರಗೊಳಿಸಿದ ಮೇಲೆ ಈ ನಿರಾಶ್ರಿತರು ಮರಳಿ ತಮ್ಮ ದೇಶಕ್ಕೆ ಹೋಗಿ ನೆಲೆ ಕಂಡುಕೊಂಡರು.

ಮೂರು ದೇಶಗಳ ಸಿದ್ಧಾಂತ ಸ್ಫೋಟಿಸಿದಾಗ ಆಸಿಮ್ ಮುನೀರ್‌ಗೆ ಮೂರು ವರ್ಷ. ಇಮಾಂ ಆಗಿದ್ದ ಈತನ ತಂದೆ ತನ್ನ ಮಗನಿಗೆ ಬಾಂಗ್ಲಾದೇಶದ ಹುಟ್ಟಿನ ಬಗ್ಗೆ ಹೇಳುವುದಕ್ಕೆ ಮರೆತಿರಬೇಕು. ಇವನು ಓದಿದ ಶಾಲೆಗಳು ಕೂಡ 1947ರಲ್ಲಿ ಪಾಕಿಸ್ತಾನ ಜನಿಸಿತು, ಬಳಿಕ 1971ರಲ್ಲಿ 'ಹಿಂದೂಗಳಾಗಿದ್ದ ಬಂಗಾಳಿ ಮುಸ್ಲಿಮರಿಂದ' ಸ್ವತಂತ್ರಗೊಂಡು ಪಾಕಿಸ್ತಾನ ಮತ್ತೊಮ್ಮೆ ಜನಿಸಿತು ಎಂದು ಕಟ್ಟುಕತೆಯ ಪಾಠ ಹೇಳಿರಬೇಕು.

ಏಪ್ರಿಲ್ 16ರಂದು ಜನರಲ್ ಮುನೀರ್ ಜಮ್ಮು ಮತ್ತು ಕಾಶ್ಮೀರದಲ್ಲಿ ಮತ್ತೊಮ್ಮೆ ಭಯೋತ್ಪಾದನೆಯ ಸಮರ ನಡೆಸಬೇಕು ಎಂಬ ಅಜೆಂಡಾ ಸಿದ್ಧಪಡಿಸಿಕೊಟ್ಟಿದ್ದ. ಷರೀಫ್ ಸಹೋದರರ ನೇತೃತ್ವದಲ್ಲಿ ನಡೆಯುತ್ತಿರುವ ಇಸ್ಲಾಮಾಬಾದ್‌ನಲ್ಲಿನ ನಾಗರಿಕ ಸರಕಾರ ಮುನೀರ್‌ಗೆ ಇಂಥ ನಿರ್ಧಾರಗಳನ್ನು ಕೈಗೊಳ್ಳಲು ಅಧಿಕಾರ ನೀಡಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಅದು ಅಪ್ರಸ್ತುತ ಬಿಡಿ. 1957ರಿಂದಲೂ ಪಾಕಿಸ್ತಾನದ ಸೇನೆಯು ಅಲ್ಲಿನ ಸರಕಾರದಿಂದ ಆದೇಶಗಳನ್ನು ಪಡೆದಿಲ್ಲ. ಹೀಗಾಗಿ ಮುನೀರ್ ಕೂಡ "ಕಾಶ್ಮೀರ ನಮ್ಮ ಕಂಠನಾಳವಿದ್ದಂತೆ, ಕಾಶ್ಮೀರ ನಮ್ಮ ಕಂಠನಾಳವಿದ್ದಂತೆ, ಯಾವತ್ತೂ ಅದನ್ನು ಮರೆಯಬಾರದು... ನಾವು ನಮ್ಮ ಕಾಶ್ಮೀರಿ ಸಹೋದರರನ್ನು ಐತಿಹಾಸಿಕ ನರಳಾಟದ ಕೂಪದಲ್ಲಿ ಹಾಗೇ ಬಿಡಲು ಸಾಧ್ಯವಿಲ್ಲ" ಎಂದು ಏರುಕಂಠದಲ್ಲಿ ಹೇಳಿ ರಣಕಹಳೆ ಮೊಳಗಿಸಿದ್ದ.

ಹೀಗೆ ಇದ್ದಕ್ಕಿದ್ದಂತೆ ಕಾಶ್ಮೀರದಲ್ಲಿ ರಕ್ತಪಾತ ನಡೆಸುವುದಕ್ಕೆ ಪಾಕ್ ಬಳಿ ಏನಾದರೊಂದು ವಿಶ್ವಾಸಾರ್ಹ ಕಾರಣ ಇದ್ದೀತೆ? ಪಾಕಿಸ್ತಾನದ ಸೇನಾಪಡೆಯ ಮುಖ್ಯಸ್ಥನಾದ ಬಳಿಕ ಮುನೀರ್ ಸದಾ ಮೌನವಾಗಿದ್ದ. ಆದರೆ ಬಹುಶಃ ಈಗ ತನ್ನ ಕಮಾಂಡ್ ಪಡೆಯಲ್ಲಿ ಹೊಸ ಶಕ್ತಿ ಸಂಪಾದಿಸಿಕೊಂಡು, ಮೌನ ಮುರಿದು ಹೊರಬಂದಿರಬೇಕು. ಆದರೆ ತನ್ನ ನಿಯಂತ್ರಣದಲ್ಲಿಲ್ಲದ ಕಾಶ್ಮೀರದಲ್ಲಿ ಆದ ಒಳ್ಳೆಯ ಬದಲಾವಣೆಯನ್ನಾದರೂ ಈತ ಒಮ್ಮೆ ನೋಡಬೇಕಿತ್ತು. ಕಳೆದ ಐದು ವರ್ಷದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿ ಸ್ಥಾಪನೆಯಾದ ಬಳಿಕ ಅಲ್ಲಿನ ಪ್ರವಾಸೋದ್ಯಮ, ವ್ಯಾಪಾರ, ವ್ಯವಹಾರಗಳು ಸಾಕಷ್ಟು ಸುಧಾರಣೆಯಾಗಿ ಜನರ ಜೀವನಮಟ್ಟ ಕೂಡ ಸುಧಾರಿಸುತ್ತಿದೆ. ಬದಲಾಗುತ್ತಿರುವ ಈ ವಾಸ್ತವ ಮುನೀರ್ ಕಣ್ಣಿಗೆ ಏಕೆ ಬೀಳಲಿಲ್ಲ? ಅಥವಾ ಈ ಸುಧಾರಣೆಗೆ ಕಲ್ಲು ಹಾಕಬೇಕೆಂದೇ ಇನ್ನೊಂದು ರಕ್ತಪಾತ ಮಾಡಿಸಿದ್ದಾರೆಯೇ?

1947ರ ಅಕ್ಟೋಬರ್‌ನಲ್ಲೇ ಜಮ್ಮು ಮತ್ತು ಕಾಶ್ಮೀರದ ಮೇಲೆ ಏಕಪಕ್ಷೀಯ ಯುದ್ಧ ಆರಂಭಿಸುವ ಮೂಲಕ ಜಾಗತಿಕ ಇತಿಹಾಸದಲ್ಲಿ ಅತ್ಯಂತ ಸುದೀರ್ಘ ಎನ್ನಬಹುದಾದ ಸಂಗ್ರಾಮಕ್ಕೆ ಪಾಕಿಸ್ತಾನ ನಾಂದಿ ಹಾಡಿತ್ತು. ಆಗಿನ್ನೂ ಜಮ್ಮು ಮತ್ತು ಕಾಶ್ಮೀರವು ರಾಜಾಳ್ವಿಕೆಯಲ್ಲೇ ಇತ್ತು. ಅದರ ರಾಜಕೀಯ ಭವಿಷ್ಯವೇನು ಎಂಬ ಬಗ್ಗೆ ಚರ್ಚೆ ನಡೆಯುತ್ತಿತ್ತು. ಜಮ್ಮು ಮತ್ತು ಕಾಶ್ಮೀರವನ್ನು ಮಹಾರಾಜರು ಆಳುತ್ತಿದ್ದರು. ಭಾರತೀಯ ಉಪಖಂಡವನ್ನು ಇನ್ನೂ ಬ್ರಿಟಿಷರು ಪೂರ್ಣ ಪ್ರಮಾಣದಲ್ಲಿ ಬಿಟ್ಟು ಹೋಗಿರಲಿಲ್ಲ. ಲಾರ್ಡ್ ಮೌಂಟ್‌ಬ್ಯಾಟನ್ ಮೂಲಕ ಇಲ್ಲಿನ ವ್ಯವಹಾರಗಳನ್ನು ಬ್ರಿಟನ್ ನಿಯಂತ್ರಿಸುತ್ತಿತ್ತು. ಭಾರತ ಮತ್ತು ಪಾಕಿಸ್ತಾನಕ್ಕೆ ಸ್ವಯಂ ಆಡಳಿತದ ಸ್ವಾತಂತ್ರ್ಯವೇನೋ ಸಿಕ್ಕಿತ್ತು, ಆದರೆ ಅವುಗಳಿನ್ನೂ ಬ್ರಿಟಿಷ್ ಸಾಮ್ರಾಜ್ಯದ ಡೊಮಿನಿಯನ್ ಸ್ಟೇಟ್‌ಗಳಾಗಿದ್ದವು. 'ಹಿಂದೂಗಳಿಂದ ಕಲುಷಿತಗೊಂಡಿರುವ' ಭಾರತದಲ್ಲಿ ಇರುವ ಬದಲು ಮುಸ್ಲಿಂ ನೆಲದ ಸ್ವರ್ಗದಲ್ಲಿ ನಮ್ಮ ಜತೆಗೆ ಇರಿ ಎಂದು ಕಾಶ್ಮೀರಿಗಳಿಗೆ ಪಾಕಿಸ್ತಾನ ಕರೆ ನೀಡಿತ್ತು. ಏಳು ದಶಕಗಳ ನಂತರ ಸಾಕ್ಷ್ಯ ನಮ್ಮ ಕಣ್ಣೆದುರೇ ಇದೆ. ಸ್ವರ್ಗ ಯಾವುದು, ನರಕ ಯಾವುದು ಎಂಬುದು ಎಲ್ಲರಿಗೂ ಗೊತ್ತಾಗಿದೆ. ಅರ್ಥಶಾಸ್ತ್ರಜ್ಞರ ಎಲ್ಲಾ ಚಾರ್ಟ್‌ಗಳಲ್ಲೂ, ಮಾಧ್ಯಮಗಳಲ್ಲಿ ಪ್ರಕಟವಾಗುವ ಎಲ್ಲಾ ಫೋಟೋಗಳಲ್ಲೂ ಈ ಸ್ವರ್ಗ ಮತ್ತು ನರಕಗಳು ಕಾಣಿಸುತ್ತಿವೆ. ಭಾರತದ ಕಾಶ್ಮೀರವು ಹಿಂದೆಂದೂ ಕಂಡಿರದ ಆರ್ಥಿಕಾಭಿವೃದ್ಧಿಯನ್ನು ಕಂಡು ದಿನೇದಿನೆ ಶ್ರೀಮಂತವಾಗುತ್ತಿದ್ದರೆ, ಪಾಕ್ ಆಕ್ರಮಿತ ಕಾಶ್ಮೀರವು ಜಗತ್ತಿನಲ್ಲೇ ಅತ್ಯಂತ ಹಿಂದುಳಿದ ಮತ್ತು ದುಸ್ಥಿತಿಯಲ್ಲಿರುವ ಭೂಭಾಗವಾಗಿ ದಿನೇದಿನೆ ಅಧಃಪತನದತ್ತ ಸಾಗುತ್ತಿದೆ. ಮುಳುಗುತ್ತಿರುವ ದೇಶದ ದುರದೃಷ್ಟಕರ ಪ್ರಾಂತ್ಯವಾಗಿ ಪಿಒಕೆ ನರಳುತ್ತಿದೆ. ಭದ್ರತೆಯ ಹೆಸರಿನಲ್ಲಿ ಅಲ್ಲಿನ ಎಲ್ಲಾ ಸಂಪತ್ತನ್ನೂ ಪಾಕಿಸ್ತಾನದ ಧನದಾಹಿ ಸೇನಾಪಡೆ ದೋಚುತ್ತಿದೆ. ಕೊನೆಗೆ ಅಲ್ಲಿನ ಜನರಿಗೆ ಉಳಿಯುತ್ತಿರುವುದು ಖಾಲಿ ತಟ್ಟೆಯಷ್ಟೆ.

ಇಸ್ಲಾಂ ಮತ್ತು ರಾಷ್ಟ್ರೀಯವಾದದ ನಡುವಿನ ಕೃತಕ ಗರ್ಭಧಾರಣೆಯ ಮೂಲಕ ಪಾಕಿಸ್ತಾನ 1947ರಲ್ಲಿ ಹುಟ್ಟಿಕೊಂಡಿತು. ಒಂದು ದೇಶವನ್ನು ಹೀಗೆ ಹುಟ್ಟಿಸಬಹುದು ಎಂಬುದಕ್ಕೆ ಅದಕ್ಕೂ ಮೊದಲು ಯಾವುದೇ ಉದಾಹರಣೆ ಇರಲಿಲ್ಲ. ಅದು ಹೋಗಲಿ, ಇವತ್ತಿಗೂ ಸಮಕಾಲೀನ ವಾಸ್ತವದಲ್ಲೂ ಅದೊಂದು ಅಸಂಬದ್ಧ ಕತೆಯಾಗಿಯೇ ಉಳಿದುಕೊಂಡಿದೆ. ಒಂದು ದೇಶ ಜನಿಸಲು ಇಸ್ಲಾಂ ಎಂಬ ತಳಹದಿಯೇ ಸಾಕಿತ್ತು ಅಂತಾದರೆ, ಕೊಲ್ಲಿಯಲ್ಲಿ 22 ಅರಬ್ ದೇಶಗಳು ಏಕಿವೆ? ಆ ದೇಶಗಳಲ್ಲಿ ಒಂದೇ ಭಾಷೆ ಮಾತನಾಡುತ್ತಾರೆ. ಭೂಭಾಗಗಳನ್ನೂ, ಸಂಸ್ಕೃತಿಯನ್ನೂ, ಅಸ್ಮಿತೆಯನ್ನೂ ಜೋಡಿಸಲು ಇಸ್ಲಾಮ್ ಒಂದೇ ಸಾಕು ಅಂತಾಗಿದ್ದರೆ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ಏಕೆ ಎರಡು ದೇಶಗಳಾಗಿ ಇರಬೇಕಿತ್ತು? ಕಾಬೂಲ್‌ನಲ್ಲಿ ಇಂದು ತಾಲಿಬಾನ್ ಅಧಿಕಾರದಲ್ಲಿದೆ. ಕ್ವೆಟ್ಟಾ ಮತ್ತು ಪಾಕಿಸ್ತಾನದ ಫ್ರಂಟಿಯರ್‌ನಲ್ಲಿ ಈ ಹಿಂದೆ ಅವರು ಅಜ್ಞಾತವಾಸದಲ್ಲಿದ್ದರು. ಆದರೆ ಅವರು ಯಾವತ್ತೂ ಅಫ್ಘಾನಿಸ್ತಾನವನ್ನು ಪಾಕಿಸ್ತಾನದ ಜತೆಗೆ ಒಂದುಗೂಡಿಸಬೇಕು ಎಂದು ಕೇಳಲಿಲ್ಲ. ಅದರ ಬಗ್ಗೆ ಆಸಕ್ತಿಯನ್ನೂ ತೋರಲಿಲ್ಲ. ಅಫ್ಘಾನಿಸ್ತಾನಕ್ಕೆ ಮರಳಿ ಅಧಿಕಾರ ಹಿಡಿದ ಮೇಲೂ ಅವರು ಪಾಕ್-ಆಫ್ಘನ್ ಒಂದಾಗಬೇಕು ಎನ್ನಲಿಲ್ಲ. ಎಲ್ಲರಂತೆ ಅವರಿಗೂ ಆಫ್ಘನ್ ರಾಷ್ಟ್ರೀಯವಾದಕ್ಕೆ ಆಫ್ಘನ್ ಗುರುತೇ ಪರಮೋಚ್ಚ ಸಂಕೇತ. ಇದು ಅವರನ್ನೇನೂ ಕಡಿಮೆ ಮುಸ್ಲಿಮರನ್ನಾಗಿಸುವುದಿಲ್ಲ. ಇಸ್ಲಾಮ್‌ನಲ್ಲಿ 72 ವಿಭಿನ್ನ ಜನಾಂಗಗಳಿವೆ ಎಂಬುದನ್ನು ಯಾವುದೇ ಸಮಾಜಶಾಸ್ತ್ರಜ್ಞ ನಿಮಗೆ ತಿಳಿಸುತ್ತಾನೆ. ಬಹುಶಃ ಹನಾಫಿ ಇಸ್ಲಾಂ ಪಂಗಡವನ್ನು ಪ್ರತಿನಿಧಿಸುವ ಮುನೀರ್, ಇಸ್ಮಾಯಿಲ್‌ಗಳನ್ನೂ ಬೊಹ್ರಾಗಳನ್ನೂ ನಿಜವಾದ ಮುಸ್ಲಿಂ ಎಂದು ಒಪ್ಪುತ್ತಾನೆಯೇ?

ಜಗತ್ತಿನಲ್ಲಿರುವ ಬಹು ಸಂಸ್ಕೃತಿಯ ವೈವಿಧ್ಯಗಳ ಬಗ್ಗೆ ಇಸ್ಲಾಮಿಕ್ ಮೂಲ ಸಿದ್ಧಾಂತಕ್ಕೆ ಯಾವ ತಕರಾರೂ ಇಲ್ಲ. ಕುರಾನ್‌ನಲ್ಲಿ ಅಲ್ಲಾನನ್ನು ಯಾವಾಗಲೂ ರಬ್-ಉಲ್-ಅಲ್-ಅಮಿನ್ ಎಂದೇ ಕರೆದಿದ್ದಾರೆ. ಅಂದರೆ ಆತ ಬ್ರಹ್ಮಾಂಡದ ದೇವರು. ಅವನು ಕೇವಲ ರಬ್-ಅಲ್-ಮುಸ್ಲಿಮೀನ್ ಅರ್ಥಾತ್ ಮುಸ್ಲಿಮರ ದೇವರು ಅಲ್ಲ. ದೇವರು ಎಲ್ಲಾ ಭಾಷೆಗಳಲ್ಲೂ ಸಂದೇಶವನ್ನು ಕಳುಹಿಸಿದ್ದಾನೆ. ಕೊನೆಯ ಸಂದೇಶವೇ ಕುರಾನ್. ಎಲ್ಲಾ ಮನುಷ್ಯರನ್ನೂ ಅಲ್ಲಾ ಸೃಷ್ಟಿಸಿದ್ದಾನೆ. ಹೀಗಾಗಿ ಜಡ್ಜ್ ಮಾಡಬೇಕಾದವರು ದೇವರೇ ಹೊರತು ನಾವಲ್ಲ.

ಪಾಕಿಸ್ತಾನವೆಂಬುದು ಒಂದು ಅದ್ವಿತೀಯವಾದ ಹಾಗೂ ಋಣಾತ್ಮಕವಾದ ವಿಫಲ ಪ್ರಯೋಗ. ಬ್ರಿಟಿಷ್ ವಸಾಹತುಶಾಹಿಗಳು ತಮ್ಮ ಶೋಕಿಗಾಗಿ ಅಂಥದೊಂದು ಪ್ರಯೋಗ ಮಾಡಿದರು. ಇಸ್ಲಾಂ ಅಪಾಯದಲ್ಲಿದೆ, ಹೀಗಾಗಿ ಭಾರತದಿಂದ ಮುಸ್ಲಿಮರನ್ನು ಬೇರ್ಪಡಿಸುವ ಮೂಲಕ ಅವರನ್ನು ರಕ್ಷಿಸಬೇಕಿದೆ ಎಂಬ ಅಪನಂಬಿಕೆಯಲ್ಲಿ ಅವರು ಪಾಕಿಸ್ತಾನದ ಸೃಷ್ಟಿಗೆ ಅವಕಾಶ ನೀಡಿದರು. ಆದರೆ ನನ್ನ ಪ್ರಕಾರ ಇಸ್ಲಾಂ ಅಪಾಯಕ್ಕೆ ಸಿಲುಕಬಹುದು ಎಂಬ ಕಲ್ಪನೆಯೇ ಅಸಂಬದ್ಧ ಅಥವಾ ಕೇವಲ ವದಂತಿ. ಆಸ್ತಿಕ ಮುಸ್ಲಿಮರು ನಂಬುವಂತೆ ಇಸ್ಲಾಂ ಎಂಬುದು ನಿಜವಾದ ಧರ್ಮವೇ ಆಗಿದ್ದರೆ ಅದು ಯಾವತ್ತೂ ಅಪಾಯಕ್ಕೆ ಸಿಲುಕಲು ಸಾಧ್ಯವಿಲ್ಲ. ಸುಳ್ಳು ಧರ್ಮ ಮಾತ್ರ ಅಪಾಯಕ್ಕೆ ಸಿಲುಕಬಲ್ಲದು.

ಆದರೆ, ಮುಸ್ಲಿಮರು ಅಪಾಯಕ್ಕೆ ಸಿಲುಕಬಹುದು. ಅಂತೆಯೇ ಕ್ರಿಶ್ಚಿಯನ್ನರೂ, ಪಾರ್ಸಿಗಳೂ, ಬೌದ್ಧರೂ ಅಥವಾ ಇನ್ನಾವುದೇ ಧರ್ಮದವರೂ ಅಪಾಯಕ್ಕೆ ಸಿಲುಕಬಹುದು. ಹಿಂದೂ ಧರ್ಮದಲ್ಲಿ ನಮ್ಮದು ಮೇಲ್ವರ್ಗದ ಜಾತಿ ಎಂದು ನಂಬಿದವರು ಕೂಡ ಅಪಾಯಕ್ಕೆ ಸಿಲುಕಬಹುದು. ಕಮ್ಯುನಿಸ್ಟ್ ಚೀನಾದ ನಾಸ್ತಿಕ ಆಡಳಿತದಲ್ಲಿ ಬೌದ್ಧರು ಮತ್ತು ಮುಸ್ಲಿಮರು ಹೆಚ್ಚುಕಮ್ಮಿ ನಾಮಾವಶೇಷವೇ ಆಗಿಬಿಟ್ಟಿದ್ದಾರೆ. ಅದು ಪಾಕಿಸ್ತಾನದ ಗ್ರೇಟ್ ಮುಸ್ಲಿಮರಿಗೆ ಸ್ವಲ್ಪವೂ ಚಿಂತೆಯನ್ನು ಹುಟ್ಟಿಸುತ್ತಿಲ್ಲ. ಒಂದು ವೇಳೆ ಜನರಲ್ ಮುನೀರ್ ಚೀನಾದಲ್ಲಿರುವ ಉಯಿಗುರ್ ಮುಸ್ಲಿಮರ ಸಂಕಷ್ಟದ ಬಗ್ಗೆ ಮಾತನಾಡಿದರೆ ತಕ್ಷಣ ಪಾಕಿಸ್ತಾನದ ಸರಕಾರವೇ ಅವನನ್ನು ಮನೆಗೆ ಕಳಿಸುತ್ತದೆ. ಏಕೆಂದರೆ ಪಾಕಿಸ್ತಾನದ ಆಡಳಿತಗಾರರು ತಮ್ಮ ದೇಶವನ್ನು ಖಾಸಗಿ ಆಸ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಚೀನಾದ ರಕ್ಷಣೆಯಿಲ್ಲದೆ ಅವರಿಗೆ ಬದುಕುಳಿಯಲು ಸಾಧ್ಯವೇ ಇಲ್ಲ. ನಿಜವಾಗಿ ಹೇಳಬೇಕೆಂದರೆ ಪಾಕಿಸ್ತಾನ ಇಂದಿಗೂ ಮತ್ತೊಂದು ದೇಶದ ಡೊಮಿನಿಯನ್ ಪ್ರದೇಶವೇ ಆಗಿದೆ. ಆದರೆ ಈಗ ಅದು ಬ್ರಿಟಿಷ್ ಆಡಳಿತದ ಡೊಮಿನಿಯನ್ ಅಲ್ಲ, ಬದಲಿಗೆ ಚೈನೀಸ್ ಡೊಮಿನಿಯನ್.

ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಜನರಿಗೆ ಕಷ್ಟಗಳಿದ್ದರೆ ಅಥವಾ ಯಾವುದರ ಬಗ್ಗೆಯಾದರೂ ಭೀತಿಯಿದ್ದರೆ ಆಗ ಅಂಥ ಸಮಸ್ಯೆಗಳಿಗೆ ರಾಜಕೀಯ ಪರಿಹಾರಗಳಿರುತ್ತವೆ. ದೇಶದ ವಿಭಜನೆಯೇ ಏಕೈಕ ಪರಿಹಾರವಾಗಿತ್ತು ಅಂತಾದರೆ ಒಂದೊಂದು ಊರು ಅಥವಾ ಜಿಲ್ಲೆ ಕೂಡ ಇಂದು ಪ್ರತ್ಯೇಕ ದೇಶವಾಗಬೇಕಿತ್ತು! ಆಗ ಜಗತ್ತಿನಲ್ಲಿ ನೂರಾರು ಅಮೆರಿಕಗಳು, ರಷ್ಯಾಗಳು, ಚೀನಾಗಳು ಇರುತ್ತಿದ್ದವು.

ಭಾರತದ ಪ್ರಜಾಸತ್ತಾತ್ಮಕ ಸಂವಿಧಾನವು ಸಹಬಾಳ್ವೆಗೆ ಸಂಬಂಧಿಸಿದಂತೆ ಏನೇ ಸಮಸ್ಯೆಗಳಿದ್ದರೂ ಅವುಗಳಿಗೆ ಅದ್ಭುತವಾದ ಪರಿಹಾರಗಳನ್ನು ನೀಡುತ್ತಾ ಬಂದಿದೆ. ಪ್ರಜಾಪ್ರಭುತ್ವದ ಅತ್ಯುನ್ನತ ಮೌಲ್ಯವೇ ಇದು. ಸರ್ವಾಧಿಕಾರಿಗಳು ಪರಿಹಾರಗಳನ್ನು ಹೇರುತ್ತಾರೆ. ಅವುಗಳಲ್ಲಿ ಕೆಲವು ಒಳ್ಳೆಯದಿರುತ್ತವೆ, ಇನ್ನು ಕೆಲವನ್ನು ಒಪ್ಪಲು ಸಾಧ್ಯವಿರುವುದಿಲ್ಲ.

ಆಸಿಮ್ ಮುನೀರ್‌ನ ನಿಜವಾದ ಉದ್ದೇಶ ಭಾರತದೊಂದಿಗೆ ಯುದ್ಧ ಮಾಡುವುದಾಗಿರಲಿಕ್ಕಿಲ್ಲ. ಆದರೂ ಅದೃಷ್ಟದ ನಾಣ್ಯವನ್ನು ಚಿಮ್ಮಿದಾಗ ಅದು ಯಾವ ಮುಖವನ್ನು ಮೇಲು ಮಾಡಿ ಬೀಳುತ್ತದೆ ಎಂದು ಹೇಗೆ ಹೇಳುವುದು? ಪರಮಾಣು ಅಸ್ತ್ರಗಳನ್ನು ಹೊಂದಿರುವ ಎರಡು ದೇಶಗಳ ನಡುವೆ ಯುದ್ಧವನ್ನು ಸುಲಭಕ್ಕೆ ಯಾರೂ ಊಹೆ ಮಾಡಲು ಸಾಧ್ಯವಿಲ್ಲ. ಯುದ್ಧ ನಡೆದರೆ ಏನಾದೀತು ಎಂದು ಕಲ್ಪನೆ ಕೂಡ ಮಾಡಿಕೊಳ್ಳಲು ಆಗದು. ಅಣ್ವಸ್ತ್ರದ ಮಾತು ಹಾಗಿರಲಿ, ಸಾಮಾನ್ಯ ಯುದ್ಧ ನಡೆದರೂ ಈಗಾಗಲೇ ನೆಲಕಚ್ಚಿರುವ ಪಾಕಿಸ್ತಾನ ಇನ್ನಷ್ಟು ಛಿದ್ರವಾಗುತ್ತದೆ.

ಪಾಕಿಸ್ತಾನದ ರಾಜಕಾರಣಿಗಳು ಆ ದೇಶವನ್ನು ಕುಲಗೆಡಿಸುತ್ತಿದ್ದಾರೆ. ಹೀಗಾಗಿ ದೇಶ ಸ್ವಯಂನಾಶದ ಹಾದಿಯಲ್ಲಿದೆ. ಅದನ್ನು ನೋಡಿ ಜನರಲ್ ಮುನೀರ್ ಮತ್ತೊಮ್ಮೆ ಪಾಕಿಸ್ತಾನದಲ್ಲಿ ಸೇನಾದಂಗೆ ನಡೆಸುವ ಸನ್ನಾಹದಲ್ಲಿರುವಂತೆ ಕಾಣುತ್ತದೆ. ಅವರ ಮಾತುಗಳು ಇದೇ ಒಳಧ್ವನಿಯನ್ನು ಸೂಸುತ್ತಿವೆ. ಇನ್ನೊಬ್ಬ ಜಿಯಾ ಉಲ್ ಹಕ್ ಆಗಲು ಮುನೀರ್ ಹೊರಟಿದ್ದಾನೆ. 1976ರಲ್ಲಿ ಜುಲ್ಫಿಕರ್ ಅಲಿ ಭುಟ್ಟೋನಿಂದ ಜಿಯಾ ಉಲ್ ಹಕ್ ಅಧಿಕಾರ ಕಿತ್ತುಕೊಂಡಿದ್ದರು. ಭುಟ್ಟೋನನ್ನು ಕೊನೆಗೆ ನ್ಯಾಯಾಂಗ ಹತ್ಯೆಗೆ ಗುರಿಪಡಿಸಲಾಯಿತು. ಭುಟ್ಟೋನ ಮಗಳು ಬೆನಜೀರ್‌ಳನ್ನು ಎಲ್ಲರ ಕಣ್ಣೆದುರೇ ಹತ್ಯೆ ಮಾಡಿದರು. ಸಾರ್ವಜನಿಕ ರ್‍ಯಾಲಿಯಲ್ಲಿ ಆಕೆ ಹೋಗುತ್ತಿದ್ದಾಗ ಗುಂಡಿಕ್ಕಿ ಕೊಲ್ಲಲಾಯಿತು. ಶತ್ರುಗಳಿಗೆ ಪಾಕಿಸ್ತಾನದ ಸೇನೆ ನೀಡುವುದು ಎರಡೇ ಆಯ್ಕೆ: ಜೈಲು ಅಥವಾ ಸಾವು. ನವಾಜ್ ಷರೀಫ್ ಅಜ್ಞಾತವಾಸದಲ್ಲಿದ್ದುಕೊಂಡೂ ಬಚಾವಾಗಿ ಬಂದಿದ್ದಕ್ಕೆ ಕಾರಣ ಅವರಿಗೆ ಸೌದಿ ಅರೇಬಿಯಾದಲ್ಲಿ ಬಲಿಷ್ಠವಾದ ಸ್ನೇಹಿತರಿದ್ದರು. ಇಲ್ಲದಿದ್ದರೆ ಅವರಿಗೂ ಹಳೆಯ ಪ್ರಧಾನಿಗಳಿಗಾದ ಗತಿಯೇ ಆಗಿರುತ್ತಿತ್ತು.

ಇತಿಹಾಸವನ್ನು ನೋಡಿದರೆ ಪಾಕಿಸ್ತಾನದ ಜನರಲ್‌ಗಳು ಆ ದೇಶಕ್ಕೆ ಯಾವತ್ತೂ ಒಳ್ಳೆಯದನ್ನು ಮಾಡಿಲ್ಲ. ಆದರೆ ಭವಿಷ್ಯದಲ್ಲಿ ಏನೋ ಅದ್ಭುತವಾದದ್ದನ್ನು ಮಾಡುತ್ತೇವೆ ಎಂಬ ಫ್ಯಾಂಟಸಿಯಲ್ಲಿ ತೇಲಾಡುವುದಕ್ಕೆ ಈ ಇತಿಹಾಸವೇನೂ ಅವರಿಗೆ ಅಡ್ಡಿಪಡಿಸಿಲ್ಲ. ಡಾಕ್ಟರ್ ಸ್ಟ್ರೇಂಜ್‌ಲವ್ ಪಾಕಿಸ್ತಾನದಲ್ಲಿ ಮತ್ತೆ ಅಧಿಕಾರಕ್ಕೆ ಬಂದಿದ್ದಾನೆ.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 353

ಸಮಾಚಾರ ಸಣ್ಣದಲ್ಲ

ಪಹಲ್ಗಾಮ್ ದಾಳಿ ಬಗ್ಗೆ ಅಣಕ: 19 ಜನರ ಸೆರೆ

ಗುವಾಹಟಿ: ಪಹಲ್ಗಾಮ್‌ನಲ್ಲಿ 26ರ ಮಂದಿಯ ಜೀವಬಲಿ ಪಡೆದ ಭಯೋತ್ಪಾದಕ ದಾಳಿ ಕುರಿತು ನಕಾರಾತ್ಮಕ ಹೇಳಿಕೆ ನೀಡಿದ್ದ ಈಶಾನ್ಯದ 3 ರಾಜ್ಯಗಳ 19 ಜನರನ್ನು ಬಂಧಿಸಲಾಗಿದೆ. ಅಸ್ಸಾಂ, ಮೇಘಾಲಯ ಮತ್ತು ತ್ರಿಪುರಾದಲ್ಲಿ ಶಾಸಕ, ಪತ್ರಕರ್ತ, ವಿದ್ಯಾರ್ಥಿಗಳು, ವಕೀಲರು ಮತ್ತು ನಿವೃತ್ತ ಶಿಕ್ಷಕರು ಬಂಧಿತರಾಗಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿನ ಪೋಸ್ಟ್‌ಗಳಿಗೆ ಸಂಬಂಧಿಸಿ ಬಂಧಿಸಲಾಗಿದೆ. ಅಸ್ಸಾಂ ರಾಜ್ಯವೊಂದರಲ್ಲೇ 14 ಮಂದಿಯ ಬಂಧನವಾಗಿದೆ. ಪ್ರತಿಪಕ್ಷ ಆಲ್ ಇಂಡಿಯಾ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಎಐಯುಡಿಎಫ್) ಶಾಸಕ ಅಮೀನುಲ್ ಇಸ್ಲಾಂ ಬಂಧನವಾಗಿದೆ. 2019ರ ಪುಲ್ವಾಮಾ ದಾಳಿ ಮತ್ತು ಪಹಲ್ಗಾಮ್ ದಾಳಿ ಭಾರತದ ಸರಕಾರದ ಪಿತೂರಿ ಎಂದು ಹೇಳಿದ್ದಕ್ಕಾಗಿ ದೇಶದ್ರೋಹ ಆರೋಪ ಹೊರಿಸಲಾಗಿದೆ. 4 ದಿನ ಪೊಲೀಸ್ ಕಸ್ಟಡಿಗೂ ಕೊಡಲಾಗಿದೆ ಪತ್ರಕರ್ತ ಎಂ.ಡಿ.ಜಬೀರ್ ಹುಸೇನ್, ಸಿಲ್ಚಾರ್ ಅಸ್ಸಾಂ ವಿವಿ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿ ಬಹಾವುದ್ದೀನ್ ಮತ್ತು ವಕೀಲ ಮಜುಂದರ್ ಬಂಧಿತರು. ಇವರೆಲ್ಲರೂ ಶುಕ್ರವಾರ ರಾತ್ರಿ ಫೇಸ್‌ಬುಕ್‌ನಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂದು ಪೋಸ್ಟ್ ಮಾಡಿದ್ದರು. ತ್ರಿಪುರಾದಲ್ಲಿ ಇಬ್ಬರು ನಿವೃತ್ತ ಶಿಕ್ಷಕರು ಸೇರಿ ನಾಲ್ವರನ್ನು ಬಂಧಿಸಲಾಗಿದೆ. ಮೇಘಾಲಯದ ಗುವಾಹಟಿ ಸುದ್ದಿ ವಾಹಿನಿ ಪ್ರಸಾರ ಮಾಡಿದ ವೀಡಿಯೊದಲ್ಲಿ ದೇಶ ವಿರೋಧಿ ಹೇಳಿಕೆ ನೀಡಿದ ಪೂರ್ವ ಖಾಸಿ ಹಿಲ್ಸ್‌ನ ಸೈಮನ್ ಶಿಲ್ಲಾ ಎಂಬಾತನನ್ನು ಬಂಧಿಸಲಾಗಿದೆ.

ಗಾಂಜಾ: ನಿರ್ದೇಶಕ ಖಾಲಿದ್, ಹಮ್ಜಾ ಸೆರೆ

ಕೊಚ್ಚಿ: ಗಾಂಜಾ ಹೈಬ್ರಿಡ್ ಬೀಜಗಳನ್ನು ಇಟ್ಟುಕೊಂಡಿದ್ದ ಇಬ್ಬರು ಮಲಯಾಳಂ ಸಿನಿಮಾ ನಿರ್ದೇಶಕರನ್ನು ಕೊಚ್ಚಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಖಾಲೀದ್ ರೆಹಮಾನ್, ಆಶ್ರಫ್ ಹಮ್ಜಾ ಬಂಧಿತರು. ಅಬಕಾರಿ ಇಲಾಖೆ ಅಧಿಕಾರಿಗಳು ಭಾನುವಾರ ನಸುಕಿನ 2.30ರಲ್ಲಿ ಕೊಚ್ಚಿಯ ಗೋಸ್ರಿ ಬ್ರಿಡ್ಜ್ ಬಳಿ ಇರುವ ಮನೆಗಳ ಮೇಲೆ ದಾಳಿ ನಡೆಸಿ ಇಬ್ಬರೂ ಚಿತ್ರ ನಿರ್ದೇಶಕರನ್ನು ಬಂಧಿಸಿದರು. ಅವರಿಂದ ಹೈಬ್ರೀಡ್ ಗಾಂಜಾ ಬೀಜಗಳನ್ನೂ ವಶಪಡಿಸಿಕೊಳ್ಳಲಾಗಿದೆ. ರೆಹಮಾನ್ ಮತ್ತು ಹಮ್ಜಾ ನಿಯಮಿತ ಮಾದಕ ದ್ರವ್ಯ ಬಳಕೆದಾರರು ಎಂದು ಅಬಕಾರಿ ಇಲಾಖೆ ದೃಢಪಡಿಸಿದೆ.

ಗಡುವು ಅಂತ್ಯ: ವಾಘಾ ಗಡಿಯಲ್ಲಿ ಉದ್ದ ಸಾಲು

ಚಂಡೀಗಢ: ಸಾರ್ಕ್ ವೀಸಾದಡಿ ಭಾರತಕ್ಕೆ ಆಗಮಿಸಿದ್ದ ಪಾಕಿಸ್ತಾನ ಪ್ರಜೆಗಳು ದೇಶ ಬಿಟ್ಟು ತೆರಳಲು ಭಾರತ ಸರಕಾರ ವಿಧಿಸಿದ್ದ ಗಡುವು ಭಾನುವಾರ ಸಂಜೆ ಅಂತ್ಯಗೊಂಡಿದ್ದು, ಮಹಿಳೆಯರು, ಮಕ್ಕಳು ಸೇರಿದಂತೆ ನೂರಾರು ಜನರು ಪಂಜಾಬಿನ ಅಟ್ಟಾರಿ ವಾಘಾ ಗಡಿ ಮೂಲಕ ಪಾಕಿಸ್ಥಾನಕ್ಕೆ ವಾಪಸಾದರು. ಈ ವೇಳೆ ಭಾರತದಲ್ಲಿನ ಸಂಬಂಧಿಕರು ಕಣ್ಣೀರ ವಿದಾಯ ಹೇಳಿದರು. 'ನಾನು, ಸಹೋದರ ಮತ್ತು ತಂದೆ ಪಾಕಿಸ್ತಾನದ ಪ್ರಜೆಗಳು. ನನ್ನಮ್ಮ ಭಾರತದವಳು. 1991ರಲ್ಲಿ ಪೋಷಕರು ವಿವಾಹವಾಗಿತ್ತು. ಅಮ್ಮನಿಗೆ ನಮ್ಮೊಂದಿಗೆ ಪಾಕಿಸ್ತಾನಕ್ಕೆ ಬರಲು ಅನುಮತಿಯಿಲ್ಲ. ಅಮ್ಮನನ್ನು ಮತ್ತೆ ಯಾವಾಗ ನೋಡುತ್ತೇನೆ ಎಂಬುದೇ ತಿಳಿದಿಲ್ಲ' ಎಂದು ಯುವತಿ ಸರಿತಾ ಕಣ್ಣೀರು ಹಾಕಿದರು. ಸರಿತಾ ಜತೆ ಸಹೋದರ ಹಾಗೂ ತಂದೆ ಕೂಡಾ ಪಾಕ್‌ಗೆ ವಾಪಸಾದರು. ಏ.29ರಂದು ಸಂಬಂಧಿಕರ ವಿವಾಹ ಸಮಾರಂಭ. ಅದಕ್ಕಾಗಿ ನಾವೆಲ್ಲಾ ಭಾರತಕ್ಕೆ ಬಂದಿದ್ದೆವು. ಆದರೆ, ಮದುವೆ ಕಾರ್ಯ ಮುಗಿಯುವ ಮುನ್ನವೇ ವಾಪಸಾಗಬೇಕಾಯಿತು ಎಂದು ಸರಿತಾ ಬೇಸರ ವ್ಯಕ್ತಪಡಿಸಿದರು. ಭಾರತದಿಂದ ನಿರ್ಗಮಿಸಲು ಅಟ್ಟಾರಿ-ವಾಘಾ ಗಡಿಯಲ್ಲಿ ನೂರಾರು ಸಂಖ್ಯೆಯಲ್ಲಿ ಜನರು ಭಾನುವಾರ ಸಾಲುಗಟ್ಟಿದ್ದರು.

ಮ.ಪ್ರ: ವ್ಯಾನ್ ಬಾವಿಗೆ ಉರುಳಿ 11 ಜನ ಸಾವು

ಮಂದಸೌರ್: ಮಧ್ಯಪ್ರದೇಶ ರಾಜ್ಯದ ಮಂದಸೌರ್ ಜಿಲ್ಲೆಯಲ್ಲಿ ಭಾನುವಾರ ವೇಗವಾಗಿ ಬಂದ ಪ್ರಯಾಣಿಕರ ವ್ಯಾನ್, ಮೋಟಾರ್ ಬೈಕ್‌ಗೆ ಡಿಕ್ಕಿ ಹೊಡೆದು ಬಳಿಕ ನೀರು ತುಂಬಿದ ಬಾವಿಗೆ ಉರುಳಿದ್ದರಿಂದ 11 ಮಂದಿ ಸಾವನ್ನಪ್ಪಿದ್ದಾರೆ. ಮೃತರಲ್ಲಿ ಬೈಕ್ ಸವಾರನೂ ಸೇರಿದ್ದಾನೆ. ನಾರಾಯಣಗಢ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ವ್ಯಾನ್‌ನಲ್ಲಿ ಚಾಲಕ ಮತ್ತು 13 ಪ್ರಯಾಣಿಕರು. ಅವರಲ್ಲಿ ನಾಲ್ವರನ್ನು ರಕ್ಷಿಸಲಾಗಿದೆ. ವ್ಯಾನ್‌ನಲ್ಲಿದ್ದ 10 ಮಂದಿ ಮತ್ತು ಬೈಕ್ ಚಾಲಕ ಮೃತಪಟ್ಟಿದ್ದಾರೆ ಎಂದು ರತ್ಲಂ ವಲಯದ ಉಪ ಮಹಾನಿರ್ದೇಶಕ((ಡಿಐಜಿ) ಮನೋಜ್ ಸಿಂಗ್ ಹೇಳಿದ್ದಾರೆ.

{ **ಶಾಹಿದ್ ಅಫ್ರಿದಿ** } ಪಾಕ್ ಮಾಜಿ ಕ್ರಿಕೆಟಿಗ

ಭಾರತದಲ್ಲಿ ಪಟಾಕಿ ಸಿಡಿದರೂ ಪಾಕಿಸ್ತಾನವನ್ನೇ ದೂರುತ್ತಾರೆ. 26 ಜನರ ಸಾವಿಗೆ ಕಾರಣವಾದ ಪಹಲ್ಗಾಮ್ ದಾಳಿಗೆ ಪಾಕ್ ಕಾರಣ ಅಲ್ಲ. ಅದರಲ್ಲಿ ಭಾರತೀಯ ಸೇನೆ ಭದ್ರತಾ ಲೋಪವಿದೆ. ಕಾಶ್ಮೀರದಲ್ಲಿ 8,00,000 ಸೈನಿಕರಿದ್ದರೂ ಇಂತಹ ದಾಳಿ ಸಂಭವಿಸುತ್ತಿವೆ. ಜನರಿಗೆ ಭದ್ರತೆ ಒದಗಿಸಲಾಗದಿದ್ದರೆ ನೀವು ಅಸಮರ್ಥರು, ನಿಷ್ಪ್ರಯೋಜಕರು ಎಂದರ್ಥ.

ಜಮ್ಮು-ಕಾಶ್ಮೀರದ ಅಭಿವೃದ್ಧಿ ಸಹಿಸಲಾಗದೇ ಉಗ್ರ ದಾಳಿ

ಶತ್ರುಗಳ ಮೇಲೆ ಪ್ರತೀಕಾರ ಕ್ರಮ ಖಂಡಿತ: ಪ್ರಧಾನಿ ವಚನ

ರಕ್ತ ಕುದಿಯುತ್ತಿದೆ

ದೆಹಲಿ: ಪಹಲ್ಗಾಮ್‌ನಲ್ಲಿನ ಭಯೋತ್ಪಾದಕ ದಾಳಿಗೆ ಬಲಿಯಾದ 26 ಮಂದಿಯ ಕುಟುಂಬದವರು ದುಃಖಿಸುತ್ತಿರುವ ದೃಶ್ಯಗಳನ್ನು ನೋಡಿದರೆ ಪ್ರತಿಯೊಬ್ಬ ಭಾರತೀಯನ ರಕ್ತವೂ ಕುದಿಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಪ್ರತಿ ತಿಂಗಳ ಕೊನೆ ಭಾನುವಾರ ಪ್ರಸಾರವಾಗುವ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನ 121ನೇ ಸಂಚಿಕೆಯಲ್ಲಿ ಮಾತನಾಡಿದ ಮೋದಿ, ದಾಳಿಯಿಂದ ವೈಯಕ್ತಿಕವಾಗಿ ನನಗೆ ತುಂಬಾ ನೋವಾಗಿದೆ. ಇದು ಭಯೋತ್ಪಾದನೆ ಬೆಂಬಲಿಸುವವರ ಹೇಡಿತನವನ್ನು ಎತ್ತಿ ತೋರುತ್ತದೆ. ಉಗ್ರ ದಾಳಿ ನಡೆಸಿದವರಿಗೆ, ಅವರಿಗೆ ನೆರವಾದವರಿಗೆ, ಭಯೋತ್ಪಾದನೆ ಬೆಂಬಲಿಸಿದವರಿಗೆ, ತೆರೆಮರೆಯಲ್ಲಿದ್ದು ಸೂತ್ರಧಾರಿಗಳಾಗಿದ್ದವರ ವಿರುದ್ಧ ಭಾರತ ಸರಕಾರ ಕಠಿಣ ಕ್ರಮ ಕೈಗೊಳ್ಳಲಿದೆ ಎಂದು ಗುಡುಗಿದ್ದಾರೆ.

ಕಾಶ್ಮೀರ ಪ್ರಗತಿಗೆ ಹೊಟ್ಟೆಕಿಚ್ಚು: ಕಾಶ್ಮೀರ ಇತ್ತೀಚಿನ ವರ್ಷಗಳಲ್ಲಿ ಅಭೂತಪೂರ್ವ ಪ್ರಗತಿ ಕಂಡಿತ್ತು. ಪ್ರವಾಸೋದ್ಯಮದಲ್ಲಿ ಹೊಸ ಉತ್ಸಾಹ ಮೂಡಿತ್ತು. ಯುವಜನರಿಗೆ ಸಾಕಷ್ಟು ಉದ್ಯೋಗ ಅವಕಾಶ ಸೃಷ್ಟಿಯಾಗಿತ್ತು. ಕಾಶ್ಮೀರದಲ್ಲಿ ಶಾಂತಿ ಮರಳುತ್ತಿತ್ತು. ಶಾಲಾ ಕಾಲೇಜುಗಳಲ್ಲಿ ಚೈತನ್ಯವಿತ್ತು. ಆದರೆ, ಜಮ್ಮು-ಕಾಶ್ಮೀರ ಭಾಗದಲ್ಲಿ ಆಗಿದ್ದ ಈ ಎಲ್ಲಾ ಪ್ರಗತಿಯನ್ನೂ ಕಂಡು ಸಹಿಸಲಾರದೇ ಇದ್ದವರಿಂದ ಈ ದಾಳಿಯಾಗಿದೆ. ಭಾರತದ ಶತ್ರುಗಳು ಕಾಶ್ಮೀರದಲ್ಲಿನ ಪ್ರಗತಿಗತಿಯ ಹಳಿ ತಪ್ಪಿಸಲು ನಡೆಸಿದ ಹತಾಶ ಪ್ರಯತ್ನವಿದು. ಭಯೋತ್ಪಾದಕರು ಮತ್ತೊಮ್ಮೆ ಕಾಶ್ಮೀರವನ್ನು ನಾಶಮಾಡಲು, ಅಲ್ಲಿನ ಶಾಂತಿ ಕದಡಲು ಯತ್ನಿಸಿದ್ದಾರೆ. ಆದರೆ ಅದಕ್ಕೆಲ್ಲ ಹೆದರುವುದಿಲ್ಲ. ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದೆ ಮತ್ತು ಕಾಶ್ಮೀರದಲ್ಲಿ ಅಭಿವೃದ್ಧಿ ಪರ್ವ ಮುಂದುವರಿಯಲಿದೆ ಎಂದು ಮೋದಿ ಭರವಸೆಯ ಮಾನತಾಡಿದ್ದಾರೆ.

ಏ.22ರಂದು ಪಹಲ್ಗಾಮ್ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟವರಿಗೆ ಪ್ರಧಾನಿ ಸಂತಾಪ ಸೂಚಿಸಿದ್ದಾರೆ. ಈ ದಾಳಿಯು ಭಯೋತ್ಪಾದಕರ ಹತಾಶೆಯ ಪ್ರತಿಬಿಂಬವಾಗಿದೆ, ವಿಶೇಷವಾಗಿ ಕಾಶ್ಮೀರದಲ್ಲಿ ಶಾಂತಿ ಮರಳುತ್ತಿರುವಾಗ ಮತ್ತು ಪ್ರದೇಶದ ಶತ್ರುಗಳು ಈ ಪ್ರಗತಿಯನ್ನು ಸಹಿಸಲು ಸಾಧ್ಯವಿಲ್ಲ ಎಂದು ಅವರು ಒತ್ತಿ ಹೇಳಿದರು. ದಾಳಿಯನ್ನು ಖಂಡಿಸಿ ವಿಶ್ವ ನಾಯಕರು ಕರೆ ಮೂಲಕ ತಮ್ಮನ್ನು ಸಂಪರ್ಕಿಸಿದ್ದಾರೆ ಎಂದು ಪ್ರಧಾನಿ ತಿಳಿಸಿದ್ದಾರೆ.

140 ಕೋಟಿ ಭಾರತೀಯರ ಜತೆಗೆ ಇಡೀ ಜಗತ್ತು ನಿಂತಿದೆ

ಜಾಗತಿಕ ಮಟ್ಟದ ವಿವಿಧ ದೇಶಗಳ ನಾಯಕರು ಪಹಲ್ಗಾಮ್ ದಾಳಿಯನ್ನು ಖಂಡಿಸಿ ನನಗೆ ಕರೆ ಮಾಡಿ ಮಾತನಾಡಿದ್ದಾರೆ, ಸಂತಾಪ ಸೂಚಿಸಿದ್ದಾರೆ. ಭಾರತದ ಬೆಂಬಲಕ್ಕೆ ನಿಲ್ಲುವುದಾಗಿ ಭರವಸೆ ನೀಡಿದ್ದಾರೆ. ಪತ್ರಗಳನ್ನು ಬರೆದಿದ್ದಾರೆ, ಸಂದೇಶಗಳನ್ನು ಕಳುಹಿಸಿದ್ದಾರೆ. ಈ ಘೋರ ಭಯೋತ್ಪಾದಕ ದಾಳಿಯನ್ನು ಎಲ್ಲರೂ ಬಲವಾಗಿ ಖಂಡಿಸಿದ್ದಾರೆ. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ 140 ಕೋಟಿ ಭಾರತೀಯರೊಂದಿಗೆ ಇಡೀ ಜಗತ್ತು ನಿಂತಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ನ್ಯಾಯ ಸಿಗುತ್ತದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ಹಿಂದಿನ ಅಪರಾಧಿಗಳು ಮತ್ತು ಮುಖ್ಯ ಸಂಚುಕೋರರು ಕಠಿಣ ಶಿಕ್ಷೆ ಅನುಭವಿಸಲೇಬೇಕಾಗುತ್ತದೆ.

-ನರೇಂದ್ರ ಮೋದಿ, ಪ್ರಧಾನಿ

ಇವರು ಉಗ್ರರ ಸಹಚರರು, ಓವರ್ ಗ್ರೌಂಡ್ ವರ್ಕರ್ಸ್

ಲಷ್ಕರೆ, ಜೈಶ್, ಹಿಜ್ಬುಲ್ ಉಗ್ರ ಸಂಘಟನೆಯ ನಂಟು

ಪಹಲ್ಗಾಮ್ ದಾಳಿಗೆ ನೆರವಾದ 14 ಕಾಶ್ಮೀರಿಗರು!

ಶ್ರೀನಗರ: ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್ ಪ್ರದೇಶದ ಬೈಸರನ್ ಪ್ರವಾಸಿ ತಾಣದಲ್ಲಿ ಏ.22ರಂದು ನಡೆದ ಭಯೋತ್ಪಾದಕ ದಾಳಿಗೆ ಹಲವು ರೀತಿಯಲ್ಲಿ ನೆರವಾಗಿರುವ 15 ಮಂದಿ ಸ್ಥಳೀಯ ನಿವಾಸಿಗಳ ಹೆಸರನ್ನು ಘೋಷಿತ ಉಗ್ರ ಸಂಘಟನೆಗಳಾದ ಲಷ್ಕರ್ ಎ ತಯ್ಯಬಾ, ಜೈಶ್ ಎ ಮೊಹಮ್ಮದ್, ಹಿಜ್ಬುಲ್ ಮುಜಾಹಿದ್ದೀನ್ ಜತೆಗೆ ಗುರುತಿಸಲಾಗಿದ್ದು, ಭಾರತದ 'ಮೋಸ್ಟ್ ವಾಂಟೆಡ್ ಟೆರರಿಸ್ಟ್'ಗಳ ಪಟ್ಟಿಗೆ ಸೇರಿಸಲಾಗಿದೆ. ಸದ್ಯ ಈ 14 ಮಂದಿ ದೇಶದ್ರೋಹಿಗಳ ಇರುವಿಕೆ ಪತ್ತೆಗಾಗಿ ಮೊಬೈಲ್‌ಫೋನ್ ಟ್ರೇಸಿಂಗ್ ಸೇರಿದಂತೆ 'ಎಲೆಕ್ಟ್ರಾನಿಕ್ ಸರ್ವೆಲೆನ್ಸ್' ನಡೆಸಲಾಗುತ್ತಿದೆ.

ಪಹಲ್ಗಾಮ್ ದಾಳಿ ನಡೆಸಿದ 4 ಅಥವಾ 5 ಭಯೋತ್ಪಾದಕರಿಗೆ ನೆರವಾದ ಸ್ಥಳೀಯ 14 ಮಂದಿಯಲ್ಲಿ 9 ಜನರು ಲಷ್ಕರ್-ಎ-ತಯ್ಯಬಾ ಸಂಘಟನೆ ಜತೆ ನಂಟು ಹೊಂದಿದ್ದರೆ, ಜೈಶ್-ಎ-ಮೊಹಮ್ಮದ್ ಮತ್ತು ಹಿಜ್ಬುಲ್ ಮುಜಾಹಿದ್ದೀನ್ ಸಂಘಟನೆಗೆ ಸೇರಿದವರು ತಲಾ ಮೂವರಿದ್ದಾರೆ.

14 ಸಕ್ರಿಯ ಉಗ್ರ ಸಹಚರರು ದಕ್ಷಿಣ ಕಾಶ್ಮೀರದ ಅನಂತನಾಗ್, ಶೋಪಿಯಾನ್ ಮತ್ತು ಪುಲ್ವಾಮಾ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನುವುದು ಗುಪ್ತಚರ ಸಂಸ್ಥೆಗಳ ಮಾಹಿತಿ ಹಾಗೂ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಪರಿಶೋಧನೆ ವೇಳೆ ಕಂಡು ಬಂದಿದೆ.

ಒಜಿಡಬ್ಲ್ಯು

ಪಹಲ್ಗಾಮ್ ದಾಳಿಕೋರ ಉಗ್ರರಿಗೆ ಹಲವು ವಿಧದಲ್ಲಿ ನೆರವಾದ ಈ 14 ಮಂದಿ ಸ್ಥಳೀಯರನ್ನು 'ಉಗ್ರರ ಸಹಚರರು' ಮತ್ತು 'ಓವರ್ ಗ್ರೌಂಡ್ ವರ್ಕರ್ಸ್' (ಒಜಿಡಬ್ಲ್ಯು) ಎಂದು ಹೆಸರಿಸಲಾಗಿದೆ. ಇವರಲ್ಲಿ ಐವರನ್ನು 'ಪ್ರಮುಖ ಆರೋಪಿ'ಗಳು ಎಂದು ಗುರುತಿಸಲಾಗಿದೆ. ಈ ಐವರೂ ಪ್ರಮುಖ ಆರೋಪಿಗಳ ಪಹಲ್ಗಾಮ್ ದಾಳಿ ದಿನ ಬೈಸರನ್ ಪ್ರವಾಸಿ ತಾಣದ ಬಳಿ ಕಾಣಿಸಿಕೊಂಡಿದ್ದರು. ಅವರ ಮೊಬೈಲ್ ಫೋನ್‌ಗಳು ಆಗ ಚಾಲ್ತಿಯಲ್ಲಿದ್ದವು ಎಂದು ಎನ್‌ಐಎ ಕಂಡುಕೊಂಡಿದೆ. ಈ ಐವರಲ್ಲಿ ಮೂವರನ್ನು ವಶಕ್ಕೆ ತೆಗೆದುಕೊಂಡಿದ್ದು, ಉಳಿದಿಬ್ಬರ 'ಒಜಿಡಬ್ಲ್ಯು'ಗಳ ಬಂಧನಕ್ಕಾಗಿ ಶೋಧ ನಡೆಸಲಾಗುತ್ತಿದೆ. ಪಹಲ್ಗಾಮ್ ದಾಳಿಗೆ ಸಂಚು ರೂಪಿಸಿದ, ಉಗ್ರರಿಗೆ ನೆಲೆ ಒದಗಿಸಿದ, ಊಟ-ಸಂಚಾರ ಸೌಲಭ್ಯ ಒದಗಿಸಿದ, ಪಾಕ್‌ನಿಂದ ಡ್ರೋನ್ ಮೂಲಕ ಬಂದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಟ್ಟುಕೊಂಡು ಗಡಿ ನುಸುಳಿಕೊಂಡು ಬಂದ ಉಗ್ರರಿಗೆ ಒದಗಿಸಿದ ಸ್ಥಳೀಯ ಉಗ್ರ ಸಹಚರರಿಗಾಗಿ ಹುಡುಕಾಟವನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ), ಸಿಆರ್‌ಪಿಎಫ್ ಮತ್ತು ಸ್ಥಳೀಯ ಪೊಲೀಸರ ಜತೆಗೂಡಿ ನಡೆಸುತ್ತಿವೆ.

14 ಮಂದಿ ಉಗ್ರ ಸಹಚರರು

- ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ **ಎಹ್ಸಾನ್ ಉಲ್ ಹಕ್** ವಿರುದ್ಧ ಅದಾಗಲೇ ಕ್ರಮಕೈಗೊಳ್ಳಲಾಗಿದೆ. ಪುಲ್ವಾಮಾದಲ್ಲಿನ ಆತನ ಮನೆ ಧ್ವಂಸಗೊಳಿಸಲಾಗಿದೆ.
- **ಆದಿಲ್ ರೆಹಮಾನ್** ಎಂಬಾತ 2021ರಲ್ಲಿ ಉಗ್ರ ಚಟುವಟಿಕೆ ಆರಂಭಿಸಿ ಲಷ್ಕರೆ ಸಂಘಟನೆ ಸೇರಿಕೊಂಡ. ಈತ ಸೋಪೋರ್ ಕಮಾಂಡರ್ ಆಗಿದ್ದಾನೆ.
- ಅವಂತಿಪೋರಾದ ಜೈಶ್ ಎ ಮೊಹಮ್ಮದ್ ಉಗ್ರ ಸಂಘಟನೆಯ ಕಮಾಂಡರ್ ಆಗಿರುವ **ಅಹ್ಮದ್ ಶೇಖ್** 2022ರಿಂದ ಉಗ್ರ ಕೃತ್ಯ ನಡೆಸುತ್ತಿದ್ದಾನೆ.
- **ಹರೀಸ್ ನಜೀರ್** ಪುಲ್ವಾಮಾ ದಾಳಿಯಲ್ಲಿ ಭಾಗಿಯಾಗಿದ್ದ ಲಷ್ಕರ್ ಭಯೋತ್ಪಾದಕ.
- **ಅಮೀರ್ ನಜೀರ್ ವಾನಿ, ಯಾವರ್ ಅಹ್ಮದ್ ಭಟ್** ಪುಲ್ವಾಮಾ ದಾಳಿ ನಡೆಸಿದ ಜೈಶ್-ಎ-ಮೊಹಮ್ಮದ್ ಸಂಘಟನೆ ಸದಸ್ಯರು.

- **ಆಸಿಫ್ ಅಹ್ಮದ್ ಕಾಂಡೆ** 2015ರಿಂದ ಹಿಜ್ಬುಲ್ ಮುಜಾಹಿದ್ದೀನ್ ಜತೆ ಸಂಬಂಧ ಹೊಂದಿದ್ದಾನೆ. ಈತ ಕಾಶ್ಮೀರದಲ್ಲಿ ಲಷ್ಕರೆ ಮತ್ತು ಜೈಶ್ ಎ ಮೊಹಮ್ಮದ್ ಉಗ್ರರಿಗೆ ಸ್ಥಳೀಯವಾಗಿ ನೆರವಾಗುತ್ತಿದ್ದಾನೆ.
- ಶೋಪಿಯಾನ್ ಜಿಲ್ಲೆಯ **ನಾಸಿರ್ ಅಹ್ಮದ್ ವಾನಿ** ಲಷ್ಕರೆಗೆ ನೆರವಾಗುತ್ತಿದ್ದರೆ, **ಶಾಹಿದ್ ಅಹ್ಮದ್**, ಪಹಲ್ಗಾಮ್ ದಾಳಿ ನಡೆಸಿದ ಟಿಆರ್‌ಎಫ್ ಜತೆಗಿದ್ದಾನೆ.
- **ಆಮೀರ್ ಅಹ್ಮದ್ ದಾರ್** 2023ರಿಂದ ಹಾಗೂ **ಅದ್ನಾನ್ ಸಫಿ ದಾರ್** 2024ರಿಂದ ಟಿಆರ್‌ಎಫ್ ಉಗ್ರ ಸಂಚುಗಳಲ್ಲಿ ಭಾಗಿಯಾಗಿದ್ದಾರೆ.
- ಅನಂತನಾಗ್ ಜಿಲ್ಲೆ ಹಿಜ್ಬುಲ್ ಮುಖ್ಯ ಕಾರ್ಯಾಚರಣೆ ಕಮಾಂಡರ್ **ಜುಬೇರ್ ಅಹ್ಮದ್ ವಾನಿ** 2018ರಿಂದ ಭದ್ರತಾ ಪಡೆಗಳ ವಿರುದ್ಧದ ಹಲವು ದಾಳಿಗಳಿಗೆ ನೆರವಾಗಿದ್ದು, ಈತ ಎ+ ಶ್ರೇಣಿ ಭಯೋತ್ಪಾದಕನಾಗಿದ್ದಾನೆ. ಇದೇ ಜಿಲ್ಲೆಯ ಹಿಜ್ಬುಲ್ ಉಗ್ರ **ಹರುನ್ ರಶೀದ್ ಘನಿ** ತರಬೇತಿಗಾಗಿ ಪಿಒಕೆಗೆ ತೆರಳಿ ವಾಪಸಾಗಿದ್ದಾನೆ.
- **ಕುಲ್ಗಾಮ್‌ನ ಜುಬೇರ್ ಅಹ್ಮದ್ ಘನಿ** ಟಿಆರ್‌ಎಫ್ ನಂಟು ಹೊಂದಿದ್ದು, ಭದ್ರತಾ ಪಡೆಗಳ ಮೇಲಿನ ದಾಳಿಗಳಿಗೆ ನೆರವಾಗಿದ್ದಾನೆ. ಪಹಲ್ಗಾಮ್ ದಾಳಿಗೂ ಮುಂಚಿನ ಕೆಲ ದಿನಗಳ ಮೊದಲು ಇವರೆಲ್ಲರೂ ಕಾಶ್ಮೀರ ಕಣಿವೆಯಲ್ಲಿ ಸಕ್ರಿಯರಾಗಿದ್ದರು ಎಂಬುದು ತನಿಖೆ ವೇಳೆ ಮತ್ತು ಗುಪ್ತಚರ ಮಾಹಿತಿಗಳಿಂದ ಖಚಿತವಾಗಿದೆ.
- ಇವರಲ್ಲದೇ, **ಟ್ರಾಲ್‌ನ ಆಸಿಫ್ ಶೇಖ್, ಬಿಜ್‌ಬೆಹಾರ್‌ನ ಆದಿಲ್ ಗುರಿ, ಶೋಪಿಯಾನ್‌ನ ಶಬೀರ್ ಅಹ್ಮದ್ ಕುಟ್ಟಾಯ್** ಮತ್ತು **ಕುಲ್ಗಾಮ್‌ನ ಜಾಕಿರ್ ಘನಿ** ಕೂಡಾ ಉಗ್ರರಿಗೆ ನೆರವಾಗಿದ್ದು, ಅವರ ವಿರುದ್ಧ ಅದಾಗಲೇ ಕ್ರಮ ಕೈಗೊಳ್ಳಲಾಗಿದೆ.

ಪಾಕ್ ಸಚಿವ ಹನೀಫ್ ಅಬ್ಬಾಸಿ ಬಹಿರಂಗ ಬೆದರಿಕೆ

ಭಾರತ ಮೇಲೆ ದಾಳಿಗೆ 130 ಅಣುಬಾಂಬ್

ಇಸ್ಲಾಮಾಬಾದ್: ಪಾಕಿಸ್ತಾನ ತನ್ನ ಬಳಿ ಸಿದ್ಧಪಡಿಸಿ ಇಟ್ಟುಕೊಂಡಿರುವ ಪರಮಾಣು ಶಸ್ತ್ರಾಸ್ತ್ರಗಳು ಪ್ರದರ್ಶನಕ್ಕಾಗಿ ಇರಿಸಿಲ್ಲ. ಅವೆಲ್ಲವನ್ನೂ ಹಿಂದೂಸ್ತಾನವನ್ನು ಗುರಿಯಾಗಿಯೇ ಸಜ್ಜಾಗಿಡಲಾಗಿದೆ ಎಂದು ಪಾಕಿಸ್ತಾನ ಸಚಿವ ಹನೀಫ್ ಅಬ್ಬಾಸಿ ಭಾನುವಾರ ಬಹಿರಂಗವಾಗಿಯೇ ಭಾರತಕ್ಕೆ ಬೆದರಿಕೆ ಹಾಕಿದ್ದಾನೆ. ಪಾಕಿಸ್ತಾನದ ಶಸ್ತ್ರಾಗಾರದಲ್ಲಿ ಘೋರಿ, ಶಾಹೀನ್ ಮತ್ತು ಘಜ್ನವಿ ಕ್ಷಿಪಣಿಗಳು ಮತ್ತು 130 ಪರಮಾಣು ಸಿಡಿತಲೆಗಳನ್ನು ಹಿಂದೂಸ್ಥಾನಕ್ಕಾಗಿಯೇ ಸಿದ್ಧಪಡಿಸಿ ಪಾಕಿಸ್ತಾನದ ವಿವಿಧೆಡೆ ರಹಸ್ಯವಾಗಿ ಇರಿಸಿದ್ದೇವೆ. ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸಿ ನೀರು ಸರಬರಾಜನ್ನು ನಿಲ್ಲಿಸುವ ಹುಚ್ಚು ಸಾಹಸವನ್ನು ಭಾರತವೇನಾದರೂ ಮಾಡಿದರೆ ಪೂರ್ಣ ಪ್ರಮಾಣದ ಯುದ್ಧಕ್ಕೆ ಸಿದ್ಧವಾಗಬೇಕಾಗುತ್ತದೆ ಎಂದು ಬೆದರಿಕೆ ಅಸ್ತ್ರ ಪ್ರಯೋಗಿಸಿದ್ದಾನೆ. ನಾವು ದೇಶಾದ್ಯಂತ ಪರಮಾಣು ಶಸ್ತ್ರಾಸ್ತ್ರಗಳನ್ನು ಎಲ್ಲಿ ಇರಿಸಿದ್ದೇವೆ ಎಂದು ಯಾರಿಗೂ ತಿಳಿದಿಲ್ಲ. ನಾನು ಮತ್ತೊಮ್ಮೆ ಹೇಳುತ್ತೇನೆ, ಈ ಬ್ಯಾಲಿಸ್ಟಿಕ್(ಖಂಡಾಂತರ) ಕ್ಷಿಪಣಿಗಳು ಭಾರತದತ್ತಲೇ ಗುರಿಯಾಗಿವೆ ಎಂದು ಭಯ ಮೂಡಿಸಲು ಯತ್ನಿಸಿದ್ದಾನೆ. ಪಾಕಿಸ್ತಾನದ ವಾಯುಪ್ರದೇಶ ನಿರ್ಬಂಧಿಸಿದ್ದರಿಂದ ಭಾರತೀಯ ವಿಮಾನಯಾನ ಸಂಸ್ಥೆಗಳಿಗೆ ತೀವ್ರ ಅಡಚಣೆ ಉಂಟಾಗಿದೆ. 10 ದಿನದಲ್ಲಿ ಭಾರತದ ವಿಮಾನಯಾನ ಸಂಸ್ಥೆಗಳು ದಿವಾಳಿಯಾಗುತ್ತವೆ ಎಂದೂ ಬಡಾಯಿ ಕೊಚ್ಚಿಕೊಂಡಿದ್ದಾನೆ. ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಭಾರತದ ಭದ್ರತಾ ವೈಫಲ್ಯವೇ ಕಾರಣ. ಅದನ್ನು ಒಪ್ಪಿಕೊಳ್ಳುವ ಬದಲು ಪಾಕ್ ಮೇಲೆ ಹೊಣೆ ಹೊರಿಸುತ್ತಿದೆ.

ಭಾರತ ಎರಡೂ ದೇಶಗಳ ನಡುವಿನ ವ್ಯಾಪಾರ ಸ್ಥಗಿತಗೊಳಿಸಿದೆ. ಭಾರತದ ಯಾವುದೇ ಕ್ರಮಗಳನ್ನು ಎದುರಿಸಲು ಪಾಕ್ ಸಿದ್ಧ ಎಂದಿದ್ದಾನೆ.

ಯುದ್ಧಕ್ಕೆ ಸಿದ್ಧ



ಇಸ್ಲಾಮಾಬಾದ್: ಭಾರತವೇನಾದರೂ 'ಸಿಂಧೂ ನದಿ ನೀರು ಹಂಚಿಕೆ ಒಪ್ಪಂದ' ರದ್ದುಗೊಳಿಸಿದರೆ ಪಾಕಿಸ್ತಾನ ಯುದ್ಧಕ್ಕೆ ಸಿದ್ಧವಾಗಲಿದೆ ಎಂದು ಪಾಕ್ ಗೃಹ ಸಚಿವ ಮೊಹ್ಸಿನ್ ನಖ್ವಿ ಭಾನುವಾರ ಬೆದರಿಕೆ ಹಾಕಿದ್ದಾನೆ. ಪಹಲ್ಗಾಮ್ ದಾಳಿ ಬಳಿಕ ಭಾರತ ಮತ್ತು ಪಾಕ್ ನಡುವೆ ಉದ್ವಿಗ್ನತೆ ಹೆಚ್ಚಿದೆ. ಸಿಂಧೂ ಜಲ ಒಪ್ಪಂದವನ್ನು ಭಾರತ ತಡೆಹಿಡಿದಿದೆ. ಪಾಕ್ ಜನರಿಗೆ ನೀಡಿದ್ದ ವೀಸಾ ರದ್ದು, ಭಾರತದಲ್ಲಿರುವ ಪಾಕ್ ಪ್ರಜೆಗಳಿಗೆ ದೇಶ ತೊರೆಯಲು ಗಡುವು, ರಾಯಭಾರ ಕಚೇರಿ ಸಿಬ್ಬಂದಿ ಕಡಿತ ಮೊದಲಾದ ಕಠಿಣ ಕ್ರಮಗಳನ್ನು ಭಾರತ ಸರಕಾರ ತೆಗೆದುಕೊಂಡಿದೆ. ಆ ಬಳಿಕ ಪಾಕಿಸ್ತಾನದ ಒಬ್ಬೊಬ್ಬರು ಸಚಿವರು ಬೆದರಿಸುವ ಮಾತನಾಡಲಾರಂಭಿಸಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿದ ನಖ್ವಿ, ಭಾರತ ಸಿಂಧೂ ಜಲ ಒಪ್ಪಂದವನ್ನ ಏಕಪಕ್ಷೀಯವಾಗಿ ಕೊನೆಗೊಳಿಸಲು ಸಾಧ್ಯವಿಲ್ಲ. ಏಕೆಂದರೆ ಅದು ವಿಶ್ವಬ್ಯಾಂಕ್ ಮಧ್ಯಸ್ಥಿಕೆಯಲ್ಲಾದ ಒಪ್ಪಂದ. ಒಪ್ಪಂದ ರದ್ದು ಕ್ರಮ ಕೈಗೊಂಡರೆ ಪಾಕ್ ಯುದ್ಧಕ್ಕೆ ಸಿದ್ಧವಾಗಿದೆ ಎಂದೇ ಅರ್ಥ ಎಂದು ಬೆದರಿಕೆ ಹಾಕಿದ್ದಾನೆ.

ಸಮಾಜ ಸೇವಕನಿಗೆ ಗುಂಡಿಕ್ಕಿದ ಉಗ್ರರು

ಶ್ರೀನಗರ: ಜಮ್ಮು-ಕಾಶ್ಮೀರದ ಕುಪ್ವಾರಾ ಜಿಲ್ಲೆಯ ಕಂಡಿಖಾಸ್‌ನಲ್ಲಿ ಉಗ್ರರು ರಸೂಲ್ ಮಗ್ರೆ (45) ಎಂಬ ಸಾಮಾಜಿಕ ಕಾರ್ಯಕರ್ತನಿಗೆ ಶನಿವಾರ ರಾತ್ರಿ ಗುಂಡಿಕ್ಕಿದ್ದಾರೆ. ಶನಿವಾರ ರಾತ್ರಿ ಅವರು ಮನೆಯಾಚೆ ನಿಂತಿದ್ದಾಗ ಉಗ್ರರಿಂದ ಗುಂಡಿನ ದಾಳಿ ನಡೆದಿದೆ. ಹೊಟ್ಟೆ ಮತ್ತು ಎಡಗೈಗೆ ಗುಂಡು ತಗುಲಿ ಗಂಭೀರವಾಗಿ ಗಾಯಗೊಂಡ ಅವರನ್ನು ಕುಪ್ವಾರಾದ ಹಂದ್ವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಭಾನುವಾರ ಬೆಳಗ್ಗೆ ಮೃತಪಟ್ಟರು. ಭದ್ರತಾ ಪಡೆಗಳು ರಸೂಲ್ ಮಗ್ರೆ ನಿವಾಸಕ್ಕೆ ಆಗಮಿಸಿ ಪರಿಶೀಲಿಸುತ್ತಿವೆ.

ಝೀಲಂ ನದಿ ಪ್ರವಾಹ

ಇಸ್ಲಾಮಾಬಾದ್: ಭಾರತ ಜಮ್ಮು-ಕಾಶ್ಮೀರದಲ್ಲಿನ ಉರಿ ಜಲಾಶಯದಿಂದ ಭಾರೀ ಪ್ರಮಾಣದಲ್ಲಿ ನೀರು ಬಿಡುಗಡೆ ಮಾಡಿದ್ದರಿಂದ ಝೀಲಂ ನದಿಯಲ್ಲಿ ದಿಢೀರ್ ಪ್ರವಾಹ ಉಂಟಾಗಿದ್ದು, ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ(ಪಿಒಕೆ) ಮುಜಾಫರಾಬಾದ್‌ನಲ್ಲಿ ಪ್ರವಾಹ ಉಂಟಾಗಿದೆ. ನದಿ ದಂಡೆ ನಿವಾಸಿಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಗೊಳ್ಳಲು ಪಿಒಕೆ ಆಡಳಿತ ಸೂಚಿಸಿದೆ. ಮುಜಫರಾಬಾದ್‌ನಿಂದ 40 ಕಿ.ಮೀ ದೂರದ ಹಟ್ಟಿಯನ್ ಬಾಲಾ ಪಟ್ಟಣದಲ್ಲಿ ಸ್ಥಳೀಯ ಆಡಳಿತ ಪ್ರವಾಹ ಕಾರಣ ತುರ್ತು ಪರಿಸ್ಥಿತಿ ಘೋಷಿಸಿದ್ದು, ಮಸೀದಿ ಧ್ವನಿವರ್ಧಕದ ಮೂಲಕ ಪ್ರಕಟಣೆ ಹೊರಡಿಸಿದೆ. ಜೀವ ಮತ್ತು ಆಸ್ತಿ ರಕ್ಷಿಸಿಕೊಳ್ಳಲು ಹೆಣಗಾಡುತ್ತಿದ್ದೇವೆ. ಭಾರೀ ಪ್ರಮಾಣದಲ್ಲಿ ನಷ್ಟವಾಗಿದೆ ಎಂದು ಪಿಒಕೆಯಲ್ಲಿನ ಡುಮೆಲ್ ಹಳ್ಳಿಯ ನಿವಾಸಿಗಳು ಅಲವತ್ತುಕೊಂಡಿದ್ದಾರೆ. ಭಾರತ ಜಲ ಭಯೋತ್ಪಾದನೆ ಮಾಡಿದೆ ಎಂದು ಪಿಒಕೆ ಆಡಳಿತ ಆರೋಪಿಸಿದೆ.

ಉಗ್ರ ಪುತ್ರ ಆದಿಲ್ ಹುಸೇನ್‌ಗೆ ತಾಯಿ ಶಹಜಾದಾ ಬಾನೊ ಮನವಿ

ನೀನು ಶರಣಾದರೆ ನಮಗೆ ನೆಮ್ಮದಿ

ಶ್ರೀನಗರ: ಮಗನೇ ನೀನು ಎಲ್ಲೇ ಇದ್ದರೂ ಬಂದು ಕಾಶ್ಮೀರ ಪೊಲೀಸರಿಗೆ ಶರಣಾಗು, ಏಕೆಂದರೆ ನಮಗೆ ನೆಮ್ಮದಿಯಿಂದ ಬದುಕಬೇಕಿದೆ. ಇದು ಪಾಕ್ ಮೂಲದ ಟಿಆರ್‌ಎಫ್ ಉಗ್ರ ಸಂಘಟನೆ ಸೇರಿರುವ ಪುತ್ರ ಆದಿಲ್ ಹುಸೇನ್ ಥೋಕರ್‌ಗೆ ಕಾಶ್ಮೀರದಲ್ಲಿರುವ ತಾಯಿ ಶಹಜಾದಾ ಬಾನೊ ಭಾನುವಾರ ಮಾಡಿದ ಮನವಿ.

ಏ.22ರಂದು ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನಲ್ಲಿನ ಬೈಸರನ್ ಪ್ರವಾಸಿ ತಾಣದಲ್ಲಿ ಖುಷಿಯಿಂದ ವಿಹರಿಸುತ್ತಿದ್ದ ವಿವಿಧ ರಾಜ್ಯಗಳ 24 ಮತ್ತು ನೇಪಾಳದ ಒಬ್ಬ ಪ್ರವಾಸಿಯನ್ನು ಬರ್ಬರವಾಗಿ ಗುಂಡಿಕ್ಕಿ ಕೊಂದ ಐವರು ಉಗ್ರರ ತಂಡವನ್ನು ಉಗ್ರ ಆದಿಲ್ ಹುಸೇನ್ ಮುನ್ನಡೆಸಿದ್ದ. ಅನಂತನಾಗ್ ಜಿಲ್ಲೆಯ ಆದಿಲ್ ಒಂದು ಕಾಲದಲ್ಲಿ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ. 2018ರಿಂದ ಆತನ ಸಂಪರ್ಕ ಕಡಿತವಾಗಿದೆ. ಆದಿಲ್ ಹಿಂದೊಮ್ಮೆ ಮನೆಗೆ ಬಂದು ಊಟ ಮಾಡಿದ್ದ ಎಂದು ತಾಯಿ ಶಹಜಾದಾ ಬಾನೊ, ಭದ್ರತಾ ಪಡೆ ಸಿಬ್ಬಂದಿಗೆ ವಿವರಿಸಿದರು. ಬಳಿಕ ಅವರನ್ನು ಪಕ್ಕದ ಹಳ್ಳಿಯಲ್ಲಿರುವ ಸಂಬಂಧಿಕರ ಮನೆಗೆ ಕರೆದೊಯ್ದು ಬಿಡಲಾಯಿತು. ಆದಿಲ್ ತಂದೆ ವಲೀಮ್, ಸೋದರರಾದ ಜಹೀರ್ ಮತ್ತು ಅರ್ಶ್ಲಾಮ್ ಮತ್ತು ಸೋದರ ಸಂಬಂಧಿ ಜುಲಂಕರ್ ಮತ್ತು ಸಜ್ಜದ್ ಸದ್ಯ ಬಂಧನದಲ್ಲಿದ್ದಾರೆ. ಪಹಲ್ಗಾಮ್ ದಾಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಉಗ್ರ ಆದಿಲ್ ಮನೆಯನ್ನು ಬಳಿಕ ಸ್ಫೋಟಕ ಬಳಸಿ ಧ್ವಂಸ ಮಾಡಲಾಗಿದೆ.

ಪ್ರಧಾನಿ ಮೋದಿ ಮನ್ ಕಿ ಬಾತ್ ಪ್ರಸಾರ | ಆಪರೇಷನ್ ಬ್ರಹ್ಮ ರಕ್ಷಣಾ ಕಾರ್ಯಾಚರಣೆ ಪ್ರಸ್ತಾಪ

ಮನದ ಮಾತಿನಲ್ಲಿ ಕಸ್ತೂರಿ ರಂಗನ್ ಸ್ಮರಣೆ



ದೆಹಲಿ: ದೇಶದ ಮಹಾನ್ ವಿಜ್ಞಾನಿ ಡಾ. ಕೆ. ಕಸ್ತೂರಿರಂಗನ್ ಅವರನ್ನು ನಾವು ಎರಡು ದಿನಗಳ ಹಿಂದೆಯಷ್ಟೇ ಕಳೆದುಕೊಂಡಿದ್ದೇವೆ. ವಿಜ್ಞಾನ, ಶಿಕ್ಷಣ ಮತ್ತು ಭಾರತದ ಬಾಹ್ಯಾಕಾಶ ಕಾರ್ಯಕ್ರಮವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವಲ್ಲಿ ಅವರ ಕೊಡುಗೆ ಅದ್ವಿತೀಯ. ಅವರು ಭಾರತೀಯರ ಪಾಲಿಗೆ ಸದಾ ಸ್ಮರಣೀಯರು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಸ್ಮರಿಸಿದ್ದಾರೆ.

ಡಾ. ಕಸ್ತೂರಿ ರಂಗನ್ ಅವರ ನೇತೃತ್ವದಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಹೊಸ ಗುರುತನ್ನು ಪಡೆದುಕೊಂಡಿತು, ಎತ್ತರಕ್ಕೆ ಬೆಳೆಯಿತು. ದೇಶಕ್ಕೆ ಅವರ ನಿಸ್ವಾರ್ಥ ಸೇವೆ ಮತ್ತು ರಾಷ್ಟ್ರ ನಿರ್ಮಾಣಕ್ಕೆ ಅವರ ಕೊಡುಗೆ ಸದಾ ಸ್ಮರಣೀಯ ಎಂದು ಪ್ರಧಾನಿ ಮೋದಿ ತಿಂಗಳ ಕೊನೆ ಭಾನುವಾರದ ರೇಡಿಯೋ ಕಾರ್ಯಕ್ರಮದಲ್ಲಿ ನೆನಪಿಸಿಕೊಂಡಿದ್ದಾರೆ.

ಮ್ಯಾನ್ಮಾರ್ ಭೂಕಂಪ ವಿಚಾರ ಪ್ರಸ್ತಾಪಿಸಿದ ಮೋದಿ, ನೆರೆಯ ದೇಶದಲ್ಲಿ ಭೂಕಂಪ ಭಾರಿ ವಿನಾಶ ಉಂಟುಮಾಡಿತು. ಕುಸಿದ ಕಟ್ಟಡಗಳ ಅವಶೇಷಗಳಡಿ ಸಿಲುಕಿದ್ದ ಜನರಿಗೆ ಪ್ರತಿ ಉಸಿರು, ಪ್ರತಿ ಕ್ಷಣ ಅಮೂಲ್ಯವಾಗಿತ್ತು. ಭಾರತ ಕೂಡಾ ಮ್ಯಾನ್ಮಾರ್ ಸಹೋದರ ಸಹೋದರಿಯರಿಗಾಗಿ ತಕ್ಷಣವೇ 'ಆಪರೇಷನ್ ಬ್ರಹ್ಮ' ರಕ್ಷಣಾ ಕಾರ್ಯಾಚರಣೆ ಆರಂಭಿಸಿತು. ಭಾರತದ ವಾಯುಪಡೆ ವಿಮಾನಗಳು, ನೌಕಾಪಡೆ ಹಡಗುಗಳವರೆಗೆ ಪರಿಹಾರ ಸಾಮಗ್ರಿಗಳನ್ನು ಹೊತ್ತುಕೊಂಡು ಎನ್‌ಡಿಆರ್‌ಎಫ್ ರಕ್ಷಣಾ ಕಾರ್ಯಾಚರಣೆ ತಂಡವನ್ನೂ ಕರೆದುಕೊಂಡು ಸಹಾಯಕ್ಕೆ ಧಾವಿಸಿದವು. ಅಲ್ಲಿ ಒಂದು ಆಸ್ಪತ್ರೆಯನ್ನೂ ತ್ವರಿತವಾಗಿ ಸಿದ್ಧಪಡಿಸಿದವು ಎಂದು ವಿವರಿಸಿದರು. ಯಾವುದೇ ನೈಸರ್ಗಿಕ ವಿಕೋಪವನ್ನು ಎದುರಿಸುವಾಗ ನಿಮ್ಮ ಜಾಗರೂಕತೆ ಮತ್ತು ಜಾಗರೂಕತೆ ಬಹಳ ಮುಖ್ಯ. ಈಗ ನೀವು ನಿಮ್ಮ ಮೊಬೈಲ್‌ನಲ್ಲಿರುವ ವಿಶೇಷ ಅಪ್ಲಿಕೇಶನ್‌ನಿಂದ ಈ ಜಾಗರೂಕತೆಯಲ್ಲಿ ನೆರವು ಪಡೆಯಬಹುದು. ಈ ಅಪ್ಲಿಕೇಶನ್ಗಳು ನೈಸರ್ಗಿಕ ವಿಕೋಪದಲ್ಲಿ ಸಿಲುಕಿಕೊಳ್ಳದಂತೆ ನಿಮ್ಮನ್ನು ರಕ್ಷಿಸಬಹುದು.

ಬಾಹ್ಯಾಕಾಶದಲ್ಲಿ ಭಾರತ ಸಾಧನೆಗೆ ಹೆಮ್ಮೆ

ಗಗನಯಾನ, ಸ್ಪಾಡೆಕ್ಸ್ ಮತ್ತು ಚಂದ್ರಯಾನ-4 ಮತ್ತಿತರ ಮಹತ್ವದ ಯೋಜನೆಗಳಿಗೆ ಭಾರತ ಸಿದ್ಧತೆ ನಡೆಸುತ್ತಿದೆ. ಭಾರತ ವೀನಸ್ ಆರ್ಬಿಟರ್ ಮಿಷನ್ ಮತ್ತು ಮಾರ್ಸ್ ಲ್ಯಾಂಡರ್ ಯೋಜನೆಗಳಿಗೆ ಸಿದ್ಧವಾಗುತ್ತಿದೆ ಎಂದಿರುವ ಪ್ರಧಾನಿ ಮೋದಿ ದೇಶದ ಬಾಹ್ಯಾಕಾಶ ವಿಜ್ಞಾನಿಗಳ ನಾವೀನ್ಯ ಪ್ರಯೋಗಗಳನ್ನು ಶ್ಲಾಘಿಸಿದ್ದಾರೆ.

ಭಾರತ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರವನ್ನು ಖಾಸಗಿಯವರೂ ಭಾಗಿಯಾಗುವುದಕ್ಕೆ ಮುಕ್ತಗೊಳಿಸಿದೆ. ಅನೇಕ ಯುವ ಉದ್ಯಮಿಗಳು ಬಾಹ್ಯಾಕಾಶ ಕ್ಷೇತ್ರದಲ್ಲಿಯೇ ನವೋದ್ಯಮ ಆರಂಭಿಸಿ ಮುನ್ನಡೆಸುತ್ತಿದ್ದಾರೆ ಎಂದರು. ಭಾರತ ಏಕಕಾಲದಲ್ಲಿ 104 ಉಪಗ್ರಹಗಳನ್ನು ಉಡಾವಣೆ ಮಾಡುವ ಮೂಲಕ ದಾಖಲೆ ನಿರ್ಮಿಸಿದೆ. ಆ ಮೂಲಕ ಜಾಗತಿಕ ಶಕ್ತಿಯಾಗಿ ಬೆಳೆದಿದೆ. ಚಂದ್ರನ ದಕ್ಷಿಣ ಧ್ರುವದಲ್ಲಿ ಉಪಗ್ರಹ ಇಳಿಸಿದ ಮೊದಲ ದೇಶ ಭಾರತ. ಮಾರ್ಸ್ ಆರ್ಬಿಟರ್ ಮಿಷನ್(ಮಂಗಳ ಗ್ರಹ ಪರಿಭ್ರಮಣ) ಮತ್ತು ಆದಿತ್ಯ-ಎಲ್1 (ಸೂರ್ಯ ಅಧ್ಯಯನ) ಸಾಹಸಗಳನ್ನೂ ಭಾರತದ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರ ಮಾಡಿದೆ ಎಂದು ಮೋದಿ ಹೆಮ್ಮೆಯಿಂದ ಹೇಳಿದ್ದಾರೆ.



ವಿಪತ್ತಿನಿಂದ ರಕ್ಷಣೆಗೆ ಸಾಚೆಟ್ ಆಪ್



ನೈಸರ್ಗಿಕ ವಿಕೋಪ ಎದುರಿಸುವ ಸಂದರ್ಭ ಜಾಗರೂಕತೆ, ಎಚ್ಚರಿಕೆ ಬಹಳ ಮುಖ್ಯ. ಅದಕ್ಕಾಗಿಯೇ ಭಾರತದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ 'ಸಾಚೆಟ್' ಎಂಬ ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಿದೆ. ನೈಸರ್ಗಿಕ ವಿಕೋಪ ಸಂದರ್ಭ ಜನರು ಕಷ್ಟಕ್ಕೆ ಸಿಲುಕುವುದರಿಂದ ತಪ್ಪಿಸಿಕೊಳ್ಳಲು ಈ ಅಪ್ಲಿಕೇಷನ್ ನೆರವಾಗುತ್ತದೆ. ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಕಾಡಿನಲ್ಲಿ 22 ಗಂಟೆ ನಡೆದು ಬಂದು ಪಹಲ್ಗಾಮ್ ದಾಳಿ

ಶ್ರೀನಗರ: ಪಹಲ್ಗಾಮ್‌ನಲ್ಲಿ 25 ಪ್ರವಾಸಿಗರು, ಒಬ್ಬ ಸ್ಥಳೀಯನನ್ನು ಕೊಂದ ಪಾಕಿಸ್ತಾನ ಮೂಲದ ಉಗ್ರ ಸಂಘಟನೆ ಟಿಆರ್‌ಎಫ್‌ನ ಐವರು ಉಗ್ರರು, ದಾಳಿಗೂ ಮುನ್ನ ಎಕೆ-47 ಮತ್ತು ಎಂ4 ಬಂದೂಕುಗಳನ್ನು ಹಿಡಿದು ಕಾಡಿನಲ್ಲಿ 22 ಗಂಟೆ ನಡೆದು ಬಂದಿದ್ದರನ್ನು ಎಂಬ ಮಾಹಿತಿ ಹೊರಬಿದ್ದಿದೆ.

ಬೈಸರನ್ ಪ್ರವಾಸಿ ತಾಣದಲ್ಲಿ ಭಯೋತ್ಪಾದಕ ಕೃತ್ಯ ನಡೆದ ಸ್ಥಳದಲ್ಲಿ ಬಂದೂಕಿನಿಂದ ಹಾರಿದ ಗುಂಡಿನ ಕಾಟ್ರಿಜ್‌ಗಳನ್ನು ಎನ್‌ಐಎ ತಂಡ ವಶಪಡಿಸಿಕೊಂಡಿದ್ದು, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಒಪ್ಪಿಸಿತ್ತು. ಭಯೋತ್ಪಾದಕರು ಅತ್ಯಾಧುನಿಕ ರಷ್ಯಾ ನಿರ್ಮಿತ ಎಕೆ-47 ಮತ್ತು ಎಂ4 ಅಸಾಲ್ಟ್ ರೈಫಲ್‌ಗಳನ್ನು ಬಳಸಿದ್ದಾರೆ ಎಂಬುದು ವಿಧಿವಿಜ್ಞಾನ ಪ್ರಯೋಗಾಲಯ ವರದಿಯಿಂದ ದೃಢಪಟ್ಟಿದೆ. ದಾಳಿ ಸಂದರ್ಭ ಉಗ್ರರು ಸ್ಥಳದಲ್ಲಿದ್ದ ಪ್ರವಾಸಿ ಹಾಗೂ ಸ್ಥಳೀಯ ನಿವಾಸಿಯ ಮೊಬೈಲ್ ಫೋನ್‌ಗಳನ್ನು ಕಸಿದುಕೊಂಡಿದ್ದಾರೆ.

ಉಗ್ರರು ಪ್ರವಾಸಿಗರ ಮೇಲೆ ಗುಂಡಿನ ಮಳೆಗರೆಯುತ್ತಿದ್ದಂತೆಯೇ ಭಯಗೊಂಡು ಮರವೇರಿದ್ದ ರೀಲ್ ವಿಡಿಯೋಗ್ರಾಫರ್ ಇಡೀ ಕೃತ್ಯವನ್ನು ಮರದ ಮೇಲಿಂದಲೇ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ. 'ಎನ್‌ಐಎ'ಗೆ ಆ ವಿಡಿಯೊಗ್ರಾಫರ್ ಪ್ರಮುಖ ಸಾಕ್ಷಿಯಾಗಿದ್ದಾರೆ. ಲಭ್ಯ ವಿಡಿಯೊ ಪ್ರಕಾರ, ನಾಲ್ವರು ಉಗ್ರರು ಎರಡು ಗುಂಪುಗಳಾಗಿ ಬೇರ್ಪಟ್ಟರು. ಹುಲ್ಲುಗಾವಲು ಪ್ರದೇಶದ ಎರಡೂ ಬದಿ ಇಬ್ಬರು ಅವಿತುಕೊಂಡಿದ್ದರೆ, ಮತ್ತಿಬ್ಬರು ತಿನಿಸು ಅಂಗಡಿ ಬಳಿ ಅವಿತಿದ್ದರು. ಮಧ್ಯಾಹ್ನ 2.30ರ ವೇಳೆ ಅಂಗಡಿಗಳ ಹಿಂದೆ ಅಡಗಿದ್ದ ಇಬ್ಬರು ಭಯೋತ್ಪಾದಕರು ಹೊರಬಂದು ತಿಂಡಿ ಸವಿಯುತ್ತಿದ್ದ ಪ್ರವಾಸಿಗರನ್ನು ಧರ್ಮದ ಬಗ್ಗೆ ಪ್ರಶ್ನಿಸಿದ್ದಾರೆ. ಸಂದರ್ಭ ಅರಿತ ಕೆಲವರು ಬೇಕೆಂದೇ 'ತಾನು ಮುಸ್ಲಿಂ' ಎಂದು ಹೇಳಿದಾಗ 'ಕಲ್ಮಾ' ಪಠಿಸಲು ಉಗ್ರರು ಹೇಳಿದ್ದಾರೆ. ಕಲ್ಮಾ ಪಠಿಸಲಾಗದವರನ್ನ ಪಾಯಿಂಟ್ ಬ್ಲ್ಯಾಕ್‌ನಲ್ಲಿ ಶೂಟ್ ಮಾಡಿದ್ದಾರೆ. ಮೊದಲ ಗುಂಡು ಹಾರುತ್ತಿದ್ದಂತೆ ಇಡೀ ಪ್ರದೇಶದಲ್ಲಿ ಭೀತಿ ಉಂಟಾಗಿ ಕೆಲವರು ದಿಕ್ಕಾಪಾಲಾಗಿ ಓಡಲಾರಂಭಿಸಿದರು.

ಸಮಾಚಾರ ಸಣ್ಣದಲ್ಲ

ವಿದ್ಯುತ್‌ಗೆ ವ್ಯಕ್ತಿ ಬಲಿ: ಶಾಸಕರಿಂದ ಸಾಂತ್ವನ

ಸಿಂಧನೂರು: ಸಿಂಧನೂರ ತಾಲ್ಲೂಕಿನ ಆಯನೂರು ಗ್ರಾಮದಲ್ಲಿ ಬೆಳಿಗ್ಗೆ 6:30ಕ್ಕೆ ಶಾರ್ಟ್ ಸರ್ಕ್ಯೂಟ್ ನಿಂದ ಕಂಬದ ತಂತಿ ಹರಿದು ಒಬ್ಬ ವ್ಯಕ್ತಿ ಸಾವು. ನಾಗರಾಜ ತಂದೆ ವಿರಭದ್ರಪ್ಪ ಕುಂಬಾರ (40)ಎಂದು ಗುರುತಿಸಲಾಗಿದೆ. ಎಂದಿನಂತೆ ಬೆಳಿಗ್ಗೆ ಹೇಳಿದ ತಕ್ಷಣ ಮನೆಯ ಹೊರಗಡೆ ಬಂದಾಗ ಏಕಾ ಏಕಿ ಕಾಲು ತಂತಿ ಮೇಲೆ ಇಟ್ಟ ಪರಿಣಾಮ ವ್ಯಕ್ತಿಗೆ ವಿದ್ಯುತ್ ಪ್ರವಾಹವಾಗಿ ಸ್ಥಳದಲ್ಲೇ ವ್ಯಕ್ತಿ ಸಾವನ್ನಪಿದ್ದಾರೆ, ಆಯನೂರು ಗ್ರಾಮದಿಂದ ಸಿಂಧನೂರು ನಗರದ ಸರಕಾರಿ ಆಸ್ಪತ್ರೆಯಲ್ಲಿ ತಂದು ಬಳಗಾನೂರು ಪೋಲಿಸ್ ಠಾಣೆಯ ಪಿಎಸ್‌ಐ ಎರಿಯಪ್ಪ ಗೌಡ ಸಮ್ಮುಖದಲ್ಲಿ ಮೃತ ವ್ಯಕ್ತಿಯ ಪಂಚಾನಾಮೆಯನ್ನು ತಾಲ್ಲೂಕು ವೈದ್ಯಾಧಿಕಾರಿಗಳು ಮಾಡಿದ್ದರು. ಘಟನೆ ಮಾಹಿತಿ ತಿಳಿದ ತಕ್ಷಣ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಸರಕಾರಿ ಆಸ್ಪತ್ರೆಗೆ ದೌಡಯಿಸಿ, ದುಃಖತಪ್ತರಾದ ಕುಟುಂಬಕ್ಕೆ ಬಸನಗೌಡ ಬಾದರ್ಲಿಯರು ಸಾಂತ್ವನ ಹೇಳಿದರು. ಕುಟುಂಬಸ್ಥರಿಗೆ ಧೈರ್ಯ ತುಂಬಿದ್ದರು ಸರಕಾರದಿಂದ ಬರುವ ಎಲ್ಲಾ ಸವಲತ್ತುಗಳನ್ನು ಮರಣ ಹೊಂದಿದ ಕುಟುಂಬಕ್ಕೆ ಸರಕಾರದಿಂದ ಕೊಡಿಸುತ್ತೆನೆ ಎಂದು ಮೃತ ಪತ್ನಿಗೆ ಭರವಸೆ ಕೊಟ್ಟರು.

ಬಸವ ಜಯಂತಿ ಪುರಾಣ ಪ್ರವಚನ

ಮುದಗಲ್: ಪಟ್ಟಣದ ಕುಂಬಾರ ಪೇಟೆಯ ಬಸವೇಶ್ವರ ದೇವಸ್ಥಾನದ ರಥೋತ್ಸವ ಹಾಗೂ ವಿಶ್ವ ಗುರು ಬಸವಣ್ಣ ನವರ ಜಯಂತ್ಯೋತ್ಸವ ಅಂಗವಾಗಿ ಜಗನ್ಮಾತೆ ಸಜ್ಜಲಗುಡ್ಡದ ಶ್ರೀಶರಣಮ್ಮ ತಾಯಿಯವರ ಎಂಟನೇ ದಿನ ಪುರಾಣ ಪ್ರವಚನ ಕಾರ್ಯಕ್ರಮ ನಡೆಯಿತು. ನಂತರ ನಂದವಾಡಗಿಯ ಡಾ. ಚನ್ನಬಸವ ದೇವರು ಮಾತನಾಡಿ, ಸಜ್ಜಲಗುಡ್ಡ ಶರಣೆ ಶರಣಮ್ಮನವರು ಲೋಕ ಕಲ್ಯಾಣಕ್ಕಾಗಿ ದೈವತ್ವದ ಹಾದಿ ಹಿಡಿದವರು. ಬಾಲ್ಯದಲ್ಲಿಯೇ ವೈರಾಗ್ಯತಾಳಿ ಗುರುವಿನ ಕೃಪೆಗೆ ಪಾತ್ರರಾದರು. ಇವರು ಪ್ರಚಾರ ಪ್ರತಿಷ್ಠೆಗೆಂದು ಬೆಲೆ ಕೊಟ್ಟವರಲ್ಲ ಜಾತಿ, ಮತ, ಮೇಲು-ಕೀಳು ಎಂಬ ಭಾವನೆ ಇವರಲ್ಲಿ ಇಲ್ಲ. ದೀನ-ದಲಿತ ಜತೆ ಬಾಳಿ ಬದುಕು ಸಾಗಿಸಿ ಅವರ ಕಲ್ಯಾಣಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದವರು. 12 ನೇ ಶತಮಾನದ ಬಸವಾದಿ ಶರಣರ ಮೌಲ್ಯಗಳನ್ನು ಅವರ ಜೀವನದಲ್ಲಿ ತುಂಬಿ ಸಾಂಸ್ಕೃತಿಕ ಬೆಳವಣಿಗೆಗೆ ಬುನಾದಿ ಹಾಕಿದವರು ಅಮ್ಮನವರ ತತ್ವಾದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು. ಈ ವೇಳೆ ಲಿಂಗಪ್ಪ ಹಣಗಿ, ಶರಣಬಸವ ವ್ಯಾಕರನಾಳ, ಮಲ್ಲಪ್ಪ ಮಾಟೂರು, ಶಿವಾನಂದ ಸುಂಕದ, ಸೇರಿದಂತೆ ಇತರರು ಇದ್ದರು.

ಗುರುವಿನ ಮಾರ್ಗದಲ್ಲಿ ಜೀವನ ಸುಂದರ

ಯಲಬುರ್ಗಾ: ಸಂಸ್ಕಾರ ಮತ್ತು ನೆಮ್ಮದಿಗಾಗಿ ಪುರಾಣ, ಪ್ರವಚನ ಆಲಿಸಬೇಕು ಎಂದು ಹೂವಿನಹಡಗಲಿಯ ಗವಿಸಿದ್ಧೇಶ್ವರ ಶಾಖಾ ಮಠದ ಡಾ.ಹಿರಿಶಾಂತವೀರ ಸ್ವಾಮೀಜಿ ಹೇಳಿದರು.ತಾಲೂಕಿನ ಬಂಡಿಹಾಳ ಗ್ರಾಮದ ಶ್ರೀ ಕೆರಿ ಬಸವೇಶ್ವರ ದೇವಸ್ಥಾನದ ಶಿಲ್ಪ ಮಂಟಪ ಮತ್ತು ಗೋಪೂರ ಕಳಸಾರೋಹಣ ಲೋಕಾರ್ಪಣೆ ಮತ್ತು ದೇವಸ್ಥಾನ ಉದ್ಘಾಟನಾ ಸಮಾರಂಭದ ನಿಮಿತ್ತ ಆಯೋಜಿಸಿದ್ದ 5 ದಿನದ ಪ್ರವಚನಕ್ಕೆ ಚಾಲನೆ ನೀಡಿ ಮಾತನಾಡಿದರು. ಮನುಷ್ಯ ಜೀವನದಲ್ಲಿ ಏನಾದರೂ ಸಾಧಿಸಬೇಕಾದರೆ ಗುರುವಿನ ಮಾರ್ಗದರ್ಶನ ಅಗತ್ಯ. ನಾವೆಲ್ಲರೂ ಜಗತ್ತು ನೋಡಲು ಬಂದವರು. ಪ್ರಪಂಚವನ್ನು ಆನಂದದಿಂದ ನೋಡಬೇಕು. ನಮ್ಮ ಜೀವನ ಸಾರ್ಥಕ ಪಡಿಸಿಕೊಳ್ಳಬೇಕು. ಜೀವನಕ್ಕೆ ಪುರಾಣ ಪ್ರವಚನ ಪೂರಕವಾಗಿವೆ ಎಂದರು. ಪ್ರವಚನಕಾರ ಶ್ರೀ ಸಿದ್ದಲಿಂಗಯ್ಯ ಶಾಸ್ತ್ರಿ, ಹಿರಿಯರಾದ ಬಸವರಾಜ ಕಳಸಪ್ಪನವರ, ಬಸಪ್ಪ ಸಂಗಣ್ಣನವರ, ಕಳಕಪ್ಪ ನಿಡಗುಂದಿ, ತಿಪ್ಪನಗೌಡ ಮಾಳಗೌಡ್ರ, ಕೇರಿಬಸಪ್ಪ ಪಟ್ಟೇದ, ವಿರೂಪಾಕ್ಷಪ್ಪ ಶ್ರೀಗಿರಿ, ಬಸಪ್ಪ ದಿಂಡೂರ, ಶೇಖರಗೌಡ ಗೋಣಿ, ಕಲ್ಲಿನಾಥ ಲಿಂಗಣ್ಣನವರ ಸೇರಿ ಇತರರು ಇದ್ದರು.

ಹಿತರಕ್ಷಣಾ ವೇದಿಕೆ ಪಂಜಿನ ಮೆರವಣಿಗೆ

ರಾಯಚೂರು: ಇತ್ತೀಚೆಗೆ ಕಾಶ್ಮೀರದ ಪಹಲ್ಗಾಂನಲ್ಲಿ ಹಿಂದುಗಳ ಮೇಲೆ ನಡೆದ ದಾಳಿ ಖಂಡೀಸಿ ಹಿಂದು ಹಿತರಕ್ಷಣಾ ಸಮಿತಿಯಿಂದ ಏ.27ರಂದು ಸಂಜೆ 6 ಗಂಟೆಗೆ ನಗರದಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಸಂಚಾಲಕ ಆನಂದತೀರ್ಥ ಫಡ್ನಿಸ್ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ದೇಶದ ಇತಿಹಾಸದಲ್ಲಿ ಧರ್ಮದ ಮೇಲೆ ಹೆಚ್ಚಿನ ಪ್ರಹಾರಗಳಾಗುತ್ತಿವೆ. ದೇಶದ ಬದ್ಧತೆ ಹಾಗೂ ಧರ್ಮದ ಬದ್ಧತೆಗಾಗಿ ಪ್ರತಿಭಟನೆ ನಡೆಯಲಿದೆ ಈ ಉಗ್ರವಾದವನ್ನು ಖಂಡಿಸಿ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ನಗರದ ಶೆಟ್ಟಿಭಾವಿ ವೃತ್ತದಿಂದ ಆರಂಭವಾಗಿ ಚಂದ್ರಮೌಳೇಶ್ವರ ವೃತ್ತದಲ್ಲಿ ಅಂತ್ಯಗೊಳಲಿದೆ . ಪ್ರತಿಭಟನೆಗೆ ಎಲ್ಲಾ ಸ್ವಾಮೀಜಿಗಳಿಗೂ ಆಹ್ವಾನಿಸಲಾಗಿದೆ. ದೇಶದ ಪರವಾಗಿ, ಧರ್ಮದ ಪರವಾಗಿ ನಿಲ್ಲುವ ಪ್ರತಿಯೊಬ್ಬರೂ ಕೂಡ ಪ್ರತಿಭಟನೆಯಲ್ಲಿ ಭಾಗವಹಿಸಬಹುದಾಗಿದ್ದು, ಎರಡು ಸಾವಿರಕ್ಕೂ ಅಧಿಕ ಜನರು ಭಾಗಿಯಾಗುವ ನಿರೀಕ್ಷೆಯಿದೆ ಎಂದರು. ಸುದ್ದಿಗೋಷ್ಟಿಯಲ್ಲಿ ಶಂಶಾಲಪ್ಪ ದೊಡ್ಡಮನಿ, ಹನುಮಂತ, ಅಶೋಕ ಪಾಟೀಲ್, ರವಿಕೃಷ್ಣ, ರಮೇಶ, ಶಿವಬಸ್ಸಪ್ಪ ಮಾಲಿಪಾಟೀಲ್ ಉಪಸ್ಥಿತರಿದ್ದರು.

{ಟಿ.ಎಸ್.ನಾಗಾಭರಣ } ಚಿತ್ರ ನಿರ್ದೇಶಕ

ಉತ್ತಮ ಕಲಾಕೌಶಲ್ಯವನ್ನೇ ವೃತ್ತಿಯಾಗಿಸಿಕೊಂಡು ವಿಭಿನ್ನ ವ್ಯಕ್ತಿತ್ವ ರೂಪಿಸಿಕೊಂಡ ಡಾ.ರಾಜ್ ಕುಮಾರ್ ಪ್ರಭಾವಿ ಬದುಕಿನ ಆದರ್ಶ ಮಾದರಿ ರೂಢಿಸಿಕೊಂಡು ಇಡೀ ಭಾರತೀಯ ಚಿತ್ರರಂಗಕ್ಕೆ ಕೊಡುಗೆಯಾಗಿ ನೀಡಿದ್ದಾರೆ. 'ಹೊಟ್ಟೆಪಾಡಿಗಾಗಿ ಚಿತ್ರರಂಗಕ್ಕೆ ಬಂದೆ' ಎನ್ನುವಷ್ಟು ಸರಳತೆ ರಾಜ್ ಅವರಲ್ಲಿತ್ತು.

ಮುಗಿಯದ ಕೊಪ್ಪಳ ಡಿಸಿ ಕಾರು ಜಪ್ತಿ ಪ್ರಕರಣ | ಹಣ ಪಾವತಿ ಮಾಡುವುದಾಗಿ ಹೇಳಿ, ಅರ್ಜಿ ವಾಪಾಸ್ ಪಡೆದ ಎಸಿ

ಜಿಲ್ಲಾಡಳಿತದ ನಡೆಗೆ ಕೋರ್ಟ್ ಬೇಸರ!

ಶರಣಬಸವ ಹುಲಿಹೈದರ ಕೊಪ್ಪಳ

ಜಿಲ್ಲಾಡಳಿತಕ್ಕೆ ಕಾನೂನು ಸಲಹೆಯ ಕೊರತೆಯೋ? ಅಥವಾ ಅಧಿಕಾರಿಗಳಿಗೆ ಕೋರ್ಟ್ ಆದೇಶಗಳ ಬಗ್ಗೆ ನಿರ್ಲಕ್ಷ್ಯವೋ ಗೊತ್ತಿಲ್ಲ. ಜಿಲ್ಲಾಧಿಕಾರಿ ಕಾರು ಜಪ್ತಿ ಮಾಡಬೇಕು ಎಂಬ ಕೋರ್ಟ್ ಆದೇಶಕ್ಕೆ ಸಂಬಂಧಿಸಿದಂತೆ, ಕೊಪ್ಪಳ ಜಿಲ್ಲಾಡಳಿತದ ಅಧಿಕಾರಿಗಳ ನಡೆಗೆ ಗಂಗಾವತಿ ಕೋರ್ಟ್ ಬೇಸರ ವ್ಯಕ್ತಪಡಿಸಿದೆ. ಈ ಹಿನ್ನೆಲೆ ಕಾರು ಜಪ್ತಿ ಪ್ರಕರಣ ಸದ್ಯಕ್ಕೆ ಮುಗಿಯುವಂತೆ ಕಾಣುತ್ತಿಲ್ಲ.

ಕಳೆದ ಏ.22 ರಂದು ಜಿಲ್ಲಾಧಿಕಾರಿಗಳ ಪರವಾಗಿ ಗಂಗಾವತಿ ಕೋರ್ಟ್ ಗೆ ಹಾಜರಾಗಿದ್ದ ಗಂಗಾವತಿ ಲೋಕೋಪಯೋಗಿ ಇಲಾಖೆ ಅಧಿಕಾರಿ ಕೋರ್ಟ್ ನ ಡಿಕ್ರಿ ಆದೇಶದಂತೆ ಹಣ ಪಾವತಿ ಮಾಡುವುದಾಗಿ ಅರ್ಜಿ ಸಲ್ಲಿಸಿದ್ದಾರೆ. ಜಿಲ್ಲಾಡಳಿತದ ಪರವಾಗಿ ಸರಕಾರಿ ವಕೀಲರು, ಹಣ ಪಾವತಿಯ ಅರ್ಜಿಯನ್ನು ಕೋರ್ಟ್ ಮುಂದೆ ಅರ್ಜಿ ಸಲ್ಲಿಸಿದ ಮರು ದಿನವೇ ಅರ್ಜಿ ವಾಪಾಸ್ ಪಡೆಯುವುದಾಗಿ ಹೇಳಿದ್ದಾರೆ.

ಸ್ವತಃ ಲೋಕೋಪಯೋಗಿ ಇಲಾಖೆ ಅಧಿಕಾರಿ

ಖುದ್ದು ಹಾಜರಾಗಿ, ಕಣ್ತಪ್ಪಿನಿಂದ ಅರ್ಜಿ ಹಣ ಪಾವತಿ ಮಾಡುವುದಾಗಿ ಅರ್ಜಿ ಸಲ್ಲಿಸಲಾಗಿದೆ. ಅರ್ಜಿ ವಾಪಾಸ್ ಪಡೆಯುವುದಾಗಿ ಹೇಳಿದ್ದಾರೆ. ಈ ವೇಳೆ ಗಂಗಾವತಿ ಹಿರಿಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರು ಬೇಸರ ವ್ಯಕ್ತಪಡಿಸಿದ್ದಾರೆ. ಕೇಸ್ ನಂಬರ್ ಸಹಿತ ಎರಡು ಪ್ರತ್ಯೇಕ ಅರ್ಜಿ ಸಲ್ಲಿಸಿ, ಹಣ ಕೊಡುವುದಾಗಿ ಹೇಳಿದ್ದೀರಿ. ಇದೀಗ ಕಣ್ತಪ್ಪಿನಿಂದ ಆಗಿದೆ ಎಂಬುದನ್ನು ಒಪ್ಪಲು ಸಾಧ್ಯವಿಲ್ಲ ಎಂದು

ಪ್ರಹಸನಕ್ಕೆ ಕಾರಣವಾಗಿರುವ ಕೊಪ್ಪಳ ಜಿಲ್ಲಾಧಿಕಾರಿ ಕಾರು.

ನ್ಯಾಯಾಧೀಶರು ತರಾಟೆ ತೆಗದುಕೊಂಡಿದ್ದಾರೆ. ಆದರೂ, ಲೋಕೋಪಯೋಗಿ ಅಧಿಕಾರಿಗಳು ಸರಕಾರಿ ವಕೀಲರ ಮೂಲಕ ಹಣ ಪಾವತಿ ಮಾಡುವುದಾಗಿ ಸಲ್ಲಿಸಿದ್ದ ಅರ್ಜಿ ವಾಪಾಸ್ ಗೆ ಪಡೆಯುವ ಬಗ್ಗೆ ಮತ್ತೊಂದು ಅರ್ಜಿ ಹಾಕಿದ್ದಾರೆ. ಇದಕ್ಕೆ ಆಕ್ಷೇಪಣೆ ಸಲ್ಲಿಸಲು ಎದುರುದಾರರಿಗೆ ಕೋರ್ಟ್ ಅವಕಾಶ ನೀಡಿದೆ.

> ಎರಡು ಪ್ರತ್ಯೇಕ ಪ್ರಕರಣದಲ್ಲಿ ಕೋರ್ಟ್ ಆದೇಶ ಮಾಡಿದಷ್ಟು ಹಣ ಪಾವತಿ ಮಾಡುತ್ತೇವೆ ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕೋರ್ಟ್ ಮುಂದೆ ಅರ್ಜಿ ಹಾಕಿದ್ದು, ನ್ಯಾಯಾಲಯ ಅರ್ಜಿ ಮಾನ್ಯ ಮಾಡಿದೆ. ಇದೀಗ ಕಣ್ತಪ್ಪಿನಿಂದ ಅರ್ಜಿ ಹಾಕಿದ್ದು, ವಾಪಾಸ್ ಪಡೆಯುತ್ತೇವೆ ಎಂದು ಮತ್ತೊಂದು ಅರ್ಜಿ ಹಾಕಿಕೊಂಡಿದ್ದಾರೆ. ಇದಕ್ಕೆ ನಾವು ತಕರಾರು ಸಲ್ಲಿಸುತ್ತೇವೆ.
>
> - ಸಂಜಯ ಚಾನಲ್, ಹೈ ಕೋರ್ಟ್ ವಕೀಲರು

ಎಲ್ಲ ಅಪರಾತಪರ: ಡಿಸಿ ಕಾರು ಜಪ್ತಿ ಪ್ರಕರಣದಲ್ಲಿ ಜಿಲ್ಲಾಡಳಿತದ ಅಧಿಕಾರಿಗಳು ಮೊದಲಿನಿಂದಲೂ ನಿರ್ಲಕ್ಷ್ಯ ಧೋರಣೆ ಅನುಸರಿಸಿದ್ದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಇದೀಗ ಕೋರ್ಟ್ ಆದೇಶದ ನಂತರವೂ ವಿವಿಧ ಇಲಾಖೆ ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ನಿಯಮದಂತೆ ಇಂಥ ಪ್ರಕರಣದಲ್ಲಿ

> **ಡಿವಿಯಲ್ಲಿ ಡಿಸಿ ಓಡಾಟ !**
>
> ಜಿಲ್ಲಾಧಿಕಾರಿಗಳ ಕಾರು ಜಪ್ತಿಗೆ ಕೋರ್ಟ್ ಆದೇಶ ಮಾಡಿದ ಹಿನ್ನೆಲೆ ಜಿಲ್ಲಾಧಿಕಾರಿಗಳ ಕಾರು ಶೋ ರೂಂ ಸೇರಿದೆ. ಈ ಹಿನ್ನೆಲೆ ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಜಿಲ್ಲಾಡಳಿತ ಭವನದಲ್ಲಿ ಇರುವ ಜಿಲ್ಲಾ ವಾಹನ(ಡಿವಿ) ಯಲ್ಲಿ ಓಡಾಡುತ್ತಿದ್ದಾರೆ. ಜಿಲ್ಲೆಗೆ ಸಿಎಂ ಸೇರಿ ಯಾರಾದರೂ ಸಚಿವರು, ಅಧಿಕಾರಿಗಳು ರೈಲ್ವೇ ಅಥವಾ ವಾಯು ಮಾರ್ಗದಲ್ಲಿ ಬಂದರೆ ಅವರ ಬಳಕೆಗೆ ಇರುವ ವಾಹನವನ್ನು ಡಿವಿ ವಾಹನ ಎಂದು ಕರೆಯುತ್ತಾರೆ.

ಅಧಿಕಾರಿಗಳು ಸರಕಾರದಿಂದ ಜಿಲ್ಲಾ ಸರಕಾರಿ ಪ್ಲೀಡರ್ ಅವರನ್ನು ನೇಮಕ ಮಾಡಿಕೊಂಡು, ಕೋರ್ಟ್ ಮುಂದೆ ಅರ್ಜಿ ಸಲ್ಲಿಸಬೇಕು. ಆದರೆ, ಈ ಪ್ರಕರಣದಲ್ಲಿ ಅಧಿಕಾರಿಗಳು ಖಾಸಗಿ ವಕೀಲರ ಮೂಲಕ ಅರ್ಜಿ ಸಲ್ಲಿಸುತ್ತಿದ್ದಾರೆ. ಜೊತೆಗೆ ಗ್ರೇಡ್ - 2 ಅಧಿಕಾರಿಯೊಬ್ಬರು ಕೇಸ್ ನಂಬರ್ ಸಮೇತ ಹಾಕಿದ ಅರ್ಜಿಯನ್ನೇ ಕಣ್ತಪ್ಪಿನಿಂದ ಆಗಿದೆ ಆಗಿರದೆ ಎಂಬುದು ಕೂಡ, ಅಧಿಕಾರಿಗಳು ಎಷ್ಟೊಂದು ಬೇಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಪಹಲ್ಗಾಮ್ ಘಟನೆ ಭದ್ರತಾ ವೈಫಲ್ಯ: ಉಗ್ರಪ್ಪ

ರಾಯಚೂರು: ಭದ್ರತೆ ವೈಫಲ್ಯದಿಂದ ಪುಲ್ವಾಮಾ, ಪಹಲ್ಗಾಮ ನಲ್ಲಿ ಉಗ್ರರ ದಾಳಿಯಾಗಿ ನೂರಾರು ಜನ ಪ್ರಾಣ ಕಳೆದುಕೊಂಡಿದ್ದಾರೆ. ಪ್ರಧಾನಿ ಮೋದಿ ನೈತಿಕೆ ಹೊಣೆಹೊತ್ತು ರಾಜೀನಾಮೆ ನೀಡಬೇಕು ಎಂದು ಮಾಜಿ ಸಂಸದ ಎಂ. ಉಗ್ರಪ್ಪ ಒತ್ತಾಯಿಸಿದರು.

ರಾಮನ ಹೆಸರಿನಲ್ಲಿ ಆಡಳಿತ ನಡೆಸುವ ಪ್ರಧಾನಿಮೋದಿ ಅವರು ರಾಮನ ಆದರ್ಶ ಪಾಲಿಸುತ್ತಿಲ್ಲ. 56 ಇಂದಿನ ಎದೆವುಳ್ಳವರು ಎಂದು ಹೇಳುವ ಅವರು ಸಬ್ ಕಾ ಸಾತ್, ಸಬ್ ಕಾವಿಕಾಸ್, ಅಚ್ಚೇಎಕ ದಿನ್ ಬರಲಿದೆ ಎಂದು ಅಧಿಕಾರಕ್ಕೆ ಬಂದು ಏನು ಮಾಡುತ್ತಿದ್ದಾರೆ ಇದೇನಾ ಅಚ್ಚೇ ದಿನ್? 700 ವರ್ಷಗಳಹಿಂದೆ ರಾಮಾಯಣದಲ್ಲಿ ರಾಮ ಹೇಳಿದ್ದ, ಯಾವ ದೇಶದ,ರಾಜ್ಯದ ಬೇಹುಗಾರಿಕೆ, ಭದ್ರತೆ ಕಾಪಾಡುವ ಇಲಾಖೆ ವೈಫಲ್ಯವಾದರೆ ದೇಶದಲ್ಲಿ ಅಶಾಂತಿ ಸೃಷ್ಠಿಯಾಗಿ ದೇಶದ ನೆಮ್ಮದಿ ಹಾಳಾಗಿ ಅರಾಜಕತೆ ಸೃಷ್ಠಿಯಾಗುತ್ತೆ ಅಂತ ಹೇಳಿದ್ದನ್ನು ನೆನಪಿಸಿಕೊಳ್ಳಬೇಕು ಎಂದು ಕಿಚಾಯಿಸಿದರು.

ದೇಶದ ರಕ್ಷಣೆ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ಬೆಂಬಲಿಸಲಿದೆ, ಪಹಲ್ಗಾಮ ದಾಳಿಗೆ ಪ್ರತಿಕಾರವಾಗಿ ಯಾವುದೇ ನಿರ್ಧಾರ ಕೈಗೊಂಡಿದ್ದರೆ ಸಹಕಾರ ನೀಡಲಿದೆ. ಆದರೆ ಸೈನಿಕರ ವಿಚಾರದಲ್ಲಿ ರಾಜಕಾರಣ ಮಾಡಬಾರದು ಎಂದ ಅವರು ಪಹಲ್ಗಾಮ್ ದಾಳಿ ಹಿನ್ನೆಲೆಯಲ್ಲಿ ದುಬೈ ಪ್ರವಾಸ ರದ್ದುಗೊಳಿಸಿದ ಪ್ರಧಾನಿ ಬಿಹಾರದ ಚುನಾವಣಾ ಪ್ರಚಾರಕ್ಕೆ ತೆರಳಿ ಸಂತ್ರಸ್ಥರ ಸಾವಿನ ಕುರಿತು ಪ್ರತಿಕಾರದ ಹೇಳಿಕೆ ನೀಡಿ ರಾಜಕೀಯ ಲಾಭ ಪಡೆಯಲು ಯತ್ನಿಸಿರುವುದು, ಸರ್ವ ಪಕ್ಷಗಳ ಸಭೆಗೆ ಗೈರಾಗಿದ್ದು ಖಂಡನೀಯ ಎಂದರು.

ಉಗ್ರವಾದಿಗಳಿಗೆ ಧರ್ಮವಿಲ್ಲ: ಪಹಲ್ಗಾಮ ದಾಳಿಯನ್ನು ಎಲ್ಲರೂ ಖಂಡಿಸಿದ್ದಾರೆ, ಉಗ್ರಗಾಮಿಗಳೇ ಯಾವುದೇ ಧರ್ಮದಲ್ಲಿದ್ದರೂ ಕಳಂಕ ಅವರಿಗೆ ಧರ್ಮವಿಲ್ಲ, ಮಹಾತ್ಮ ಗಾಂಧಿಗೆ, ಇಂದಿರಾಗಾಂಧಿ, ರಾಜೀವ್ ಗಾಂಧಿಗೆ ಕೊಂದವರು ಯಾರು, ಅವರೆಲ್ಲರೂ ಮುಸ್ಲಿಮರಾ? ಧರ್ಮ ಲೇಪನ ಮಾಡುವವರಿಗೆ ಪ್ರಶ್ನಿಸಿದರು.

ಜಾತಿ ಜನಗಣತಿ ಸಮೀಕ್ಷೆ ಸುಳ್ಳು ಅಂತ ಹೇಳ್ತಾ ಇದಾರೆ ಎಂಬ ಪ್ರಶ್ನೆಗೆ, ನಾನೂ ವರದಿ ಪಡೆಯಲು ಯತ್ನಿಸಿದರೂ ನನಗೆ ಸಿಕ್ಕಿಲ್ಲ, ಪರ, ವಿರೋಧವಾಗಿ ಮಾತನಾಡುವವರು ಒಮ್ಮೆ ಓದಬೇಕು ಬಳಿಕವೇ ಪ್ರಶ್ನೆ ಮಾಡಬೇಕು.

54 ಮಾನದಂಡಗಳ ಮೇಲೆ ಸಮೀಕ್ಷೆ ನಡೆದಿದೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಆಧಾರದ ಮೇಲೆ ವರದಿ ತಯಾರಿಯಾಗಿದೆ. ಈ ಹಂತದಲ್ಲಿ ಪರ ವಿರೋಧ ಯಾರು ಮಾಡಬಾರದು, ಕರ್ನಾಟಕ ಶಾಂತಿಯ ತೋಟ, ಸರ್ವ ಧರ್ಮ ಸಮಾನತೆ ಕಾಪಾಡಿಕೊಂಡು ಬಂದಿದೆ. ರಾಜ್ಯ ಸರಕಾರ ಸಚಿವ ಸಂಪುಟದಲ್ಲಿ ವರದಿ ಪ್ರಕಟಿಸಿ ಎರೆಡು ಸದನದಲ್ಲಿ ಚರ್ಚೆ ಮಾಡಬೇಕು. ಯಾವ ವರ್ಗಕ್ಕೂ ಬಹುದೊಡ್ಡ ಅನ್ಯಾಯ, ಬಹುದೊಡ್ಡ ಲಾಭ ಆಗಲ್ಲ ಎಂದರು.

ಕವಿತಾ ಮೀಡಿಯಾ ಸೋರ್ಸ್‌ನಿಂದ ಕಿರು ಚಿತ್ರೋತ್ಸವ

ಕೊಪ್ಪಳ: ಸಿನೆಮಾ ಅಥವಾ ಕಿರುಚಿತ್ರಕ್ಕೆ ಅನುಭವ ಮುಖ್ಯ. ಕಾಲಕ್ಕೆ ತಕ್ಕಂತೆ ಪ್ರೇಕ್ಷಕರ ಅಭಿರುಚಿ ಬದಲಾಗುತ್ತಿದ್ದು, ನೋಡುಗರ ಅಭಿರುಚಿಗೆ ತಕ್ಕಂತೆ ಸಿನಿಮಾ ಮಾಡಬೇಕು ಎಂದು ಕಲಾವಿದ ಬಸವರಾಜ ಕೊಪ್ಪಳ ಅಭಿಪ್ರಾಯಪಟ್ಟರು. ನಗರದ ಜೆಕೆಎಸ್ ಹೊಟೆಲ್ ನಲ್ಲಿ ಕವಿತಾ ಮೀಡಿಯಾ ಸೋರ್ಸ್ ಆಯೋಜಿಸಿದ್ದ ಕಿರು ಚಿತ್ರೋತ್ಸವ ಸೀಜನ್-2 ರ ಅಧ್ಯಕ್ಷತೆ ವಹಿಸಿ ಭಾನುವಾರ ಮಾತನಾಡಿದರು.

ಉತ್ತರ ಕರ್ನಾಟಕ ಭಾಗದಲ್ಲಿ ಕಲಾವಿದರು ಮತ್ತು ಪ್ರೇಕ್ಷಕರಿಗೆ ಕೊರತೆ ಇಲ್ಲ. ಜೊತೆಗೆ ನಮ್ಮ ಭಾಗ ಹಿಂದಿನಿಂದಲೂ ಶ್ರೀಮಂತಿಕೆಗೆ ಹೆಸರಾಗಿದೆ. ಈ ಹಿನ್ನೆಲೆ ನನ್ನ ಪ್ರಕಾರ, ನಮ್ಮ ಭಾಗದಲ್ಲಿ ನಿರ್ಮಾಪಕರ ಕೊರತೆಯೂ ಇಲ್ಲ. ಸಿನೆಮಾ ಕ್ಷೇತ್ರದಲ್ಲಿ ಬಂಡವಾಳ ಹಾಕುವ ಸಾಮರ್ಥ್ಯವೂ ಇಲ್ಲಿನ ಜನರಿಗೆ ಇದೆ. ಆದರೆ, ಯಾರೂ ಮನಸ್ಸು ಮಾಡುತ್ತಿಲ್ಲ. ಜತೆಗೆ ಕರಾವಳಿ ಭಾಗದ ಜನರಿಗೆ ಇದ್ದಂತೆ ಶ್ರದ್ಧೆ ಮತ್ತು ತಾಳ್ಮೆಯೂ ನಮ್ಮ ಭಾಗದ ಯುವಕರಲ್ಲಿ ಬರಬೇಕಿದೆ. ಕಲೆ ಆರಾಧಿಸುವ ಯುವಕರ ಗಟ್ಟಿ ತಂಡ ಇದ್ದರೆ ಕೊಪ್ಪಳವನ್ನೂ ಗಾಂಧಿ ನಗರ ಮಾಡಬಹುದು. ಆಗ ಪ್ರೇಕ್ಷಕರರು ಕೂಡ ಪ್ರೋತ್ಸಾಹಿಸುತ್ತಾರೆ ಎಂದರು.

ಪತ್ರಕರ್ತ ಶರಣಬಸವ ಹುಲಿಹೈದರ

ಕೊಪ್ಪಳದ ಜೆಕೆಎಸ್ ಹೊಟೆಲ್ ನಲ್ಲಿ ಆಯೋಜೆಸಿದ್ದ ಕಿರು ಚಿತ್ರೋತ್ಸವಕ್ಕೆ ಗಣ್ಯರು ಚಾಲನೆ ನೀಡಿದರು.

ಮಾತನಾಡಿ, ಸದ್ಯ ಸಿನಿಮಾ ನೋಡುಗರು ಮತ್ತು ಆಸಕ್ತರಿಗೆ ಸಮಯ ಮತ್ತು ತಾಳ್ಮೆಯ ಕೊರತೆ ಇದೆ. ರೀಲ್ಸ್ ಮತ್ತು ಕಿರುಚಿತ್ರಗಳು ಮುಂಚೂಣಿಯಲ್ಲಿವೆ. ಕಲಾವಿದರಿಗೆ ಪ್ರೋತ್ಸಾಹದ ಅಗತ್ಯವಿದ್ದು, ಅಭಿರುಚಿಗೆ ತಕ್ಕಂತೆ ಸಿನಿಮಾ ಮಾಡುವ ಹವ್ಯಾಸ ರೂಢಿಸಿಕೊಳ್ಳಬೇಕಿದೆ. ಮಲಯಾಳಂ ಚಿತ್ರದ ಮಾದರಿಯಲ್ಲಿ ವಾಸ್ತವಕ್ಕೆ ಹತ್ತಿರ ಇರುವ ವಿಷಯ ಇಟ್ಟುಕೊಂಡು ಚಿತ್ರ ನಿರ್ಮಾಣ ಮಾಡುವ ಅಗತ್ಯ ಕನ್ನಡ ಚಿತ್ರರಂಗದಲ್ಲಿ ಇದೆ. ಹಿಂದಿನ ಸಮಾಜಕ್ಕೆ ಸಂದೇಶ ನೀಡುವ ಸಿನಿಮಾ ಇದ್ದವು. ಆದರೆ ಇಂದು ಮಾಸ್ ಸಿನೆಮಾಗಳ ಸಂಖ್ಯೆ ಹೆಚ್ಚಾಗಿದೆ ಎಂದರು.

ಆಯ್ದ ಕಿರುಚಿತ್ರಗಳಿಗೆ ಪ್ರತ್ಯೇಕ ವಿಭಾಗದಲ್ಲಿ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಯಿತು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಸವರಾಜ ಬೆಲ್ಲದ ಭರತನಾಟ್ಯ, ಸೃಷ್ಠಿ ಮಲ್ಲಯ್ಯ ನೃತ್ಯ, ಕೌಶಲ್ಯ ಹಾಗೂ ಇನ್ನಿತರ ಬಾಲ ಕಲಾವಿದರ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆದವು. ನಿಕಟಪೂರ್ವ ಅಧ್ಯಕ್ಷ ಡಾ.ಮಹಾಂತೇಶ ಮಲ್ಲನಗೌಡರ, ಡಾ.ಸಿದ್ದಲಿಂಗಪ್ಪ ಕೊಟ್ನೇಕಲ್, ಶರಣಬಸಪ್ಪ ಬಿಳಿಯಲಿ, ಭೀರಪ್ಪ ಅಂಡಗಿ ಮಾತನಾಡಿದರು. ನಾಗರಾಜ ಗುಡಿ, ಮುತ್ತಣ್ಣ ಧರ್ಮಂತಿ, ಬಿ. ಎನ್.ಹೊರಪೇಟಿ, ಪ್ರಿಯದರ್ಶಿನಿ ಮುಂಡರಗಿಮಠ, ಕೆ.ಎಂ.ಖಲೀಲ್ ಕಾರ್ಕಳ, ನಟ ಪ್ರೀತಮ್ ಇದ್ದರು.

ಉಗ್ರರ ದಾಳಿ: ಕಾಂಗ್ರೆಸ್‌ನಿಂದ ಶ್ರದ್ಧಾಂಜಲಿ

ಗಂಗಾವತಿ: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ನಲ್ಲಿ ಪ್ರವಾಸಿಗರ ಮೇಲೆ ನಡೆದ ಉಗ್ರರ ದಾಳಿಯಲ್ಲಿ ಮೂವರು ಕನ್ನಡಿಗರು ಸೇರಿ 26 ಮೃತ ಭಾರತೀಯರ ಆತ್ಮಕ್ಕೆ ಶಾಂತಿ ಕೋರಿ, ನಗರದ ಗಾಂಧಿ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮೇಣದಬತ್ತಿ ಹಚ್ಚಿ ಶ್ರದ್ಧಾಂಜಲಿ ಸಲ್ಲಿಸಿದರು. ನಗರಸಭೆ ಸದಸ್ಯರಾದ ಮನೋಹರ್ ಸ್ವಾಮಿ ಹಿರೇಮಠ, ಪ್ರವಾಸಿಗರ ಮೇಲೆ ನಡೆದ ಉಗ್ರರು ನಡೆಸಿದ ದಾಳಿ, ನಮ್ಮ ದೇಶಕ್ಕೆ ಕಪ್ಪು ಚುಕ್ಕೆ. ಇಂಥ ಪೈಶಾಚಿಕ ಕೃತ್ಯ ನಡೆದಿರುವುದು ವಿಷಾದನೀಯ. ಇಂಥ ಘಟನೆಗಳು ಮತ್ತೊಮ್ಮೆ ಮರುಕಳಿಸಬಾರದು. ಉಗ್ರರಿಗೆ ಶಿಕ್ಷೆ ಆಗಲಿ. ಕಾಶ್ಮೀರದಲ್ಲಿ ಶಾಂತಿ ನೆಲೆಸಲಿ ಎಂದರು.

ರಾಜ್ಯ ಸರಕಾರ ಕನ್ನಡಿಗರ ರಕ್ಷಣೆಗೆ ಸೂಕ್ತ ಕ್ರಮ ಕೈಗೊಂಡಿದೆ. ಈ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ ಶಿವಕುಮಾರ್ ಕೈಗೊಂಡ ಕ್ರಮ ಸ್ವಾಗತಾರ್ಹ. ಕಾರ್ಮಿಕ ಸಚಿವ ಸಂತೋಷ್ ಲಾಡ್ ಮುತುವರ್ಜಿ ವಹಿಸಿ ವಿಶೇಷ ವಿಮಾನದಲ್ಲಿ ತೆರಳಿ ಕನ್ನಡಿಗರನ್ನು ರಕ್ಷಣೆ ಮಾಡಿದ್ದಾರೆ. ಈ ವೇಳೆ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿ, ಗಾಯಳುಗಳಿಗೆ ಧೈರ್ಯ ಹೇಳಿ ಅವರನ್ನೆಲ್ಲ ರಾಜ್ಯಕ್ಕೆ ಕರೆ ತಂದಿದ್ದು ಶ್ಲಾಘನೀಯ.



ಗಂಗಾವತಿ ನಗರದ ಗಾಂಧಿ ವೃತ್ತದಲ್ಲಿ ಪಹಲ್ಗಾಮ್ ಪ್ರಕರಣದಲ್ಲಿ ಮೃತ ಭಾರತೀಯರ ಆತ್ಮಕ್ಕೆ ಶಾಂತಿ ಕೋರಿ, ಕಾಂಗ್ರೆಸ್ ಕಾರ್ಯಕರ್ತರು ಮೇಣದಬತ್ತಿ ಹಚ್ಚಿ ಶ್ರದ್ಧಾಂಜಲಿ ಸಲ್ಲಿಸಿದರು.

ಮೃತರ ಕುಟುಂಬದ ಜೊತೆಗೆ ಕಾಂಗ್ರೆಸ್ ಸದಾ ಇರುತ್ತೆ ಎಂದರು.

ಉಗ್ರರಿಗೆ ಶಿಕ್ಷೆ ಯಾಗಲಿ, ಕಾಶ್ಮೀರದಲ್ಲಿ ಶಾಂತಿ ನೆಲೆಸಲಿ ಎಂದು ಘೋಷಣೆ ಕೂಗಿದರು. ನಂತರ ಮೇಣದ ಬತ್ತಿ ಹಿಡಿದು ಮೃತರ ಆತ್ಮಕ್ಕೆ ಶಾಂತಿ ಕೋರಿದರು. ನಗರ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ 'ನೆಹರು ಸಾಬ್, ಜುಬೇರ, ಮುಖಂಡರಾದ ಜೆ. ರವಿ ನಾಯಕ, ನಗರ ಯುವ ಕಾಂಗ್ರೆಸ್ ಅಧ್ಯಕ್ಷ ಎಚ್. ಬಾಬರ, ಆರಾಧನಾ ಸಮಿತಿ ಸದಸ್ಯ ವಿಶ್ವನಾಥ್ ಮಾಲಿ ಪಾಟೀಲ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವೆಂಕಟೇಶ ಬಾಬು, ಮುಖಂಡರಾದ ಇಲಿಯಾಸ್ ಬಾಬಾ, ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸನ್ನಿಕ ಭಾಷ, ಬಸಾಪಟ್ಟಣ ಗ್ರಾಪಂ ಅಧ್ಯಕ್ಷ ಅಂಜನಿ ನಾಯಕ, ನಾಮ ನಿರ್ದೇಶನ ಸದಸ್ಯರಾದ ಆನಂದ ಹಸಲ್ಕರ, ಮಲ್ಲಿಕಾರ್ಜುನ ತಟ್ಟಿ, ಅಯೂಬ್ ಅಲಿ, ರಾಚಪ್ಪ, ರಹಮತ್ ಸಂಪಂಗಿ, ನೀಲಕಂಠಪ್ಪ ಹೊಸಳ್ಳಿ, ಹಮೀದ್ ಮುಲ್ಲಾ, ರಾಮು ಕಿರಿಕಿರಿ, ವೀರನಗೌಡ, ಹೊನ್ನೂರ, ಮಾರೇಶ, ಹನೀಫ್, ಹುಸೇನ್ ಪೀರಾ, ಗಫಾರ, ಶಫತ, ಅಬ್ಬಾಸ್, ಹೊನ್ನೂರಪ್ಪ ನಾಯಕ, ಸುರೇಶ, ಬಸವರಾಜ ಇದ್ದರು.

ಈಜು ಕೊಳದಲ್ಲಿ ಮುಳುಗಿ ಬಾಲಕ ಸಾವು

ಕೊಪ್ಪಳ: ಈಗಷ್ಟೇ ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಗಿಸಿದ್ದ ಆ ಬಾಲಕ ತಂದೆ-ತಾಯಿಗೆ ಒಬ್ಬನೇ ಮಗ. ಎಲ್ಲರಂತೆ ಈತನ ತಂದೆ -ತಾಯಿ ಕೂಡ ಬಡತನದ ಲ್ಲೂ ಮಗನಿಗೆ ಉತ್ತಮ ಶಿಕ್ಷಣ ನೀಡು ವ ಕನಸು ಕಂಡಿದ್ದರು. ಆದರೆ, ವಿಧಿಯ ಆಟವೇ ಬೇರೆ ಆಗಿದ್ದು, ಬಿಸಿಲಿನ ತಾಪದಿಂದ ತಣಿಯಲು ಈಜು

> **ಸಹಾಯಕ್ಕಾಗಿ ಕೂಗಿಕೊಂಡಿಲ್ಲ**
>
> ಕ್ರೀಡಾ ಇಲಾಖೆ ನಿರ್ವಹಿಸಲ್ಪಡುವ ಈಜು ಕೊಳದಲ್ಲಿ ದುರ್ಘಟನೆ ನಡೆದಿದೆ. ಮೂವರು ಯುವಕರು ಈಜು ಕೊಳಕ್ಕೆ ಬಂದಿದ್ದರೆ. ಇದರಲ್ಲಿ ಒಬ್ಬ ಯುವಕ ಡೈ ಹೊಡೆದು, ಯಾವುದೇ ರೀತಿಯಲ್ಲಿ ಸಹಾಯಕ್ಕೆ ಕೂಗಿಕೊಳ್ಳದೇ ಮುಳುಗಿದ್ದಾನೆ ಎಂದು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿಠಲ್ ಜಾಬಗೌಡರ ತಿಳಿಸಿದ್ದಾರೆ.

ಕೊಳಕ್ಕೆ ಬಂದಿದ್ದ ಬಾಲಕನ ಪಾಲಿಗೆ, ನೀರಿನ ರೂಪದಲ್ಲಿ ಬಂದಿರೋ ಜವರಾಯ, ಬಲಿ ಪಡೆದಿದ್ದಾನೆ.

ಹೌದು, ನಗರದ ಜಿಲ್ಲಾ ಕ್ರೀಡಾಂಗಣದಲ್ಲಿನ ಈಜು ಕೊಳಕ್ಕೆ ಇಬ್ಬರು ಸ್ನೇಹಿತರೊಂದಿಗೆ ಈಜಾಡಲು ಬಂದಿದ್ದ ಬಾಲಕ ಶನಿವಾರ ಮೃತಪಟ್ಟಿದ್ದಾನೆ. ಕೊಪ್ಪಳ ತಾಲೂಕು ಇಂದರಗಿ ಗ್ರಾಮದ ಇಂದ್ರೇಶ(16) ಮೃತ ಬಾಲಕ. ಈಜು ಗೊತ್ತಿದ್ದರೂ ಮುಳುಗಿದ್ದು ಸಾಕಷ್ಟು ಅನುಮಾನಕ್ಕೆ ಕಾರಣವಾಗಿದೆ. ಕೊಪ್ಪಳದಿಂದ ಸುಮಾರು 30 ಕಿ.ಮೀ. ದೂರದ ಕೊಪ್ಪಳಕ್ಕೆ ಈಜಲು ಬಂದಿದ್ದಾರೆ. ಬಿಸಿಲಿನ ತಾಪ ಮತ್ತು ರಜಾ ದಿನದಲ್ಲಿ ನೀರಿನಲ್ಲಿ ಮಜಾ ಮಾಡಲು ಬಂದಿದ್ದ ಬಾಲಕ ಹೆಣವಾಗಿದ್ದಾನೆ.

ಸ್ನೇಹಿತರಾದ ದುರ್ಗೇಶ ಹಾಗೂ ಶಿವರಾಜ ಅವರೊಂದಿಗೆ ಮೃತ ಇಂದ್ರೇಶ ಒಂದೇ ಬೈಕ್‌ನಲ್ಲಿ ಕೊಪ್ಪಳದ ಜಿಲ್ಲಾ ಕ್ರೀಡಾಂಗಣದ ಹಿಂಭಾಗದ ಕ್ರೀಡಾ ಇಲಾಖೆಯ ಈಜು ಕೊಳಕ್ಕೆ ಬಂದಿದ್ದಾರೆ. ಸಾಯುವ ಕೆಲ ಹೊತ್ತಿನ ಮುಂದೆ ತನ್ನ ಮೊಬೈಲ್ ನಲ್ಲಿ ಗೆಳೆಯರೊಂದಿಗೆ ಫೋಟೋ ತೆಗೆಸಿಕೊಂಡು ಖುಷಿ ಪಟ್ಟಿದಾನೆ. ಗೆಳೆಯನ ಹೆಗಲ ಮೇಲೆ ಕೂತು ಫೋಟೋ ತೆಗೆಸಿಕೊಂಡು ಖುಷಿ ನೋಡು ನೋಡುವಷ್ಟರಲ್ಲೇ ಇಲ್ಲವಾಗಿದೆ.

> **ದೇಹದ ಮೇಲೆ ಗಾಯವಿಲ್ಲ**
>
> ಮೃತನ ದೇಹ ಅಥವಾ ತಲೆ ಮೇಲೆ ಗಾಯದ ಗುರುತು ಪತ್ತೆ ಆಗಿಲ್ಲ. ಇನ್ನು ಮೂವರು ಸ್ನೇಹಿತರು ಈಜುಕೊಳಕ್ಕೆ ಹೋದಾಗ ಈಜುಕೊಳದಲ್ಲಿ ಇಂದ್ರೇಶ ವಾಂತಿ ಮಾಡಿಕೊಂಡಿದ್ದ ಎನ್ನಲಾಗಿದೆ. ಈಜಾಡಿ ಬಂದು ವಾಂತಿ ಮಾಡಿಕೊಂಡ ಎನ್ನಲಾಗಿದೆ. ಮೂವರು ಸ್ನೇಹಿತರು ಪಾರ್ಟಿ ಮಾಡಿರುವ ಅನುಮಾನವೂ ವ್ಯಕ್ತವಾಗಿತ್ತು. ಆದರೆ, ಇದನ್ನು ಇಂದ್ರೇಶ ಸ್ನೇಹಿತ ಶಿವರಾಜ ತಳ್ಳಿ ಹಾಕಿದ್ದಾನೆ. ಅಪರ ಜಿಲ್ಲಾಧಿಕಾರಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಅಧಿಕಾರಿಗಳು ಈಜು ಕೊಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ತಂದೆ-ತಾಯಿಗೆ ಇದ್ದ ಒಬ್ಬನೇ ಮಗ ದುರಂತ ಅಂತ್ಯ ಕಂಡಿದ್ದಾನೆ. ಮರೋಣತ್ತರ ಪರೀಕ್ಷೆ ಬಳಿಕವೇ ಸತ್ಯ ಹೊರ ಬರಬೇಕಿದೆ.

ಏನಾಗಿದೆ? ಈಜು ಗೊತ್ತಿರುವ ಇಂದ್ರೇಶ ಈಜು ಕೊಳಕ್ಕೆ ಮೇಲಿಂದ ಡೈವ್ ಮಾಡಿದ್ದಾನೆ. ಈ ವೇಳೆ ಯಾವುದೋ ಒಂದು ರೀತಿಯಲ್ಲಿ ಆತನಿಗೆ ಪೆಟ್ಟಾಗಿರುವ ಸಾಧ್ಯತೆ ಇದೆ. ಈ ವೇಳೆ ಇಂದ್ರೇಶ ಸಹಾಯಕ್ಕಾಗಿ ಯಾವುದೇ ರೀತಿಯಲ್ಲಿ ಕೂಗಿ ಕೊಂಡಿದಿಲ್ಲ ಕೂಡ. ಈತನ ಜೊತೆಗೆ ಕೆಲ ಹೊತ್ತು ಇಂದ್ರೇಶ ಕಾಣಿಸಿಲ್ಲ. ಆಗ ಈತನ ಜೊತೆಗೆ ಬಂದಿದ್ದ ಸ್ನೇಹಿತರು ನಿಸರ್ಗ ಕರೆಗೆ ಹೊರಗೆ ಹೋಗಿರಬಹುದು ಎಂದು ಹುಡುಕಾಡಿದ್ದಾರೆ. ಆದರೆ, ಎಲ್ಲೂ ಪತ್ತೆ ಆಗಿಲ್ಲ. ಕೂಡಲೇ ಈಜುಕೊಳದ ಸಿಬ್ಬಂದಿಗೆ ವಿಷಯ ತಿಳಿಸಿದ್ದಾರೆ. ಕೊಳದಲ್ಲಿ ನೋಡಿದಾಗ ಇಂದ್ರೇಶ ಕೊಳದ ಕೆಳ ಭಾಗದಲ್ಲಿ ಪತ್ತೆ ಆಗಿದ್ದಾನೆ. ಈಜು ಕೊಳದ ಸಿಬ್ಬಂದಿ ಅಗತ್ಯ ಪ್ರಥಮ ಚಿಕಿತ್ಸೆ ನೀಡಿದ್ದಾರೆ. ಆಗ ಬಾಲಕನ ಮೂಗಿನಿಂದ ಅನ್ನದ ಅಗುಳು ಹೊರಗೆ ಬಂದಿದೆ. ಕೂಡಲೇ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದ್ದು, ವೈದ್ಯರು ಮೃತಪಟ್ಟಿದ್ದನ್ನು ದೃಢಪಡಿಸಿದ್ದಾರೆ. ಜಿಲ್ಲಾಸ್ಪತ್ರೆಗೆ ದೌಡಾಯಿಸಿದ ಇಂದ್ರೇಶ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಕೊಪ್ಪಳ ನಗರ ಠಾಣೆ ಪೊಲೀಸರು ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಮೃತನ ಜೊತೆಗೆ ಬಂದಿದ್ದ ಸ್ನೇಹಿತರಿಂದ ಮಾಹಿತಿ ಪಡೆದರು.

ಅಕಾಲಿಕ ಮಳೆಯಿಂದ ಬೆಳೆ ಹಾನಿ ಪ್ರದೇಶಕ್ಕೆ ಶಾಸಕ ಬಸನಗೌಡ ಭೇಟಿ

ಸಿಂಧನೂರು: ಶುಕ್ರವಾರ ರಾತ್ರಿ, ಸುರಿದ ಗಾಳಿ ಸಹಿತ ಅಕಾಲಿಕ ಮಳೆಗೆ ತಾಲೂಕಿನ ವಿವಿಧ ಹೋಬಳಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗಾಳಿ ಸಹಿತ ಮಳೆಯಾಗಿ ಕಟಾವಿಗೆ ಬಂದಿದ್ದ ಭತ್ತದ ಬೆಳೆಯು ನಾಶವಾಗಿದ್ದು, ಘಟನೆ ತಿಳಿದ ಬಳಿಕ ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ರವರು ತಾಲೂಕಿನ ಬಾದರ್ಲಿ ಹೋಬಳಿ ಹಾಗೂ ಹೆಡಗಿನಾಳ ಹೋಬಳಿಯಲ್ಲಿ ಅಧಿಕ ಮಳೆಯಾಗಿದ್ದು ಉದ್ಬಾಳ, ಗೋಮರ್ಸಿ, ಮಾಡಸಿರವಾರ, ಕನ್ನಾರಿ, ಬೆಳಗೂರ್ಕಿ, ಮಲದಿನ್ನಿ , ಅಲಬನೂರು , ಹರೇಟನೂರು, ಬಾದರ್ಲಿ, ಗಿಣಿವಾರ, ಒಳಬಳ್ಳಾರಿ ಹಾಗೂ ಹೆಡಗಿನಾಳ ಗ್ರಾಮದ ಬೆಳೆ ಹಾನಿ ಪ್ರದೇಶಕ್ಕೆ ಕೃಷಿ ಸಹಾಯಕ ನಿರ್ದೇಶಕ ನಜೀರ್ ಅಹ್ಮದ್ ರವರೊಂದಿಗೆ ಬೇಟಿ ನೀಡಿ, ಸದರಿ ಬೆಳೆ ಹಾನಿ ಬಗ್ಗೆ ರಾಯಚೂರು ಜಿಲ್ಲಾ ಅಧಿಕಾರಿಗಳೊಂದಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಮಾತನಾಡಿ ಕೂಡಲೇ ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳೊಂದಿಗೆ ಜಂಟಿ ಸರ್ವೆ ಕಾರ್ಯ ಆರಂಭಿಸಲು ಒತ್ತಾಯಿಸಿದರು. ಈ ವೇಳೆ ಹೊನ್ನನಗೌಡ ಬೆಳಗುರ್ಕಿ, ರಾಮಲಿಂಗ ರೆಡ್ಡಿ, ಬೆಳಗುರ್ಕಿ, ಲಕ್ಷ್ಮಿಪತಿ, ಶಂಕರರೆಡ್ಡಿ, ಅಯ್ಯನಗೌಡ, ಚಂದ್ರಶೇಖರ್ ಬಾದರ್ಲಿ, ಸಂಗನಗೌಡ, ಹಾಗೂ ಇತರರು ಉಪಸ್ಥಿತರಿದ್ದರು.

ಪಾಕಿಸ್ತಾನಕ್ಕೆ ಎದೆಗಾರಿಕೆ ಇದರೆ ನೇರವಾಗಿ ಯುದ್ಧ ಮಾಡಲಿ

ಲಿಂಗಸುಗೂರು: ಪಹಲ್ಗಾಮ್ ದಾಳಿ ಖಂಡಿಸಿ ಹಿಂದೂ ಸಂಘಟನೆಗಳ ಕಾರ್ಯಕರ್ತರು ಪಟ್ಟಣದಲ್ಲಿ ರಾಘವೇಂದ್ರಸ್ವಾಮಿ ಮಠದಿಂದ ಗಡಿಯಾರ ವೃತ್ತದವರೆಗೆ ಪಂಜಿನ ಮೆರವಣಿಗೆ ನಡೆಸಿದರು. ಗಡಿಯಾರ ವೃತ್ತದಲ್ಲಿ ಮೌನಾಚರಣೆ ಮಾಡಲಾಯಿತು. ನಂತರ ನಡೆದ ಸಂತಾಪ ಸಭೆಯಲ್ಲಿ ಮಾಜಿ ಸೈನಿಕ ವಿರುಪಾಕ್ಷಯ್ಯ ಹಿರೇಮಠ ಮಾತನಾಡಿ, ನಿಜಕ್ಕೂ ಪಾಕಿಸ್ತಾನಕ್ಕೆ ಎದೆಗಾರಿಕೆ ಇದ್ದರೆ ದೇಶದ ಸೈನಿಕರೊಂದಿಗೆ ನೇರವಾಗಿ ಯುದ್ಧ ಮಾಡಲಿ, ಅದು ಬಿಟ್ಟು ಕುತಂತ್ರ ಬುದ್ಧಿಯಿಂದ ದೇಶದೊಳಗೆ ಉಗ್ರರನ್ನು ನುಸುಳಿಸಿ ಅಮಾಯಕರ ಜೀವ ತೆಗೆಯುವುದು ಹೇಡಿತನದ ಕೃತ್ಯವಾಗಿದೆ. ಉಗ್ರರ ಕೃತ್ಯಕ್ಕೆ ಹೆದರುವ ದೇಶವಲ್ಲ ಇದು ಬಲಿಷ್ಠ ದೇಶವಾಗಿದೆ, ಪಾಕಿಸ್ತಾನ ಮಾಡಿದ ತಪ್ಪಿಗೆ ಅತಿ ಶೀಘ್ರವೇ ತಕ್ಕ ಪಾಠ ಕಲಿಸಲು ದೇಶದ ಸೈನಿಕರು ಸನ್ನದ್ಧರಾಗಿದ್ದಾರೆ ಎಂದರು. ಅಮರೇಶ್ವರ ಗುರು ಅಭಿನವ ಗಜದಂಡ ಶಿವಾಚಾರ್ಯರು ಮಾತನಾಡಿದರು. ಈ ಸಂದರ್ಭದಲ್ಲಿ ಸೋಮು ನಾಯಕ, ಸಿದ್ದು ಬಡಿಗೇರ, ಹುಲಿಗೇಶ ನಾಯಕ, ಅನಂತ್ ದಾಸ್ ,ಈಶ್ವರ ಪಲ್ಲೇದ, ಶರಣಬಸವ ಅಂಬಿಗರ, ಸುಭಾಷ ಶಿವುಕುಮಾರ, ಮೇಟಿ, ಹನುಮಂತ ವಿಜಯಕುಮಾರ ಮಡಿವಾಳ,ಮಂಜುನಾಥ ಕಾಮಿನ್, ಅಯ್ಯಪ್ಪ ಮಾಳೂರ, ಸೋಮು ಐದನಾಳ, ವಿಶ್ವನಾಥ ಗುತ್ತೇದಾರ, ಕುಮಾರ ಮುಂಡೆವಾಡಿ, ಸಂತೋಷ ಭೀಮಸೇನ ಕುಲಕರ್ಣಿ, ವೀರೇಶ ಪವಾರ, ಕೃಷ್ಣಯಲಗಲದಿನ್ನಿ, ವಿಷ್ಣುಗುತ್ತೇದಾರ, ಪರಶುರಾಮ, ಕೆಂಬಾವಿ. ಬಸವರಾಜ,ಚಂದ್ರು, ಸತೀಶ, ಕಿರಣ ಪಲ್ಲೇದ, ಸಂಜೀವ ರಕ್ಕಸಗಿ, ಅಮರೇಶ ಬಾಲಾಜಿ, ಇದ್ದರು.

ರೈಲ್ವೇ ನಿಲ್ದಾಣದ ಮುಂದೆ ಕರವೇ ಪ್ರತಿಭಟನೆ

ಕೊಪ್ಪಳ: ಕನ್ನಡದಲ್ಲಿ ಮಾತನಾಡಲು ಮನವಿ ಮಾಡಿದ ರೈಲ್ವೇ ಪ್ರಯಾಣಿಕ ಮಹ್ಮದ ಭಾಷಾ ಅತ್ತಾರ ಮೇಲೆ ಹಲ್ಲೆ ಮಾಡಿ, ಮೊಬೈಲ್ ಕಸಿದುಕೊಂಡ ಟಿಕೇಟ್ ಕಲೆಕ್ಟರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕರವೇ ಜಿಲ್ಲಾ ಘಟಕದಿಂದ, ನಗರದ ರೈಲ್ವೇ ನಿಲ್ದಾಣದ ಮುಂದೆ ಶನಿವಾರ ಪ್ರತಿಭಟಿಸಲಾಯಿತು. ನಗರದ ರೈಲ್ವೇ ನಿಲ್ದಾಣದ ಮುಂದೆ ಜಮಾಯಿಸಿದ ನೂರಾರು ಕರವೇ ಕಾರ್ಯಕರ್ತರು ತಪ್ಪು ಮಾಡಿರುವ ರೈಲ್ವೇ ನೌಕರನ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಘೋಷಣೆ ಕೂಗಿದರು. ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆ. ಈ ಹಿನ್ನೆಲೆಯಲ್ಲಿ ಕನ್ನಡ ಮಾತನಾಡಲು ಮನವಿ ಮಾಡಿರುವ ಪ್ರಯಾಣಿಕನ ಮೇಲೆ ಹಲ್ಲೆ ಮಾಡಿರುವುದು ಅಪರಾಧ. ಕೂಡಲೇ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ನೈಋತ್ಯ ರೇಲ್ವೆ ಹುಬ್ಬಳ್ಳಿಯ ಪ್ರಧಾನ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದರು.

ಕಳೆದ ನಾಲ್ಕೈದು ದಿನದ ಹಿಂದೆ ಬೆಂಗಳೂರಿನಲ್ಲಿ ವಾಯುಪಡೆ ಅಧಿಕಾರಿಯೊಬ್ಬರು ಕನ್ನಡಿಗ ಸೇಲ್ಸ್‌ಮಾನ್ ಮೇಲೆ ಹಾಡು ಹಗಲೇ ಹಲ್ಲೆಗೈದು ದೌರ್ಜನ್ಯವೆಸಗಿದ್ದ ಪ್ರಕರಣ ಮಾಸುವ ಮೊದಲೇ ಈ ಪ್ರಕರಣ ಬೆಳಕಿಗೆ ಬಂದಿದೆ. ದೇಶದ ಪ್ರತಿ ಷ್ಠಿತ ರೇಲ್ವೆ ಇಲಾಖೆಯ

ಕೊಪ್ಪಳದ ರೈಲ್ವೇ ನಿಲ್ದಾಣದ ಮುಂದೆ ಪ್ರಯಾಣಿಕನ ಮೇಲೆ ಹಲ್ಲೆ ಮಾಡಿರುವ ಟಿಕೇಟ್ ಕಲೆಕ್ಟರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕರವೇ ಜಿಲ್ಲಾ ಘಟಕದಿಂದ ಶನಿವಾರ ಪ್ರತಿಭಟಿಸಲಾಯಿತು.

> ಏ.24 ರಂದು ಕೊಪ್ಪಳ ತಾಲೂಕು ಭಾಗ್ಯನಗರ ನಿವಾಸಿ ಮಹ್ಮದ ಭಾಷಾ ಅತ್ತಾರ, ಹಂಪಿ ಎಕ್ಸಪ್ರೆಸ್ ರೈಲಿನಲ್ಲಿ ಮೈಸೂರಿನಿಂದ ಕೊಪ್ಪಳಕ್ಕೆ ಪ್ರಯಾಣಿ ಸುತ್ತಿದ್ದರು. ಬೆಂಗಳೂರು ರೈಲ್ವೇ ನಿಲ್ದಾಣ ನಂತರ ಬಂದ ಟಿಕೇ ಟ್ ಕಲೆಕ್ಟರ್ ಹಿಂದಿ ಭಾಷೆಯಲ್ಲಿ ಸಂಭಾಷಣೆ ಮಾಡಿದ್ದಾರೆ. ಈ ವೇಳೆ ಕನ್ನಡದಲ್ಲಿ ಮಾತನಾಡಿ, ಎಂದು ಮನವಿ ಮಾಡಿದಕ್ಕೆ ಇವರ ಮೇಲೆ ಹಲ್ಲೆ ಮಾಡಿ, ಮೊಬೈಲ್ ಕಸಿದುಕೊಂಡು ಅವಾ ಚ್ಯ ಶಬ್ದದಿಂದ ನಿಂದಿಸಿ ದೌರ್ಜನ್ಯ ಎಸಗಿದ್ದಾರೆ. ಇದರಿಂದ ಕೂಡಲೇ ರೈಲ್ವೇ ನೌಕರನ ವಿರುದ್ಧ ಕ್ರಮ ಜರುಗಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿರು.
>
> -ಬಿ.ಗಿರೀಶಾನಂದ ಜ್ಞಾನಸುಂದರ, ಜಿಲ್ಲಾಧ್ಯಕ್ಷ

ಮೇಲೆ ಸಾರ್ವ ಜನಿಕರಿಗೆ ನಂಬಿಕೆ ಇಲ್ಲದಂತಾಗುತ್ತದೆ. ರಾಜ್ಯದ ಆಡಳಿತ ಹಾಗೂ ಮಾತೃ ಭಾಷೆ ಕನ್ನಡಲ್ಲಿ ಮಾತನಾಡಿ ಎಂದದ್ದಕ್ಕೆ ಹಲ್ಲೆ ಮಾಡಿ ದೌಜ್ಯನ್ಯವೆಸಗಿದರೆ, ನಾವು ಕರ್ನಾಟಕದಲ್ಲಿ ಬದುಕುತ್ತಿದ್ದೇವೆಯೇ? ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ ಎಂದು ಬೇಸರ ವ್ಯಕ್ತಪಡಿಸಿರು. ಕರವೇ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಿಂಗಪ್ಪ ಭಾಗ್ಯನಗರ ಅಧ್ಯಕ್ಷ ವಿರೇಶ ಮುಂಡಾಸದ, ಆಸೀಪ್ ಮೇಸ್ತ್ರಿ ಇದ್ದರು.

ಕುಡಿಯುವ ನೀರಿಗಾಗಿ ಗ್ರಾಮಸ್ಥರ ಆಗ್ರಹ

ಮುದಗಲ್: ಪಟ್ಟಣ ಸಮೀಪದ ನಾಗಲಾಪೂರ ಗ್ರಾ.ಪಂ ವ್ಯಾಪ್ತಿಯಲ್ಲಿ ಬರುವ ಉಳಿಮೇಶ್ವರ, ವ್ಯಾಕರನಾಳ, ನಾಗಲಾಪೂರ ಸ್ಥೆರಿದಂತೆ ಇತರೆ ಗ್ರಾಮಗಳಲ್ಲಿ ತಲೇದೋರಿರುವ ಕುಡಿಯುವ ನೀರಿನ ಸಮಸ್ಯೆ ಹಾಗೂ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಅವಳಿ ಗ್ರಾಮದ ನಿವಾಸಿಗಳು ನಾಗಲಾಪೂರ ಗ್ರಾಮ ಪಂಚಾಯತಿ ಮುಂದೆ ಪ್ರತಿಭಟನೆ ನಡೆಸಿದರು. ಗ್ರಾ.ಪಂಗೆ ಕಳೆದ 3 ತಿಂಗಳಲ್ಲಿ 5 ಜನ ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳನ್ನು ಮನಸೋ ಇಚ್ಛೆಯಂತೆ ಬದಲಾಯಿಸಿರುವದನ್ನ ಗ್ರಾ.ಪಂ ವ್ಯಾಪ್ತಿಯ ಸಮಸ್ಯೆಗಳು ಉಲ್ಬಣಗೊಳ್ಳಲು ಪ್ರಮುಖ ಕಾರಣವಾಗಿದೆ ಎಂದು ಧರಣಿ ನಿರತ ತಿಮ್ಮನಗೌಡ ವ್ಯಾಕರನಾಳ, ಹನುಮಂತ ಉಳಿಮೇಶ್ವರ ಆರೋಪಿ ಸಿದರು. ಇದಲ್ಲದೇ ಕಳೆದ ಮೂರು ತಿಂಗಳಲ್ಲಿ ಯಾವೊಬ್ಬ ಪಿಡಿಓಗೂ ಅಧಿಕಾರದ ಚಾರ್ಜ ನೀಡದೇ ಗ್ರೇಡ್ 2 ಕಾರ್ಯದರ್ಶಿಗೆ ಅಧಿಕಾರ ನೀಡಿರುವುದು ಧರಣಿ ನಿರತರ ಆಕ್ರೋಶಕ್ಕೆ ಕಾರಣವಾಗಿದೆ. ನಾಗಲಾ ಪೂರ ಗ್ರಾ.ಪಂಗೆ ಪ್ರತಿಭಟನಾ ಸ್ಥಳಕ್ಕೆ ದೌಡಾಯಿಸಿದ ಲಿಂಗಸಗೂರು ತಾ.ಪಂ ಸಹಾಯಕ ನಿದೇಶಕ ಪಂಪನಗೌಡ ಕನ್ನಾಳ ಧರಣಿ ನಿರತರೊಂದಿಗೆ ಚರ್ಚಿಸಿ ಸಮಸ್ಯೆಗಳ ಬಗ್ಗೆ ಸ್ಥಳದಲ್ಲಿಯೇ ಮಾಹಿತಿ ಪಡೆದು ಗ್ರಾ.ಪಂ ಕಾರ್ಯದರ್ಶಿ ನಾಗಪ್ಪ ಅವರಿಗೆ ಸರಕಾರದ ಸ್ಪಷ್ಟ ನಿರ್ದೇಶದನ್ವಯ ಕುಡಿಯುವ ನೀರಿನ ಸಮಸ್ಯೆ ತುರ್ತು ಬಗೆ ಹರಿಸುವಂತೆ ಸೂಚಿಸಿದರು. ಸ್ಥಳೀಯ ಮಟ್ಟದ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಿ ವರದಿ ತಾ.ಪಂಗೆ ಸಲ್ಲಿಸುವಂತೆ ಪಿ.ಡಿ.ಓ ಬಸವರಾಜ ವಸ್ತ್ರದ್ ಅವರಿಗೆ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ತಿಮ್ಮನಗೌಡ ಇತರರಿದ್ದರು.

ಸಮಾಚಾರ ಸಣ್ಣದಲ್ಲ

ಜೋಳ ಖರೀದಿ: ಹೆಚ್ಚುವರಿ ನೋಂದಣಿ

ಬಳ್ಳಾರಿ: ಜಿಲ್ಲೆಯಲ್ಲಿ 2024-25 ನೇ ಸಾಲಿನ ಹಿಂಗಾರು ಋತುವಿನಲ್ಲಿ ಬೆಳೆದ ಜೋಳವನ್ನು ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ನೇರವಾಗಿ ಖರೀದಿಸಲು ಈಗಾಗಲೇ ತೀರ್ಮಾನಿಸಲಾಗಿದ್ದು, ಪ್ರಸ್ತುತ ಇರುವ 10 ಖರೀದಿ ಕೇಂದ್ರಗಳ ಜತೆಗೆ 02 ಹೆಚ್ಚುವರಿ ನೋಂದಣಿ ಮತ್ತು ಖರೀದಿ ಕೇಂದ್ರ ತೆರೆಯಲಾಗಿದೆ. ಹೆಚ್ಚುವರಿ ರೈತ ನೋಂದಣಿ ಮತ್ತು ಖರೀದಿ ಕೇಂದ್ರ: ಸಿರುಗುಪ್ಪ ತಾಲೂಕಿನ ಮುದ್ದಟನೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮತ್ತು ಅರಳಿಗನೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ. ಬೆಂಬಲ ಬೆಲೆ ಯೋಜನೆ ಬಗ್ಗೆ ರೈತರಿಗೆ ಯಾವುದೇ ಸಮಸ್ಯೆಗಳಿದ್ದರೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತದ ಜಿಲ್ಲಾ ವ್ಯವಸ್ಥಾಪಕರು ಹಾಗೂ ತಾಲೂಕಿನ ತಹಸಿಲ್ದಾರ್, ಕೃಷಿ ಅಧಿಕಾರಿ, ಎ.ಪಿ.ಎಂ.ಸಿ ಕಾರ್ಯದರ್ಶಿ, ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತದ ಸೈಯದ್ ವಸೀಮ್ ಪಾಷ (ಮೊ.9449864453) ಗೆ ಸಂಪರ್ಕಿಸಬಹುದು ಎಂದು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಾದ ಸಕೀನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುರುಗೋಡು ಪುರಸಭೆ: ಅರ್ಜಿಗಳ ಆಹ್ವಾನ

ಬಳ್ಳಾರಿ: ಕುರುಗೋಡು ಪುರಸಭೆ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ ಮಿಷನ್ (ನ)-2.0 ಯೋಜನೆಯ ಐ.ಇ.ಸಿ ಘಟಕದಡಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕುರಿತು ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ವಿವಿಧ ಬಗೆಯ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ಅರ್ಹ ಸ್ವ-ಸಹಾಯ ಗುಂಪುಗಳ ಸದಸ್ಯರುಗಳ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹತೆ: 10ನೇ ತರಗತಿ/ತತ್ಸಮಾನ ಶಿಕ್ಷಣ ಹೊಂದಿರತಕ್ಕದ್ದು. ಅಭ್ಯರ್ಥಿಯು ಕನ್ನಡ ಮಾತನಾಡಲು ಹಾಗೂ ಬರೆಯಲು ತಿಳಿದಿರಬೇಕು. ಅರ್ಜಿ ಸಲ್ಲಿಸುವವರು ಸ್ವ-ಸಹಾಯ ಗುಂಪಿನಲ್ಲಿ ಕಾರ್ಯನಿರ್ವಹಿಸಿರುವ ಬಗ್ಗೆ ನಲ್ಮ್/ಭಾರತ/ಕರ್ನಾಟಕ ಸರ್ಕಾರದಿಂದ ಸೂಕ್ತ ದಾಖಲೆ ಹೊಂದಿರಬೇಕು. ಮಾಹಿತಿ ಶಿಕ್ಷಣ ಮತ್ತು ಸಂವಹನದಡಿ ಗ್ರಾಪಂ ಅಥವಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವವುಳ್ಳ ಅಭ್ಯರ್ಥಿಗಳಿಗೆ ಆದ್ಯತೆಯ ಮೇರೆಗೆ ಆಯ್ಕೆ ಮಾಡಲಾಗುವುದು. ಈ ಮೇಲಿನ ಎಲ್ಲಾ ದಾಖಲೆ ಮತ್ತು ಅನುಭವವುಳ್ಳ ಅಭ್ಯರ್ಥಿಗಳಿದ್ದಲ್ಲಿ ಕುರುಗೋಡು ಪುರಸಭೆ ಕಚೇರಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಹೊಸಪೇಟೆ ಜಿಲ್ಲಾಡಳಿತದಿಂದ ಜಾಗೃತಿ ಜಾಥಾದಿಂದ ಅರಿವು: ಆರ್‌ಸಿಎಚ್ ಅಧಿಕಾರಿ ಡಾ. ಜಂಬಯ್ಯ ಚಾಲನೆ

ಮಲೇರಿಯಾ ನಿರ್ಮೂಲನೆ ಎಲ್ಲರ ಜವಾಬ್ದಾರಿ

ಹೊಸಪೇಟೆ: ಮಲೇರಿಯಾ ನಿರ್ಮೂಲನೆ ಪ್ರತಿಯೊಬ್ಬ ಸಾರ್ವಜನಿಕರ ಜವಾಬ್ದಾರಿಯಾಗಬೇಕು. ಈ ನಿಟ್ಟಿನಲ್ಲಿ ಸ್ವಯಂ ರಕ್ಷಣಾ ಕ್ರಮಗಳನ್ನು ಪಾಲಿಸಿದರೇ ನಿಯಂತ್ರಣ ಸುಲಭ ಸಾಧ್ಯ ಎಂದು ಜಿಲ್ಲಾ ಆರ್ ಸಿಎಚ್ ಅಧಿಕಾರಿ ಡಾ.ಜಂಬಯ್ಯ ಹೇಳಿದರು.

ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ವಿಶ್ವ ಮಲೇರಿಯಾ ದಿನಾಚರಣೆ ನಿಮಿತ್ತ ಏರ್ಪಡಿಸಿದ ಜಿಲ್ಲಾ ಮಟ್ಟದ ಜಾಗೃತಿ ಜಾಥಾವನ್ನು ಹಸಿರು ನಿಶಾನೆ ಪ್ರದರ್ಶಿಸಿ ಚಾಲನೆ ನೀಡಿ ಮಾತನಾಡಿದರು.

ಸೋಂಕಿತ ಅನಾಫೀಲಿಸ್ ಹೆಣ್ಣು ಸೊಳ್ಳೆ ಕಚ್ಚುವುದರಿಂದ ಮಲೇರಿಯಾ ಹರಡುತ್ತದೆ. ಸಾರ್ವಜನಿಕರು ಮಲೇರಿಯಾ ನಿಯಂತ್ರಣಕ್ಕೆ ಸ್ವಯಂ ರಕ್ಷಣಾ ಕ್ರಮಗಳನ್ನು ಪಾಲಿಸಿದರೇ ಗರಿಷ್ಟ ಮಟ್ಟದಲ್ಲಿ ನಿಯಂತ್ರಣ ಸಾಧ್ಯವಾಗಲಿದೆ. ಮನೆಗಳಲ್ಲಿ ಸೊಳ್ಳೆ ಪರದೆ ಬಳಕೆ, ಸೊಳ್ಳೆ ಬತ್ತಿ, ಮುಲಾಮು ಬಳಕೆ, ಬೇವಿನ ಎಲೆ, ಸಾಂಬ್ರಾಣಿ, ಧೂಪದ ಹೊಗೆ ಹಾಕುವುದು. ಕಿಟಕಿ ಬಾಗಿಲುಗಳ ಮೂಲಕ ಸೊಳ್ಳೆಗಳು ಮನೆಯೊಳಗೆ ಬಾರದಂತೆ ಕ್ರಮ ವಹಿಸುವುದು. ಮೈತುಂಬ ಬಟ್ಟೆ ಧರಿಸುವುದು ಸೇರಿದಂತೆ ಮನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಕಲುಷಿತ ನೀರು ನಿಲ್ಲದಂತೆ ನೈರ್ಮಲ್ಯ ಕಾಪಾಡಬೇಕು ಎಂದರು.

ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ವಿಶ್ವ ಮಲೇರಿಯಾ ದಿನದ ಬಗ್ಗೆ ಜಾಗೃತ ಜಾಥಾ ಕಾರ್ಯಕ್ರಮ ನಡೆಯಿತು.

ಪ್ರತಿ ಮೂರು ದಿನಗಳಿಗೊಮ್ಮೆ ಕುಡಿಯುವ ನೀರು, ಬಳಸುವ ನೀರು ಬದಲಿಸಬೇಕು. ಮಳೆಯ ನೀರು ನಿಲ್ಲುವಂತಹ ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡಬೇಕಿದೆ. ಚಳಿಜ್ವರ, ನಡುಕ, ಮೈ ಬೆವರುವಿಕೆ, ತಲೆನೋವು ಸೇರಿ ಯಾವುದೇ ಜ್ವರ ಬಂದರೂ ನಿರ್ಲಕ್ಷಿಸದೇ, ಸ್ವಯಂ ಚಿಕಿತ್ಸೆ ಮಾಡಿಕೊಳ್ಳದೇ ತಕ್ಷಣ ವೈದ್ಯರನ್ನು ಭೇಟಿ ಮಾಡಿ ಸಲಹೆ ಪಡೆಯಬೇಕು. ರಕ್ತ ಪರೀಕ್ಷೆಯಿಂದ ಮಲೇರಿಯಾ ಪತ್ತೆಯಾಗಲಿದೆ. 1-14 ದಿನಗಳ ಚಿಕಿತ್ಸೆಯಿಂದ ಮಲೇರಿಯಾ ಸಂಪೂರ್ಣ ಗುಣಮುಖರಾಗಲು ಸಾಧ್ಯ ಎಂದು ಹೇಳಿದರು.

ಲಾರ್ವಾಹಾರಿ ಮೀನುಗಳನ್ನು ಬಾವಿ, ಕೆರೆಗಳಲ್ಲಿ ಬಿಡಲಾಗುತ್ತದೆ. ಆರೋಗ್ಯ ಸಹಾಯಕರು ಮತ್ತು ಆಶಾ ಕಾರ್ಯಕರ್ತೆರಿಂದ ಗ್ರಾಮ ಮಟ್ಟದಲ್ಲಿ ರಕ್ತ ಪರೀಕ್ಷೆ ಮತ್ತು ಮಲೇರಿಯಾ ಜ್ವರಕ್ಕೆ ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ.

ಸಾರ್ವಜನಿಕರು ಎಲ್ಲಾ ಸೇವೆಗಳನ್ನು ಉಪಯೋಗಿಸಿಕೊಳ್ಳುವ ಮೂಲಕ ಮಲೇರಿಯಾ ಮುಕ್ತ ಜಿಲ್ಲೆಯನ್ನಾಗಿಸಲು ಸಹಕರಿಸಬೇಕಿದೆ ಎಂದರು.

> ಮಲೇರಿಯಾ ಜ್ವರಕ್ಕೆ ಆರೋಗ್ಯ ಇಲಾಖೆಯಿಂದ ಉಚಿತ ಸೇವೆಗಳನ್ನು ನೀಡಲಾಗುತ್ತದೆ. ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿ ರಕ್ತ ಪರೀಕ್ಷೆ ಮತ್ತು ಮಲೇರಿಯಾಕ್ಕೆ ಸೂಕ್ತ ಚಿಕಿತ್ಸೆ ನೀಡಲಾಗುವುದು. ಸಮಸ್ಯಾತ್ಮಕ ಪ್ರದೇಶಗಳಲ್ಲಿ ಕೀಟನಾಶಕ ಸಿಂಪರಣೆ ಮತ್ತು ಧೀರ್ಘಾವಧಿ ಕೀಟನಾಶಕ ಲೇಪಿತ ಸೊಳ್ಳೆ ಪರದೆಗಳನ್ನು ವಿತರಿಸಲಾಗುವುದು.
>
> -ಡಾ.ಬಸವರಾಜ, ತಾಲೂಕು ಆರೋಗ್ಯ ಅಧಿಕಾರಿ

ಬಳಿಕ ಮಲೇರಿಯಾ ಜ್ವರ ನಿಯಂತ್ರಣ ಕ್ರಮಗಳ ಬಗ್ಗೆ ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಲಾಯಿತು. ಜಾಗೃತಿ ಜಾಥಾ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಿಂದ ಆರಂಭಿಸಿ ಪ್ರಮುಖ ಬೀದಿಗಳ ಮೂಲಕ ವೀರ ಮದಕರಿ ವೃತ್ತ, ಡಾ.ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ವಿವಿಧ ಘೋಷಣೆಗಳನ್ನು ಕೂಗುತ್ತಾ ಜನಜಾಗೃತಿ ಮೂಡಿಸಲಾಯಿತು. ಈ ವೇಳೆ ಜಿಲ್ಲಾ ಮಲೇರಿಯಾ ಅಧಿಕಾರಿ ಡಾ.ಸತೀಶ್ ಚಂದ್ರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ. ದೊಡ್ಡಮನಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಧರ್ಮನಗೌಡ ಸೇರಿದಂತೆ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಜಾನಪದೀಯರ ಸಾಂಘಿಕ ಜೀವನ ಅದ್ಭುತ

ಹೂವಿನಹಡಗಲಿ: ಜಾನಪದೀಯರ ಸಾಂಗಿಕ ಜೀವನ ಅದ್ಭುತವಾಗಿತ್ತು, ನಮ್ಮ ಹಿಂದಿನ ಜನರು ಹಂಚಿಕೊಂಡು ಬದುಕಿದ ರೀತಿ ನಮಗೆ ಮಾದರಿಯಾಗಿದೆ ಎಂದು ಜಿಬಿಆರ್ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ಮೋಹನ ರೆಡ್ಡಿ ಹೇಳಿದರು.

ಪಟ್ಟಣದ ಜಿಬಿಆರ್ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಜಾನಪದ ಜಾತ್ರೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಹಳ್ಳಿಯನ ನೆನಪಿಸುವಂತಹ ಉಡುಗೆ-ತೊಡಗೆ ಹಾಗೂ ಊಟದ ಪದ್ಧತಿಯನ್ನು ನಮ್ಮೆಲ್ಲ ವಿದ್ಯಾರ್ಥಿಗಳು ಬಹಳ ಅಚ್ಚುಕಟ್ಟಾಗಿ ಮಾಡಿದ್ದಾರೆ ಎಂದರು. ಮಹಾವಿದ್ಯಾಲಯ ಯಾವಾಗಲೂ ಕಾರ್ಯಕ್ರಮಗಳನ್ನು ಮಾಡಿದರೆ ಮಾದರಿಯಾಗಿರುತ್ತದೆ, ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಈ ಜಾನಪದ ಜಾತ್ರೆಯನ್ನು ಯಶಸ್ವಿಗೊಳಿಸಿದ್ದಾರೆ ಎಂದರು. ಸ್ವಲ್ಪ ಸಮಯದಲ್ಲಿ ಇಂಥ ಅಭೂತ ಪೂರ್ವ ಕಾರ್ಯಕ್ರಮವನ್ನು ಆಯೋಜಿಸುವಲ್ಲಿ ಪ್ರಾಚಾರ್ಯರು ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಬಹಳ ಶ್ರಮವಹಿಸಿದ್ದಾರೆ ಅವರ ಶ್ರಮ ಇಂದು ಯಶಸ್ವಿಯಾಗಿದೆ ಎಂದರು. ರಂಗಭಾರತಿ ಕಾರ್ಯಾಧ್ಯಕ್ಷರಾದ ಸುಮಾ ವಿಜಯ, ಪ್ರಾಚಾರ್ಯ ಎಸ್.ಎಸ್.ಪಾಟೀಲ್, ಆಡಳಿತ ಮಂಡಳಿಯ ಸದಸ್ಯರಾದ ಕೆಎಂ ಉದಾಸಿ, ಪುರಸಭೆ ಉಪಾಧ್ಯಕ್ಷ ಸೊಪ್ಪಿನ ಮಂಜುನಾಥ್ ಕೊಟ್ಟೂರೇಶ್ವರ ಕಾಲೇಜಿನ ಪ್ರಾಚಾರ್ಯ ಡಾ. ರವಿಕುಮಾರ್, ಹರಪನಹಳ್ಳಿ ಕಾಲೇಜಿನ ಪ್ರಾಚಾರ್ಯ ಡಾ.ಸಿದ್ದಲಿಂಗ ಮೂರ್ತಿ, ವಿವಿ ಸಂಘದ ಆಜೀವ ಸದಸ್ಯರಾದ ಕೋಡಿಹಳ್ಳಿ ಮುದುಕಪ್ಪ, ಎಂಪಿಎಂ ವೀರಭದ್ರ ದೇವರು, ನಿವೃತ್ತ ಪ್ರಾಚಾರ್ಯ ವರಕುಮಾರಗೌಡ ಉಪಸ್ಥಿತರಿದ್ದರು.

ಪಟ್ಟಣದ ಜಿಬಿಆರ್ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಜಾನಪದ ಜಾತ್ರೆ ಕಾರ್ಯಕ್ರಮಕ್ಕೆ ಆಡಳಿತ ಮಂಡಳಿಯ ಅಧ್ಯಕ್ಷ ಮೋಹನ ರೆಡ್ಡಿ ಚಾಲನೆ ನೀಡಿದರು.

> ಪುಸ್ತಕದ ಹುಳು ಆಗುವುದಕ್ಕಿಂತ ಜೀವನದ ಅನುಭವ ಬಹಳ ಮುಖ್ಯ. ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳನ್ನು ನಡೆಸುತ್ತಿರುವುದು ಉತ್ತಮವಾದ ಕಾರ್ಯವಾಗಿದೆ ಎಂದರು. ಜಾನಪದದ ಅನುಭವ ಜೀವನದ ತಳಹದಿಯಾಗಿದೆ, ಅನುಭವಿಗಳ ಕೆನೆ ಅದಾಗಿದೆ. ವಿದ್ಯಾರ್ಥಿಗಳು ಉತ್ತಮವಾದಂತಹ ದಿರಿಸುಗಳನ್ನು ಹಾಕಿಕೊಂಡು ಸಾಂಪ್ರದಾಯ ಬದ್ಧವಾಗಿ ಮೆರವಣಿಗೆಯಲ್ಲಿ ಸಾಗಿದ್ದು ಜಾನಪದ ಜಾತ್ರೆಯ ಅಂದವನ್ನು ಹೆಚ್ಚಿಸಿತು, ಜಾನಪದ ಬದುಕಿನ ಹಿನ್ನೆಲೆಯಲ್ಲಿ ಸಂಸ್ಕಾರ ಅಡಗಿದೆ. ಆಧುನಿಕ ಜಗತ್ತಿನ ಬೆಳವಣಿಗೆಯಲ್ಲಿ ಹಿರಿಯರ, ತಂದೆ-ತಾಯಿಗಳ ಬದುಕು ದುಸ್ತರವಾಗಿದೆ ಎಂದ ಅವರು ತಂದೆ ತಾಯಿಗಳು ವೃದ್ಧಾಶ್ರಮದಲ್ಲಿರುವ ಪರಿಸ್ಥಿತಿ ಬಂದಿದೆ ನಾವು ಸಹಬಾಳ್ವೆಯನ್ನು ಮರೆತಿದ್ದೇವೆ. ಇದನ್ನು ಅರಿತು ಬದುಕಿದರೆ, ಬದುಕನ್ನು ಹಂಚಿಕೊಂಡರೆ ಸಾರ್ಥಕವಾಗುತ್ತದೆ.
>
> -ಕೊಟ್ರೇಶ್, ಎಡಿಬಿ ಕಾಲೇಜಿನ ಅಧ್ಯಕ್ಷ

ಪಕ್ಷ ಭೇದ ಮರೆತು ದೇಶಕ್ಕಾಗಿ ಒಂದಾಗಿ

ಹರಪನಹಳ್ಳಿ: ಕಾಶ್ಮೀರದ ಪಹಲ್‌ಗಾಮ್ ಜಿಲ್ಲೆಯಲ್ಲಿ ಉಗ್ರರಿಂದ ನಡೆದ ಹತರಾದ ವ್ಯಕ್ತಿಗಳ ಆತ್ಮಕ್ಕೆ ಶಾಂತಿ ಕೋರಿ ಇಲ್ಲಿಯ ಕಾಂಗ್ರೆಸ್ ಪಕ್ಷದ ವತಿಯಿಂದ ಪಟ್ಟಣದ ಐ.ಬಿ. ವೃತ್ತದಲ್ಲಿ ಶನಿವಾರ ರಾತ್ರಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಭಯೋತ್ಪಾದಕರಿಂದ ಹತರಾದ ಮಂಜುನಾಥರಾವ್, ಭರತ ಭೂಷಣ, ಮಧುಸೂದನರಾವ್ ಅವರುಗಳ ಭಾವಚಿತ್ರ ಹಿಡಿದು ಹಾಗೂ ಮೇಣದಬತ್ತಿ ಹಚ್ಚಿ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಅವರು ಅಮಾಯಕ ಪ್ರವಾಸಿಗರನ್ನು ಉಗ್ರರು ಕೊಲೆ ಮಾಡಿದ್ದು ಅತ್ಯಂತ ಖಂಡನೀಯ , ಕೇಂದ್ರ ಸರಕಾರ ಉಗ್ರರನ್ನು ಸದೆಬಡಿಯಬೇಕು ಎಂದು ಒತ್ತಾಯಿಸಿದರು. ಪಾಕ್‌ದಿಂದ ಭಾರತಕ್ಕೆ ನುಸುಳುಕೋರರನ್ನು ತಡೆಯಬೇಕು ಹಾಗೂ ಪಕ್ಷ ಭೇದ ಮರೆತು ಒಗ್ಗಟ್ಟಾಗಿ ಹೊರಗಿನ ಭಯೋತ್ಪಾದನೆಯನ್ನು ಎದುರಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಕೆ.ಕುಬೇರಗೌಡ,ಎಸ್.ಮಂಜುನಾಥ, ಪಾತೀಮಾ ಬೀ,ಹುಲ್ಲಿಕಟ್ಟಿ ಚಂದ್ರಪ್ಪ, ಮೈದೂರು ರಾಮಣ್ಣ, ಮುತ್ತಿಗೆ ಜಂಬಣ್ಣ, ವಕೀಲರ ಸಂಘದ ಅಧ್ಯಕ್ಷ ಟಿ.ವೆಂಕಟೇಶ, ವಕೀಲ ಕಣವಿಹಳ್ಳಿ ಮಂಜುನಾಥ, ಲಾಟಿದಾದಾಪೀರ, ಮಹಾಂತೇಶ, ಸೇರಿದಂತೆ ಕಾಂಗ್ರೆಸ್ ಪಕ್ಷದ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

> ಭಯೋತ್ಪಾದನೆ ಎಂಬುದು ಯಾವುದೇ ಜಾತಿ, ಧರ್ಮಕ್ಕೆ ಸಂಬಂಧಿಸಿದ್ದಲ್ಲ. ಈ ಕೃತ್ಯ ಅತ್ಯಂತ ಖಂಡನೀಯ.
>
> -ಬಂಡ್ರಿ ಗೋಣಿಬಸಪ್ಪ, ವಕೀಲರು

> ಇದು ಕೇಂದ್ರ ಸಕಾರದ ಭದ್ರತಾ ವೈಫಲ್ಯ, ಭಯೋತ್ಪಾದನೆ ದಾಳಿಯನ್ನು ಬೇರೆ ಕಡೆ ತಿರುಗಿಸಬಾರದು, ಉಗ್ರರಿಗೆ ತಕ್ಕ ಪಾಠ ಕಲಿಸಬೇಕು.
>
> -ಬಸವರಾಜ ಸಂಗಪ್ಪ, ಕಾಂಗ್ರೆಸ್ ಮುಖಂಡ

ಹರಪನಹಳ್ಳಿಯಲ್ಲಿ ಕಾಶ್ಮೀರದಲ್ಲಿ ಉಗ್ರರಿಂದ ನಡೆದ ಹತರಾದ ವ್ಯಕ್ತಿಗಳ ಆತ್ಮಕ್ಕೆ ಶಾಂತಿ ಕೋರಿದರು.

ಜಿಲ್ಲಾ ನೋಟ

ಹೊಸ ಕ್ರಿಕೆಟ್ ಕ್ರೀಡಾಂಗಣ ಅರಮನೆ ನಗರಿಗೆ ಕಿರೀಟ..

ಕೆ.ಜೆ.ಲೋಕೇಶ್ ಬಾಬು,ಮೈಸೂರು

ಮೈಸೂರಿಗರ ಬಹುಕಾಲದ ನಿರೀಕ್ಷಿತ ಯೋಜನೆಯೊಂದಕ್ಕೆ ಅಧಿಕೃತವಾಗಿ ಅಂಕಿತ ಬಿದ್ದಿದೆ. ಈ ಮೂಲಕ ಸಾಂಸ್ಕೃತಿಕ ರಾಜಧಾನಿ ಎನಿಸಿಕೊಂಡಿದ್ದ ಮೈಸೂರು ಇದೀಗ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ಹೊಂದುವ ಮೂಲಕ ಜಾಗತಿಕ ಮಟ್ಟದಲ್ಲಿ ಒಂದು ಹೆಜ್ಜೆ ಎತ್ತರಕ್ಕೆ ಏರಿದೆ. ಮೈಸೂರಿಗರ ಹಳೇ ಬೇಡಿಕೆಯಾದ ಕ್ರಿಕೆಟ್ ಸ್ಟೇಡಿಯಂಗೆ ದಶಕಗಳ ಕಾಲದಿಂದಲೂ ಜಾಗ ಗುರುತು ಮಾಡುವುದರಲ್ಲೇ ಸಮಯ ವ್ಯರ್ಥವಾಗಿತ್ತು. ಈ ನಡುವೆ ಅಂತಿಮವಾಗಿ ಸರಕಾರ ಜಾಗ ನೀಡುವ ಮೂಲಕ ಹೊಸದೊಂದು ಯೋಜನೆಗೆ ಭಾಷ್ಯ ಬರೆದಿದೆ.

ಹುಯಿಲಾಳು ಬಳಿ ಜಾಗ

ಮೈಸೂರು ನಗರದ ಮಧ್ಯಭಾಗದಿಂದ 15 ಕಿಮೀ ದೂರವಿರುವ ಹೊರವಲಯದ ಹುಯಿಲಾಳು ಗ್ರಾಮದ ಬಳಿ 26 ಎಕರೆ ಜಾಗವನ್ನು ನೀಡುವುದಾಗಿ ಹಾಗೂ ಅದಕ್ಕೆ ಅಗತ್ಯವಾಗಿ ಬೇಕಾದ ಸಂಪನ್ಮೂಲ ನೀಡುವುದಾಗಿ ಮೈಸೂರಿಗರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆ ಬಳಿಕ ತಾವೇ ಖುದ್ದಾಗಿ ಘೋಷಿಸಿದ್ದಾರೆ. ಈ ಮೂಲಕ ಮೈಸೂರಿಗೆ ತಮ್ಮ ಕೊಡುಗೆಯನ್ನು ದಾಖಲೀಕರಿಸಿದರು.

ಮೈಸೂರಿನ ವಿಶೇಷತೆ

ಈ ಮೂಲಕ ಉದ್ದೇಶಿತ ಯೋಜನೆಯೊಂದು ಇನ್ನು ಕೆಲವೇ ದಿನಗಳಲ್ಲಿ ಮೈಸೂರಿನಲ್ಲಿ ಅನುಷ್ಠಾನಗೊಳ್ಳುವ ಮುಖೇನ ರಾಜ್ಯದ ಭೂಪಟದಲ್ಲಿ ಮೈಸೂರು ಮತ್ತೊಂದು ವಿಶೇಷತೆ ಯೊಂದಿಗೆ ಕಾಣಿಸಿಕೊಳ್ಳುವುದು ನಿಚ್ಚಳವಾಗಿದೆ. ಈ ಯೋಜನೆ ಗಾಗಿ 26 ಎಕರೆ ಜಮೀನು ನೀಡಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಅದರ ಉಸ್ತುವಾರಿ ಯನ್ನು ಕೆಎಸ್‌ಸಿಎ (ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ) ಹೆಗಲಿಗೆ ಹಾಕಿದೆ. ಈ ಮೂಲಕ ಮೈಸೂರಿ ನಲ್ಲಿ ಅಂತರ ರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳು ನಡೆಯಲು ಅನುವಾಗುವಂತೆ ಸುಸಜ್ಜಿತ ಕ್ರೀಡಾಂ ಗಣ ತಲೆ ಎತ್ತಲಿದೆ.

ವಿಶ್ವ ದರ್ಜೆ ಸ್ಟೇಡಿಯಂ

ವಿಶ್ವ ದರ್ಜೆಯ ಸ್ಟೇಡಿಯಂ ನಿರ್ಮಾಣಕ್ಕಾಗಿ ನಾಲ್ಕಾರು ಕಡೆಗಳಲ್ಲಿ ಸ್ಥಳ ಗುರುತಿಸುವ ಕಾರ್ಯ ನಡೆದಿತ್ತಾದರೂ ಯಾವುದೂ ಅಂತಿಮಗೊಂಡಿರಲಿಲ್ಲ. ತದನಂತರ ನಗರದ ಹೊರವರ್ತುಲ ಇರುವ ಹಂಚ್ಯಾ- ಸಾತಗಳ್ಳಿ ಬಳಿ ಈ ಹಿಂದೆ 20 ಎಕರೆಯಷ್ಟು ಜಮೀನು ಗುರುತಿಸಲಾಗಿತ್ತು. ಆದರೆ ಜಮೀನಿನ ನಡುವೆ ಮಧ್ಯೆ ಕೆರೆ ಇದ್ದ ಕಾರಣಕ್ಕೆ ಯೋಜನೆಯೇ ನೆನೆಗುದಿಗೆ ಬಿದ್ದಿತ್ತು. ಆದರೂ, ಸ್ಟೇಡಿಯಂ ಮಾಡಿಯೇ ತೀರಬೇಕೆಂಬ ಹಠಕ್ಕೆ ಬಿದ್ದ ಮೈಸೂರಿನ ಕೆಲ ಸಮಾನ ಮನಸ್ಕ ಕ್ರೀಡಾಸಕ್ತರು ನಂತರದಲ್ಲಿ ವರುಣ ಸುತ್ತಮುತ್ತ ಜಮೀನಿಗಾಗಿ ಹುಡುಕಾಟ ನಡೆಸಿದರು. ಅದು ಕೂಡ ಫಲ ನೀಡಲಿಲ್ಲ. ಅಂತಿಮ ವಾಗಿ ಹುಯಿಲಾಳು ಬಳಿ ಸರಕಾರ ಜಾಗ ಒದಗಿಸಿ, ಕೆಎಸ್ ಸಿಎ ಗೆ ಹಸ್ತಾಂತರ ಮಾಡುವ ನಿರ್ಧಾರ ತಳೆದಿದೆ. ಈ ಜಮೀನಿನ ದಾಖಲೆ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ ಭೂಮಿ ಹಸ್ತಾಂತರ ಕಾರ್ಯ ನಡೆಯಲಿದ್ದು, ಅದಕ್ಕಾಗಿ ತ್ವರಿತವಾಗಿ ಕೆಲಸ ಸಾಗುವ ಭರವಸೆ ಕಂಡು ಬರುತ್ತಿದೆ.

> ಮೈಸೂರಿಗರ ಬಹಳ ವರ್ಷಗಳ ಕನಸು ನನಸಾಗುವ ಕಾಲ ಕೂಡಿ ಬಂದಿದೆ. ಕ್ರೀಡಾಂಗಣ ನಿರ್ಮಾಣದ ಬಳಿಕ ಇಲ್ಲಿ ಕ್ರಿಕೆಟ್ ಪಂದ್ಯಗಳಿಗೆ ಹೆಚ್ಚಿನ ಉತ್ತೇಜನ ಸಿಗಲಿದೆ. ಮಾತ್ರವಲ್ಲ, ಅಕಾಡೆಮಿ ಸ್ಥಾಪನೆಯೂ ಸಾಧ್ಯವಾಗುವ ಮೂಲಕ ಹೊಸ ಪ್ರತಿಭೆಗಳನ್ನು ಹೊರತರಲು ಸಾಧ್ಯವಿದೆ.
>
> - ಬಾಲಚಂದರ್, ಅಧ್ಯಕ್ಷ, ಕೆಎಸಿಎ ಮೈಸೂರು ವಲಯ

> ಮೈಸೂರಿಗೆ ಅಂತರರಾಷ್ಟ್ರಿಯ ಮಟ್ಟದ ಸ್ಟೇಡಿಯಂ ಬರುತ್ತಿರುವುದು ಸಂತೋಷದ ಸಂಗತಿ. ಆ ಯೋಜನೆ ಆದಷ್ಟು ಬೇಗ ಅನುಷ್ಠಾನಕ್ಕೆ ಬರಲಿ. ಈ ಮೂಲಕ ಮೈಸೂರಿನ ಹೆಸರು ಮತ್ತಷ್ಟು ಬೆಳಗಲಿ. ಇದರೊಂದಿಗೆ ಸರಕಾರ ಅಥ್ಲೆಟಿಕ್ಸ್ ಕ್ರೀಡೆಗೂ ಉತ್ತೇಜನ ನೀಡಬೇಕು. ಈ ಮೂಲಕ ಕ್ರೀಡೆಯ ಬೆಳವಣಿಗೆಗೆ ಬೆನ್ನೆಲುಬಾಗಬೇಕು.
>
> - ಎಂ. ಯೋಗೇಂದ್ರ, ಅಥ್ಲೀಟ್, ಮೈಸೂರು



» ಶೀಘ್ರ ತಲೆ ಎತ್ತಲಿದೆ ವಿಶ್ವ ದರ್ಜೆ ಸ್ಟೇಡಿಯಂ
» ಮೈಸೂರು ಸಿಟಿಯಿಂದ ರೀ 15 ಕಿಮೀ ದೂರ
» ಅಂದಾಜು ನೂರು ಕೋಟಿ ವೆಚ್ಚದ ಯೋಜನೆ
» ಜಾಗತಿಕ ಮಟ್ಟದಲ್ಲಿ ಮೈಸೂರು ಸಿಟಿಗೆ ಮನ್ನಣೆ

ಕೊರತೆ ನೀಗಲಿದೆ

ಸದ್ಯದ ಮಟ್ಟಿಗೆ ಮೈಸೂರಿನಲ್ಲಿ ಕ್ರಿಕೆಟ್ ಚಟುವಟಿಕೆಗೆ ಗಂಗೋತ್ರಿ ಗ್ಲೇಡ್ಸ್ ಮೈದಾನವೊಂದು ಇದೆಯಾ ದರೂ ದೊಡ್ಡಮಟ್ಟದ ಕ್ರೀಡಾಂಗಣದ ಕೊರತೆ ಇತ್ತು. ಅಂತಹ ಕೊರತೆ ಇದೀಗ ನೀಗುವ ಹಂತಕ್ಕೆ ಬಂದಿದೆ. ಗಂಗೋತ್ರಿ ಗ್ರೇಡ್ ನಲ್ಲಿ ಎ ದರ್ಜೆಯ ಕ್ರಿಕೆಟ್ ಪಂದ್ಯಗಳನ್ನು ಈವರೆಗೆ ಆಯೋಜಿಸುತ್ತಾ ಬರಲಾಗಿದೆ. ಹಲವು ರಣಜಿ ಪಂದ್ಯಗಳು, ಕೆಪಿಎಲ್‌ನಂತಹ ದೇಸಿ ಲೀಗ್ ಟೂರ್ನಿಗಳು ಇಲ್ಲಿ ನಡೆದಿವೆ. ಆದರೆ, ಮೈದಾನ ಚಿಕ್ಕದಾಗಿದೆ. ಅದನ್ನು ವಿಸ್ತರಣೆ ಮಾಡಬೇಕೆಂದರೆ ಸ್ಥಳಾವಕಾಶದ ಕೊರತೆ ಇದೆ. ಹೀಗಾಗಿ ಇಂಟರ್ ನ್ಯಾಷನಲ್ ಪಂದ್ಯಗಳು ನಡೆದಿಲ್ಲ. ಈ ಕೊರತೆ ಹೊಸ ಯೋಜನೆ ಬಳಿಕ ಮರೆಯಾಗಲಿದೆ.

ನೂರು ಕೋಟಿ ವೆಚ್ಚ

ಭೂಮಿ ಹೊರತುಪಡಿಸಿ ಅಂದಾಜು 100 ಕೋಟಿ ರು. ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣವಾಗಲಿದೆ. ಉದ್ದೇಶಿತ ಭೂಮಿಯನ್ನು ಈ ಹಿಂದೆ ಸಂಸ್ಥೆಯೊಂದಕ್ಕೆ 30 ವರ್ಷಕ್ಕೆ ಗುತ್ತಿಗೆ ನೀಡಲಾಗಿತ್ತು. ಸದರಿ ಗುತ್ತಿಗೆ ಅವಧಿ ಮುಗಿದಿದ್ದು, ಸದ್ಯ ಸರಕಾರದ ವಶದ ಲ್ಲಿದೆ. ಪ್ರತಿ ಎಕರೆಗೆ 30 ಲಕ್ಷ ರು.ಮೌಲ್ಯ ನಿಗದಿಪ ಡಿಸಿ ಹಸ್ತಾಂತರ ಮಾಡಲಿದೆ.

ಜಮೀನು ಪ್ರಮಾಣ

ಹುಯಿಲಾಳು ಗ್ರಾಮದ ಸರ್ವೆ ಸಂಖ್ಯೆ 312ರಲ್ಲಿ 19 ಎಕರೆ ಹಾಗೂ ಸರ್ವೆ ಸಂಖ್ಯೆ 313ರಲ್ಲಿ 7 ಎಕರೆ 31ಗುಂಟೆ ಸೇರಿದಂತೆ ಒಟ್ಟು 26 ಎಕರೆ 31 ಗುಂಟೆ ಜಮೀನನ್ನು ಕ್ರೀಡಾಂಗಣಕ್ಕಾಗಿ ಗುರುತಿಸಲಾಗಿದೆ. ಮೈಸೂರಿನಲ್ಲಿ ವಿಶ್ವದರ್ಜೆ ಕ್ರೀಡಾಂಗಣ ನಿರ್ಮಾಣವಾದ ಬಳಿಕ ಜಾಗತಿಕ ಮಟ್ಟದಲ್ಲಿ ಮೈಸೂರು ತನ್ನ ಮನ್ನಣೆ ಹೆಚ್ಚಿಸಿಕೊಳ್ಳಲಿದೆ. ಇದರಿಂದ ಕ್ರೀಡಾ ಪ್ರತಿಭೆಗಳಿಗೆ ಉತ್ತೇಜನ ಸಿಗಲಿದೆ.

ಜಿಲ್ಲಾ ನೋಟ

ಧಾರವಾಡ ಹೈಟೆಕ್ ಜಿಲ್ಲಾಸ್ಪತ್ರೆ ಯೋಜನೆ ಶೀಘ್ರ ಟೇಕಾಫ್

ವಸೀಮ ಭಾವಿಮನಿ, ಧಾರವಾಡ

ಉತ್ತರ ಕರ್ನಾಟಕ ಭಾಗದ ಬಡವರ ಸಂಜೀವಿನಿ ಎಂದೇ ಕರೆಯಿಸಿಕೊಳ್ಳುವ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಪರಿವರ್ತನೆ ಆಗಿದೆ. ಆದರೆ, ಸುಮಾರು 50 ವರ್ಷಗಳಷ್ಟು ಹಳೆಯ ದಾದ ಧಾರವಾಡ ಜಿಲ್ಲಾಸ್ಪತ್ರೆಗೆ ಹೈಟೆಕ್ ಆಗುವ ಸೌಭಾಗ್ಯ ಇನ್ನೂ ಕೂಡಿ ಬಂದಿಲ್ಲ. ಒಳರೋಗಿಗಳಾಗಿ ಚಿಕಿತ್ಸೆಗೆ ಬರುವ ಧಾರವಾಡ ಜಿಲ್ಲಾಸ್ಪತ್ರೆಯಲ್ಲಿ ಕೇವಲ 350 ಬೆಡ್‌ಗಳಿದ್ದು, ಇವು ರೋಗಿಗಳ ಪ್ರಮಾಣಕ್ಕೆ ಚಿಕಿತ್ಸೆಗೆ ಸಾಲುತ್ತಿಲ್ಲ.

ನೆರೆ ಜಿಲ್ಲೆಗಳಿಗೂ ಆಸರೆ

ಧಾರವಾಡ ಜಿಲ್ಲಾಸ್ಪತ್ರೆಗೆ ಬರುವ ಬಹುತೇಕರು ಕಾರವಾರ ಹಾಗೂ ಬೆಳಗಾವಿ ಜಿಲ್ಲೆಯಿಂದ ಬರುತ್ತಾರೆ. ಸವದತ್ತಿ, ದಾಂಡೇಲಿ, ಹಳಿಯಾಳ, ಜೋಯಿಡಾ, ರಾಮದುರ್ಗ, ಕಿತ್ತೂರು, ಬೈಲಹೊಂಗಲ ಹಾಗೂ ಧಾರವಾಡ ಜಿಲ್ಲೆಯ ಹಲವಾರು ಗ್ರಾಮಗಳಿಂದ ದಿನಂಪ್ರತಿ 1500 ರಿಂದ 1700 ರೋಗಿಗಳು ಬರು ತ್ತಾರೆ. ಇದರಲ್ಲಿ ಶೇ.80 ರಷ್ಟು ಒಳರೋಗಿಗಳು ಚಿಕಿತ್ಸೆಗೆ ದಾಖಲಾಗುತ್ತಾರೆ. ಜಿಲ್ಲಾಸ್ಪತ್ರೆಯಲ್ಲಿ ಸದ್ಯಕ್ಕೆ ಇರುವ 350 ಬೆಡ್ ವ್ಯವಸ್ಥೆ ಸಾಲುವುದಿಲ್ಲ. ಹೀಗಾಗಿ ಹೊಸದೊಂದು ಆಸ್ಪತ್ರೆ ಅಗತ್ಯವಿದೆ. ಇದು ಬಡಜನರ ಪಾಲಿನ ಸಂಜೀವಿನಿ ಆಗುವುದರಲ್ಲಿ ಯಾವ ಅನುಮಾನವಿಲ್ಲ.

ಜಿಲ್ಲಾಸ್ಪತ್ರೆಯಲ್ಲೇನಿದೆ

ಸದ್ಯಕ್ಕೆ ಧಾರವಾಡ ಜಿಲ್ಲಾಸ್ಪತ್ರೆಯಲ್ಲಿ 38 ವೈದ್ಯರಿದ್ದಾರೆ. ಮಾಡ್ಯುಲರ್ ಹಾಗೂ ಆಪರೇಶನ್ ಥಿಯೇಟರ್‌ಗಳಿವೆ. ನ್ಯಾಯಶಾಸ್ತ್ರ ವಿಭಾಗ (ಫಾರೆನ್ಸಿಕ್ ಮೆಡಿಸಿನ್) ವಿಭಾಗ ಜಿಲ್ಲಾಸ್ಪತ್ರೆಗೆ ಬೇಕಿದೆ.

ವಿವಿಧ ಕೋರ್ಸ್

ಎಂಎಸ್ ಹಾಗೂ ಎಂಡಿ ಕೋರ್ಸ್‌ಗೆ ಸರಿಸಮಾನವಾದ ಡಿಎನ್‌ಬಿ ಕೋರ್ಸ್ ಜಿಲ್ಲಾಸ್ಪತ್ರೆಯಲ್ಲಿ ಲಭ್ಯ ತಜ್ಞ ವೈದ್ಯರಾಗಲು ಬಯಸುವ ಎಂಬಿಬಿಎಸ್ ವಿದ್ಯಾರ್ಥಿ ಗಳಿಗೆ, ಎಂಎಸ್ ಹಾಗೂ ಎಂಡಿ ಕೋಸ್ ್ಗೆ ಸರಿಸಮಾ ನವಾದ ಡಿಪ್ಲೋಮ್ಯಾಟ್ ಇನ್ ನ್ಯಾಶನಲ್ ಬೋರ್ಡ್ (ಡಿಎನ್‌ಬಿ ಕೋರ್ಸ್) ಜಿಲ್ಲಾಸ್ಪತ್ರೆಯಲ್ಲಿದ್ದು, ಇಲ್ಲಿ ಸರಿಸುಮಾರು 53 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಇದರಿಂದ 7 ವಿಭಾಗಗಳಲ್ಲಿ ವೈದ್ಯರ ಕೊರತೆಯೂ ನೀಗುತ್ತಿದೆ.

ಭೂಮಿಗಾಗಿ ಪ್ರಸ್ತಾವ

ಬೇಲೂರು ಕೈಗಾರಿಕೆ ಪ್ರದೇಶದಲ್ಲಿ ಹೊಸದಾಗಿ ಜಿಲ್ಲಾಸ್ಪತ್ರೆ ಕಟ್ಟಲು 30 ಎಕರೆ ಜಾಗ ಬೇಕು. ಇಲ್ಲಿ 500 ಹಾಸಿಗೆಗಳ ವಿಶಾಲವಾದ ಆಸ್ಪತ್ರೆ ನಿರ್ಮಿಸಿದರೆ ಜನರಿಗೆ ಯಾವ ರೀತಿ ಅನುಕೂಲವಾಗಲಿದೆ ಎಂಬ ಬಗ್ಗೆ 2023ರಲ್ಲಿ ಜಿಲ್ಲಾಧಿಕಾರಿಗೆ, ಅಪರ ಜಿಲ್ಲಾಧಿ ಕಾರಿಗೆ ಹಾಗೂ ಆರೋಗ್ಯ ಇಲಾಖೆ ಆಯುಕ್ತರಿಗೆ ಪತ್ರ ಬರೆಯಲಾಗಿದೆ. ಜತೆಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಾಗಿ ಸರಕಾರಕ್ಕೆ 2024-25 ರಲ್ಲಿ 400 ಕೋಟಿ ಅನುದಾನ ಬೇಕೆಂದು ಪ್ರಸ್ತಾವ ಕೂಡ ಸಲ್ಲಿಕೆ ಆಗಿದೆ. ಇದೇ ವರ್ಷ 2025ರ ಫೆಬ್ರವರಿಯಲ್ಲಿ ಆರೋಗ್ಯ ಇಲಾಖೆ ಆಯುಕ್ತರಿಗೂ ಪತ್ರ ಬರೆಯಲಾಗಿದೆ.

ಧಾರವಾಡದ ಈಗಿರುವ ಹಳೆಯ ಜಿಲ್ಲಾಸ್ಪತ್ರೆಯ ನೋಟ.



ಸಂಖ್ಯೆ: ಜಿಆಧಾ/ಅಧಿಪ್ರ/171/2024-25
ದಿನಾಂಕ: 04-02-2025

ಇವರಿಗೆ,
ಮಾನ್ಯ ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ,
ಆರೋಗ್ಯ ಸೌಧ, ಮಾಗಡಿ ರಸ್ತೆ,
ಬೆಂಗಳೂರು.

ಮಾನ್ಯರೆ,

ವಿಷಯ : ಧಾರವಾಡ ಜಿಲ್ಲಾ ಆಸ್ಪತ್ರೆಯ ಸುಸಜ್ಜಿತ ಕಟ್ಟಡ ನಿರ್ಮಿಸಲು ಹೊಸದಾಗಿ 30 ಎಕರೆ ಸರ್ಕಾರಿ ಭೂಮಿಯನ್ನು ಮಂಜೂರು ಮಾಡುವ ಕುರಿತು.

ಉಲ್ಲೇಖ: 1) ಈ ಕಛೇರಿಯ ಪತ್ರ ಸಂಖ್ಯೆ: ಜಿಆಧಾ/ಸಿಆರ್/66/470/2023-24, ದಿನಾಂಕ: 12/08/2023.
2) ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಧಾರವಾಡ ಇವರ ಪತ್ರ ಸಂಖ್ಯೆ: ಎಲ್.ಜಿ.ಎಲ್./ಸಿಆ/127/2023-24 ದಿನಾಂಕ: 26-09-2023.
3) ಮಾನ್ಯ ಉಪವಿಭಾಗ ಅಧಿಕಾರಿಗಳು, ಧಾರವಾಡ, ಇವರ ಪ್ರ ಸಂಖ್ಯೆ: ಎಲ್.ಜಿ.ಎಲ್.94/2023-24, ದಿನಾಂಕ: 30-09-2023.
4) ಈ ಕಛೇರಿಯ ಪತ್ರ ಸಂಖ್ಯೆ: ಜಿಆಧಾ/ಅಧಿಪ್ರ/167/2024-25, ದಿನಾಂಕ 10-01-2025.

ಸರಕಾರಕ್ಕೆ ಬರೆದಿರುವ ಪ್ರಸ್ತಾವನೆ ಪತ್ರ

» ಧಾರವಾಡದ ಹೊಸ ಜಿಲ್ಲಾಸ್ಪತ್ರೆಗೆ ಪ್ರಸ್ತಾವ
» ತಲೆ ಎತ್ತಲಿದೆ 500 ಹಾಸಿಗೆ ಸುಸಜ್ಜಿತ ಆಸ್ಪತ್ರೆ
» 50 ವರ್ಷ ಹಳೆಯದು ಈಗಿರುವ ಜಿಲ್ಲಾಸ್ಪತ್ರೆ

500 ಬೆಡ್‌ನ ಆಸ್ಪತ್ರೆ

ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಿಕ ನಗರಿಯಾದ ಧಾರ ವಾಡ ಜಿಲ್ಲೆಯಲ್ಲಿ ಅತ್ಯಾಧುನಿಕ ಸುಸಜ್ಜಿತ ಹೊಸ ಜಿಲ್ಲಾಸ್ಪತ್ರೆಯೊಂದು ತಲೆ ಎತ್ತುವುದು ಒಂದು ಹೆಗ್ಗಳಿಕೆ ಹೌದು. ಇದಕ್ಕಾಗಿ ಸರಕಾರದ ಮಟ್ಟದಲ್ಲಿ ತಯಾರಿ ನಡೆದಿದೆ. ಈಗಾಗಲೇ ಜಿಲ್ಲೆಯ ಜನಪ್ರತಿನಿಧಿಗಳಿಗೆ ಪ್ರಸ್ತಾವನೆ ಹೋಗಿದೆ. ಎಲ್ಲವೂ ಅಂದುಕೊಂಡಂತಾ ದರೇ ಆದಷ್ಟು ಬೇಗ ಧಾರವಾಡದಲ್ಲಿ ಹೊಸದಾಗಿ 500 ಬೆಡ್‌ನ ಆಸ್ಪತ್ರೆ ತಲೆ ಎತ್ತಲಿದೆ.

ಹೊರ ವಲಯದ ಜಾಗ

ಹೊಸ ಬಸ್ ನಿಲ್ದಾಣದಿಂದ 2-3 ಕಿ.ಮೀ ದೂರದಲ್ಲಿ ತಲೆ ಎತ್ತುವ ಜಿಲ್ಲಾಸ್ಪತ್ರೆ 2026 ಅಥವಾ 2027ಕ್ಕೆ ಪೂರ್ಣಗೊಂಡು ಉದ್ಘಾಟನೆ ಸಾಧ್ಯತೆಯಿದೆ. ಧಾರವಾಡ ಹೊಸ ಬಸ್ ನಿಲ್ದಾಣದಿಂದ ಕೇವಲ ಮೂರು ಕಿ.ಮೀ ವ್ಯಾಪ್ತಿಯಲ್ಲಿ ಸರಕಾರಿ ಜಾಗವಿದೆ. ಹೊಸದೊಂದು ಹೈಟೆಕ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ 2026 ಇಲ್ಲವೇ 2027ಕ್ಕೆ ಲೋಕಾರ್ಪಣೆಗೊಳ್ಳ ಬಹುದು. ಇದಕ್ಕಾಗಿ ಸರಕಾರಿ ಭೂಮಿಯನ್ನು ಗುರುತಿಸುವ ಕೆಲಸವೂ ನಡೆದಿದೆ. ಈ ಬಗ್ಗೆ ವಿಶ್ವವಾಣಿಗೆ ಖಚಿತ ಮಾಹಿತಿ ಬಲ್ಲ ಮೂಲಗಳಿಂದ ಸಿಕ್ಕಿದೆ. ಇದು ಜಿಲ್ಲೆಯ ಜನರ ಪಾಲಿಗೆ ಮಾತ್ರ ಅತಿ ಹೆಚ್ಚು ಅನುಕೂಲವಾಗಲಿದೆ.

ಸಿಗುವ ಸೌಲಭ್ಯಗಳು

ಈ ಉದ್ದೇಶಿತ ಆಸ್ಪತ್ರೆಯಲ್ಲಿ ಟ್ರಾಮಾ ಕೇರ್ ಸೆಂಟರ್, ಕ್ರಿಟಿಕಲ್ ಕೇರ್ ಸೆಂಟರ್, ಕಾರ್ಡಿಯೋಲಾಜಿ, ನೆಫ್ರೋಲಾಜಿ, ನ್ಯೂರೋಲಾಜಿ, ಡೇ ಕೇರ್ ಕ್ಯಾನ್ಸರ ಕಿಮೋಥೆರಪಿ, ಇನ್ನಿತರ ಸೇವೆಗಳು ಸಿಗಲಿವೆ. ಧಾರವಾಡದ ಗ್ರಾಮೀಣ ಶಾಸಕ ವಿನಯ ಕುಲಕರ್ಣಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಪ್ರಸಾದ ಅಬ್ಬಯ್ಯಾ, ಎನ್.ಎಚ್. ಕೋನರಡ್ಡಿ, ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಹಾಗೂ ಜಿಲ್ಲಾಧಿಕಾರಿ ದಿವ್ಯಪ್ರಭು, ಅಪರ ಜಿಲ್ಲಾಧಿಕಾರಿ ಗೀತಾ ಅವರ ಪ್ರಯತ್ನದ ಫಲವಾಗಿ ಹೊಸ ಜಿಲ್ಲಾಸ್ಪತ್ರೆ ಕಟ್ಟಡ ಶೀಘ್ರ, ತಲೆ ಎತ್ತಲಿದೆ ಎನ್ನುವ ವಿಶ್ವಾಸದ ಮಾತುಗಳು ಜಿಲ್ಲೆಯ ವೈದ್ಯಕೀಯ ವಲಯದಲ್ಲಿ ಹರಿದಾಡುತ್ತಿವೆ..!

> ಧಾರವಾಡ ಜಿಲ್ಲಾಸ್ಪತ್ರೆಯೂ ಪುರಾತತ್ವ ಇಲಾಖೆಯ ವ್ಯಾಪ್ತಿಯಲ್ಲಿದ್ದು ಕಟ್ಟಡವನ್ನು ಮೇಲ್ದರ್ಜೆಗೇರಿಸಲು ಸಾಧ್ಯವಿಲ್ಲ. ಹೀಗಾಗಿ ಹೊಸದಾಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ 400 ಕೋಟಿ ವೆಚ್ಚದಲ್ಲಿ ಬೇಲೂರು ಕೈಗಾರಿಕೆ ಪ್ರದೇಶದಲ್ಲಿ ಕಟ್ಟಲು 30 ಎಕರೆ ಜಾಗ ಕೊಡಿ ಎಂದು ಕಂದಾಯ ಇಲಾಖೆಗೆ ಕೇಳಿದ್ದೇವೆ. ಜಾಗ ಕೊಡುವುದಾಗಿ ಮೌಖಿಕವಾಗಿ ತಿಳಿಸಿದ್ದಾರೆ. ಈ ಬಗ್ಗೆ ಸರಕಾರಕ್ಕೆ ಕೂಡ ಪ್ರಸ್ತಾವ ಸಲ್ಲಿಸಲಾಗಿದೆ. ಈ ಹಿಂದೆ 2023ರಲ್ಲಿಯೂ ಜಿಲ್ಲಾಧಿಕಾರಿಗೆ ಪ್ರಸ್ತಾವ ಸಲ್ಲಿಸಲಾಗಿದೆ.
>
> -ಡಾ.ಸಂಗಪ್ಪಾ ಗಾಬಿ, ಜಿಲ್ಲಾ ಆಸ್ಪತ್ರೆ ಸರ್ಜನ್

ಸಂಗೀತ ಕಲಿತು ಕಾರ್ಯಕ್ರಮಗಳನ್ನು ನೀಡುವುದರ ಜತೆಯಲ್ಲೇ, ಸಂಗೀತ ಶಾಲೆಯನ್ನೂ ತೆರೆದಿರುವ ರೇಖಾ ಭಟ್ ಅವರು, ಗ್ರಾಮೀಣ ಪ್ರದೇಶದಲ್ಲಿ ಸಂಗೀತ ಶಿಕ್ಷಣ ನೀಡುತ್ತಿದ್ದಾರೆ. ಜತೆಗೆ, ಮಲೆನಾಡಿನ ಹೃದಯದಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆಯನ್ನು ತೆರೆದು, ಮಕ್ಕಳಿಗೆ ಆಧುನಿಕ ಶಿಕ್ಷಣ ನೀಡುತ್ತಿದ್ದಾರೆ.

ಸಂಗೀತ ಶಿಕ್ಷಣ ಸಂಪ್ರೀತಿಯ ರೇಖಾ



● ರಾಜು ಅಡಕಳ್ಳಿ

ಯಲ್ಲಾಪುರ ಶೀಮೆಯ ಕೋಟೆಮನೆ ಹಿಂದೆ ಸಂಸ್ಕೃತ ವೇದ ಅಧ್ಯಯನಕ್ಕೆ ಹೆಸರಾಗಿತ್ತು. ಈ ಪುಟ್ಟೂರಿಗೆ ಈಗ ಸಂಗೀತ ಸಂಸ್ಕೃತಿಯ ಹೊಸ ಛಾಪು ನೀಡಿರುವ ಕೀರ್ತಿ ರೇಖಾ ಭಟ್ ಅವರಿಗೆ ಸಲ್ಲುತ್ತದೆ. ರೇಖಾ ಭಟ್ ಅವರ ಸಂಗೀತದ ಸಾಧನೆಯ ರೇಖೆ ಕೋಟೆ ಮನೆಯಿಂದ ಪ್ರಾರಂಭವಾಗಿ, ತದನಂತರ ಕೋಟೆ ಕೊತ್ತಲಗಳನ್ನು ದಾಟಿ, ಅಮೆರಿಕದವರೆಗೂ ಸಾಗಿರುವುದು ವಿಶೇಷ.

ಮಲೆನಾಡಿನ ಅಡಿಕೆ ಬಾಳೆ ತೋಟಗಳ ಸೆರಿಗಿ ನಂಚಿನಲ್ಲಿರುವ ಬಾಳೆಹದ್ದದಲ್ಲಿ ಹುಟ್ಟಿ, ಕೋಟೆಮನೆ ಭಟ್ಟರ ಮನೆಯ ಸೊಸೆಯಾಗಿ, ಸಂಗೀತ ಸ್ವರ ನಾದಗಳ ಕೋಟೆ ಕಟ್ಟಿ, ಸಂಗೀತ ಸರಸ್ವತಿಯ ಲಾಲನೆ, ಪಾಲನೆ ಮಾಡುತ್ತಿದ್ದಾರೆ ಈ ರೇಖಾ. ಪಕ್ಕದ ಹಿರೇಸರದಲ್ಲೂ ವಿದ್ಯಾಮಾತೆ ಶಾರದೆಯ ಮಂದಿರದಂತೆ, ಮಾದರಿ ಶಾಲೆಯೊಂದನ್ನು ನಿರ್ಮಿಸಿ ಬದುಕಿನ ಸಾರ್ಥಕತೆ ಕಂಡುಕೊಳ್ಳುತ್ತಿದ್ದಾರೆ ಈ ರೇಖಕ್ಕ

ನಾಡಿನ ಸಾಂಸ್ಕೃತಿಕ ರಂಗದಲ್ಲಿ ಶಿವಮೊಗ್ಗ ಜಿಲ್ಲೆಯ ಹೆಗ್ಗೋಡಿಗೆ ಮೊದಲ ಸ್ಥಾನ. ಉತ್ತರ ಕನ್ನಡ ಜಿಲ್ಲೆಯ ಮಂಚಿಕೇರಿಯೂ ನಂತರದ ಸ್ಥಾನದಲ್ಲಿದೆ ಎಂಬ ಖ್ಯಾತಿ ಸಿಗುವಲ್ಲಿ ಸ್ಥಳೀಯರ ಜೊತೆ ಫಸ್ಟ್‌ಗೆ ಎರಡನೇ ಹಾಸಣಗಿ ಗಣಪತಿ ಭಟ್ಟರ ಮತ್ತು ಅವರ ಶಿಷ್ಯರ ಕೊಡುಗೆಗಳೂ ಸಾಕಷ್ಟಿವೆ. ಇವರಲ್ಲಿ ರೇಖಾ ಭಟ್ ಅವರೂ ಒಬ್ಬರು

ಸಂತಸದಿಂದಿದ್ದ ಜೋಡಿ ಹಕ್ಕಿಗಳಲ್ಲಿ ಒಂದು ಹಕ್ಕಿ ದೂರವಾದರೆ ಇನ್ನೊಂದು ಹಕ್ಕಿಯ ಪರಿಸ್ಥಿತಿಯೇನಾಗಬಹುದು ಎಂದು ನಾವು ಊಹಿಸಿದರೇ ಸಂಕಟವಾಗುವುದು ಸಹಜ. ಖುಷಿಯ ಗೂಡಾಗಿದ್ದ ರೇಖಾ ಅವರ ಬಾಳಿನಲ್ಲಿ ಬರಸಿಡಿಲಿನಂತೆ ಎರಗಿದ ಅಪಘಾತದಲ್ಲಿ ನಡೆದ ಅವರ ಪತಿಯ ಸಾವು ಸೃಷ್ಟಿಸಿದ ಭಾವ ವೇದನೆ ಊಹಿಸುವುದಕ್ಕೂ ಅಸಾಧ್ಯ. ಆದರೆ ಸುದೈವದಿಂದ ರೇಖಾ ಅವರನ್ನು ಸಂತೈಸುವ ಸಂಗೀತದ ತಂತುಗಳು, ಮಧುವಂತಿ, ಯಮನ್, ಆಹಿರ್ ಭೈರವ್, ಮೇಘಗಳಂತಹ ರಾಗಗಳು ರೇಖಾ ಅವರ ಜೀವಭಾವವಾಗಿ, ಅವರ ಬಾಳ ದೋಣಿಯ ಪಯಣವನ್ನು ಮುನ್ನಡೆಸಿದವು. ಮಗಳು ಸಾಕ್ಷಿ ಅಮ್ಮನ ಆಶಾವಾದಕ್ಕೆ ಊರುಗೋಲಾಗಿ ಒದಗಿ ನಿಂತಳು.

ಸಂಗೀತದಿಂದ ಸಾಂತ್ವನ: ಹೀಗೆ ಸಂಗೀತದಿಂದ ಸಾಂತ್ವನ, ಸಮಚಿತ್ತ, ಸಾಧನೆ, ಸುಖ, ಸಮಾಧಾನ ಇವೆಲ್ಲವುಗಳನ್ನು ಕಂಡುಕೊಂಡು, ರೇಖಾ ಬದುಕಿನ ಪ್ರವಾಹಗಳಿಗೆ, ಅದು ಒಡ್ಡುವ ಸವಾಲುಗಳಿಗೆ ಮುಖಾಮುಖಿ ಯಾಗಿ ಮುನ್ನಡೆಯುತ್ತಲೇ ಇರುವುದು ವಿಶೇಷ. ಇಲ್ಲದಿದ್ದರೆ ಮನಸ್ವಿನಿ ವಿದ್ಯಾಲಯದಂಥ ಮಾದರಿ ಶಾಲೆಯನ್ನು ಕಟ್ಟಿ ಬೆಳೆಸುವುದಕ್ಕೆ ರೇಖಾ ಅವರಿಗೆ ಸಾಧ್ಯವಾಗುತ್ತಿತ್ತೇ?

ಗುರು ಶಿಷ್ಯ ಪರಂಪರೆಯಲ್ಲೇ ಇವರು ಸಂಗೀತ ಕಲಿತವರು. ಹಾಸಣಗಿ ಗಣಪತಿ ಭಟ್ಟರಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಏಳು ವರ್ಷಗಳ ಕಾಲ ಇವರು ಮತ್ತು ಇವರ ಸಹೋದರ ನಾಗಭೂಷಣ ಹೆಗಡೆಯವರು ಕಲಿತೇ ಸಂಗೀತದ ಸಾಧನೆಯ ವೇದಿಕೆ ಏರಿದವರು. ಗಣಪತಿ ಭಟ್ಟರ ಹಾಸಣಗಿಯ ಹಳ್ಳಿಮನೆಯೇ ಇವರಿಗೆ ಗುರುಮನೆಯೂ ಆಗಿತ್ತು. ಅವರು ಮುಂದೆ ಭಾವಗೀತೆ, ಲಘು ಸಂಗೀತ ಕಲಿಯುವಲ್ಲಿ ಕಂಪ್ಲಿಯ ಶ್ರೀಪಾದ ಹೆಗಡೆಯವರ ಮಾರ್ಗದರ್ಶನಕ್ಕೆ ಮೊರೆ ಹೋದರು. ಠುಮ್ರಿ ಕಲಿಯಲು ಡಾ. ಅಲಕಾ ದೇವ್ ಅವರನ್ನು ಹುಡುಕಿಕೊಂಡು, ಗೋವಾಕ್ಕೆ ಹೋಗಿ ಅಭ್ಯಾಸ ಕೈಗೊಂಡರು.

ನಿರಂತರ ಸಾಧನೆ: ನಿರಂತರ ಕಲಾರಾಧನೆಯಿಂದ ಸಂಗೀತದ ವರಪ್ರಸಾದ ಸಿದ್ಧಿಸಿಕೊಂಡ ಫಲಶ್ರುತಿಯಾಗಿ ರೇಖಾ ನಾಡಿನ ತುಂಬೆಲ್ಲ ಖ್ಯಾತ ಸಂಗೀತಗಾರ್ತಿಯಾಗಿ ಸಂಗೀತ ಕಚೇರಿಗಳನ್ನು ನಡೆಸುವುದಕ್ಕೆ ಸಾಧ್ಯವಾಯಿತು. ಮಂಚಿಕೇರಿಯಿಂದ ಹಿಡಿದು ಮುಂಬೈವರೆಗೆ ಹಲವು ಕಡೆಗಳಲ್ಲಿ ಇವರ ಬೈಠಕ್ ನಡೆದವು. ಅನೇಕ ವೇದಿಕೆಗಳಲ್ಲಿ ಇವರ ಭಾವಗೀತೆ, ಭಕ್ತಿಗೀತೆ, ಭಜನ್ ಕಾರ್ಯಕ್ರಮಗಳು ಸೃಜಿಸಿದವು.

ಗೌರವಗಳು: ಕೃಷ್ಣ ಹಾನಗಲ್ ರಾಷ್ಟ್ರೀಯ ಪ್ರಶಸ್ತಿ, ಆಕಾಶ ವಾಣಿಯ ಪ್ರಶಸ್ತಿ ಮತ್ತಿತರ ಪುರಸ್ಕಾರಗಳೂ ಇವರ ಮುಡಿಗೇರಿದವು. ಧಾರವಾಡ ಆಕಾಶವಾಣಿಯಲ್ಲಿ ಇವರು ಎ ಗ್ರೇಡ್ ಕಲಾವಿದರಾದರು. ಪಿಟ್ಸ್‌ಬರ್ಗ್, ನ್ಯೂಜೆರ್ಸಿ, ವರ್ಜಿನಿಯ, ವಾಷಿಂಗ್ಟನ್... ಹೀಗೆ ಅಮೆರಿಕದ ಅನೇಕ ಕಡೆ ಇವರು ಸಂಗೀತ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದ್ದಾರೆ.

ಶಿಕ್ಷಕಿಯಾಗಿ: ರೇಖಾ ಅವರು ಸಂಗೀತದ ಗಾಯಕಿಯು ಹೌದು, ಶಿಕ್ಷಕಿಯೂ ಹೌದು. ಅನೇಕ ಕಡೆಗಳಲ್ಲಿ ಇವರು ಸಂಗೀತ ಶಾಲೆಗಳನ್ನೂ ನಡೆಸಿ, ತನ್ಮೂಲಕ ಸಂಗೀತ ವಿದ್ಯೆಯನ್ನು ನೂರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಧಾರೆಯೆರೆದಿದ್ದಾರೆ. ತಮ್ಮ ಕೋಟೆಮನೆಯ ಅಂಗಳದಲ್ಲಿ ಸಂಗೀತ ಶಾಲೆ ನಡೆಸಿದ್ದಷ್ಟೇ ಅಲ್ಲ, 10 ವರ್ಷಗಳ ಕಾಲ ಪ್ರತಿ ವರ್ಷವೂ ಪ್ರಸಿದ್ಧ ಸಂಗೀತಗಾರರನ್ನು ಆಹ್ವಾನಿಸಿ ಅಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸು ತ್ತಿದ್ದು, ಉತ್ತಮ ಸಂಘಟಕಿಯಾಗಿಯೂ ರೇಖಾ ಗುರುತಿಸಿಕೊಂಡಿದ್ದಾರೆ.

ಅಮೆರಿಕದಲ್ಲಿ ಮಾರ್ಗದರ್ಶನ: ಇವರ ಕೋಟೆಮನೆಯ ಎಡ ದಿಕ್ಕಿಗೆ ಶಿರಸಿ- ಬಲ ದಿಕ್ಕಿಗೆ ಯಲ್ಲಾಪುರ ಪೇಟೆಗಳಿವೆ. ಇವೆರಡೂ ಪೇಟೆಗಳಲ್ಲಿಯೂ ರೇಖಾ ಸಂಗೀತ ಶಾಲೆ ನಡೆಸಿದ ಅಕ್ಕೋರಾಗಿ, ಆ ಭಾಗದ ಅನೇಕರಿಗೆ ರಾಗ ತಾಳ ಲಯಗಳ ಅಭ್ಯಾಸ ಮಾಡಿಸಿದ್ದಾರೆ. ಅಮೆರಿಕದಲ್ಲೂ ಎರಡು ವರ್ಷ ಇವರು ಸಂಗೀತದ ಮಾಸ್ತರ್ಣಿ ಯಾಗಿದ್ದರು. ಅಲ್ಲಿಯ ವರ್ಜಿನಿಯಾದ ಮುದ್ರಾ ಕಲಾ ಕೇಂದ್ರದಲ್ಲಿ ಹಿಂದುಸ್ತಾನಿ ಸಂಗೀತದ ಶಿಕ್ಷಕಿಯಾಗಿ, ಮಾರ್ಗದರ್ಶನ ನೀಡಿ ವಿದ್ಯಾರ್ಥಿಗಳ ಮನ ಗೆದ್ದಿದ್ದರು. ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್ ಎಂದೇ ಹಾಡಿಕೊಂಡು ಬೆಳೆದವರಿಗೆ, ಕೊಯಾಲಿಯ ಬೋಲೇ ಅಂಬುವಾ ಎಂದು ಉಚ್ಚರಿಸುವುದಕ್ಕೆ ಒದ್ದಾಡುತ್ತಿದ್ದರು. ಅದರಲ್ಲಿಯೂ ರಾಗಬದ್ಧವಾಗಿ ಹೇಳಿಕೊಡುವಷ್ಟರಲ್ಲಿ ಈ ರೇಖಾ ಮೇಡಮ್ಮಿಗೆ ಸಾಕೋಸಾಕಾಗುತ್ತಿತ್ತಂತೆ. ಸಹನೆಯಿಂದ, ಮಮಕಾರ ದಿಂದ ಅವರಿಗೆ ಸರಿಯಾಗಿ ಸಂಗೀತ ಕಲಿಸಿ, ದೊಡ್ಡ ಸವಾಲನ್ನೇ ದಾಟಿ ಬಂದಂತಹ ಸಾಧನೆ ರೇಖಾ ಅವರದ್ದು. ಅಮೆರಿಕದಲ್ಲಿದ್ದ ದಿನಗಳಲ್ಲಿ ತಮಗೆ ಕುಂದರಗಿ ಮೂಲದ ಸರ್ವೇಶ್ವರಿಯವರು ಮತ್ತು ಅಮಚಿಮನೆಯ ಗಜಾನನ ಹೆಗಡೆ ಅವರಂಥವರು ನೀಡಿದ ಪ್ರೋತ್ಸಾಹವನ್ನು ನಾನು ಯಾವತ್ತೂ ಮರೆಯಲಾರೆ ಎಂಬುದು ರೇಖಾ ಅವರಲ್ಲಿನ ಕೃತಜ್ಞತಾ ಭಾವ. ಆಫ್ರಿಕಾದ ಸೆನಗಲ್‌ಗೂ ತೆರಳಿ ಅಲ್ಲಿಯ ಕಲೆ, ಸಂಸ್ಕೃತಿಯನ್ನು ಇವರು ಅಧ್ಯಯನ ಮಾಡಿರುವುದು ವಿಶೇಷ.

ಪುಸ್ತಕ ರೂಪದಲ್ಲಿ: ಇವರು ಸಂಗೀತದ ಗಾಯಕಿ, ಸಾಧಕಿ, ಸಂಶೋಧಕಿ. ಲೇಖಕಿ. ಇವರು ತಮ್ಮ ಸಂಗೀತ ಸಂಶೋಧನೆಯ ಸಾರವನ್ನೆಲ್ಲ ಪುಸ್ತಕವಾಗಿ ಪ್ರಕಟಿಸಿದ್ದಾರೆ. ಸಾಹಿತ್ಯಕ್ಕಿಂತ ಆಲಾಪಕ್ಕೆ, ತಾನುಗಳಿಗೇ ಹೆಚ್ಚು ಪ್ರಾಶಸ್ತ್ಯ ನೀಡಬೇಕೆಂಬ ಅಭಿಪ್ರಾಯವನ್ನು ಇವರು ಒಪ್ಪುವುದಿಲ್ಲ.

ಹಿರೇಸರದಲ್ಲಿ ಶಾಲೆ ಸ್ಥಾಪನೆ: ಅಮೆರಿಕದಿಂದ ಬಂದ ನಂತರ ರೇಖಾ ಅವರು ಮತ್ತಷ್ಟು ಕ್ರಿಯಾಶೀಲರಾದರು. ತಮ್ಮ ಶ್ರೀ ಮಹಾಗಣಪತಿ ಸಂಗೀತ ಪ್ರತಿಷ್ಠಾನವನ್ನು ಇನ್ನಷ್ಟು ಚುರುಕುಗೊಳಿಸಿದರು. ಪಕ್ಕದ ಹಿರೇಸರ ಊರಿನಲ್ಲಿದ್ದ ಎರಡೆಕರೆ ಕರಡದ ಬ್ಯಾಣ ಖರೀದಿಸಿ ಅಲ್ಲಿ ಸುಸಜ್ಜಿತ ಶಾಲೆಯೊಂದನ್ನು ಸ್ಥಾಪಿಸಿ ಮಾದರಿಯಾಗಿದ್ದಾರೆ.

ಆ ಭಾಗದಲ್ಲಿ ಇಂಗ್ಲಿಷ್ ಶಾಲೆಗಳು ಅಪರೂಪ. ರೇಖಾ ಅವರು ಸ್ಥಾಪಿಸಿರುವ 'ಮನಸ್ವಿನಿ ಶಾಲೆ' ಇಂಗ್ಲಿಷ್ ಮಾಧ್ಯಮ ಶಾಲೆಯಾಗಿರುವುದು ವಿಶೇಷ. ಎಲ್. ಕೆ. ಜಿ.ಯಿಂದ ಹಿಡಿದು 8ನೇ ತರಗತಿಯವರೆಗೆ ಈ ಶಾಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಅವಕಾಶವಿದೆ. ಉಮ್ಮಚಗಿ, ಎಣ್ಣೆಸರ, ಮಾವಿನಕಟ್ಟಾ, ಉಪಳೇಶ್ವರ, ಚೌವತ್ತಿ, ಚಿಪಗೇರಿ ಮುಂತಾದ ಅನೇಕ ಊರುಗಳಿಂದ ಈ ಶಾಲೆಗೆ ಶಿಸ್ತಾಗಿ ವಿದ್ಯಾರ್ಥಿಗಳು ಬಂದು ಪಾಠ ಪ್ರವಚನಗಳಲ್ಲಿ ಪಾಲ್ಗೊಳ್ಳುವುದನ್ನು ನೋಡುವುದೇ ಚೆಂದ. ಏಕೆಂದರೆ ಈ ಶಾಲೆ ಇರುವುದೇ ಹಸಿರಿನ ಪ್ರಶಾಂತ ನಿರ್ಮಲ ತಾಣ-ಬ್ಯಾಣದಲ್ಲಿ. ಮಲೆ ನಾಡು ಶೈಲಿಯ ಮಧ್ಯಾಹ್ನದ ಊಟದ ವ್ಯವಸ್ಥೆಯೂ ಇಲ್ಲಿಯ ಮತ್ತೊಂದು ಆಕರ್ಷಣೆ.

ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ

ರೇಖಾ ಕೋಟೆಮನೆಯವರ ಸಮಗ್ರ ಸಾಧನೆಗಳನ್ನು ಗುರುತಿಸಿ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅಂತರರಾಷ್ಟ್ರೀಯ ಪ್ರಶಸ್ತಿಗೆ ಇವರನ್ನು ಆಯ್ಕೆ ಮಾಡಲಾಗಿದೆ. ಜಾರ್ಜಿಯಾ ದೇಶದಲ್ಲಿ ಮುಂದಿನ ಮೇ ತಿಂಗಳಲ್ಲಿ ನಡೆಯುವ ಅಂತರರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ರೇಖಾ ಕೋಟೆಮನೆಯವರು ವಿವಿಧ ದೇಶಗಳ ಗಣ್ಯಮಾನ್ಯರ ಸಮ್ಮುಖದಲ್ಲಿ ಈ ಗೌರವ ಸ್ವೀಕರಿಸಲಿದ್ದಾರೆ.

ಬದುಕೆಲ್ಲಾ ಒದ್ದಾಟ ಗುದ್ದಾಟ

ಸದ್ದುಮಾಡದೆ ನೀನು ಜಗಕೆ ಬಂದವನಲ್ಲ
ಒದ್ದಾಟ ಗುದ್ದಾಟ ಬಾಳೆಲ್ಲವಾಯ್ತು
ಗದ್ದಲವ ಬಿಡಲು ಕಡೆದಿನವಾನುಮಾದೀತೇ
ನಿದ್ದೆವೊಲು ಸಾವ ಪಡೆ ಮಂಕುತಿಮ್ಮ॥

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಹುಟ್ಟುವಾಗಲೇ ಅಳುವ ಸದ್ದಿನೊಂದಿಗೆ ಈ ಜಗತ್ತಿಗೆ ಅಡಿಯಿಟ್ಟವನು ಈ ಮಾನವ. ಬೆಳೆಯುವಾಗಿನ ಒಂದೊಂದು ಹಂತದಲ್ಲಿಯೂ ಜೀವನವು ಒದ್ದಾಟ ಹಾಗೂ ಗುದ್ದಾಟಗಳೊಂದಿಗೇ ಕೂಡಿರುತ್ತದೆ. ಈ ಒದ್ದಾಟ, ಗುದ್ದಾಟ, ಹೋರಾಟಗಳ ಗೋಜಲುಗಳು ಮುಗಿಯುವ ದಿನವು ಸನ್ನಿಹಿತವಾಗಿದೆ ಎಂದು ನಿನ್ನರಿವಿಗೆ ಬಂದಾಗ ನಿನಗೂ, ಇತರರಿಗೂ ಮತ್ತು ಈ ಜಗತ್ತಿಗೆ ಹೊರೆಯಾಗದೆ ನೀನು ನಿದ್ರೆಯಲ್ಲಿ ಈ ಇಹಲೋಕದ ಯಾತ್ರೆಯನ್ನು ಮುಗಿಸುವುದು ಸೂಕ್ತವಾಗಿರುತ್ತದೆ.

ನಾವೆಲ್ಲರೂ ಈ ಜಗತ್ತಿಗೆ ಕಾಲಿರಿಸುವಾಗಲೇ ಅಳುವಿನ ಸದ್ದು ಮಾಡುತ್ತಾ ಕಾಲಿರಿಸಿದವರು. ಅಳುವಿನ ಸದ್ದಿನೊಂದಿಗೆ ಪ್ರಾರಂಭವಾದ ಜೀವನದ ಪ್ರತೀ ಹಂತವೂ ಹೋರಾಟವೇ ಆಗಿರುವುದರಿಂದ ಈ ನಮ್ಮ ಜೀವನವು ಒದ್ದಾಟ ಮತ್ತು ಗುದ್ದಾಟಗಳಿಂದಲೇ ಕೂಡಿರುತ್ತವೆ. ಪ್ರತೀ ಹಂತದಲ್ಲಿಯೂ ಈ ಜೀವನ ಎಂಬುದು ಹೋರಾಟಗಳ, ಸದ್ದು ಗದ್ದಲಗಳ, ಒದ್ದಾಟ ಗುದ್ದಾಟಗಳಿಂದಲೇ ತುಂಬಿರುತ್ತದೆ. ಈ ಬದುಕಿನಲ್ಲಿ ಇಷ್ಟು ಹೋರಾಟ ಮಾಡಿಕೊಂಡು, ಬರೀ ಗದ್ದಲದಲ್ಲಿ ಜೀವನವನ್ನು ನಡೆಸುವ ನಮ್ಮಗಳಿಗೆ, ಜೀವನದ ಕಡೆಯ ದಿನಗಳಲ್ಲಿ, ಯಾರಿಗೂ ಭಾರವೆನಿಸದೆ, ಯಾರಿಗೂ ಹೊರೆಯಾಗದೆ, ಇಹಲೋಕದ ಯಾತ್ರೆಯನ್ನು ನಿದ್ರೆ ಮಾಡುವಾಗ ನಮ್ಮ ಅರಿವಿಗೆ ಬಾರದಂತೆ, ಮುಗಿಸುವುದೂ ಸಹ ಒಂದು ರೀತಿಯ ಯೋಗವೇ ಹೌದು. ಅಂತಹ ಕೊನೆಯ ದಿನದ ಯೋಗ ಸಾಧಕರಿಗೆ ದಕ್ಕಬಹುದೇನೋ? ಯಾರಿಗೂ ಹೊರೆಯಾಗದಂತೆ, ಭಾರವೆನಿಸದೆ, ನೋವನ್ನು ನಾವೂ ಪಡೆಯದೆ 'ನಿದ್ರೆವೊಲು ಸಾವು' ಪಡೆಯುವುದೂ ಸಹ ಅದೃಷ್ಟವಾಗಿದೆ.

ಪುಸ್ತಕ ಲೋಕ

ಅಪ್ಪಯ್ಯನ ಆಸ್ತಿಕತೆ

ಸುಮಾರು 680 ಪುಟಗಳ ಈ ಪುಸ್ತಕ ಈಗ (2025) ಮರುಮುದ್ರಣ ಕಂಡಿದೆ! ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ಅವರು ರಚಿಸಿದ 'ಅಪ್ಪಯ್ಯನ ಆಸ್ತಿಕತೆ' ಪುಸ್ತಕವು ಗ್ರಾಮೀಣ ಪ್ರದೇಶದ ಬದುಕಿನ ಕಥನವಾಗಿದ್ದು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಿಂದ 2022ರಲ್ಲಿ ಪ್ರಕಟಗೊಂಡಿತ್ತು. ರು.500/- ಮುಖಬೆಲೆಯ ಈ ಪುಸ್ತಕವು ಈಗ ಅರ್ಧ ಬೆಲೆಗೆ ಲಭ್ಯ! ಕೊರ್ಗಿ ಸೂರ್ಯನಾರಾಯಣ ಉಪಾಧ್ಯಾಯರು ಕಲೋಪಾಸಕರು; ಅವರ ಜೀವನ ಚರಿತ್ರೆಯನ್ನು ಕಟ್ಟಿಕೊಡುವ ಕೆಲಸವನ್ನು ಅವರ ಮಗ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯರು ಈ ಪುಸ್ತಕದಲ್ಲಿ ಮಾಡಿದ್ದಾರೆ. ಇಪ್ಪತ್ತನೆಯ ಶತಮಾನದ ಹಳ್ಳಿಯ ಬದುಕಿನ ದಟ್ಟವಾದ ವಿವರಗಳು ಇಲ್ಲಿ ಮೆರವಣಿಗೆಯಂತೆ ಸಾಗಿವೆ, ಓದಲು ಆಪ್ತವಾಗಿವೆ. ಕುಂದಾಪುರ ಕನ್ನಡದ ಸಂಭಾಷಣೆಯೂ ಅಲ್ಲಲ್ಲಿ ಮೂಡಿಬಂದಿದ್ದು, ಕೌಟುಂಬಿಕ ವಿವರಗಳ ಮಿತಿಯನ್ನು ದಾಟಿ ಒಂದು ವಿಶಿಷ್ಟ ಭೌಗೋಳಿಕ ಪರಿಸರದ ಸಾಂಸ್ಕೃತಿಕ ವಿವರಗಳನ್ನು ನೀಡುವ ಮಹತ್ವದ ದಾಖಲೆಯಾಗಿ ಈ ಪುಸ್ತಕ ಮೂಡಿಬಂದಿದೆ. ಇದು ಆನ್‌ಲೈನ್‌ನಲ್ಲಿ ಲಭ್ಯ.



ಆರೋಗ್ಯವಿಲ್ಲದ ದೀರ್ಘಾಯಸ್ಸು ಶಾಪದಂತೆ

ಒಂದು ಚಿಕ್ಕ ಹಳ್ಳಿ ಅಲ್ಲೊಬ್ಬ ''ಸಿದ್ದಪ್ಪ ಗುರು'' ಎಂದು ಕರೆಸಿಕೊಳ್ಳುವ ಜಂಗಮರಿದ್ದರು. ಅವರನ್ನು ಕಂಡರೆ ಎಲ್ಲರಿಗೂ ಗೌರವ ಪ್ರೀತಿ. ಅವರು ಅನೇಕ ಪವಾಡಗಳನ್ನೂ ಮಾಡುತ್ತಿದ್ದರು.

ಗುರುಗಳಿಗೆ ವಯಸ್ಸಾಯಿತು. ಅವರು ತಮ್ಮ ಶಿಷ್ಯರನ್ನೆಲ್ಲಾ ಕರೆದು ನನ್ನ ಇಹಲೋಕದ ಕೆಲಸ ಮುಗಿಯುತ್ತಾ ಬಂತು, ನಾನಿನ್ನು ಈ ಜಾಗದಿಂದ ಹೊರಡಲು ಸಿದ್ಧನಾಗಿದ್ದೇನೆ, ನನ್ನಲ್ಲಿ ಏನಾದರೂ ಕೇಳಬೇಕೆಂದಿದ್ದರೆ, ಈಗಲೇ ಕೇಳಿಕೊಳ್ಳಿ, ಎಂದರು.

ಸಿದ್ದಪ್ಪ ಗುರುಗಳುತಮ್ಮ ಗುರುಗಳ ಸಮಾಧಿಯ ಮುಂದೆ ದೀಪ ಹಚ್ಚಿ ಭಜನೆ ಮಾಡಿ, ತಮ್ಮ ಪ್ರಾಣ ತ್ಯಾಗ ಮಾಡಲು ನಿರ್ಧರಿಸಿದರು. ಗುರುಗಳ ಸಮಾಧಿಯ ಮುಂದೆ ಹೋದಾಗ ಹಣತೆಯಲ್ಲಿ ಎಣ್ಣೆ ಖಾಲಿಯಾಗಿತ್ತು. ಒಬ್ಬ ಶಿಷ್ಯನನ್ನು ಕರೆದು ಎಣ್ಣೆ ತಂದು ಹಾಕಲು ಹೇಳುತ್ತಾರೆ. ಈ ಶಿಷ್ಯ ದುಡುಕು ಸ್ವಭಾವದ, ಸ್ವಲ್ಪ ತಲೆಹರಟೆ ಮನುಷ್ಯ.ಯಾವ ಸಂದರ್ಭ ದಲ್ಲಿ ಏನು ಮಾತಾಡಬೇಕು ಎಂಬುದನ್ನು ತಿಳಿಯದೇ, ಗುರುಗಳಿಗೆ ಪ್ರಶ್ನೆ ಮಾಡುತ್ತಾನೆ.

ಗುರುಗಳೇ ನೀವೇ ಈ ದೇಹ ನಶ್ವರವೆಂದು, ಹೇಳುತ್ತೀರಿ ಅದರಲ್ಲೂ ಯಾರ ಆಯಸ್ಸು ಯಾವ ಸಮಯದಲ್ಲಿ ಮುಗಿಯುವು ದೆಂಬುದನ್ನು ಹೇಳುವುದು ಅಸಾಧ್ಯವೆಂದು ತಿಳಿಸಿದ್ದೀರಿ. ಹೀಗಿರುವಾಗ ಎಣ್ಣೆಯನ್ನು ತಂದು ಹಣತೆಗೆ ಹಾಕುವವರೆಗೂ ನಾನು ಬದುಕಿರುತ್ತೇನೆಂಬ ಭರವಸೆ ಏನು? ಎಂದು ತಲೆ ಹರಟೆ ಪ್ರಶ್ನೆ ಕೇಳಿದ. ಆಗ ಗುರುಗಳು ನಕ್ಕು ನೀನು ಎಣ್ಣೆ ತಂದು ಹಾಕುವವರೆಗೂ ನಿನಗೆ ಮರಣವಿಲ್ಲ ನಾನು ಭರವಸೆ ಕೊಡುತ್ತೇನೆ ಎಂದರು.

ಈ ಶಿಷ್ಯನಿಗೆ ಬಹಳ ಸಂತೋಷವಾಯಿತು. ತಾನು ಎಣ್ಣೆ ತಂದು ಹಾಕುವವರೆಗೂ ತಾನು ಸಾಯುವುದಿಲ್ಲ. ಎಣ್ಣೆ ತರದೇ ಹೋದರೆ ತನಗೆ ಸಾವೇ ಇಲ್ಲ. ಅಮರತ್ವ ಪಡೆದಂತಾಯಿತು, ಎಂದು ಕೊಂಡು ಅವನು ಮರಳಿ ಬರಲೇ ಇಲ್ಲ. ಗುರುಗಳು ಸ್ವಲ್ಪ ಹೊತ್ತು ಕಾಯ್ದು ,ಬೇರೆ ಶಿಷ್ಯರಿಂದ ಎಣ್ಣೆಯನ್ನು ತರಿಸಿ ದೀಪ ಹಚ್ಚಿ ಭಜನೆಯನ್ನು ಪೂರೈಸಿ ದೇಹ ತ್ಯಾಗ ಮಾಡಿದರು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಆ ಉದ್ಧಟ ಶಿಷ್ಯ ತಲೆಮರೆಸಿಕೊಂಡು ಬೇರೆ ಊರಿಗೆ ಹೊರಟುಬಿಟ್ಟ. ಅಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಸಾವಿನ ಭಯ ಹೊರಟುಹೋಗಿ ಮಾಡಬಾರದ ಕೆಲಸಗಳನ್ನೆಲ್ಲ ಮಾಡುತ್ತಾನೆ. ಕರ್ಮಫಲದಂತೆ ವರ್ಷಗಳು ಉರುಳಿದಂತೆ ಯಾವ ಯಾವುದೋ, ಖಾಯಿಲೆ ಅಂಟಿಕೊಂಡು ಅವನ ದೇಹ ಒದ್ದಾಡುತ್ತಿರುತ್ತದೆ, ಆದರೆ ಸಾವು ಮಾತ್ರ ಬರಲಿಲ್ಲ . ಭಗವಂತಾ ಸಾಕು ಈ ಜೀವನ ಬೇಗ ಸಾವು ಕೊಡು ಎಂದು ದೀನನಾಗಿ ಬೇಡುತ್ತಾನೆ. ಆದರೆ ಅವನಿಗೆ ಸಾವು ಮಾತ್ರ ಬರುವುದಿಲ್ಲ.

ಎಲ್ಲರಿಗೂ ಆಶ್ಚರ್ಯ. ಇವನು ಬದುಕಿರುವುದಾದರೂ ಹೇಗೆ? ಮೈತುಂಬಾ ಖಾಯಿಲೆ ಇದ್ದು ತೊಂಬತ್ತೈದು ವರ್ಷಗಳಾಗಿ, ಹಾಸಿಗೆಯಿಂದ ಏಳಲಾಗದಿದ್ದರೂ ಮನೆಯವರಿಗೆ, ಆಪ್ತರಿಗೆ ಬೇಡವಾಗಿ ನರಳುತ್ತಿದ್ದರೂ ಇವನ ಪ್ರಾಣ ಹೋಗುತ್ತಿಲ್ಲವಲ್ಲಾ ಎಂದು.

ತಕ್ಷಣ ಅವನಿಗೆ ತಾನು ಗುರುಗಳಿಗೆ ಮಾಡಿದ ನಂಬಿಕೆ ದ್ರೋಹ ನೆನಪಾಯಿತು. ತನ್ನ ಬಂಧು ಮಿತ್ರರಿಗೆ ತನ್ನ ದ್ರೋಹದ ಕಥೆ ತಿಳಿಸಿ, ಅವರೊಂದಿಗೆ ಗುರುಗಳ ಸಮಾಧಿಯ ಬಳಿಗೆ ಬಂದು ಹಣತೆಗೆ ಎಣ್ಣೆ ಹಾಕುತ್ತಾನೆ . ಎಲ್ಲರೂ ನೋಡುತ್ತಿರುವ ಹಾಗೇ ಅಲ್ಲಿಯೇ ಕುಸಿದು ಬಿದ್ದು ಪ್ರಾಣ ಬಿಟ್ಟು ದೇಹದಿಂದ ಮುಕ್ತನಾಗುತ್ತಾನೆ. ಚಿರಂಜೀವಿಯಾಗ ಬೇಕೆಂಬುದು ಮನುಷ್ಯನ ಹಂಬಲ. ಆದರೆ ಮನಃಶಾಂತಿ ಇಲ್ಲದೇ ದೇಹದಲ್ಲಿ ಆರೋಗ್ಯವೂ ಇಲ್ಲದೇ ಬದುಕಿದ್ದರೆ ದೀರ್ಘಾಯುಷ್ಯ ಒಂದು ದೊಡ್ಡ ಶಾಪವೇ ಸರಿ.

ನಾವೆಲ್ಲರೂ ಬಹಳ ಕಾಲ ಬದುಕಬೇಕು ಎಂದು ಬಯಸುತ್ತೇವೆ. ಆದರೆ ಬದುಕಿರುವಷ್ಟು ದಿನ ನಾಲ್ಕು ಜನರಿಗೆ ಉಪಯೋಗವಾಗುವ ಹಾಗೆ, ಯಾರಿಗೂ ಕೆಟ್ಟದ್ದನ್ನು ಬಯಸದ ಹಾಗೆ ಬದುಕಬೇಕು ಎಂದು ಆಶಿಸುತ್ತೇವೆಯೇ? ನಮಗೊಂದಿಷ್ಟು ಲಾಭವಾದರೆ ಸಾಕು, ನಾವು ನಮ್ಮ ಮನೆಯವರು ಚೆನ್ನಾಗಿದ್ದರೆ ಸಾಕು ಅನ್ನುವ ಹಂತಕ್ಕೆ ಬಂದು ನಿಂತುಬಿಡುತ್ತೇವೆ. ಮತ್ತೊಬ್ಬರ ನಿಟ್ಟುಸಿರು ಖಂಡಿತ ನಮ್ಮನ್ನು ನೆಮ್ಮದಿಯಾಗಿ ಬದುಕಲು ಬಿಡುವುದಿಲ್ಲ. ಆದ್ದರಿಂದಲೇ ಗೊತ್ತಿದ್ದು ಗೊತ್ತಿಲ್ಲದೆಯೋ ಯಾರಿಗೂ ಕೇಡು ಬಯಸುವುದು ಬೇಡ. ಬದುಕಿರುವಷ್ಟು ದಿನ ನಾಲ್ಕು ಜನರಿಗೆ ಉಪಯೋಗವಾಗುವಂತೆ ಬದುಕೋಣ.

ಕಠಿಣ ಪರಿಶ್ರಮಕ್ಕೆ ಹತ್ತಿರದ ದಾರಿ ಇಲ್ಲ

ನಮ್ಮ ಜೀವನ ಶೈಲಿ ಏನೇ ಇರಲಿ ನಾವು ಪರಮಾನಂದ ಪಡೆಯಬೇಕಾದರೆ ಏಕತೆಯಲ್ಲಿ ಸ್ಥಿರವಾಗಿರಬೇಕೆಂದು ಕೃಷ್ಣ ಹೇಳಿದ್ದಾನೆ.(6.31) ಆ ಏಕತೆಯನ್ನು ಹೊಂದಬೇಕಾದರೆ ಮೂರು ಮುಖ್ಯ ವಿಷಯಗಳಿವೆ. ಮೊದಲನೆಯದನ್ನು ವಿವಿಧ ಸಂಸ್ಕೃತಿಗಳಲ್ಲಿ ಭಿನ್ನ-ಭಿನ್ನ ಹೆಸರುಗಳಿಂದ ಕರೆಯುತ್ತಾರೆ. ಹಾಗೂ ಸಂಕೀರ್ಣತೆಯನ್ನು ಒಟ್ಟುಗೂಡಿಸಬೇಕಾದರೆ ನಿಗದಿತ ಮಾರ್ಗಗಳು ಒಂದಕ್ಕೊಂದು ವಿರುದ್ಧವಾಗಿ ತೋರುತ್ತವೆ. ಎರಡನೆಯದಾಗಿ ನಮ್ಮ ಮನಸ್ಸು ವಿಭಜನಾ ಪ್ರವೃತ್ತಿಯನ್ನು ಹೊಂದಿದೆ. ಇದು ಏಕತೆ ಹೊಂದುವುದನ್ನು ತಡೆಯುತ್ತದೆ. ಮೂರನೆಯದಾಗಿ ನಮಗೆ ಗೊತ್ತಿಲ್ಲದನ್ನು ನಾವು ತಿರಸ್ಕರಿಸುತ್ತೇವೆ, ಹಾಗೂ ಈ ಏಕತೆ ಎನ್ನುವುದು ನಮಗೆ ಸಂಪೂರ್ಣ ಹೊಸತು. ಈ ತೊಂದರೆ ಬಗ್ಗೆ ಯೋಚಿಸುತ್ತಾ ಅರ್ಜುನ ಮನೋನಿಗ್ರಹ ಹೇಗೆ ಮಾಡಬೇಕೆಂದು ಕೇಳುತ್ತಾನೆ.

ಕೃಷ್ಣ ಹೇಳುತ್ತಾನೆ ಮನಸ್ಸು ಚಂಚಲ ಹಾಗೂ ಅದನ್ನು ನಿಯಂತ್ರಿಸುವುದು ಕಷ್ಟ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಸತತ ಅಭ್ಯಾಸ ಹಾಗೂ ವೈರಾಗ್ಯದಿಂದ ಇದನ್ನು ನಿಯಂತ್ರಿಸಬಹುದು. (6.35) ಸಾಮಾನ್ಯ ಮನುಷ್ಯನಿಂದ ಯೋಗಸ್ಥಿತಿ ತಲುಪುವುದು ಕಷ್ಟವಾದರೂ ಕಠಿಣ ಪರಿಶ್ರಮದಿಂದ ಅದನ್ನು ಹೊಂದಬಹುದೆಂಬ ನನ್ನ ಮಾತನ್ನು ಅನುಸರಿಸು. (6.36) ಚಂಚಲ ಮನಸ್ಸನ್ನು ನಿಗ್ರಹಿಸಲು ದೃಢ ನಿಶ್ಚಯದಿಂದ ಅಭ್ಯಾಸ ಮಾಡಬೇಕೆಂದು ಕೃಷ್ಣ ಈ ಮೊದಲೇ ತಿಳಿಸಿದ್ದಾನೆ.(6.23, 6.26) ವೈರಾಗ್ಯ ಎನ್ನುವುದು ರಾಗ ಅಥವಾ ಮೋಹದ ವಿರುದ್ಧ ಪದ. ದಿನ ನಿತ್ಯ ನಮ್ಮ ಜೀವನವು ನಮಗೆ ರಾಗ ಹಾಗೂ ವೈರಾಗ್ಯದ ಕ್ಷಣಗಳನ್ನು ನೀಡುತ್ತವೆ. ಆದರೆ ನಮ್ಮ ಮನಸ್ಸು ಆಸೆಗಳನ್ನು ಬೆನ್ನುತ್ತುವ ರಾಗವನ್ನು ಮಾತ್ರ ಅಭ್ಯಾಸ ಮಾಡುತ್ತದೆ.

ಉದಾಹರಣೆಗಾಗಿ ಒಂದು ಸಂಬಂಧ ಕೆಟ್ಟು ನಾವು ನಿರಾಶೆ ಹೊಂದಿದಾಗ ಸಂಬಂಧ (ರಾಗ) ವೇ ನಿರಾಶೆಗೆ ಕಾರಣ ಎನ್ನುವುದನ್ನು ನಾವು ತಿಳಿಯದೇ ನಮ್ಮ ಸಂಗಾತಿಯನ್ನೇ ನಾವು ದೂಷಿಸುತ್ತೇವೆ. ಹಾಗೂ ಹೊಸ ಸಂಬಂಧ ಹುಡುಕುತ್ತೇವೆ. ವೈರಾಗ್ಯದ ಅಭ್ಯಾಸವೆಂದರೆ, ನಾವು ಆನಂದವನ್ನು ಯಾರಿಂದ ಲಾದರೂ ಅಥವಾ ಹೊರಗಿನಿಂದಲೂ ಪಡೆಯಬಹುದೆಂಬ ತಿಳುವಳಿಕೆಯನ್ನು ಗಟ್ಟಿ ಮಾಡುವುದಲ್ಲದೆ ಮತ್ತೇನು ಅಲ್ಲ. ನಮ್ಮ ವೈರಾಗ್ಯದ ಹಿಂದಿನ ಅನುಭವಗಳು ಈ ತಿಳುವಳಿಕೆಯನ್ನು ಆಳವಾಗಿಸಲು ಸಹಾಯ ಮಾಡುತ್ತವೆ ಹಾಗೂ ಪ್ರಸ್ತುತ ಸಮಯದಲ್ಲಿ ಅವುಗಳು ಪುನರಾವರ್ತನೆಯಾದಾಗ ಜಾಗೃತವಾಗಿರಲು ಅನುಕೂಲವಾಗುತ್ತದೆ.

ಮರಣವು ಶಾಶ್ವತ, ಶಕ್ತಿಶಾಲಿ ಹಾಗೂ ಸಮಾನತೆಯ ಅಧಿಪತಿ. ಬಹಳ ಸಂಸ್ಕೃತಿಗಳು ಮನಸ್ಸನ್ನು ನಿಗ್ರಹಿಸಿ ಏಕತೆ ಹೊಂದಲು ಇದನ್ನು ಉಪಯೋಗಿಸುತ್ತವೆ. ಯಾಕೆಂದರೆ ಇದು ನಾವು ಕಲ್ಪಿಸಬಹುದಾದ ಅಂತಿಮ ವೈರಾಗ್ಯವಾಗಿದೆ.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	3		4	■	5
	■	6			■		■	
7	8		■		■	9	10	
■		■	11	■	12	■		■
13				■	14			
■		■		■		■		■
15		16	■	17	■	18		19
	■		■	20			■	
	■	21			■	22		

ಎಡದಿಂದ ಬಲಕ್ಕೆ

1. ಏಳು ದಿನಗಳ ಅವಧಿ (3)
3. ಕಾಗೆಗೆ ಮತ್ತೊಂದು ಹೆಸರು (3)
6. ನಯವಾಗಿದೆ ಕಣ್ಣು (3)
7. ನಗ ತಿರುಗಿ ಬಂದಿರುವ ಆಕಾಶ (3)
9. ಪಾಂಡವರಲ್ಲಿ ಒಬ್ಬಾತ (3)
13. ಕದಂಬರ ರಾಜಧಾನಿ (4)
14. ರಾತ್ರಿಯೆಲ್ಲಾ ಎಚ್ಚರವಿದ್ದು ಮಾಡುವ ಪೂಜೆ (4)
15. ಸರಪಳಿಯ ಕೊಂಡಿಯಿದು (3)
18. ಆಗರ (3)
20. ಅಸ್ತವ್ಯಸ್ತವಾಗಿ ಬಂದಿರುವ ಕುದುರೆ (3)
21. ಹುಂಜ ಅಥವಾ ಕೋಳಿ (3)
22. ಮೂರಕ್ಷರದ ಬೆಳ್ಳಿ (3)

ಮೇಲಿಂದ ಕೆಳಕ್ಕೆ

1. ಸುಲಭವಾದ ಅಥವಾ ಅಡೆತಡೆಯಿಲ್ಲದ (3)
2. ಕೊಲ್ಲುವಿಕೆಗೆ ಹೀಗೊಂದು ಪದ (3)
3. ಮಂಗನಿಗೆ ಮತ್ತೊಂದು ಹೆಸರು (3)
4. ಗೌರವ ಅಥವಾ ಮನ್ನಣೆ (3)
5. ನಯವಾದ ಕೆನ್ನೆ (3)
8. ನೇಸರ ಅಥವಾ ಸೂರ್ಯ (5)
10. ವಂಶಕ್ಕೆ ಕೀರ್ತಿ ತರುವಂತಹ (5)
11. ಒಗ್ಗರಣೆಗೆ ಬಳಸುವ ಚಟಪಟನೆ ಸಿಡಿಯುವ ವಸ್ತು (3)
12. ಹರನ ಮಧ್ಯೆ ಸಿಲುಕಿದ ಪಡಸಾಲೆ (3)
15. ಅಷ್ಟ ದಿಕ್ಪಾಲಕರಲ್ಲಿ ಒಬ್ಬ, ಶ್ರೀಮಂತ (3)
16. ರೇಗಿಸು ಅಥವಾ ಮೂದಲಿಸು (3)
17. ತೆಂಗಿನ ಚಿಪ್ಪು (3)
18. ಅವಸರ ಅಥವಾ ಗಡಿಬಿಡಿ (3)
19. ಶಬ್ದ ಮಾಡುವ ಎಂದರ್ಥ (3)

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್	08	06	02	12
ಮುಂಬೈ	10	06	04	12
ಡೆಲ್ಲಿ	08	06	02	12
ಬೆಂಗಳೂರು	09	06	03	12
ಪಂಜಾಬ್	09	05	03	11
ಲಖನೌ	10	05	05	10
ಕೋಲ್ಕತ್ತಾ	09	03	05	07
ಹೈದರಾಬಾದ್	09	03	06	06
ರಾಜಸ್ಥಾನ್	09	02	07	04
ಚೆನ್ನೈ	09	02	07	04

ಇಂದಿನ ಪಂದ್ಯ

7.30 PM

ರಾಜಸ್ಥಾನ್ ರಾಯಲ್ಸ್ VS ಗುಜರಾತ್ ಟೈಟನ್ಸ್

ಸವಾಯಿ ಮಾನ್‌ಸಿಂಗ್ ಸ್ಟೇಡಿಯಂ, ಜೈಪುರ



ಪಾಂಟಿಂಗ್‌ಗೆ ಆಸೀಸ್ ಆಟಗಾರರ ವ್ಯಾಮೋಹ

'ಈ ಆವೃತ್ತಿಯಲ್ಲಿ ಪಂಜಾಬ್ ತಂಡ ಐಪಿಎಲ್ ಟ್ರೋಫಿ ಗೆಲ್ಲಲು ಸಾಧ್ಯವಾಗುವುದಿಲ್ಲ ಎಂದು ನನ್ನ ಒಳ ಮನಸ್ಸು ಹೇಳುತ್ತಿದೆ. ಇದಕ್ಕೆ ಕಾರಣ, ಕೋಚ್ ರಿಕಿ ಪಾಂಟಿಂಗ್ ಅವರು ಭಾರತೀಯ ಬ್ಯಾಟ್ಸ್‌ಮನ್‌ಗಳಾದ ನೆಹಾಲ್ ವಧೇರಾ ಮತ್ತು ಶಶಾಂಕ್ ಸಿಂಗ್ ಅವರಂತಹ ಆಟಗಾರರನ್ನು ಕಡೆಗಣಿಸುತ್ತಿರುವುದಾಗಿದೆ. ಆಸೀಸ್ ಆಟಗಾರರ ಮೇಲೆ ಹೆಚ್ಚಿನ ವ್ಯಾಮೋಹ ಅವರಲ್ಲಿ ಇರುವಂತೆ ಕಾಣುತ್ತಿದೆ. ಕೆಕೆಆರ್ ವಿರುದ್ಧದ ಪಂದ್ಯದಲ್ಲಿ ಬ್ಯಾಟಿಂಗ್ ಫಾರ್ಮ್ ಇಲ್ಲದಿದ್ದರೂ ಜೋಶ್ ಇಂಗ್ಲಿಸ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರನ್ನು ಮೊದಲು ಬ್ಯಾಟಿಂಗ್‌ಗೆ ಕಳುಹಿಸುತ್ತಿರಲಿಲ್ಲ. ಈ ರೀತಿಯ ವರ್ತನೆ ಮುಂದುವರಿದರೆ, ಪಂಜಾಬ್ ತಂಡ ಐಪಿಎಲ್‌ನಲ್ಲಿ ಕಳಪೆ ಪ್ರದರ್ಶನ ತೋರಿ ಅಂಕಪಟ್ಟಿಯಲ್ಲಿ ಇನ್ನೂ ಕೆಳಗಿನ ಸ್ಥಾನವನ್ನು ಪಡೆಯಲಿದೆ.

-ಮನೋಜ್ ತಿವಾರಿ ಮಾಜಿ ಕ್ರಿಕೆಟಿಗ

ರಿಕೆಲ್ಟನ್, ಸೂರ್ಯಕುಮಾರ್ ಅರ್ಧ ಶತಕ | ಬುಮ್ರಾಗೆ 4 ವಿಕೆಟ್

ಮುಂಬೈಗೆ ಸಿಹಿ, ಲಖನೌಗೆ ಕಹಿ

ಮುಂಬೈ: ಸಂಘಟಿತ ಪ್ರದರ್ಶನ ನೀಡಿದ ಮುಂಬೈ ಇಂಡಿಯನ್ಸ್ ತಂಡವು ತನ್ನ ತವರಿನಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಭಾನುವಾರ ನಡೆದ ಪಂದ್ಯದಲ್ಲಿ 54 ರನ್ ಅಂತರದ ಭರ್ಜರಿ ಜಯ ಸಾಧಿಸಿತು.

ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ತಂಡವು ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 215 ರನ್ ಕಲೆ ಹಾಕಿತು, ಆ ಗುರಿ ಬೆನ್ನತ್ತಿದ ಲಖನೌ ತಂಡವು 161 ರನ್ ಗಳಿಸಿ ಆಲೌಟ್ ಆಯಿತು.

ಲಖನೌ ತಂಡವು 15 ಓವರ್‌ಗಳ ಅಂತ್ಯಕ್ಕೆ 5 ವಿಕೆಟ್ ಕಳೆದುಕೊಂಡು 140 ರನ್ ಗಳಿಸಿತ್ತು, ಆಗ ಐದು ಓವರ್‌ಗಳಲ್ಲಿ ಗೆಲ್ಲಲು 76 ರನ್ ಬೇಕಿತ್ತು. ಬಿರುಸಿನ ಹೊಡೆತಕ್ಕೆ ಹೆಸರಾದ ಡೇವಿಡ್ ಮಿಲ್ಲರ್ ಮತ್ತು ಅಬ್ದುಲ್ ಸಮದ್ ಕ್ರೀಸ್‌ನಲ್ಲಿದ್ದರು. ಆದರೆ 16ನೇ ಓವರ್ ಎಸೆದ ವೇಗಿ ಜಸ್‌ಪ್ರಿತ್ ಬೂಮ್ರಾ ಪಂದ್ಯಕ್ಕೆ ತಿರುವು ನೀಡಿದರು. ಮಿಲ್ಲರ್ (24 ರನ್), ಸಮದ್ (2 ರನ್) ಹಾಗೂ ಆವೇಶ್ ಖಾನ್ (0) ಅವರ ವಿಕೆಟ್‌ಗಳನ್ನು ಪಡೆದು, ಮುಂಬೈ ತಂಡಕ್ಕೆ ಸತತ ಐದನೇ ಗೆಲುವನ್ನು ಖಾತ್ರಿ ಪಡಿಸಿದರು.

ಲಖನೌ ತಂಡದ ಕೊನೆಯ ಆರು ವಿಕೆಟ್‌ಗಳು ಕೇವಲ 26 ರನ್ ಅಂತರದಲ್ಲಿ ಪತನಗೊಂಡವು. ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ಆಲೌಟ್ ಆದ ಲಖನೌ ತಂಡವು ಐಪಿಎಲ್ ಟೂರ್ನಿಯಲ್ಲಿ ಐದನೇ ಸೋಲೊಪ್ಪಿಕೊಂಡಿತು. ಮುಂಬೈ ಪರ ಪರಿಣಾಮಕಾರಿ ದಾಳಿ ಮಾಡಿದ ಬೂಮ್ರಾ, ನಾಲ್ಕು ಓವರ್‌ಗಳಲ್ಲಿ ಕೇವಲ 22 ರನ್ ನೀಡಿ ಪ್ರಮುಖ 4 ವಿಕೆಟ್‌ಗಳನ್ನು ಪಡೆದರು. ಅವರಿಗೆ ಉತ್ತಮ ಸಹಕಾರ ನೀಡಿದ ಟ್ರೆಂಟ್ ಬೌಲ್ಟ್ ಮೂರು ವಿಕೆಟ್ ಉರುಳಿಸಿದರೆ, ವಿಲ್ ಜಾಕ್ಸ್ ಎರಡು ವಿಕೆಟ್ ಪಡೆದರು. ಇನ್ನೊಂದು ವಿಕೆಟ್ ಕಾರ್ಬಿನ್ ಬಾಷ್ ಪಾಲಾಯಿತು.

ರಿಕೆಲ್ಟನ್, ಸೂರ್ಯಕುಮಾರ್ ಅರ್ಧಶತಕ: ಅದಕ್ಕೂ ಮೊದಲು ಟಾಸ್ ಸೋತರೂ ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಮುಂಬೈಗೆ ಆರಂಭಿಕ ಬ್ಯಾಟರ್ ರಿಕೆಲ್ಟನ್ ಬಿರುಸಿನ ಆರಂಭ ನೀಡಿದರು. ಕಳೆದೆರಡು ಪಂದ್ಯಗಳಲ್ಲಿ ಅರ್ಧಶತಕ ಬಾರಿಸಿದ್ದ ರೋಹಿತ್ ಶರ್ಮಾ (12 ರನ್) ಬೇಗನೆ ವಿಕೆಟ್ ಒಪ್ಪಿಸಿದರೂ, ರನ್ ವೇಗ ತಗ್ಗಿರಲಿಲ್ಲ. ರಿಕೆಲ್ಟನ್ ಕೇವಲ 32 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 6 ಬೌಂಡರಿ ಸಹಿತ 58 ರನ್ ಬಾರಿಸಿದರು.

ವಿಲ್ ಜಾಕ್ಸ್ 29 ರನ್ ಗಳಿಸಿದರು. ಆದರೆ ತಿಲಕ್ ವರ್ಮಾ (6 ರನ್) ಮತ್ತು ನಾಯಕ ಹಾರ್ದಿಕ್ ಪಾಂಡ್ಯ (5 ರನ್) ಮಾತ್ರ ವೈಫಲ್ಯ ಅನುಭವಿಸಿದರು. ನಂತರ ಕ್ರೀಸ್‌ನಲ್ಲಿ ಸೂರ್ಯಕುಮಾರ್ ಯಾದವ್ ಆಟ ರಂಗೇರಿತು. 28 ಎಸೆತಗಳನ್ನು ಎದುರಿಸಿದ ಅವರು ತಲಾ ನಾಲ್ಕು ಬೌಂಡರಿ, ಸಿಕ್ಸರ್ ಸಹಿತ 54 ರನ್ ಚಚ್ಚಿದರು.

ಕೊನೆಯಲ್ಲಿ ನಮನ್ ಧೀರ್ (ಅಜೇಯ 25 ರನ್) ಮತ್ತು ಕಾರ್ಬಿನ್ ಬಾಷ್ (20 ರನ್) ತಂಡದ ಮೊತ್ತವನ್ನು ಇನ್ನೂರರ ಗಡಿ ದಾಟಿಸಿದರು.

ಸೂರ್ಯಕುಮಾರ್ ಸಾಧನೆ

ಲಖನೌ ಸೂಪರ್ ಜಯಂಟ್ಸ್ ತಂಡದ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಸ್ಫೋಟಕ ಅರ್ಧ ಶತಕ ಸಿಡಿಸಿದ ಮುಂಬೈ ಇಂಡಿಯನ್ಸ್ ತಂಡದ ಬ್ಯಾಟ್ಸ್‌ಮನ್ ಸೂರ್ಯಕುಮಾರ್ ಯಾದವ್ 4000 ಐಪಿಎಲ್ ರನ್‌ಗಳನ್ನು ಪೂರ್ಣಗೊಳಿಸಿದ್ದಾರೆ. ಇದರೊಂದಿಗೆ ವಿಶ್ವದ ಅತ್ಯಂತ ಶ್ರೀಮಂತ ಫ್ರಾಂಚೈಸಿ ಲೀಗ್‌ನಲ್ಲಿ ವೇಗವಾಗಿ 4 ಸಾವಿರ ರನ್‌ಗಳನ್ನು ಪೂರ್ಣಗೊಳಿಸಿದ ಭಾರತದ ಮೊದಲ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಈ ಸಾಧಕರ ಪಟ್ಟಿಯಲ್ಲಿ ದಿಗ್ಗಜರಾದ ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ಅವರನ್ನು ಸೂರ್ಯಕುಮಾರ್ ಇದೀಗ ಹಿಂದಿಕ್ಕಿದ್ದಾರೆ.

ಬೆಂಗಳೂರು ಅಗ್ರಸ್ಥಾನಿ | ಕೃನಾಲ್ ಪಾಂಡ್ಯ, ಕೊಹ್ಲಿ ಅರ್ಧಶತಕ

ಪ್ಲೇ ಆಫ್‌ಗೆ ಒಂದೇ ಹೆಜ್ಜೆ

ಮುಂಬೈ: ಇಲ್ಲಿ ಭಾನುವಾರ ನಡೆದ ಐಪಿಎಲ್ ಪಂದ್ಯಾವಳಿಯಲ್ಲಿ ಆರ್‌ಸಿಬಿ ತಂಡವು ಮುಂಬೈ ಇಂಡಿಯನ್ಸ್ ತಂಡವನ್ನು 6 ವಿಕೆಟ್‌ಗಳಿಂದ ಬಗ್ಗುಬಡಿದು ಪ್ಲೇ ಆಫ್‌ನ ಸನಿಹಕ್ಕೆ ತಲುಪಿದಂತಾಗಿದೆ.

ಗೆಲ್ಲಲು 163 ರನ್‌ಗಳ ಗುರಿ ಪಡೆದ ಬೆಂಗಳೂರು ತಂಡವು 18.3 ಓವರ್‌ಗಳಲ್ಲಿ ತನ್ನ ಗುರಿ ತಲುಪಿತು. ಆರ್‌ಸಿಬಿ ಪರ ಕೃಣಾಲ್ ಪಾಂಡ್ಯ ಅಜೇಯ 73 ರನ್ ಗಳಿಸಿದರೆ, ವಿರಾಟ್ ಕೊಹ್ಲಿ 51 ರನ್ ಬಾರಿಸಿದರು. ಬೌಲಿಂಗ್‌ನಲ್ಲಿ ಭುವನೇಶ್ವರ್ ಕುಮಾರ್ 3 ವಿಕೆಟ್ ಗಳಿಸಿ ಮಿಂಚಿದರು.

ಕಳೆದ 7 ಪಂದ್ಯಗಳಲ್ಲೇ ಈ ಮೈದಾನದಲ್ಲಿ ಇದು ಅತ್ಯಂತ ಕಡಿಮೆ ಮೊತ್ತವಾಗಿದೆ. 2024ರಿಂದ ಇಲ್ಲಿಯ ವರೆಗೆ ನಡೆದಿದ್ದ 8 ಪಂದ್ಯಗಳಲ್ಲಿ 6ರಲ್ಲಿ 200ಕ್ಕೂ ಹೆಚ್ಚು ರನ್ ಹರಿದು ಬಂದಿತ್ತು, ಆದರೆ ಕಳೆದ ಪಂದ್ಯದಲ್ಲಿ ರಾಜಸ್ಥಾನದ ವಿರುದ್ಧ 188 ರನ್ ಗಳಿಸಿದ್ದ ಡೆಲ್ಲಿ, ಭಾನುವಾರ ಕೇವಲ 162 ರನ್‌ಗಳನ್ನು ಗಳಿಸಲಷ್ಟೇ ಶಕ್ತವಾಯಿತು.

ಟಾಸ್ ಸೋತು ಬ್ಯಾಟಿಂಗ್ ಆರಂಭಿಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ನಿರೀಕ್ಷಿತ ಆರಂಭ ಪಡೆಯುವಲ್ಲಿ ವಿಫಲವಾಯಿತು. ಆರಂಭಿಕ ಬ್ಯಾಟರ್ ಅಭಿಷೇಕ್ ಪೊರೆಲ್ ಸ್ಫೋಟಕ ಆಟಕ್ಕೆ ಯತ್ನಿಸಿ 11 ಎಸೆತಗಳಲ್ಲಿ ತಲಾ 2 ಬೌಂಡರಿ, 2 ಸಿಕ್ಸರ್ ಸಹಿತ 28 ರನ್ ಗಳಿಸಿ ಪವರ್ ಪ್ಲೇನಲ್ಲೇ ಹ್ಯಾಝಲ್‌ವುಡ್‌ಗೆ ವಿಕೆಟ್ ಒಪ್ಪಿಸಿದರು. ಗಾಯದಿಂದ ಚೇತರಿಸಿಕೊಂಡು ಬಂದಿದ್ದ ಫಾಫ್ ಡುಪ್ಲೆಸಿಸ್ ಆರ್‌ಸಿಬಿ ದಾಳಿಗೆ ತತ್ತರಿಸಿ, 26 ಎಸೆತಗಳಲ್ಲಿ ಕೇವಲ 2 ಬೌಂಡರಿ ಸಹಿತ 22 ರನ್ ಗಳಿಸಿ ಕೃನಾಲ್ ಹಾರ್ದಿಕ್ ಪಾಂಡ್ಯ ಬೌಲಿಂಗ್‌ನಲ್ಲಿ ಕೊಹ್ಲಿಗೆ ಕ್ಯಾಚ್ ನೀಡಿ ಔಟ್ ಆದರು. ಕರುಣ್ ನಾಯರ್ ಕೇವಲ 4 ರನ್ ಗಳಿಸಿ ದಯಾಳ್ ಬೌಲಿಂಗ್‌ನಲ್ಲಿ ಭುವನೇಶ್ವರ್‌ಗೆ ಕ್ಯಾಚ್ ನೀಡಿದರು. ಅದ್ಭುತ ಫಾರ್ಮ್‌ನಲ್ಲಿದ್ದ ಕೆಎಲ್ ರಾಹುಲ್ 39 ಎಸೆತಗಳಲ್ಲಿ 3 ಬೌಂಡರಿ ಸಹಿತ 41 ರನ್ ಗಳಿಸಿ ನಿರ್ಣಾಯಕ ಹಂತದಲ್ಲಿ ವಿಕೆಟ್ ಒಪ್ಪಿಸಿದರು. ನಾಯಕ ಅಕ್ಷರ್ ಪಟೇಲ್ ಆಟ ಕೇವಲ 15 ರನ್‌ಗೆ ಅಂತ್ಯವಾಯಿತು. ಕೊನೆಯಲ್ಲಿ ಅಬ್ಬರಿಸಿದ ಟ್ರಿಸ್ಟಾನ್ ಸ್ಟಬ್ಸ್ 18 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಸಹಿತ 34 ರನ್ ಗಳಿಸಿದರು. ಅಶುತೋಷ್ ಶರ್ಮಾ 2 ರನ್, ವಿಪ್ರಜ್ ನಿಗಂ 12 ರನ್ ಗಳಿಸಿದರು. ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ 33ಕ್ಕೆ 3, ಜೋಶ್ ಹ್ಯಾಜಲ್‌ವುಡ್ 36ಕ್ಕೆ2, ಕೃನಾಲ್ ಪಾಂಡ್ಯ 28ಕ್ಕೆ1, ಯಶ್ ದಯಾಳ್ 42ಕ್ಕೆ1 ವಿಕೆಟ್ ಪಡೆದು ಮಿಂಚಿದರು.

ಮಹಿಳಾ ಹಾಕಿ ಸರಣಿ: ಭಾರತಕ್ಕೆ 2ನೇ ಸೋಲು

ಪರ್ತ್: ಇಲ್ಲಿನ ಹಾಕಿ ಸ್ಟೇಡಿಯಂನಲ್ಲಿ ಭಾನುವಾರ ನಡೆದ ಆಸ್ಟ್ರೇಲಿಯಾ ವಿರುದ್ಧದ ಮಹಿಳಾ ಹಾಕಿ ಸರಣಿಯ ಎರಡನೇ ಪಂದ್ಯದಲ್ಲಿ ಭಾರತ ಹಾಕಿ ತಂಡವು 2–3 ಗೋಲುಗಳ ಅಂತರದಲ್ಲಿ ಸೋತಿದೆ. ಇದು ಸರಣಿಯಲ್ಲಿ ಭಾರತ ಮಹಿಳಾ ಹಾಕಿ ತಂಡದ ಸತತ ಎರಡನೇ ಸೋಲಾಗಿದೆ. ಭಾರತದ ಪರವಾಗಿ ಜ್ಯೋತಿ ಸಿಂಗ್ ಹಾಗೂ ಸುನೆಲಿತಾ ಟೊಪ್ಪೋ ತಲಾ ಒಂದು ಗೋಲನ್ನು ಬಾರಿಸಿದರು. ಆಸೀಸ್–ಎ ತಂಡದ ಪರವಾಗಿ ಈವಿ ಸ್ಟ್ಯಾನ್ಸ್ನಿ, ಡೈಲೆ ಡೊಕನ್ಸ್ ಮತ್ತು ಜಮ್ಮಿ ಲಿ ಸುರ್ತಾ ತಲಾ ಒಂದು ಗೋಲು ಬಾರಿಸಿ ಗಮನ ಸೆಳೆದರು. ಭಾರತ ಮಹಿಳಾ ತಂಡವು ಆಸ್ಟ್ರೇಲಿಯಾ ಪ್ರವಾಸದಲ್ಲಿ ಐದು ಪಂದ್ಯಗಳ ಸರಣಿಯನ್ನು ಆಡುತ್ತಿದ್ದು, ಶನಿವಾರದಂದು ನಡೆದ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ಮಹಿಳಾ ತಂಡವು ಭಾರತದ ವಿರುದ್ಧ 5–3 ಗೋಲುಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿತ್ತು.

ಗಂಭೀರ್‌ಗೆ ಕೊಲೆ ಬೆದರಿಕೆ: ವಿದ್ಯಾರ್ಥಿಯ ಬಂಧನ

ದೆಹಲಿ: ಎರಡು ದಿನಗಳ ಹಿಂದಷ್ಟೇ ಭಾರತ ಕ್ರಿಕೆಟ್ ತಂಡದ ಮುಖ್ಯಕೋಚ್ ಗೌತಮ್ ಗಂಭೀರ್ ಅವರಿಗೆ ಇ–ಮೇಲ್ ಮೂಲಕ ಕೊಲೆ ಬೆದರಿಕೆ ಹಾಕಿದ ಪ್ರಕರಣದಲ್ಲಿ ಇದೀಗ ದೆಹಲಿ ಪೊಲೀಸರು 21 ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಯನ್ನು ಬಂಧಿಸಿದ್ದಾರೆ. ಆದರೆ ಬಂಧಿತನಿಗೆ ಮಾನಸಿಕ ಆರೋಗ್ಯ ಸಮಸ್ಯೆ ಇದೆ ಎಂದು ಹೇಳಲಾಗಿದೆ.



ಕಳೆದ ಮಂಗಳವಾರ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದ ಭಯೋತ್ಪಾದಕ ದಾಳಿ ನಡೆದ ಬೆನ್ನಲ್ಲೇ ಗಂಭೀರ್‌ಗೆ ಹತ್ಯೆಗೈಯುವುದಾಗಿ ಐಸಿಸ್ ಕಾಶ್ಮೀರ ಎಂದು ಹೇಳಿಕೊಂಡು ಇ–ಮೇಲ್ ಸಂದೇಶದ ಮೂಲಕ ಕೊಲೆ ಬೆದರಿಕೆ ಬಂದಿತ್ತು, ಆ ಕುರಿತು ಗಂಭೀರ್ ರಾಜಿಂದರ್ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. 2021ರಲ್ಲಿ ಐಸಿಸ್‌ನಿಂದ ಇದೇ ರೀತಿಯ ಬೆದರಿಕೆ ಬಂದಿತ್ತು. ಹೀಗಾಗಿ ಮತ್ತೊಮ್ಮೆ ಅವರಿಗೆ ಉಗ್ರ ಸಂಘಟನೆಯಿಂದಲೇ ಕೊಲೆ ಬೆದರಿಕೆ ಬಂದಿರಬಹುದೆಂದು ಹೇಳಲಾಗಿತ್ತು. ಆದರೆ ಇದೀಗ ಆರೋಪಿಯನ್ನು ಗುಜರಾತ್ ಮೂಲದ ಜಿಗ್ನೇಶ್ ಸಿನ್ಹ ಪರ್ಮಾರ್ ಎಂದು ಗುರುತಿಸಲಾಗಿದೆ. ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿರುವ ಜಿಗ್ನೇಶ್ ಸಿನ್ಹ ಪರ್ಮಾರ್‌ನಿಗೆ ಮಾನಸಿಕ ಆರೋಗ್ಯ ಸಮಸ್ಯೆ ಇದೆ ಎಂದು ಕುಟುಂಬ ಹೇಳಿದೆ. ಹೆಚ್ಚಿನ ತನಿಖೆ ಪ್ರಗತಿಯಲ್ಲಿದೆ ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ (ಕೇಂದ್ರ) ಎಂ. ಹರ್ಷವರ್ಧನ್ ತಿಳಿಸಿದ್ದಾರೆ. ಗಂಭೀರ್ ಅವರಿಗೆ ಈಗಾಗಲೇ ಪೊಲೀಸ್ ಭದ್ರತೆ ಇದೆ. ಹೀಗಾಗಿ ಅವರಿಗೆ ನೀಡಲಾದ ವಿಶೇಷ ಭದ್ರತೆ ಬಗ್ಗೆ ಹೆಚ್ಚಿನ ಮಾಹಿತಿ ನೀಡುವುದಿಲ್ಲ ಎಂದು ಡಿಸಿಪಿ ಹೇಳಿದ್ದಾರೆ. ಈ ಹಿಂದೆ ಗಂಭೀರ್‌ಗೆ ಜೀವ ಬೆದರಿಕೆ ಬಂದ ವೇಳೆ ಅವರಿಗೆ ಭದ್ರತೆ ಹೆಚ್ಚಿಸಲಾಗಿತ್ತು.

ಸ್ಕೋರ್ ಬೋರ್ಡ್

215/7 (20 ಓವರ್)

ಮುಂಬೈ ಇಂಡಿಯನ್ಸ್

		ರನ್	ಎಸೆತ
ರಿಕೆಲ್ಟನ್	ಕಾಟ್ ›› ಬಡೋನಿ, ಬೌಲ್ಡ್ ›› ದಿಗ್ವೇಶ್	58	32
ರೋಹಿತ್	ಕಾಟ್ ›› ಪ್ರಿನ್ಸ್, ಬೌಲ್ಡ್ ›› ಮಯಾಂಕ್	12	5
ಜ್ಯಾಕ್ಸ್	ಬೌಲ್ಡ್ ›› ಪ್ರಿನ್ಸ್	29	21
ಸೂರ್ಯಕುಮಾರ್	ಕಾಟ್ ›› ಮಾರ್ಷ್, ಬೌಲ್ಡ್ ›› ಆವೇಶ್	54	28
ತಿಲಕ್	ಕಾಟ್ ›› ಪ್ರಿನ್ಸ್, ಬೌಲ್ಡ್ ›› ಬಿಷ್ಣೋಯ್	6	5
ಪಾಂಡ್ಯ	ಬೌಲ್ಡ್ ›› ಮಯಾಂಕ್	5	7
ನಮನ್	ನಾಟೌಟ್	25	11
ಬಾಷ್	ಕಾಟ್ ›› ಪೂರನ್, ಬೌಲ್ಡ್ ›› ಆವೇಶ್	20	10
ಚಹಾರ್	ನಾಟೌಟ್	1	1

ಲಕ್ನೋ ಸೂಪರ್ ಜೈಂಟ್ಸ್

	ಓವರ್	ರನ್	ವಿಕೆಟ್
ಮಯಾಂಕ್	4	40	2
ಪ್ರಿನ್ಸ್	4	44	1
ದಿಗ್ವೇಶ್	4	48	1
ಬಿಷ್ಣೋಯ್	4	41	1
ಆವೇಶ್	4	42	2

ಮುಂಬೈ ಇಂಡಿಯನ್ಸ್

	ಓವರ್	ರನ್	ವಿಕೆಟ್
ಬೌಲ್ಟ್	4	20	3
ಚಾಹರ್	3	38	0
ಬುಮ್ರಾ	4	22	4
ಜ್ಯಾಕ್ಸ್	2	18	2
ಕರ್ಣ್	2	25	0
ಪಾಂಡ್ಯ	1	10	0
ಬಾಷ್	4	26	1

161/10 (20 ಓವರ್)

ಲಕ್ನೋ ಸೂಪರ್ ಜೈಂಟ್ಸ್

		ರನ್	ಎಸೆತ
ಮಾರ್ಷ್	ಕಾಟ್ ›› ತಿಲಕ್, ಬೌಲ್ಡ್ ›› ಬೌಲ್ಟ್	34	24
ಮಾರ್ಕ್ರಾಮ್	ಕಾಟ್ ›› ನಮನ್, ಬೌಲ್ಡ್ ›› ಬುಮ್ರಾ	9	11
ಪೂರನ್	ಕಾಟ್ ›› ಸೂರ್ಯ, ಬೌಲ್ಡ್ ›› ಜ್ಯಾಕ್ಸ್	27	15
ರಿಷಭ್	ಕಾಟ್ ›› ಕರ್ಣ್, ಬೌಲ್ಡ್ ›› ಜ್ಯಾಕ್ಸ್	4	2
ಬಧೋನಿ	ಕಾಟ್ ›› ಜ್ಯಾಕ್ಸ್, ಬೌಲ್ಡ್ ›› ಬೌಲ್ಟ್	35	22
ಮಿಲ್ಲರ್	ಕಾಟ್ ›› ಬಾಷ್, ಬೌಲ್ಡ್ ›› ಬುಮ್ರಾ	24	16
ಸಮದ್	ಬೌಲ್ಡ್ ›› ಬುಮ್ರಾ	2	4
ಬಿಷ್ಣೋಯ್	ಬೌಲ್ಡ್ ›› ಬಾಷ್	13	14
ಆವೇಶ್	ಬೌಲ್ಡ್ ›› ಬುಮ್ರಾ	0	1
ಪ್ರಿನ್ಸ್	ನಾಟೌಟ್	4	9
ದಿಗ್ವೇಶ್	ಬೌಲ್ಡ್: ಬೌಲ್ಟ್	1	3

ಸಂಜು ಪಡೆಗೆ ತವರಲ್ಲಿ ಗೆಲ್ಲಬೇಕಾದ ಅನಿವಾರ್ಯತೆ | ಗುಜರಾತ್‌ನ ಹೆಜ್ಜೆ ಪ್ಲೇ ಆಫ್‌ನತ್ತ

ರಾಜಸ್ಥಾನಕ್ಕಿಂದು ಸೇಡು ತೀರಿಸುವ ತವಕ

ಜೈಪುರ: ಇಲ್ಲಿನ ಸವಾಯಿ ಮಾನ್‌ಸಿಂಗ್ ಸ್ಟೇಡಿಯಂನಲ್ಲಿ ಸೋಮವಾರ ನಡೆಯಲಿರುವ ಐಪಿಎಲ್ ಟೂರ್ನಿಯಲ್ಲಿ ಆತಿಥೇಯ ರಾಜಸ್ಥಾನ್ ರಾಯಲ್ಸ್ ತಂಡವು ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಿಲಿದೆ. ಈಗಾಗಲೇ ಆಡಿರುವ 8 ಪಂದ್ಯಗಳ ಪೈಕಿ 6 ಪಂದ್ಯಗಳನ್ನು ಗೆದ್ದಿರುವ ಗುಜರಾತ್ ತಂಡವು 12 ಅಂಕಗಳನ್ನು ಪಡೆದು ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ರಾಜಸ್ಥಾನವು ಕೇವಲ 4 ಅಂಕ ಗಳಿಸಿದ್ದು, ಬಹುತೇಕ ಪ್ಲೇ ಆಫ್ ಬಳಗದಿಂದ ಹೊರಬಿದ್ದಂತಾಗಿದ್ದರೂ ತವರಿನಲ್ಲಿ ಗುಜರಾತ್ ವಿರುದ್ಧ ಗೆದ್ದು ಸೇಡು ತೀರಿಸಬೇಕಾದ ಅನಿವಾರ್ಯತೆಯಲ್ಲಿದೆ.

ಮಾರ್ಚ್–23ರಂದು ನಡೆದಿದ್ದ ಪಂದ್ಯದಲ್ಲಿ ರಾಜಸ್ಥಾನ ತಂಡವು ಹೈದರಾಬಾದ್ ವಿರುದ್ಧ ಸೋತು, ಈ ಸಲ ಆರಂಭದಲ್ಲೇ ಮುಖಭಂಗ ಅನುಭವಿಸಿತ್ತು. ಮಾರ್ಚ್–26ರಂದು ಆಯೋಜಿಸಿದ್ದ ಪಂದ್ಯದಲ್ಲೂ ರಾಜಸ್ಥಾನವನ್ನು ಕೋಲ್ಕತ್ತಾ ತಂಡವು 8 ವಿಕೆಟ್‌ಗಳಿಂದ ಪರಾಭವಗೊಳಿಸಿತ್ತು.

ಮಾರ್ಚ್–30ರಂದು ನಡೆದಿದ್ದ ಪಂದ್ಯದಲ್ಲಿ ಪುಟಿದೆದ್ದ ರಾಜಸ್ಥಾನವು ಚೆನ್ನೈ ತಂಡದ ವಿರುದ್ಧ 6 ರನ್‌ಗಳ ರೋಚಕ ಜಯವನ್ನು ಸಾಧಿಸಿತ್ತು. ಏಪ್ರಿಲ್–5ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲೂ ರಾಜಸ್ಥಾನ ತಂಡವು ಪಂಜಾಬ್ ವಿರುದ್ಧ 50 ರನ್‌ಗಳ ಅಂತರದಲ್ಲಿ ಗೆದ್ದು, ಕೇಕೆ ಹಾಕಿತ್ತು.

ಆದರೆ ಏಪ್ರಿಲ್–8ರಂದು ನಡೆದಿದ್ದ ಪಂದ್ಯದಲ್ಲಿ ಗುಜರಾತ್ ತಂಡವು ತನ್ನ ತವರಿನಲ್ಲಿ ರಾಜಸ್ಥಾನವನ್ನು 58 ರನ್‌ಗಳಿಂದ ಸೋಲಿಸಿತ್ತು. ಏಪ್ರಿಲ್–13ರಂದು ರಾಜಸ್ಥಾನದಲ್ಲಿ ನಡೆದಿದ್ದ ಪಂದ್ಯದಲ್ಲಿ ಆರ್‌ಸಿಬಿ ತಂಡವು ಆತಿಥೇಯ ತಂಡವನ್ನು 9 ವಿಕೆಟ್‌ಗಳಿಂದ ಪರಾಭವಗೊಳಿಸಿತ್ತು. ಏಪ್ರಿಲ್–16ರಂದು ರಾಜಸ್ಥಾನವು ಲಖನೌ ವಿರುದ್ಧ 2 ರನ್ ಅಂತರದಲ್ಲಿ ಸೋಲನ್ನು ಅನುಭವಿಸಿತ್ತು. ಏಪ್ರಿಲ್–24ರಂದು ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ರಾಜಸ್ಥಾನ ತಂಡವು ಆರ್‌ಸಿಬಿ ವಿರುದ್ಧ 11 ರನ್‌ಗಳ ಸೋಲು ಅನುಭವಿಸಿ ಮತ್ತೆ ಮುಖಭಂಗಕ್ಕೊಳಗಾಯಿತು.

ಗುಜರಾತ್ ತಂಡವು ಈಗಾಗಲೇ ಪ್ಲೇ ಆಫ್‌ನ ಸನಿಹದಲ್ಲಿದೆ. ಅದು ತನ್ನ ಮೊದಲ ಪಂದ್ಯದಲ್ಲಿ ಮಾರ್ಚ್–28ರಂದು ಪಂಜಾಬ್ ತಂಡದೆದುರು ಮುಖಭಂಗಕ್ಕೊಳಗಾದರೂ, ಎರಡನೇ ಪಂದ್ಯದಲ್ಲಿ ಮುಂಬೈ ವಿರುದ್ಧ ಜಯ ಗಳಿಸಿತ್ತು. ಬಳಿಕ ತನ್ನ ತವರು ನೆಲದಲ್ಲಿ ಆರ್‌ಸಿಬಿಯನ್ನೂ 8 ವಿಕೆಟ್‌ಗಳಿಂದ ಏಪ್ರಿಲ್–4ರಂದು ಮಣಿಸಿತ್ತು. ಅದಾದ ಬಳಿಕ ಹೈದರಾಬಾದ್ ತಂಡದೆದುರು 7 ವಿಕೆಟ್‌ಗಳಿಂದ ಗೆದ್ದಿತ್ತು.

ತನ್ನ ತವರು ನೆಲದಲ್ಲಿ ಏಪ್ರಿಲ್–9ರಂದು ರಾಜಸ್ಥಾನವನ್ನು ಮಣಿಸಿದ್ದ ಗುಜರಾತ್ ತಂಡವು, ಆ ಬಳಿಕ ಏಪ್ರಿಲ್–12ರಂದು ಲಖನೌ ವಿರುದ್ಧ 6 ವಿಕೆಟ್‌ಗಳ ಸೋಲನ್ನನುಭವಿಸಿತ್ತು. ಏಪ್ರಿಲ್–19ರಂದು ಡೆಲ್ಲಿಯ ವಿರುದ್ಧವೂ ಗುಜರಾತ್ ಗೆಲುವನ್ನು ಗಳಿಸಿತ್ತು. ಏಪ್ರಿಲ್–21ರಂದು ಗುಜರಾತ್ ತಂಡವು ಆರಂಭದಲ್ಲಿ ಬ್ಯಾಟಿಂಗ್ ಮಾಡಿ 198 ರನ್ ಗಳಿಸಿ, ಕೋಲ್ಕತ್ತಾವನ್ನು 159 ರನ್‌ಗಳಿಗೆ ಕಟ್ಟಿ ಹಾಕಿ 39 ರನ್‌ಗಳ ಗೆಲುವನ್ನು ಸಂಭ್ರಮಿಸಿತ್ತು.

ಸೋಮವಾರ ಜೈಪುರದಲ್ಲಿ ನಡೆಯಲಿರುವ ಪಂದ್ಯದಲ್ಲಿ ಗುಜರಾತ್ ಬಲಿಷ್ಠ ತಂಡವಾಗಿದ್ದರೂ, ರಾಜಸ್ಥಾನಕ್ಕೆ ತನ್ನ ತವರಿನಲ್ಲಿ ಬಹುತೇಕ ಅಭಿಮಾನಿಗಳ ಬೆಂಬಲ ದೊರೆಯುವುದು ಸಹಜ.

ಗುಜರಾತ್ ತಂಡ

ಗಿಲ್ (ನಾಯಕ)
ಸಾಯಿ ಸುದರ್ಶನ್
ಜೋಸ್ ಬಟ್ಲರ್
ಶಾರುಖ್ ಖಾನ್
ರಾಹುಲ್ ತೆವಾಟಿಯಾ
ಅರ್ಷದ್ ಖಾನ್
ರಶೀದ್ ಖಾನ್
ಸಾಯಿ ಕಿಶೋರ್
ಮೊಹಮ್ಮದ್ ಸಿರಾಜ್
ಪ್ರಸಿದ್ ಕೃಷ್ಣ
ಇಶಾಂತ್ ಶರ್ಮಾ
ಕುಮಾರ್ ಕುಶಾಗ್ರ
ವಾಷಿಂಗ್ಟನ್ ಸುಂದರ್
ಜಯಂತ್ ಯಾದವ್

ರಾಜಸ್ಥಾನ ತಂಡ

ಸಂಜು (ನಾಯಕ)
ಯಶಸ್ವಿ ಜೈಸ್ವಾಲ್
ರಿಯಾನ್ ಪರಾಗ್
ನಿತೀಶ್ ರಾಣಾ
ಧ್ರುವ್ ಜುರೆಲ್
ಶಿಮ್ರಾನ್ ಹೆಟ್ಮೆಯರ್
ಸಂದೀಪ್ ಶರ್ಮಾ
ಜೋಫ್ರಾ ಆರ್ಚರ್
ಮಹೇಶ್ ತೀಕ್ಷಣ
ವನಿಂದು ಹಸರಂಗ
ಶುಭಂ ದುಬೆ
ವೈಭವ್ ಸೂರ್ಯವಂಶಿ
ತುಷಾರ್ ದೇಶಪಾಂಡೆ
ಅಶೋಕ್ ಶರ್ಮಾ

ಸಾಮರ್ಥ್ಯ–ದೌರ್ಬಲ್ಯಗಳು

ರಾಜಸ್ಥಾನ ತಂಡ ಒಂದೆಡೆ ಬ್ಯಾಟಿಂಗ್‌ನಲ್ಲಿ ಹೀನಾಯ ವೈಫಲ್ಯ ಅನುಭವಿಸಿದರೆ, ಮತ್ತೊಂದೆಡೆ ಅದೃಷ್ಟ ಕೂಡ ಕೈಕೊಡುತ್ತಿದೆ, ಗೆಲುವಿನ ಸನಿಹಕ್ಕೆ ಬಂದು ಸೋಲು ಕಾಣುತ್ತಿದೆ. ಇದಕ್ಕೆ ಕಳೆದ ಮೂರು ಪಂದ್ಯಗಳ ಫಲಿತಾಂಶವೇ ಉತ್ತಮ ನಿದರ್ಶನ. ತಂಡದ ಫೀಲ್ಡಿಂಗ್ ಕೂಡ ಸಾಧಾರಣ ಮಟ್ಟದಲ್ಲಿಯೇ ಇರುವ ಕಾರಣ, ಹಲವು ಕ್ಯಾಚ್ ಕೈಚೆಲ್ಲುವ ಮೂಲಕ ಪಂದ್ಯದ ಸೋಲಿಗೆ ಕಾರಣರಾಗುತ್ತಿದ್ದಾರೆ. ಆದರೆ ಕಳೆದ ಆವೃತ್ತಿಯಲ್ಲಿ ರಾಜಸ್ಥಾನದ ಪರ ಆಡಿದ ಜಾಸ್ ಬಟ್ಲರ್, ಪ್ರಸಿದ್ ಕೃಷ್ಣ ಈ ಬಾರಿ ಗುಜರಾತ್ ತಂಡದ ಪರ ಮ್ಯಾಚ್ ವಿನ್ನಿಂಗ್ ಪ್ರದರ್ಶನ ತೋರುತ್ತಿದ್ದಾರೆ. ಹಾಲಿ ಆವೃತ್ತಿಯ ಯಶಸ್ವಿ ಆರಂಭಿಕ ಜೋಡಿ ಎನಿಸಿಕೊಂಡ ಸಾಯಿ ಸುದರ್ಶನ್ ಮತ್ತು ನಾಯಕ ಶುಭಮನ್ ಗಿಲ್ ಜತೆಯಾಟ ಕೂಡ ಗುಜರಾತ್ ತಂಡದ ಪ್ಲಸ್ ಪಾಯಿಂಟ್, ಉಳಿದಂತೆ ಮೊಹಮ್ಮದ್ ಸಿರಾಜ್ ಕೂಡ ಉತ್ತಮ ಲಯದಲ್ಲಿದ್ದಾರೆ.

ಬುಮ್ರಾ ಹೊಸ ದಾಖಲೆ

ಮುಂಬೈ: ಭಾನುವಾರ ಮುಂಬೈಯಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜಯಂಟ್ಸ್ ತಂಡದ ನಾಲ್ವರು ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡುವ ಮೂಲಕ ಜಸ್‌ಪ್ರೀತ್ ಬುಮ್ರಾ ಮುಂಬೈ ಇಂಡಿಯನ್ಸ್ ಪರ 174 ವಿಕೆಟ್‌ಗಳನ್ನು ಪೂರ್ಣಗೊಳಿಸಿದರು, ಆ ಮೂಲಕ ಮುಂಬೈ ಇಂಡಿಯನ್ಸ್ ತಂಡದ ಪರ ಅತೀ ಹೆಚ್ಚು ವಿಕೆಟ್‌ಗಳನ್ನು ಗಳಿಸಿದ ಬೌಲರ್ ಎನಿಸಿಕೊಳ್ಳುವ ಮೂಲಕ ಲಸಿತ್ ಮಾಲಿಂಗ ದಾಖಲೆಯನ್ನು ಬುಮ್ರಾ ಮುರಿದಿದ್ದಾರೆ.

ಲಸಿತ್ ಮಾಲಿಂಗ ಅವರು ಮುಂಬೈ ಇಂಡಿಯನ್ಸ್ ಪರ ಆಡಿದ 122 ಪಂದ್ಯಗಳಲ್ಲಿ 170 ವಿಕೆಟ್‌ಗಳನ್ನು ಗಳಿಸಿ, ತಂಡದ ಪರ ಎರಡನೇ ಅತಿ ಹೆಚ್ಚು ವಿಕೆಟ್ ಕಬಳಿಸಿದ ಬೌಲರ್ ಆಗಿದ್ದಾರೆ.

ಒಂದೇ ತಂಡದ ಪರ ಹೆಚ್ಚು ವಿಕೆಟ್ ಪಡೆದವರು

ಜಸ್‌ಪ್ರೀತ್ ಬುಮ್ರಾ (ಮುಂಬೈ ಇಂಡಿಯನ್ಸ್)-174
ಲಸಿತ್ ಮಾಲಿಂಗ (ಮುಂಬೈ ಇಂಡಿಯನ್ಸ್)-170
ಭುವನೇಶ್ವರ್ ಕುಮಾರ್ (ಸನ್‌ರೈಸರ್ಸ್ ಹೈದರಾಬಾದ್)-157
ಡ್ವೇನ್ ಬ್ರಾವೋ (ಚೆನ್ನೈಸೂಪರ್ ಕಿಂಗ್ಸ್)- 154
ಆಂಡ್ರೆ ರಸೆಲ್ (ಕೋಲ್ಕತ್ತಾ ನೈಟ್ ರೈಡರ್ಸ್)-121

ಕೊಡಗಿನ ಮುದ್ದಂಡ ಕಪ್ ಹಾಕಿ | ಫೈನಲ್ ಪಂದ್ಯಕ್ಕೆ ಮಳೆ ಕಾಟ | ಚೇಂದಂಡ ರನ್ನರ್ಸ್ ಅಪ್

ಮಂಡೇಪಂಡ ತಂಡ ಕೌಟುಂಬಿಕ ಹಾಕಿ ಚಾಂಪಿಯನ್

ಮಡಿಕೇರಿ: ಕೊಡವ ಕೌಟುಂಬಿಕ 'ಮುದ್ದಂಡ ಕಪ್ ಹಾಕಿ' ಉತ್ಸವದ ಫೈನಲ್ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿದ ಕಾರಣ, ಏಕೈಕ ಗೋಲಿನ ಮುನ್ನಡೆ ಪಡೆದಿದ್ದ ಮಂಡೇಪಂಡ ತಂಡವನ್ನು ವಿಜಯಿ ಎಂದು ಘೋಷಿಸಲಾಯಿತು. ಕಳೆದ ಸಾಲಿನ ಚಾಂಪಿಯನ್ ತಂಡವಾದ ಚೇಂದಂಡ ಈ ಸಲ ರನ್ನರ್ಸ್ ಅಪ್ ಪ್ರಶಸ್ತಿಗೆ ತೃಪ್ತಿಪಡಬೇಕಾಯಿತು. ಭಾನುವಾರ ಇಲ್ಲಿ ಮಂಡೇಪಂಡ ಮತ್ತು ಚೇಂದಂಡ ನಡುವೆ ಫೈನಲ್ ಪಂದ್ಯ ಅತ್ಯಂತ ಕುತೂಹಲಕಾರಿಯಾಗಿ ಆರಂಭ ಗೊಂಡಿತು. ಪಂದ್ಯದ ಆರಂಭಿಕ ಕ್ಷಣದಲ್ಲೇ ಚೇಂದಂಡ ತಂಡ ಮೊದಲ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಪಡೆದುಕೊಂಡಿತು. ಆದರೆ ಅದನ್ನು ಗೋಲಾಗಿಸುವಲ್ಲಿ ತಂಡದ ಪ್ರಮುಖ ಮುನ್ನಡೆಯ ಆಟಗಾರ, ಒಲಿಂಪಿಯನ್ ನಿಕಿನ್ ತಿಮ್ಮಯ್ಯ ವಿಫಲರಾದರು. ಆ ದಾಳಿಗೆ ಪ್ರತಿದಾಳಿ ಸಂಘಟಿಸಿದ ಮಂಡೇಪಂಡ ತಂಡವು ಆಕರ್ಷಕ ಶಾರ್ಟ್ ಪಾಸ್‌ಗಳ ಮೂಲಕ ಎದುರಾಳಿ ಚೇಂದಂಡ ತಂಡದ ಅಂಕಣವನ್ನು ಪ್ರವೇಶಿಸಿ, ಮೊದಲ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಪಡೆದುಕೊಂಡಿತು. ಮಂಡೇಪಂಡ ಗೌತಮ್ ಮಿಂಚಿನ ಗೋಲು ಸಿಡಿಸುವ ಮೂಲಕ ಮೊದಲ ಕ್ವಾರ್ಟರ್‌ನಲ್ಲಿ ಚೇಂದಂಡ ತಂಡದ ವಿರುದ್ಧ 1–0 ಗೋಲಿನ ಮುನ್ನಡೆ ಸಾಧಿಸಿತು.

ದ್ವಿತೀಯಾರ್ಧಕ್ಕೆ ಮಳೆ ಅಡ್ಡಿ: ದ್ವಿತೀಯ ಕ್ವಾರ್ಟರ್‌ನಲ್ಲಿ ಚೇಂದಂಡ ತಂಡ ಸಮಬಲದ ಗೋಲಿಗಾಗಿ ಆರಂಭಿಕ ಹಂತದಿಂದಲೇ ದಾಳಿಗೆ ಇಳಿಯಿತಲ್ಲದೆ ದ್ವಿತೀಯ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಪಡೆದು ಕೊಂಡಿತು. ಆದರೆ ಅದನ್ನು ಗೋಲಾಗಿ ಪರಿವರ್ತಿಸುವಲ್ಲಿ ವಿಫಲವಾಯಿತು. ಅದರ ಬೆನ್ನಲ್ಲೆ ಮತ್ತೊಂದು ಪೆನಾಲ್ಟಿ ಕಾರ್ನರ್ ಅವಕಾಶ ಪಡೆಯುತ್ತಿದ್ದಂತೆಯೇ ಮಳೆ ಸುರಿಯಲಾರಂಭಿಸಿತು. ಸಿಡಿಲು ಗುಡುಗಿನ ಮಳೆಯ ನಡುವೆಯೇ ಸ್ವಲ್ಪ ಹೊತ್ತು ನಡೆದ ಪೆನಾಲ್ಟಿ ಕಾರ್ನರ್‌ನಲ್ಲಿ ಚೇಂದಂಡ ತಂಡವು ಗೋಲು ಗಳಿಸುವಲ್ಲಿ ವಿಫಲವಾಯಿತು.

ಬಿರುಸಿನ ಮಳೆಯ ಹಿನ್ನೆಲೆಯಲ್ಲಿ ಪಂದ್ಯವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಯಿತು, ಮೈದಾನದ ಅಲ್ಲಲ್ಲಿ ನೀರು ತುಂಬಿಕೊಂಡಿದ್ದ ಕಾರಣ, ಸುಮಾರು ಅರ್ಧ ಗಂಟೆ ಆದಾಗ ಮಳೆ ನಿಂತ ಬಳಿಕ ಮೈದಾನದಲ್ಲಿ ನಿಂತಿದ್ದ ನೀರನ್ನು ತೆಗೆದು ಪಂದ್ಯಾಟಕ್ಕೆ ಅಣಿಗೊಳಿಸಿ ಪಂದ್ಯವನ್ನು ಪುನರಾರಂಭಗೊಳಿಸಲಾಯಿತು. ಮಂಡೇಪಂಡ ತಂಡದ ವಿರುದ್ಧ ಚೇದಂಡ ತಂಡವು ಸಮಬಲದ ಗೋಲು ದಾಖಲಿಸಲು ಮುಂದಾದಾಗ ಮಂಡೇಪಂಡ ತಂಡದ ಯುವ ಪ್ರತಿಭೆ, ಗೋಲ್‌ಕೀಪರ್ ದ್ಯಾನ್ ಬೋಪಣ್ಣ ಆಕರ್ಷಕವಾಗಿ ಚೆಂಡನ್ನು ತಡೆಗಟ್ಟಿ, ತನ್ನ ತಂಡದ ಮುನ್ನಡೆ ಅಬಾಧಿತವಾಗಿ ಉಳಿಯುವಂತೆ ಮಾಡಿದರು. ಆ ಹಂತದಲ್ಲಿ ಮತ್ತೆ ಆರಂಭಗೊಂಡ ಮಳೆ ಮೈದಾನವನ್ನು ಅಕ್ಷರಶಃ ಹೊಳೆಯನ್ನಾಗಿಸುವುದರೊಂದಿಗೆ ಫೈನಲ್ ಪಂದ್ಯ ಸ್ಥಗಿತ ಕಂಡ ಕಾರಣ, ಮಂಡೇಪಂಡ ತಂಡವನ್ನು ಪ್ರಥಮ ಸ್ಥಾನಿ ಎಂದು ಘೋಷಿಸಲಾಯಿತು. ಅದು 5 ಲಕ್ಷ ರು.. ನಗದು ಮತ್ತು ಟ್ರೋಫಿ ಪಡೆದರೆ, ರನ್ನರ್ಸ್ ತಂಡವಾದ ಚೇಂದಂಡ ತಂಡದ ಪರವಾಗಿ ಟೀಮ್ ಮ್ಯಾನೇಜರ್ ಮತ್ತು ಕುಟುಂಬಸ್ಥರು 3 ಲಕ್ಷ ರು. ನಗದು ಹಾಗೂ ಟ್ರೋಫಿ ಸ್ವೀಕರಿಸಿದರು.

ಅಂತಿಮ ಪಂದ್ಯಕ್ಕೂ ಮುನ್ನ ನಡೆದ ತೃತೀಯ ಸ್ಥಾನದ ಪಂದ್ಯದಲ್ಲಿ ನೆಲ್ಲಮಕ್ಕಡ ತಂಡವು 2–1 ಗೋಲುಗಳ ಅಂತರದಿಂದ ಕುಪ್ಪಂಡ(ಕೈಕೇರಿ) ತಂಡವನ್ನು ಮಣಿಸಿತು.

ತ್ರಿಕೋನ ಏಕದಿನ ಸರಣಿಯ ಮೊದಲ ಪಂದ್ಯ
ಲಂಕಾ ವಿರುದ್ಧ ಭಾರತಕ್ಕೆ 9 ವಿಕೆಟ್ ಜಯ

ಮಹಿಳಾ ಕ್ರಿಕೆಟಿಗರ ಶುಭಾರಂಭ

ಕೊಲಂಬೊ: ಶ್ರೀಲಂಕಾದ ಆತಿಥ್ಯದಲ್ಲಿ ನಡೆಯುತ್ತಿರುವ ತ್ರಿಕೋನ ಸರಣಿಯ ಮೊದಲ ಪಂದ್ಯದಲ್ಲಿ ಭಾನುವಾರದಂದು ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ತಂಡವು, ಲಂಕಾ ತಂಡವನ್ನು 9 ವಿಕೆಟ್‌ಗಳಿಂದ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಮಳೆಯಿಂದ ಅಡಚಣೆಯಾಗಿದ್ದ ಪಂದ್ಯವನ್ನು ತಲಾ 39 ಓವರ್‌ಗಳಿಗೆ ಇಳಿಸಲಾಯಿತು. ಟಾಸ್ ಗೆದ್ದ ಟೀಮ್ ಇಂಡಿಯಾ ನಾಯಕಿ ಹರ್ಮನ್‌ಪ್ರೀತ್ ಕೌರ್ ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದರು. ಹೀಗಾಗಿ ಮೊದಲು ಬ್ಯಾಟಿಂಗ್ ಮಾಡಿದ ಲಂಕಾ ತಂಡ ಕೊನೆಯ ಓವರ್‌ನಲ್ಲಿ ತನ್ನೆಲ್ಲ ವಿಕೆಟ್ ಕಳೆದುಕೊಂಡು 147 ರನ್ ಕಲೆ ಹಾಕಲಷ್ಟೇ ಶಕ್ತವಾಯಿತು.

ಲಂಕಾ ಪರ ಆರಂಭಿಕ ಆಟಗಾರ್ತಿ ಹಸಿನಿ ಪೆರೇರಾ ಅತ್ಯಧಿಕ 30 ರನ್ ಬಾರಿಸಿದರೆ, ಕವಿಶಾ ದಿಲ್ಹಾರಿ 25 ರನ್ ಹಾಗೂ ವಿಕೆಟ್ ಕೀಪರ್ ಅನುಷ್ಕಾ ಸಂಜೀವಿನಿ 22 ರನ್‌ಗಳ ಕಾಣಿಕೆ ನೀಡಿದರು. ಟೀಮ್ ಇಂಡಿಯಾ ಪರ ಬೌಲಿಂಗ್‌ನಲ್ಲಿ ಮಿಂಚಿದ ಸ್ನೇಹ ರಾಣಾ 3 ವಿಕೆಟ್ ಪಡೆದರೆ, ನಲ್ಲಪುರರೆಡ್ಡಿ ಚರಣಿ ಹಾಗೂ ದೀಪ್ತಿ ಶರ್ಮಾ ತಲಾ 2 ವಿಕೆಟ್ ಪಡೆದರು. ಅರುಂಧತಿ ರೆಡ್ಡಿ ಕೂಡ 1 ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು.

ಭಾರತಕ್ಕೆ ಸುಲಭ ಜಯ: 148 ರನ್‌ಗಳ ಸುಲಭ ಗುರಿ ಬೆನ್ನಟ್ಟಿದ ಭಾರತ ವನಿತಾ ಪಡೆ ಕೇವಲ 1 ವಿಕೆಟ್ ಕಳೆದುಕೊಂಡು 29.4 ಓವರ್‌ಗಳಲ್ಲಿ ಗೆಲುವಿನ ನಗೆ ಬೀರಿತು. ಆರಂಭಿಕ ಆಟಗಾರ್ತಿಯರಾದ ಪ್ರತೀಕಾ ರಾವಲ್ ಹಾಗೂ ಸ್ಮೃತಿ ಮಂಧಾನ ಮೊದಲ ವಿಕೆಟ್‌ಗೆ 54 ರನ್‌ಗಳ ಜತೆಯಾಟ ನೀಡಿದರು. ಉಪ–ನಾಯಕಿ ಮಂಧಾನ 46 ಎಸೆತಗಳಲ್ಲಿ 6 ಬೌಂಡರಿ ಸಹಿತ 43 ರನ್ ಬಾರಿಸಿ ತಮ್ಮ ವಿಕೆಟ್ ಒಪ್ಪಿಸಿದರು. ಆ ಬಳಿಕ ಜತೆಯಾದ ಪ್ರತೀಕಾ ಹಾಗೂ ಹರ್ಲೀನ್ ಡಿಯೋಲ್ ಅಜೇಯರಾಗಿ ಉಳಿದು ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಆರಂಭಿಕ ಆಟಗಾರ್ತಿ ಪ್ರತೀಕಾ 62 ಎಸೆತಗಳಲ್ಲಿ 7 ಬೌಂಡರಿ ಸಹಿತ ಅಜೇಯ 50 ರನ್ ಬಾರಿಸಿದರೆ, ಹರ್ಲೀನ್ 71 ಎಸೆತಗಳಲ್ಲಿ 4 ಬೌಂಡರಿ ಸಹಿತ ಅಜೇಯ 48 ರನ್ ಬಾರಿಸಿದರು.

ಭಾರತ ಮಹಿಳಾ ತಂಡವು ತನ್ನ ಮುಂದಿನ ಪಂದ್ಯವನ್ನು ಏಪ್ರಿಲ್ 29ರಂದು ದಕ್ಷಿಣ ಆಫ್ರಿಕಾ ವಿರುದ್ಧ ಆಡಲಿದೆ.